ವಿಶ್ವವಾಣಿ
ವಿಶ್ವಾಸವೇ ವಿಶ್ವ

ವಿಕ್ಟೋರಿಯಾ ಕೇರ್ಜ್ ವಿಶ್ವ ಸುಂದರಿ

ಉತ್ತರ ಅಮೆರಿಕ ಖಂಡದ ಮೆಕ್ಸಿಕೋ ನಗರದಲ್ಲಿ ನಡೆದ 2024ರ ಮಿಸ್ ಯೂನಿವರ್ಸ್ ಸ್ಪರ್ಧೆಯಲ್ಲಿ ಡೆನ್ಮಾರ್ಕ್‌ನ ವಿಕ್ಟೋರಿಯಾ ಕೇರ್ಜ್(21) ವಿಜೇತರಾಗಿದ್ದಾರೆ. ಡೆನ್ಮಾರ್ಕ್‌ಗೆ ಇದು ಮೊದಲ ವಿಶ್ವ ಸುಂದರಿ ಕಿರೀಟ.

ಸ್ಫೂರ್ತಿ ಚಿಲುಮೆ ಷಡಕ್ಷರಿ- 76

ಜನುಮದಿನದ ಸಂಭ್ರಮ

ವಿಶೇಷ ಪುರವಣಿ

ಪುಟ ತೆರೆದಂತೆ...

ಜೆಡಿಎಸ್ ಸಾರಥಿಯಾಗಲು ನಿಖಿಲ್ ರೆಡಿ
ಮೂರ್ತಿಪೂಜೆ
ಆರ್.ಟಿ.ವಿಠ್ಠಲಮೂರ್ತಿ
ಸಂ.ಪುಟ | 6

ಸಾರ್ವಕಾಲಿಕ ಸತ್ಯ ಸಾರಿದ ಕನಕದಾಸರು
ತನ್ನಿಮಿತ್ತ
ಡಾ.ಕರವೀರಪ್ರಭು ಕ್ಯಾಲಕೊಂಡ
ಸಂ.ಗಮ | 7

ಮಾತಂದ್ರೆ ಮಾತು

'ಖರೀದಿ ಮಾಡಲು ಶಾಸಕರು ಕುರಿಗಳೇ' ಎಂದು ಬಿಜೆಪಿಯವರು ಕೇಳಿದ್ದಾರೆ. ಹಾಗಾದರೆ ಈ ಹಿಂದೆ ಖರೀದಿ ಮಾಡಿದ್ದ ಶಾಸಕರು ಕುರಿಗಳಲ್ಲವೇ? ಬಿಜೆಪಿಯವರು ದನ, ಕುರಿ ಖರೀದಿ ಮಾಡಿದಂತೆ ಶಾಸಕರನ್ನು ಖರೀದಿ ಮಾಡಿದ್ದಿರಲ್ಲವೇ ಎಂದು ಈ ಹಿಂದೆಯೂ ಪ್ರಶ್ನಿಸಿದ್ದೆವು. ಅಶ್ವತ್ಥ ನಾರಾಯಣ್ ಜತೆ ಶ್ರೀನಿವಾಸ್ ಗೌಡರ ಮನೆಗೆ ಹೋಗಿ ಹಣ ಇಟ್ಟು ಬಂದೆ ಎಂದು ಸಿ.ಪಿ.ಯೋಗೇಶ್ವರ್ ಸದನದಲ್ಲೇ ಹೇಳಿಲ್ಲವೇ?

- ಡಿ.ಕೆ.ಶಿವಕುಮಾರ್ ಉಪಮುಖ್ಯಮಂತ್ರಿ

ದಾರಿದೀಪೋಕ್ತಿ

ನಿಮ್ಮಲ್ಲಿ ಹಣವಿಲ್ಲದಿದ್ದರೂ ಈ ಜಗತ್ತಿನಲ್ಲಿ ನಿಮ್ಮನ್ನು ಪ್ರೀತಿಸುವ ಒಂದು ಜೀವಿಯಿದ್ದರೆ ಅದು ತಾಯಿಯೊಂದೇ. ತಾಯಿಗೆ ಖರ್ಚು ಮಾಡುವ ಸಂದರ್ಭ ಬಂದಾಗ, ಎಂದೂ ಲೆಕ್ಕ ಹಾಕಬಾರದು. ಹಣದ ಮುಖ ನೋಡಬಾರದು. ಈ ಮಾತು ಉಳಿದವರಿಗೆ ಅನ್ವಯಿಸುವುದಿಲ್ಲ.

ವಕ್ರತುಂಡೋಕ್ತಿ

ಕೆಲವರ ಪ್ರದರ್ಶನದಲ್ಲಿ ಜನ ಸಾಲು ಹಚ್ಚಿ ನಿಂತಿರುತ್ತಾರೆ, ಹೊರಕ್ಕೆ ಹೋಗಲು.

ಈಜುಕೊಳದಲ್ಲಿ ಮುಳುಗಿ ಮೂವರು ಯುವತಿಯರ ಸಾವು

ಉಳ್ಳಾಲ: ಸಮೀಪದ ಸೋಮೇಶ್ವರದಲ್ಲಿ ರೆಸಾರ್ಟ್‌ವೊಂದರ ಈಜುಕೊಳದಲ್ಲಿ ಮುಳುಗಿ ಮೂವರು ಯುವತಿಯರು ಮೃತಪಟ್ಟಿದ್ದಾರೆ. ಮೈಸೂರಿನ ದೇವರಾಜ ಮೊಹಲ್ಲಾದ ನವೀನ್ ಕುಮಾರ್ ಅವರ ಪುತ್ರಿ ಕೀರ್ತನಾ ಎನ್. (21), ಮೈಸೂರಿನ ಕುರುಬರಹಳ್ಳಿ 4ನೇ ಕ್ರಾಸ್ ನಿವಾಸಿ ಮಲ್ಲೇಶ್ ಅವರ ಪುತ್ರಿ ನಿಶಿತಾ ಎಂ.ಡಿ (21) ಹಾಗೂ ಮೈಸೂರಿನ ಕೆ.ಆರ್.ಮೊಹಲ್ಲ ರಾಮಾನುಜ ರಸ್ತೆಯ 11ನೇ ಕ್ರಾಸ್ ನಿವಾಸಿ ಎಂ.ಎನ್. ಶ್ರೀನಿವಾಸ್ ಅವರ ಪುತ್ರಿ ಪಾರ್ವತಿ ಎಸ್. (20) ಪ್ರಾಣ ಕಳೆದುಕೊಂಡಿದ್ದಾರೆ. ಸೋಮೇಶ್ವರ ಗ್ರಾಮದ ಬಟ್ಟಪ್ಪಾಡಿ ಅಡ್ಡರಸ್ತೆ ಪೆರಿಬೈಲ್‌ನಲ್ಲಿರುವ ರೆಸಾರ್ಟ್‌ಗೆ ಯುವತಿಯರು ಶನಿವಾರ ಬಂದಿದ್ದರು. ರೆಸಾರ್ಟ್ ಮುಂಭಾಗದ ಕೊಳಕ್ಕೆ ಭಾನುವಾರ ಬೆಳಗ್ಗೆ 10 ಗಂಟೆಯ ವೇಳೆ ನೀರಾಟವಾಡಲು ಇಳಿದಿದ್ದರು. ಈಜುಕೊಳದ ನೀರಿನತ್ತ ಮೊಬೈಲ್ ಫೋನ್‌ನ ವಿಡಿಯೊ ಕ್ಯಾಮೆರಾ ಆನ್ ಮಾಡಿಟ್ಟು ಯುವತಿಯರು ಈಜಾಡುತ್ತಿದ್ದರು. ಆಳವಿರುವ ಕಡೆ ತೆರಳಿದ ವೇಳೆ ಈಜು ಬಾರದೆ ಮುಳುಗಿ ಮೃತಪಟ್ಟಿರುವ ಸಾಧ್ಯತೆ ಇದೆ ಎಂದು ಪೊಲೀಸರು ತಿಳಿಸಿದ್ದಾರೆ.

ಫನ್‌ತರಂಗ

- ರಘುಪತಿ ಶೃಂಗೇರಿ -



71ನೇ ಅಖಿಲ ಭಾರತ ಸಹಕಾರ ಸಪ್ತಾಹ ಕಾರ್ಯಕ್ರಮದಲ್ಲಿ ಸಿಎಂ ಆಕ್ರೋಶ

ನಬಾರ್ಡ್‌ನಿಂದ ರೈತರಿಗೆ ಅನ್ಯಾಯ

ಬಾಗಲಕೋಟೆಯಲ್ಲಿ ಹಮ್ಮಿಕೊಂಡಿದ್ದ 71ನೇ ಅಖಿಲ ಭಾರತ ಸಹಕಾರಿ ಸಪ್ತಾಹ ಕಾರ್ಯಕ್ರಮದಲ್ಲಿ 72 ಸಹಕಾರಿಗಳಿಗೆ ಸಿಎಂ ಸಿದ್ದರಾಮಯ್ಯ ಅವರು ಸಹಕಾರಿ ರತ್ನ ಪ್ರಶಸ್ತಿ ಪ್ರದಾನ ಮಾಡಿದರು.

ಬಾಗಲಕೋಟೆ: ಕೇಂದ್ರದ ನಬಾರ್ಡ್‌ನಿಂದ ರೈತರಿಗೆ ನೀಡುವ ಸಾಲದಲ್ಲಿ ಶೇ.58ರಷ್ಟನ್ನು ಕಡಿತಗೊಳಿಸಲಾಗಿದೆ. ಇದು ಕೇಂದ್ರ ಸರಕಾರವು ರೈತರಿಗೆ ಮಾಡಿದ ದೊಡ್ಡ ಅನ್ಯಾಯ. ಕೇಂದ್ರ ಸರಕಾರ ಕೇವಲ ಭಾಷಣದಲ್ಲಿ ಮಾತ್ರ ರೈತರ ಬದುಕು ಉದ್ಧಾರ ಮಾಡುತ್ತದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆರೋಪಿಸಿದರು.

ನಗರದಲ್ಲಿ ರಾಜ್ಯ ಸಹಕಾರ ಮಹಾಮಂಡಳ, ರಾಜ್ಯ ಅಪೆಕ್ಸ್ ಬ್ಯಾಂಕ್ ಹಾಗೂ ಡಿಸಿಸಿ ಬ್ಯಾಂಕ್‌ನಿಂದ ಹಮ್ಮಿಕೊಂಡಿದ್ದ 71ನೇ ಅಖಿಲ ಭಾರತ ಸಹಕಾರ ಸಪ್ತಾಹ ಉದ್ಘಾಟಿಸಿ, 2024ನೇ ಸಾಲಿನ ಸಹಕಾರ ರತ್ನ ಪ್ರಶಸ್ತಿ ವಿತರಿಸಿ ಮಾತನಾಡಿದ ಅವರು, ನಬಾರ್ಡ್‌ನಿಂದ ರೈತರಿಗೆ ಆಗುತ್ತಿರುವ ಅನ್ಯಾಯವನ್ನು ಪಕ್ಷಾತೀತವಾಗಿ ವಿರೋಧಿಸಿ ಪ್ರತಿಯೊಬ್ಬರೂ ಪತ್ರ ಬರೆಯಬೇಕು. ಈ ಬಗ್ಗೆ ನಾನು ಈಗಾಲೇ ಪ್ರಧಾನಿ ಮೋದಿ ಹಾಗೂ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಪತ್ರ ಬರೆದಿದ್ದೇನೆ ಎಂದರು.

ಸಹಕಾರ ಕೇಂದ್ರದ ವ್ಯಾಪ್ತಿಯಲ್ಲಿಲ್ಲ: ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರು 2021ರಲ್ಲಿ ಮಂಡಿಸಿರುವ ಬಜೆಟ್‌ನಲ್ಲಿ ಸಹಕಾರಿ ಇಲಾಖೆಯನ್ನು ಘೋಷಿಸಿದ್ದಾರೆ. ಅಲ್ಲಿಯವರೆಗೆ ಕೇಂದ್ರದಲ್ಲಿ ಸಹಕಾರಿ ಇಲಾಖೆಯೇ ಇರಲಿಲ್ಲ. ಇದಕ್ಕೆ ಅಮಿತ್ ಶಾ ಅವರೇ ಸಚಿವರು. ಇದು ಕೇಂದ್ರದ ವ್ಯಾಪ್ತಿಗೆ ಬರುವ ವಿಷಯ ಅಲ್ಲ. ಇದರಿಂದಾಗಿ ನಮಗೆ ನಬಾರ್ಡ್‌ನಿಂದ ಬರುವ ರೈತರ ಪಾಲಿನ ನೆರವು ಕಡಿತಗೊಂಡಿದೆ. ಇತ್ತೀಚಿನವರೆಗೆ 5,600 ಕೋಟಿ ರು. ಸಾಲ ವಿತರಿಸುತ್ತಿದ್ದ ನಬಾರ್ಡ್ ಈಗ 3,260 ಕೋಟಿ ರು. ಸಾಲ ಕಡಿತಗೊಳಿಸಿದೆ. ನಮಗೆ ಆದ ಅನ್ಯಾಯವನ್ನು ಪ್ರತಿಯೊಬ್ಬರೂ ಪ್ರತಿಭಟಿಸಬೇಕು ಎಂದು ಸಿಎಂ ಕರೆ ನೀಡಿದರು.

ಹಾಲು ಉತ್ಪಾದಕ ಸಂಘಗಳಿಗೆ ಪ್ರೋತ್ಸಾಹ: ಹಾಲು ಉತ್ಪಾದಕ ಸಹಕಾರ ಸಂಘಗಳಿಗೆ ಹೆಚ್ಚು ಪ್ರೋತ್ಸಾಹ ನೀಡಬೇಕು ಮತ್ತು ಇವರಿಂದ ಹೆಚ್ಚೆಚ್ಚು ಹಾಲನ್ನು ಖರೀದಿಸಬೇಕು. ಸಹಕಾರ ಸಂಘಗಳ ಹಾಲಿಗೆ ಮಾರುಕಟ್ಟೆ ವಿಸ್ತರಿಸಬೇಕು. ಹಾಲು ಉತ್ಪಾದಕರಿಗೆ ಅನುಕೂಲ ಆಗುವ ಉದ್ದೇಶದಿಂದಲೇ ನಮ್ಮ ಸರಕಾರ ಕ್ಷೀರಭಾಗ್ಯ ಆರಂಭಿಸಿತು. ಲೀಟರ್ ಹಾಲಿಗೆ 5 ರು. ಪ್ರೋತ್ಸಾಹಧನ ನೀಡುವುದನ್ನು ನಮ್ಮ ಅವಧಿಯಲ್ಲಿ ಆರಂಭಿಸಲಾಯಿತು. ರೈತರ ಕೈಯಲ್ಲೇ ಹಾಲು ಉತ್ಪಾದಕ ಸಂಘಗಳು ಇರಬೇಕೆಂದು ಡೈರಿಗಳನ್ನು ರೈತರಿಗೇ ನೀಡುವ ತೀರ್ಮಾನಿಸಿದೆವು ಎಂದು ಮುಖ್ಯಮಂತ್ರಿಯವರು ವಿವರಿಸಿದರು.

ಈ ಸಂದರ್ಭದಲ್ಲಿ 72 ಗಣ್ಯರಿಗೆ ಸಹಕಾರಿ ರತ್ನ ಪ್ರಶಸ್ತಿ ಪ್ರದಾನ ಮಾಡಲಾಯಿತು. ಅಬಕಾರಿ ಸಚಿವ ಆರ್.ಬಿ.ತಿಮ್ಮಾಪುರ, ಬಾಗಲಕೋಟೆ ಡಿಸಿಸಿ ಬ್ಯಾಂಕ್ ಅಧ್ಯಕ್ಷ ಅಜಯಕುಮಾರ ಸರನಾಯಕ, ಶಾಸಕರಾದ ಎಚ್.ವೈ. ಮೇಟಿ, ಜೆ.ಟಿ.ಪಾಟೀಲ, ಬಿ.ಬಿ.ಚಿಮ್ಮನಕಟ್ಟಿ, ವಿಜಯಾನಂದ ಕಾಶಪ್ಪನವರ ಹಾಗೂ ಸಿದ್ದು ಸವದಿ, ವಿಪ ಸದಸ್ಯರಾದ ಪ್ರಕಾಶ ಹುಕ್ಕೇರಿ, ಸುನೀಲಗೌಡ ಪಾಟೀಲ, ಮಾಜಿ ಸಚಿವ ಎಸ್.ಆರ್.ಪಾಟೀಲ ಸೇರಿದಂತೆ ಅನೇಕರಿದ್ದರು.

ಉದ್ಯೋಗದಲ್ಲಿ ಮೀಸಲಾತಿ

ಕೋ ಆಪರೇಟೀವ್ ಮ್ಯಾನೇಜ್‌ಮೆಂಟ್ ಪದವೀಧರರಿಗೆ ಉದ್ಯೋಗದಲ್ಲಿ ಮೀಸಲಾತಿ ತರುವ ಬಗ್ಗೆ ಪರಿಶೀಲಿಸಿ ಕ್ರಮ ತೆಗೆದುಕೊಳ್ಳಲಾಗುವುದು. ನಾನು ಯಾವತ್ತೂ ಸಹಕಾರಿ ಚಳವಳಿ ಮತ್ತು ಸಹಕಾರಿ ತತ್ವದ ಪರವಾಗಿ ಇರುವವನು. ಈ ಕಾರಣಕ್ಕೆ ಸಹಕಾರ ಇಲಾಖೆಯ ನೇಮಕಾತಿಗಳಲ್ಲಿ ಕೋ ಆಪರೇಟೀವ್ ಮ್ಯಾನೇಜ್‌ಮೆಂಟ್ ಪದವಿ, ಡಿಪ್ಲಮೋ ಪಡೆದವರಿಗೆ ಮೀಸಲಾತಿ ನೀಡುವ ಪರವಾಗಿದ್ದೀನೆ ಎಂದು ಸಿಎಂ ಸಿದ್ದರಾಮಯ್ಯ ಹೇಳಿದರು.

ಸಹಕಾರ ಮಹಾಮಂಡಳದ ಕಟ್ಟಡಗಳ ನಿರ್ಮಾಣಕ್ಕೆ ಸರಕಾರ ನೆರವು ನೀಡಬೇಕು ಎನ್ನುವ ಬೇಡಿಕೆಯನ್ನು ಈಗಾಗಲೇ ಅನೇಕರು ನನ್ನ ಮುಂದೆ ವ್ಯಕ್ತಪಡಿಸಿದ್ದಾರೆ. ಈ ಬೇಡಿಕೆ ಈಡೇರಿಸುವ ಬಗ್ಗೆ ಯೋಚಿಸಲಾಗುವುದು.

- ಸಿದ್ದರಾಮಯ್ಯ ಮುಖ್ಯಮಂತ್ರಿ

ಕೃಷಿಯಲ್ಲಿ ಹಾಕಿದ ಬಂಡವಾಳ ವಾಪಸ್ ಬರುವುದು ಕಡಿಮೆ. ರೈತರಿಗೆ ಆರ್ಥಿಕ ಶಕ್ತಿ ಬರುವವರೆಗೆ ಅವರಿಗೆ ಸಹಕಾರದ ಬೆಂಬಲದ ಅವಶ್ಯಕತೆ ಇದೆ. ಸಹಕಾರಿ ಸಂಸ್ಥೆಗಳ ಮೂಲಕ ರೈತರಿಗೆ ಅನಾನುಕೂಲವಾಗುವುದರ ವಿರುದ್ಧ ನಾವೆಲ್ಲ ಗಟ್ಟಿಯಾಗಿ ಧ್ವನಿ ಎತ್ತಬೇಕು.

- ಕೆ.ಎನ್.ರಾಜಣ್ಣ ಸಹಕಾರ ಸಚಿವ

ವಾಣಿಜ್ಯ ಬ್ಯಾಂಕುಗಳು ನೀಡದ ಸಾಲವನ್ನು ಸಹಕಾರಿ ಸಂಸ್ಥೆಗಳು ನೀಡುತ್ತೀವೆ. ಅವುಗಳಿಂದ ಸಾಲ ಪಡೆದವರೇ ಇಂದು ದೊಡ್ಡ ಉದ್ಯಮದಾರರಾಗಿ ಬೆಳೆದಿದ್ದಾರೆ.

- ಜಿ.ಟಿ.ದೇವೇಗೌಡ ಸಹಕಾರಿ ಮಹಾಮಂಡಳದ ಅಧ್ಯಕ್ಷ

40% ಕುರಿತು ಲೋಕಾ ವರದಿ ಕಾಂಗ್ರೆಸ್-ಬಿಜೆಪಿ ವಾಕ್ಸಮರ

ಕಟ್ಟುಕಥೆ ಕಟ್ಟುವಲ್ಲಿ ಕಾಂಗ್ರೆಸ್ ನಿಸ್ಸೀಮ ಎಂಬುದು ಸಾಬೀತು: ವಿಜಯೇಂದ್ರ

ಜನರಿಗೆ ಗ್ಯಾರಂಟಿ ಭರವಸೆಗಳನ್ನು ನೀಡಿ ಅಧಿಕಾರಕ್ಕೆ ಬಂದಿದ್ದೇವೆ: ಪರಮೇಶ್ವರ್

ಬೆಂಗಳೂರು: ಬಿಜೆಪಿ ಸರಕಾರದ ಅವಧಿಯಲ್ಲಿ ಬಿಬಿಎಂಪಿ ಕಾಮಗಾರಿಗಳ ಗುತ್ತಿಗೆ ಸಂಬಂಧ ಕೇಳಿ ಬಂದಿದ್ದ 40 ಪರ್ಸೆಂಟ್ ಕಮಿಷನ್ ಆರೋಪ ಸತ್ಯಕ್ಕೆ ದೂರ ಎಂದು ಲೋಕಾಯುಕ್ತ ಪೊಲೀಸರು ವರದಿ ನೀಡಿರುವ ವಿಚಾರಕ್ಕೆ ಕಾಂಗ್ರೆಸ್ ಮತ್ತು ಬಿಜೆಪಿಯ ಮಧ್ಯೆ ವಾಕ್ಸಮರ ಆರಂಭವಾಗಿದ್ದು, ಕಾಂಗ್ರೆಸ್ ಪಕ್ಷ ಕಟ್ಟುಕಥೆ ಕಟ್ಟುವಲ್ಲಿ ನಿಸ್ಸೀಮ, ಆಧಾರರಹಿತ-ಹಸಿ ಸುಳ್ಳು ಆರೋಪ ಮಾಡುವುದರಲ್ಲಿ ಎತ್ತಿದ ಕೈ ಎಂದು ಕುಟುಕಿದೆ.

ಈ ಸಂಬಂಧ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿರುವ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಬಸವರಾಜ್ ಬೊಮ್ಮಾಯಿ ಅವರ ನೇತೃತ್ವದ ನಮ್ಮ ಬಿಜೆಪಿ ಸರಕಾರ ಆಡಳಿತದಲ್ಲಿದ್ದಾಗ 40% ಕಮಿಷನ್ ಎಂಬ ಸುಳ್ಳು ಅಪಪ್ರಚಾರ ನಡೆಸಿದ್ದ ಕಾಂಗ್ರೆಸ್ ಪಕ್ಷದ ಆರೋಪ ಆಧಾರರಹಿತ ಹಾಗೂ ಹಸಿ ಸುಳ್ಳು ಎಂಬುದು ಇದೀಗ ಲೋಕಾಯುಕ್ತ ತನಿಖೆಯಲ್ಲೇ ಬಹಿರಂಗವಾಗಿದೆ. ಭ್ರಷ್ಟತೆಯ ಕೂಪದಲ್ಲಿ ಮುಳುಗಿರುವ ರಾಜ್ಯ ಕಾಂಗ್ರೆಸ್ ಹಾಗೂ ರಾಜ್ಯ ಸರಕಾರ ತಾನು ಹೇಳುವುದೆಲ್ಲಾ ಸುಳ್ಳು, ಕಟ್ಟುಕಥೆ ಕಟ್ಟುವಲ್ಲಿ ತಾನು ನಿಸ್ಸೀಮ ಎಂಬುದು ಸಾಬೀತಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಅಲ್ಲದೆ, ನೈತಿಕ ಮಾರ್ಗದಲ್ಲಿ ಎಂದೂ ಅಧಿಕಾರ ಹಿಡಿಯದ ಕಾಂಗ್ರೆಸಿಗರು ದುರ್ಮಾರ್ಗ, ಅನೀತಿ, ಅಪಪ್ರಚಾರ ಹಾಗೂ ಸಮಾಜ ಒಡೆಯುವ ಕೆಲಸಗಳಿಂದಲೇ ಅಧಿಕಾರ ಕಬಳಿಸಿದ್ದಾರೆ. ಕರ್ನಾಟಕದ ಜನತೆಯನ್ನು ವಂಚಿಸಿ, ಸುಳ್ಳು ಹೇಳಿ ಅಧಿಕಾರಕ್ಕೆ ಬಂದಿರುವ ಸಿದ್ದರಾಮಯ್ಯನವರ ನೇತೃತ್ವದ ಕಾಂಗ್ರೆಸ್ ಸರಕಾರ ಈ ಕೂಡಲೇ ಅಧಿಕಾರದಿಂದ ಕೆಳಗಿಳಿದು ಕರ್ನಾಟಕದ ಜನತೆಯ ಕ್ಷಮೆ ಕೋರಲಿ ಎಂದು ಒತ್ತಾಯಿಸುತ್ತೇನೆ. ಕಾಂಗ್ರೆಸ್ ಸರಕಾರ ಅಧಿಕಾರದಲ್ಲಿರುವಾಗಲೇ ಲೋಕಾಯುಕ್ತ ತನಿಖಾ ವರದಿ ಬಹಿರಂಗವಾಗಿರುವ ಹಿನ್ನೆಲೆಯಲ್ಲಿ ಈ ಕುರಿತು ಕಾಂಗ್ರೆಸಿಗರು ಇನ್ನೇನೂ ಸಮಜಾಯಿಸಿ ನೀಡುವುದಕ್ಕಾಗಲಿ, ವಿತಂಡ ವಾದ ಮಾಡುವುದಕ್ಕಾಗಲಿ ಅವಕಾಶವೇ ಇಲ್ಲ ಎಂದು ವಿಜಯೇಂದ್ರ ಹೇಳಿದ್ದಾರೆ.

ಇದಕ್ಕೆ ಪ್ರತ್ಯುತ್ತರ ನೀಡಿದ ಗೃಹ ಸಚಿವ ಡಾ.ಜಿ.ಪರಮೇಶ್ವರ್, ರಾಜ್ಯದಲ್ಲಿ ನಮ್ಮ ಪಕ್ಷ (ಕಾಂಗ್ರೆಸ್) ಅಧಿಕಾರಕ್ಕೆ ಬಂದರೆ ಗ್ಯಾರಂಟಿ ಯೋಜನೆಗಳನ್ನು ನೀಡುತ್ತೇವೆ ಎಂದು ಜನರಿಗೆ ಮನೆಮನೆಗೆ ಹೋಗಿ ಭರವಸೆ ಕೊಟ್ಟಿದ್ದೆವು. 40 ಪರ್ಸೆಂಟ್ ಆರೋಪ ಮಾಡಿ ಅಧಿಕಾರಕ್ಕೆ ಬಂದಿದ್ದೇವೆ ಎಂಬುದು ಸುಳ್ಳು ಎಂದು ಹೇಳಿದ್ದಾರೆ.

ಜನಪರ ಹಾಗೂ ಅಭಿವೃದ್ಧಿಪರ ಆಡಳಿತ ನೀಡುತ್ತಿದ್ದ ಬಿಜೆಪಿ ಸರಕಾರದ ವಿರುದ್ಧ ಅಪಪ್ರಚಾರ ನಡೆಸಿದವರಿಗೆ ಜನರೇ ತಕ್ಕ ಶಾಸ್ತಿ ಮಾಡಲಿದ್ದಾರೆ. ಆದರೆ ಇದೀಗ ತಮ್ಮ ಕರಾಳತೆಯ ಭ್ರಷ್ಟ ಮುಖ ಮುಚ್ಚಿಕೊಳ್ಳಲು ಕೋವಿಡ್ ಸಂದರ್ಭದಲ್ಲಿ ಅವ್ಯವಹಾರ ನಡೆದಿದೆ ಎಂಬ ಮಧ್ಯಂತರ ವರದಿಯನ್ನು ತರಾತುರಿಯಲ್ಲಿ ತರಿಸಿಕೊಂಡು ಎಸ್‌ಐಟಿ ರಚಿಸಿದ್ದು, ಈ ತನಿಖೆಯಿಂದಲೂ ನಿಮಗೆ ಮುಖಭಂಗವೇ ಕಟ್ಟಿಟ್ಟ ಬುತ್ತಿ.

- ಬಿ.ವೈ.ವಿಜಯೇಂದ್ರ ಬಿಜೆಪಿ ರಾಜ್ಯಾಧ್ಯಕ್ಷ

ಚುನಾವಣೆ ಸಂದರ್ಭದಲ್ಲಿ ಜನಗಳಿಗೆ ಗ್ಯಾರಂಟಿ ಯೋಜನೆಗಳನ್ನು ಕೊಡುತ್ತೇವೆ ಎಂದು ನಾವು ಭರವಸೆ ಕೊಟ್ಟಿದ್ದೇವೆ. ಬರೀ 40 ಪರ್ಸೆಂಟ್ ಆರೋಪದಿಂದ ನಾವು ಅಧಿಕಾರಕ್ಕೆ ಬಂದಿದ್ದೇವೆ ಎಂಬುದು ಸುಳ್ಳು.

- ಡಾ.ಜಿ.ಪರಮೇಶ್ವರ್ ಗೃಹ ಸಚಿವ

ಕೆಂಪಣ್ಣ, ಪದ್ಮನಾಭ ಅವರು ಕಾಂಗ್ರೆಸ್‌ನ ಟೂಲ್‌ಕಿಟ್ ಆಗಿ ಕೇಸ್ ದಾಖಲು ಮಾಡಿದ್ದರು. ಆರು ವರ್ಷಗಳಿಂದ ಅಂಬಿಕಾಪತಿ ಗುತ್ತಿಗೆ ಕೆಲಸ ಮಾಡಿಲ್ಲ. ನಿರುದ್ಯೋಗಿ ಕಾಂಟ್ರಾಕ್ಟರ್ ಎಲ್ಲ ಸೇರಿ 40% ಸರಕಾರ ಎಂದು ಆರೋಪ ಮಾಡಿದ್ದರು. ಕಾಂಗ್ರೆಸ್‌ನ ಸುಳ್ಳಿನ ಮಹಲ್ ಕುಸಿದು ಬಿದ್ದಿದೆ.

- ಆರ್.ಅಶೋಕ ಪ್ರತಿಪಕ್ಷದ ನಾಯಕ

→ 4

ಈ ಕ್ಷಿಪಣಿ ವ್ಯವಸ್ಥೆ ಇರುವ ಕೆಲವೇ ದೇಶಗಳ ಎಲೈಟ್ ಗ್ರೂಪ್‌ಗೆ ಸೇರಿದ ಭಾರತ

ಹೈಪರ್‌ಸಾನಿಕ್ ಕ್ಷಿಪಣಿ ಪ್ರಯೋಗ ಯಶಸ್ವಿ

ದೆಹಲಿ: ಭಾರತದ 'ಹೈಪರ್‌ಸಾನಿಕ್ ಕ್ಷಿಪಣಿ' ಪರೀಕ್ಷಾರ್ಥ ಪ್ರಯೋಗ ಯಶಸ್ವಿಯಾಗಿದೆ. ಆ ಮೂಲಕ ಭಾರತ ಹೈಪರ್‌ಸಾನಿಕ್ ಕ್ಷಿಪಣಿ ವ್ಯವಸ್ಥೆ ಇರುವ ಕೆಲವೇ ದೇಶಗಳ ಎಲೈಟ್ ಗ್ರೂಪ್‌ಗೆ ಸೇರಿಕೊಂಡಂತಾಗಿದೆ.

ದೀರ್ಘ ವ್ಯಾಪ್ತಿಯ ಹೈಪರ್‌ಸಾನಿಕ್ ಕ್ಷಿಪಣಿಯ ಪರೀಕ್ಷಾರ್ಥ ಪ್ರಯೋಗವನ್ನು ಭಾರತ ಒಡಿಶಾ ಕರಾವಳಿಯ ಅಬ್ದುಲ್ ಕಲಾಂ ದ್ವೀಪದಿಂದ ಶನಿವಾರ ಯಶಸ್ವಿಯಾಗಿ ನಡೆಸಿದೆ. ಇದರಿಂದ ದೇಶದ ರಕ್ಷಣಾ ಸಾಮರ್ಥ್ಯ ಇನ್ನಷ್ಟು ಬಲಗೊಂಡಿದೆ. ಹೈಪರ್‌ಸಾನಿಕ್ ಕ್ಷಿಪಣಿಯ ಪರೀಕ್ಷೆ ಐತಿಹಾಸಿಕ ಎಂದು ರಕ್ಷಣಾ ಸಚಿವ ರಾಜನಾಥ ಸಿಂಗ್ ತಿಳಿಸಿದ್ದಾರೆ.

ಈ ಬಗೆಯ ಸುಧಾರಿತ ರಕ್ಷಣಾ ತಂತ್ರಜ್ಞಾನ ಅಭಿವೃದ್ಧಿಪಡಿಸುವ ಸಾಮರ್ಥ್ಯವಿರುವ ಕೆಲವೇ ದೇಶಗಳ ಸಾಲಿಗೆ ಈಗ ಭಾರತವೂ ಸೇರಿಕೊಂಡಿದೆ. ಈ ವಿಶಿಷ್ಟ ಸಾಧನೆಗೆ ಕಾರಣವಾದ 'ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ'(ಡಿಆರ್‌ಡಿಒ), ಮತ್ತು ಸಶಸ್ತ್ರ ಪಡೆಗಳನ್ನು ರಾಜನಾಥ್ ಸಿಂಗ್ ಶ್ಲಾಘಿಸಿದ್ದಾರೆ.

ಹೈದರಾಬಾದ್‌ನಲ್ಲಿರುವ ಡಾ. ಎಪಿಜೆ ಅಬ್ದುಲ್ ಕಲಾಂ ಮಿಸೈಲ್ ಕಾಂಪ್ಲೆಕ್ಸ್‌ನ ಪ್ರಯೋಗಾಲಯಗಳು ಮತ್ತು ಡಿಆರ್‌ಡಿಒ ಪ್ರಯೋಗಾಲಯಗಳು ಹಾಗು ಇತರೆ ಕೈಗಾರಿಕಾ ಪಾಲುದಾರರ ಜತೆಸೇರಿ ಸ್ವದೇಶಿಯವಾಗಿಯೇ ಕ್ಷಿಪಣಿ ಅಭಿವೃದ್ಧಿಪಡಿಸಲಾಗಿದೆ. ಉಡ್ಡಯನ ವೇಳೆ ಡಿಆರ್‌ಡಿಒ ಹಿರಿಯ ವಿಜ್ಞಾನಿಗಳು ಮತ್ತು ಸೇನಾಪಡೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.



ಸೇನಾಬಲ ವೃದ್ಧಿ

ಈ ಹೈಪರ್‌ಸಾನಿಕ್ ಕ್ಷಿಪಣಿ 1,500 ಕಿ.ಮೀ.ವರೆಗೂ ಸಾಗಬಲ್ಲ ಸಾಮರ್ಥ್ಯ ಹೊಂದಿದೆ. ಅಲ್ಲದೇ, ಜತೆಗೇ ಹಲವು ಉಪಕರಣಗಳನ್ನೂ ಹೊತ್ತೊಯ್ಯಬಲದಾಗಿದೆ. ಈ ಕ್ಷಿಪಣಿಯ ಸೇರ್ಪಡೆಯಿಂದ ಭಾರತದ ಸೇನಾಪಡೆಗಳ ಬಲ ಗಣನೀಯವಾಗಿ ಹೆಚ್ಚಳವಾಗಿದೆ.

ನೆತನ್ಯಾಹು ಮನೆ ಮೇಲೆ ಮತ್ತೆ ದಾಳಿ

ಕೈರೊ: ಇಸ್ರೇಲ್‌ನ ಉತ್ತರ ನಗರದ ಕೆಸರಿಯಾದಲ್ಲಿರುವ ಪ್ರಧಾನಿ ಬೆಂಜಮನ್ ನೆತನ್ಯಾಹು ನಿವಾಸದ ಮೇಲೆ ಶನಿವಾರ ಬಾಂಬ್ ದಾಳಿ ನಡೆದಿದೆ. ದಾಳಿ ವೇಳೆ ನೆತನ್ಯಾಹು ಅಥವಾ ಅವರ ಕುಟುಂಬದವರು ನಿವಾಸದಲ್ಲಿ ಇರಲಿಲ್ಲ. ಯಾವುದೇ ರೀತಿಯ ಹಾನಿ ಸಂಭವಿಸಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ. ಈ ಸಂಬಂಧ ಪ್ರತಿಕ್ರಿಯಿಸಿರುವ ರಕ್ಷಣಾ ಸಚಿವ ಇಸ್ರೇಲ್ ಕಾಟ್ಜ್, ಎಲ್ಲ ಮಿತಿಗಳನ್ನು ಮೀರಿದ ಕೃತ್ಯವಿದು. ಇದನ್ನು ಸಹಿಸಲಾಗದು. ಪ್ರಧಾನಿ ನೆತನ್ಯಾಹು ಅವರನ್ನು ಹತ್ಯೆಗೆ ಯತ್ನಿಸುತ್ತಿರುವ ಇರಾನ್ ಹಾಗೂ ಅದರ ಬೆಂಬಲಿತ ಪಡೆಗಳು ಈ ಕೃತ್ಯವೆಸಗಿರಬಹುದು ಎಂದು ಶಂಕಿಸಿದ್ದಾರೆ. ನೆತನ್ಯಾಹು ನಿವಾಸದ ಮೇಲೆ ಅಕ್ಟೋಬರ್‌ನಲ್ಲಿ ಡ್ರೋನ್ ದಾಳಿ ನಡೆದಿತ್ತು.

ಇಸ್ರೇಲ್ ಪಡೆಯಿಂದ ಪ್ರತಿದಾಳಿ

ಟೆಲ್ ಅವೀವ್: ಇಸ್ರೇಲ್ ಪ್ರಧಾನಿ ನಿವಾಸದ ಮೇಲೆ ದಾಳಿ ನಡೆದ ಬೆನ್ನಲ್ಲೇ ಭಾನುವಾರ ಗಾಜಾಪಟ್ಟಿಯ ಮೇಲೆ ಇಸ್ರೇಲ್ ಪಡೆಗಳು ನಡೆಸಿದ ದಾಳಿಯಲ್ಲಿ ಸುಮಾರು 12 ಜನರು ಮೃತಪಟ್ಟಿದ್ದಾರೆ. ಇಸ್ರೇಲ್ ನಡೆಸಿದ ವೈಮಾನಿಕ ದಾಳಿಯಲ್ಲಿ ಕೇಂದ್ರೀಯ ಗಾಜಾ ಪಟ್ಟಿಯ ನಸೀರತ್ ನಿರಾಶ್ರಿತರ ಶಿಬಿರದಲ್ಲಿ ಆರು ಮಂದಿ, ಬುರೇಜ್ ನಿರಾಶ್ರಿತರ ಶಿಬಿರದಲ್ಲಿ ನಾಲ್ವರು ಮತ್ತು ಗಾಜಾದ ಉತ್ತರ-ದಕ್ಷಿಣ ಹೆದ್ದಾರಿಯಲ್ಲಿ ನಡೆದ ದಾಳಿಯೊಂದರಲ್ಲಿ ಇಬ್ಬರು ಮೃತಪಟ್ಟಿದ್ದಾರೆ.

ಖಾಸಗಿ ಆಸ್ಪತ್ರೆ, ಮೆಡಿಕಲ್ ಸ್ಟೋರ್‌ಗಳಲ್ಲಿ ಸಾವಿರಾರು ರು. ಕೊಟ್ಟು ಔಷಧ ಖರೀದಿ

ರಾಜ್ಯದಲ್ಲಿ ಜೀವರಕ್ಷಕ ಔಷಧಗಳ ಕೊರತೆ

ಬೆಂಗಳೂರು: ರಾಜ್ಯದಲ್ಲಿ ಹಿಂಗಾರು ಮಳೆ ಆರ್ಭಟದಿಂದಾಗಿ ಸಾಂಕ್ರಾಮಿಕ ರೋಗಿಗಳ ಭೀತಿ ಹೆಚ್ಚಳವಾಗಿರುವ ಬೆನ್ನಲ್ಲೇ ಆರೋಗ್ಯ ಇಲಾಖೆ ಅಧೀನದ ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮದಲ್ಲಿ(ಕೆಎಸ್‌ಎಂಎಸ್‌ಸಿಎಲ್) ಬರೋಬ್ಬರಿ 250 ಔಷಧಗಳು ಶೂನ್ಯ ದಾಸ್ತಾನು ಇರುವುದು ಬೆಳಕಿಗೆ ಬಂದಿವೆ.

ವಿವಿಧ ಟೆಂಡರ್‌ಗಳ ಅಂತಿಮ ಪ್ರಕ್ರಿಯೆ ಮುಗಿದಿದ್ದರೂ ಸರಬರಾಜು ಆದೇಶ ಪತ್ರ ನೀಡುವುದಕ್ಕೆ ವಿಳಂಬವಾಗುತ್ತಿರುವ ಹಿನ್ನೆಲೆಯಲ್ಲಿ ಸರಕಾರಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ತೆರಳುವವರಿಗೆ ಔಷಧಗಳ ಅಭಾವ ಎದುರಾಗಿದೆ. ಇದರಿಂದ, ಖಾಸಗಿ ಆಸ್ಪತ್ರೆ ಹಾಗೂ ಮೆಡಿಕಲ್ ಸ್ಟೋರ್‌ಗಳಲ್ಲಿ ಸಾವಿರಾರು ರುಪಾಯಿ ಕೊಟ್ಟು ಜೀವ ರಕ್ಷಕ ಔಷಧಗಳನ್ನು ಖರೀದಿಸುವಂತಾಗಿದೆ.

ಕೆಎಸ್‌ಎಂಎಸ್‌ಸಿಎಲ್, ಪ್ರತಿ ವರ್ಷ ಹತ್ತಾರು ಟೆಂಡರ್‌ಗಳನ್ನು ನಡೆಸಿ ನೂರಾರು ಕೋಟಿ ರು. ಮೌಲ್ಯದ ಬ್ಯಾಂಡೇಜ್ ಕ್ಲಾತ್, ಕಾಟನ್, ಸರ್ಜಿಕಲ್ ಗ್ಲೌಸ್, ಗ್ಲೂಕೋಸ್ ಬಾಟಲ್, ಆಂಟಿ ಬಯೋಟಿಕ್ ಮಾತ್ರೆ ಮತ್ತು ವೈದ್ಯಕೀಯ ಸಲಕರಣೆ ಸೇರಿ ವಿವಿಧ ಔಷಧಗಳನ್ನು ದಾಸ್ತಾನು ಮಾಡುತ್ತಿದೆ. ಔಷಧ ದಾಸ್ತಾನುಕ್ಕಾಗಿ ಪ್ರತಿ ವರ್ಷ ನೂರಾರು ಕೋಟಿ ರು. ಮೊತ್ತದ ಟೆಂಡರ್ ನಡೆಸಲಾಗುತ್ತಿದೆ. ಬೇರೆ ರಾಜ್ಯಗಳಲ್ಲಿ ಪ್ರತಿ ವರ್ಷ ಫೆಬ್ರವರಿಯಲ್ಲಿ ಟೆಂಡರ್ ಆಹ್ವಾನಿಸಲಾಗುತ್ತದೆ. ಮಾರ್ಚ್‌ನಲ್ಲಿ ಅಂತಿಮ ಪ್ರಕ್ರಿಯೆ ಮುಗಿಸಿ ಏಪ್ರಿಲ್‌ನಲ್ಲಿ ಔಷಧ ಸ್ವೀಕರಿಸಲಾಗುತ್ತದೆ. ಆದರೆ, ರಾಜ್ಯದಲ್ಲಿ ಟೆಂಡರ್ ಪ್ರಕ್ರಿಯೆ ಮುಗಿಸಲು, ಸರಬರಾಜು ಆದೇಶ ಪತ್ರ ನೀಡುವಿಕೆಯಲ್ಲಿ ವಿಳಂಬ ಸೇರಿ ಇತರೆ ಕಾರಣಗಳಿಂದ 2 ವರ್ಷದ ಹಳೆಯ ಟೆಂಡರ್‌ಗಳ ಪ್ರಕ್ರಿಯೆಗಳು ಇನ್ನೂ ನಡೆಯುತ್ತಿವೆ.

ಒಂದು ಕಡೆ ಟೆಂಡರ್ ಪ್ರಕ್ರಿಯೆ ಮುಗಿಸುವ ಮುನ್ನ ಅಧಿಕಾರಿಗಳು ಬರೀ ಶೇ.25ರಷ್ಟು ಮಾತ್ರ ಸರಬರಾಜು ಆದೇಶ ನೀಡುತ್ತಿದ್ದಾರೆ. ಪೂರೈಕೆದಾರರು ಶೇ.100ರಷ್ಟು ಪ್ರಮಾಣಕ್ಕೆ ಬೆಲೆ ನೀಡಿದ್ದರೂ ಬಿಡ್‌ದಾರರಿಗೆ ಕಿರುಕುಳ ನೀಡಲು ಶೇ.100ರಷ್ಟು ಸರಬರಾಜು ಆದೇಶವನ್ನೇ ನೀಡುತ್ತಿಲ್ಲ. ಇಲಾಖೆ ಆಯುಕ್ತರಿಗೆ ಅನುಮೋದನೆ ಕಳುಹಿಸಿದ ಕಡತಗಳನ್ನೇ ಗಮನಿಸುತ್ತಿಲ್ಲ. ನಿಗಮದ ಅಧಿಕಾರಿಗಳ ನಿರ್ಲಕ್ಷ್ಯದಿಂದಾಗಿ ಪ್ರಮುಖ ಜೀವರಕ್ಷಕ ಔಷಧಗಳ ಕೊರತೆ ಕಾಡುತ್ತಿವೆ. ಕಮಿಷನ್ ತಡೆಗೆ ರೂಪಿಸಿರುವ 'ಇ-ಪೇಮೆಂಟ್ ಮಾಡಲ್' ವ್ಯವಸ್ಥೆಯನ್ನೇ ಅಧಿಕಾರಿಗಳು ವಿರೋಧಿಸುತ್ತಿದ್ದಾರೆ.

ನಿಗಮದಲ್ಲಿ ಕೋಟ್ಯಂತರ ರುಪಾಯಿ ಔಷಧ ಬಿಲ್, ಭದ್ರತಾ ಠೇವಣಿ ಹಾಗೂ ಇಎಂಡಿ ಬಾಕಿಯಿವೆ.

→ 4

- ಔಷಧ ದಾಸ್ತಾನುಕ್ಕಾಗಿ ಪ್ರತಿ ವರ್ಷ ನೂರಾರು ಕೋಟಿ ರು. ಮೊತ್ತದ ಟೆಂಡರ್
- ಟೆಂಡರ್‌ಗಳ ಪ್ರಕ್ರಿಯೆ ಮುಗಿದಿದ್ದರೂ ಸರಬರಾಜು ಆದೇಶ ಪತ್ರ ನೀಡಲು ವಿಳಂಬ
- ಇಲಾಖೆ ಆಯುಕ್ತರಿಗೆ ಅನುಮೋದನೆ ಕಳುಹಿಸಿದ ಕಡತಗಳನ್ನೇ ಗಮನಿಸುತ್ತಿಲ್ಲ
- ನಿಗಮದ ಅಧಿಕಾರಿಗಳ ನಿರ್ಲಕ್ಷ್ಯದಿಂದಾಗಿ ಪ್ರಮುಖ ಜೀವರಕ್ಷಕ ಔಷಧಗಳ ಕೊರತೆ
- ಕಮಿಷನ್ ತಡೆಗೆ ರೂಪಿಸಿರುವ 'ಇ-ಪೇಮೆಂಟ್ ಮಾಡಲ್' ವ್ಯವಸ್ಥೆಗೆ ಅಧಿಕಾರಿಗಳ ವಿರೋಧ

ಯಾವ್ಯಾವ ಕಾಯಿಲೆಗಳಿಗೆ ಔಷಧ ಕೊರತೆ?

ಶ್ವಾಸಕೋಶ, ಕರುಳು, ರಕ್ತಹೀನತೆ, ಸರ್ಪಸುತ್ತು, ನ್ಯುಮೋನಿಯಾ, ಅಸ್ತಮಾ, ಸಕ್ಕರೆ ಕಾಯಿಲೆ, ನಿದ್ರಾಹೀನತೆ, ರಕ್ತದೊತ್ತಡ, ಗರ್ಭಾಶ್ರಯ ರಕ್ತಸ್ರಾವ, ಹೃದಯಾಘಾತ, ಮೂಳೆ, ತುರಿಕೆ, ಫಂಗಸ್, ಮೈಗ್ರೇನ್, ಯೋನಿ ಸೋಂಕು, ಶೀತ, ಅನಸ್ತೇಯಾ, ಹೃದಯ ಶಸ್ತ್ರಚಿಕಿತ್ಸೆ, ರಕ್ತಹೆಪ್ಪುಗಟ್ಟುವಿಕೆ, ಹುಣ್ಣು, ನೋವು, ವಾಕರಿಕೆ, ವಾಂತಿ, ಮಿದುಳು ಮತ್ತು ನರ, ಕಣ್ಣಿನ ಸೋಂಕು ಸೇರಿ ವಿವಿಧ ಗಂಭೀರ ಕಾಯಿಲೆಗಳ ನಿವಾರಿಸುವ ಔಷಧಗಳ ಅಭಾವ ಉಂಟಾಗಿದೆ.

ಚಾಮುಂಡಿ ಬೆಟ್ಟದ ನಂದಿಗೆ ಮಹಾಮಜ್ಜನ

ಬೆಟ್ಟದ ಬಳಗ ಚಾರಿಟೆಬಲ್ ಟ್ರಸ್ಟ್‌ನಿಂದ 19ನೇ ಮಹಾಭಿಷೇಕ

ಮೈಸೂರು: ಹರಗುರು ಚರಮೂರ್ತಿಗಳ ಸಮ್ಮುಖದಲ್ಲಿ ಮೈಸೂರಿನ ಚಾಮುಂಡಿ ಬೆಟ್ಟದ ನಂದಿಗೆ ಭಾನುವಾರ ಸಕಲ ಪೂಜಾ ವಿಧಿ ವಿಧಾನಗಳೊಂದಿಗೆ ಮಹಾಮಜ್ಜನ ನೆರವೇರಿತು.

- 34 ಬಗೆಬಗೆಯ ದ್ರವ್ಯಗಳೂ ಸೇರಿದಂತೆ 38 ವಿಧಗಳಲ್ಲಿ ಅಭಿಷೇಕ
- ಮಜ್ಜನದ ಬಳಿಕ ಮಹಾ ಮಂಗಳಾರತಿ ಹಾಗೂ ಪ್ರಸಾದ ವಿನಿಯೋಗ

ಕಾರ್ತಿಕ ಮಾಸದ ಪುಣ್ಯ ದಿನವಾದ ಭಾನು ವಾರ ಬೆಟ್ಟದ ಬಳಗ ಚಾರಿಟಬಲ್ ಟ್ರಸ್ಟ್‌ನಿಂದ ಆಯೋಜಿಸಲಾಗಿದ್ದ ಮಹಾ ಮಜ್ಜನ ಕಾರ್ಯಕ್ರಮದಲ್ಲಿ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಆದಿಚುಂಚನಗಿರಿ ಶಾಖಾ ಮಠದ ಪೀಠಾಧಿಪತಿ ಶ್ರೀ ಸೋಮನಾಥ ಸ್ವಾಮೀಜಿ, ಶ್ರೀ ಚಿದಾನಂದ ಸ್ವಾಮೀಜಿ ಭಾಗವಹಿಸಿದ್ದರು.

ದೇಶದಲ್ಲೇ 3ನೇ ಅತಿದೊಡ್ಡ ನಂದಿ ವಿಗ್ರಹ ಎಂದು ಗುರುತಿಸಿಕೊಂಡಿರುವ ಚಾಮುಂಡಿ ಬೆಟ್ಟದ ನಂದಿಗೆ ಬೆಟ್ಟದ ಬಳಗ ಚಾರಿಟಬಲ್ ಟ್ರಸ್ಟ್‌ನಿಂದ ಕಳೆದ 19 ವರ್ಷಗಳಿಂದ ಮಹಾಭಿಷೇಕ ನಡೆಯುತ್ತಿದ್ದು, 34 ಬಗೆಬಗೆಯ ದ್ರವ್ಯಗಳೂ ಸೇರಿದಂತೆ 38 ವಿಧಗಳಲ್ಲಿ ಅಭಿಷೇಕ ಮಾಡಲಾಯಿತು. ಅರಿಸಿನ, ಕುಂಕುಮ, ಎಳನೀರು, ಶ್ರೀಗಂಧ, ವಿಭೂತಿ, ನೀರು, ತುಪ್ಪ, ಹಾಲು, ಮೊಸರು, ಜೇನುತುಪ್ಪ ಸೇರಿದಂತೆ ಒಟ್ಟು 34 ಬಗೆಯ ದ್ಯವ್ಯಗಳಿಂದ ನಂದಿಗೆ ಮಜ್ಜನ ಮಾಡಲಾಯಿತು.

ಮೈಸೂರಿನ ಚಾಮುಂಡಿ ಬೆಟ್ಟದ ನಂದಿಗೆ ಭಾನುವಾರ ಮಹಾಮಜ್ಜನ ನೆರವೇರಿತು.

→ 4

ಸಮಾಚಾರ ಸಣ್ಣದಲ್ಲ

ಕೃಷ್ಣಮೂರ್ತಿ ನಿಧನ



ಬೆಂಗಳೂರು: ಆಕಾಶವಾಣಿಯಲ್ಲಿ 3 ದಶಕಗಳಿಗೂ ಮೀರಿ ಸೇವೆ ಸಲ್ಲಿಸಿದ ಎನ್.ಎಸ್. ಕೃಷ್ಣಮೂರ್ತಿ ಅವರು ಭಾನುವಾರ ಮುಂಜಾನೆ ನಿಧನರಾ ದರು. ಅವರಿಗೆ 87 ವರ್ಷ ವಾಗಿತ್ತು. 1950– 60 ರ ರೇಡಿಯೊದ ಆರಂಭಿಕ ದಿನಗಳಲ್ಲಿ ಬಹುದೊಡ್ಡ ಕೊಡುಗೆ ನೀಡಿದ್ದಾರೆ. ಸಂಗೀತ, ಸಾಹಿತ್ಯ, ವಿವಿಧ ಕಲೆಗಳ ವಿಚಾರದಲ್ಲಿ ಪ್ರಭುತ್ವ ಇದ್ದ ವಿಶಿಷ್ಟ ಅನುಭಾವಿ. ನೂರಾರು ಕಾರ್ಯಕ್ರಮ ಗಳ ಪರಿಕಲ್ಪನೆ ರಚನೆ ಮಾಡಿದ್ದಾರೆ.ಆಕಾಶವಾಣಿ ಮಾಧ್ಯಮಕ್ಕೆ ಅವರು ನೀಡಿರುವ ಕೊಡುಗೆ ಸದಾ ಸ್ಮರಣೀಯ ಎಂದು ಶ್ರೋತೃಗಳು ಸ್ಮರಿಸಿದ್ದಾರೆ.

ಗಾರೆ ಕೆಲಸದ ಯುವತಿ ಆತ್ಮಹತ್ಯೆ

ಬೆಂಗಳೂರು: ಹೊಟ್ಟೆಪಾಡಿಗಾಗಿ ಯಾದಗಿರಿಯಿಂದ ಬೆಂಗಳೂರಿಗೆ ಬಂದು ಗಾರೆ ಕೆಲಸ ಮಾಡುತ್ತಿದ್ದ 18 ವರ್ಷದ ಯುವತಿಯೊಬ್ಬಳು ನೇಣು ಬಿಗಿದು ಆತ್ಮಹತ್ಯೆಗೆ ಶರಣಾದ ಘಟನೆ ನಡೆದಿದೆ. ಕುರುಬರಹಳ್ಳಿಯ 19ನೇ ಮೇನ್‌ನಲ್ಲಿರುವ ಮನೆಯಲ್ಲಿ 18 ವರ್ಷದ ಭೀಮವ್ವ ನೇಣಿಗೆ ಶರಣಾಗಿದ್ದಾಳೆ. ಮೃತ ಭೀಮವ್ವ ಮೂಲತಃ ಯಾದಗಿರಿಯ ಕ್ಯಾತನಾಳದ ನಿವಾಸಿ. ಭಾಗ್ಯಮ್ಮ– ಮಲ್ಲಣ್ಣ ದಂಪತಿಯ ಪುತ್ರಿ. ವಿದ್ಯಾಭ್ಯಾಸ ಅರ್ಧಕ್ಕೆ ನಿಲ್ಲಿಸಿ ಹೊಟ್ಟೆಪಾಡಿಗಾಗಿ ಯಾದಗಿರಿಯಿಂದ ಬೆಂಗಳೂರಿಗೆ ಬಂದು ಗಾರೆ ಕೆಲಸ ಮಾಡುತ್ತಿದ್ದಳು. ಎಂದಿನಂತೆ ತನ್ನ ತಾಯಿ ಜತೆ ಕೆಲಸಕ್ಕೆ ಹೋಗಿ ಬಂದು ಏಕಾಏಕಿ ನೇಣಿಗೆ ಕೊರಳೊಡ್ಡಿದ್ದಾಳೆ. ಭಾಗ್ಯಮ್ಮ– ಮಲ್ಲಣ್ಣ ದಂಪತಿಗೆ ಒಟ್ಟು ನಾಲ್ವರು ಹೆಣ್ಣು ಮಕ್ಕಳು. ಈ ಪೈಕಿ ಭೀಮವ್ವ ಹಿರಿಯ ಪುತ್ರಿ. ಭೀಮವ್ವಳ ಕುಟುಂಬ ಕಳೆದ ಹಲವು ವರ್ಷಗಳಿಂದ ಬೆಂಗಳೂರಿನಲ್ಲಿ ವಾಸವಿದ್ದು, ಭೀಮವ್ವ ಸಹ ವಿದ್ಯಾಭ್ಯಾಸ ಅರ್ಧಕ್ಕೆ ನಿಲ್ಲಿಸಿ ಗಾರೆ ಕೆಲಸಕ್ಕೆ ಹೋಗುತ್ತಿದ್ದಳು. ಎಂದಿನಂತೆ ಭಾನುವಾರ ಬೆಳಗ್ಗೆ ತಂದೆ–ತಾಯಿ ಜತೆ ಕೆಲಸಕ್ಕೆ ಹೋಗಿದ್ದ ಭೀಮವ್ವ, ಮಧ್ಯಾಹ್ನ ಮನೆಗೆ ಬಂದು ನೇಣಿಗೆ ಶರಣಾಗಿದ್ದಾಳೆ. ಗಾರೆ ಕೆಲಸ ಮುಗಿಸಿಕೊಂಡು ತಾಯಿ ಜೊತೆಗೆ ಭೀಮವ್ವ ಮನೆಗೆ ಬಂದಿದ್ದಾಳೆ. ಬಳಿಕ ತಾಯಿ ಭಾಗ್ಯಮ್ಮ ಬೇರೆಯವರ ಮನೆ ಕೆಲಸಕ್ಕೆಂದು ಹೋಗಿದ್ದರೆ, ಮೂವರು ತಂಗಿಯರು ಮನೆ ಹೊರ ಗಡೆ ಆಟವಾಡಲು ಹೋಗಿದ್ದರು. ಆಗ ಮನೆಯಲ್ಲಿ ಯಾರೂ ಇಲ್ಲದ ವೇಳೆ ಭೀಮವ್ವ ಆತ್ಮಹತ್ಯೆ ಮಾಡಿಕೊಂಡಿದಾಳೆ. ಆದರೆ ಆತ್ಮಹತ್ಯೆಗೆ ನಿಖರ ಕಾರಣ ತಿಳಿದುಬಂದಿಲ್ಲ. ಇನ್ನು ವಿಷಯ ತಿಳಿಯುತ್ತಿದ್ದಂತೆಯೇ ಘಟನಾ ಸ್ಥಳಕ್ಕೆ ಮಹಾಲಕ್ಷ್ಮಿ ಲೇಔಟ್ ಪೊಲೀಸರ ಭೇಟಿ ನೀಡಿ ತನಿಖೆ ನಡೆಸಿದ್ದಾರೆ.

ರಾಮಕೃಷ್ಣ ಆಶ್ರಮದ ಮರಗಳಿಗೆ ಕೊಡಲಿಯೇಟು

ಬೆಂಗಳೂರು: ನಗರದ ಹಲಸೂರು ಬಳಿ ಇರುವ 135 ವರ್ಷಗಳಷ್ಟು ಇತಿಹಾಸ ಹೊಂದಿರುವ ರಾಮಕೃಷ್ಣ ಆಶ್ರಮದ (ಮೇಲೆ ದುರುಳರ ಕಣ್ಣು ಬಿದ್ದಿದೆ. ರಾತ್ರೋರಾತ್ರಿ ಆಶ್ರಮದ ಆವರಣದಲ್ಲಿದ್ದ ಹಳೆಯ ಮರಗಳನ್ನು ಕಿಡಿಗೇಡಿಗಳು ಕತ್ತರಿಸಿ ಹಾಕಿದ್ದಾರೆ. ಶನಿವಾರ ರಾತ್ರಿ ಅನಾಮಿಕರು ಆಶ್ರಮದಲ್ಲಿನ ಅನೇಕ ಅಪರೂಪದ ಮರಗಳಿಗೆ ಕೊಡಲಿಯೇಟು ಹಾಕಿದ್ದಾರೆ. ರುದ್ರಾಕ್ಷಿ ಮರ, ಬನ್ನಿ ಮರ, ಹಲಸಿನ ಮರ, ಅಶೋಕ ಮರ ಸೇರಿದಂತೆ ಹಲವು ಮರಗಳನ್ನು ಕತ್ತರಿಸಿಹಾಕಿದ್ದಾರೆ. 150 ವರ್ಷಗಳ ಪುರಾತನ ರುದ್ರಾಕ್ಷಿ ಮರಕ್ಕೆ ಪರ್ಯಾಯವಾಗಿ ನೆಡಲಾದ ರುದ್ರಾಕ್ಷಿ ಮರಕ್ಕೂ ಕತ್ತರಿ ಹಾಕಲಾಗಿದ್ದು, ಆಶ್ರಮದ ಆವರಣದಲ್ಲಿ ಇನ್ನೂ ಅನೇಕ ಮರಗಳಿದ್ದು ಕಿಡಿಗೇಡಿಗಳು ರಾತ್ರೋರಾತ್ರಿ ನಾಶಮಾಡಿದ್ದಾರೆ.

ಕಿಡಿಗೇಡಿಗಳ ವಿರುದ್ಧ ಕ್ರಮಕ್ಕೆ ಆಗ್ರಹ: 135 ವರ್ಷ ಇತಿಹಾಸ ಇರುವ ಪುರಾತನ ಮಠ ನಮ್ಮದು, ನಮ್ಮ ಮಠದ ಆವರಣದಲ್ಲಿ 150 ವರ್ಷಕ್ಕೂ ಹಳೆಯ ಮರಗಳಿವೆ. ಈ ಪೈಕಿ 15–20 ವರ್ಷಗಳ ಹಿಂದೆ ನಾವೇ ನೆಟ್ಟಿದ್ದ ಕೆಲವು ಮರಗಳು ಕಡಿದಿದ್ದಾರೆ. ರುದ್ರಾಕ್ಷಿ, ಬನ್ನಿ, ಹಲಸು ಸೇರಿದಂತೆ ಹತ್ತಕ್ಕೂ ಅಧಿಕ ಮರ ಕಡಿದಿದ್ದಾರೆ. ದೇವರ ಪೂಜೆಗೆಂದು ನಾವೇ ನೆಟ್ಟಿದ್ದ ಹೂವಿನ ಗಿಡಗಳನ್ನೂ ಕತ್ತರಿಸಿದ್ದಾರೆ. ಪೊಲೀಸರಿಗೆ ಹಾಗೂ ಅರಣ್ಯ ಇಲಾಖೆಗೆ ಈ ಸಂಬಂಧ ದೂರು ಕೊಟ್ಟಿದ್ದೇವೆ. ಕಿಡಿಗೇಡಿಗಳ ಪತ್ತೆಮಾಡಿ ಕಾನೂನು ಜರುಗಿಸಲು ಮನವಿ ಮಾಡಿದ್ದೇವೆ ಎಂದು ರಾಮಕೃಷ್ಣ ಮಠದ ಟ್ರಸ್ಟಿ ಗುಣಶೇಖರ್ ಅವರು ತಿಳಿಸಿದ್ದಾರೆ.

ಜಯನಗರ ಸಂಘಟನೆಗಳಿಂದ 'ನಮ್ಮ ತೆರಿಗೆ ನಮ್ಮ ಹಕ್ಕು' ಹೋರಾಟ | ಡಿಸಿಎಂ ಡಿಕೆಶಿ ವಿರುದ್ಧ ಕಿಡಿ

ಜಯನಗರ ಅನುದಾನ ಜಟಾಪಟಿ: 10 ಕೋಟಿ ರು. ಬಿಡುಗಡೆಗೆ ಆಗ್ರಹ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕ್ಷೇತ್ರಕ್ಕೆ ಅನುದಾನ ನೀಡದ ವಿಚಾರದಲ್ಲಿ ಡಿಸಿಎಂ ಡಿ.ಕೆ.ಶಿವಕುಮಾರ್ ವಿರುದ್ಧ ಜಯನಗರ ನಿವಾಸಿಗಳ ಆಕ್ರೋಶದ ಕಟ್ಟೆಯೊಡೆದಿದೆ.

ಈ ಅನ್ಯಾಯ ಖಂಡಿಸಿ ಜಯನಗರ ಕ್ಷೇತ್ರದ ನಾಗರೀಕ ಸಂಘ ಸಂಸ್ಥೆಗಳ ಒಕ್ಕೂಟವು ನಮ್ಮ ತೆರಿಗೆ ನಮ್ಮ ಹಕ್ಕು ಘೋಷವಾಕ್ಯದ ಅಡಿಯಲ್ಲಿ ಸಭೆ ಹಮ್ಮಿಕೊಂಡಿದೆ. ಕ್ಷೇತ್ರದ ಶಾಸಕ ಸಿ.ಕೆ.ರಾಮಮೂರ್ತಿ ಅವರು ಸಭೆಯ ನೇತೃತ್ವ ವಹಿಸಿದ್ದು, ಕ್ಷೇತ್ರಕ್ಕೆ ಅನುದಾನ ನೀಡುವಂತೆ ಸರಕಾರವನ್ನು ಒತ್ತಾಯಿಸಿದ್ದಾರೆ. ನಟಿ ತಾರಾ ಅನುರಾಧ ಸಹ ಅನುದಾನಕ್ಕೆ ಆಗ್ರಹಿಸಿದ್ದಾರೆ.

ಸಭೆಯನ್ನುದ್ದೇಶಿಸಿ ಮಾತನಾಡಿದ ಜಯನಗರ ಶಾಸಕ ಸಿ.ಕೆ ರಾಮಮೂರ್ತಿ, 72 ಸಂಘಟನೆಗಳು ಸೇರಿ ಸಭೆ ಮಾಡಿದ್ದೇವೆ. ಅನುದಾನಕ್ಕೆ ಹಕ್ಕೊತ್ತಾಯ ಮಾಡಲು ನಾವು ನಿರ್ಣಯ ತೆಗೆದುಕೊಂಡಿದ್ದೇವೆ. ನಮ್ಮ ಉದ್ದೇಶ, ಸರ್ವರಿಗೂ ಸಮಪಾಲು ಸಮಬಾಳು. ಅದರಂತೆ ಜಯನಗರಕ್ಕೆ 10 ಕೋಟಿ ರು. ಅನುದಾನ ಬಿಡುಗಡೆ ಮಾಡಬೇಕು ಎಂದು ನಾನು ಮನವಿ ಮಾಡುತ್ತೇನೆ ಎಂದಿದ್ದಾರೆ.

ಏನಿದು ಅನುದಾನ ಜಟಾಪಟಿ?: ಕಳೆದ ಅಕ್ಟೋಬರ್ ಕೊನೆಯಲ್ಲಿ ರಾಜ್ಯ ಸರಕಾರ ಬೆಂಗಳೂರಿನ 27 ವಿಧಾನಸಭಾ ಕ್ಷೇತ್ರಗಳಿಗೆ ತಲಾ 10 ಕೋಟಿ ರು.ನಂತೆ 270 ಕೋಟಿ ರು. ಅನುದಾನ ಬಿಡುಗಡೆ ಮಾಡಿತ್ತು. ಆದರೆ ಈ ಪಟ್ಟಿಯಿಂದ ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಬಿಜೆಪಿ ಶಾಸಕ ಸಿ.ಕೆ.ರಾಮಮೂರ್ತಿ ಪ್ರತಿನಿಧಿಸುವ ಜಯನಗರ ಕ್ಷೇತ್ರ ಹೊರಗಿಟ್ಟಿದ್ದು ವಿವಾದಕ್ಕೆ ಕಾರಣವಾಗಿದೆ. ವಿಧಾನಸಭೆಯಲ್ಲಿ ಬ್ರ್ಯಾಂಡ್ ಬೆಂಗಳೂರು ಬಗ್ಗೆ ಶಾಸಕ ಸಿ.ಕೆ.ರಾಮಮೂರ್ತಿ ಮಾತಾಡಿದ್ದರು ಎಂಬ ಕಾರಣಕ್ಕೆ ಜಯನಗರಕ್ಕೆ ಅನುದಾನ ನೀಡಿಲ್ಲ ಎಂದು ಹೇಳಲಾಗಿದೆ. ಇದು ವ್ಯಾಪಕ ಟೀಕೆ, ಆಕ್ರೋಶಕ್ಕೆ ಕಾರಣವಾಗುತ್ತಿದೆ. ಇದು ಸೇಡಿನ ಕ್ರಮ, ಕಾಂಗ್ರೆಸ್‌ಗೆ ಮತ ಹಾಕದ ನಾಗರಿಕರನ್ನು ಈ ಸರಕಾರ ಶಿಕ್ಷಿಸುತ್ತಿದೆ ಎಂದು ಬಿಜೆಪಿ ಆರೋಪಿಸಿದೆ. ಇದಕ್ಕೆ ಪೂರಕವಾಗಿ ಡಿಸಿಎಂ ಮಾತಾಡಿದ್ದು, ನಾನೇ ಉದ್ದೇಶಪೂರ್ವಕವಾಗಿ ಜಯನಗರಕ್ಕೆ ಅನುದಾನ ಕೊಟ್ಟಿಲ್ಲ ಎಂದಿದ್ದಾರೆ. ಈ ಮೂಲಕ ತಮ್ಮ ನಡೆ ಸಮರ್ಥನೆ ಮಾಡಿಕೊಂಡಿದ್ದರು.

ನಾಗಸಂದ್ರದಿಂದ ಮಾದಾವರ ಮೆಟ್ರೋ ಸೇವೆ ಲೋಕಾರ್ಪಣೆಗೂ ಮುನ್ನ ಡಿ.ಕೆ. ಶಿವಕುಮಾರ್ ಮತ್ತು ಸಂಸದ ತೇಜಸ್ವಿ ಸೂರ್ಯ ಅವರು ಜತೆಯಾಗಿ ಪ್ರಯಾಣಿಸಿದ್ದರು. ಈ ಸಂದರ್ಭದಲ್ಲಿ ತೇಜಸ್ವಿ ಸೂರ್ಯ ಅವರು ಜಯನಗರದ ಅನುದಾನ ವಿಚಾರವನ್ನು ಪ್ರಸ್ತಾಪಿಸಿ ಮನವಿ ಮಾಡಿದ್ದರು. ಈ ವೇಳೆ, ನಾನು ಬಂದ ಮೇಲೆ ಬೆಂಗಳೂರು ಅಧೋಗತಿ ಆಗೋಯಿತು ಎಂದು ಅವನು (ಜಯನಗರ ಶಾಸಕ ರಾಮಮೂರ್ತಿ) ಹೇಳಿಕೆಯನ್ನು ನೀಡಿದ್ದ. ನನ್ನ ಜತೆ ಮಾತನಾಡಬೇಕಾದರೆ ತಗ್ಗಿಬಗ್ಗಿ ಇರಬೇಕು. ಬೇರೆಯವರ ಜತೆಗೆ ಇದ್ದಂತೆ ಇದ್ದರೆ ಆಗುವುದಿಲ್ಲ ಎಂದು ಹೇಳಿದ್ದರು. ಈ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿತ್ತು.

ಇದು ಮೊದಲ ಹಂತದ ಹೋರಾಟ. ನಾವು ಮನವಿ ಸಲ್ಲಿಸುತ್ತೇವೆ. ಅವರು ಏನು ಕ್ರಮ ತೆಗೆದುಕೊಳ್ಳುತ್ತಾರೆ ಎಂಬುದು ನೋಡಬೇಕು. ಡಿಸಿಎಂ ಡಿ.ಕೆ. ಶಿವಕುಮಾರ್ ಅವರಿಗೆ ನಾನು ವೈಯಕ್ತಿಕವಾಗಿ ಮನವಿ ಮಾಡುತ್ತೇನೆ, ಅವರು ಹಿರಿಯರು. ಅಭಿವೃದ್ಧಿ ಆಗಬೇಕು, ಆದರೆ ಎಲ್ಲರಿಗೂ ಅನುದಾನ ಕೊಟ್ಟು ನಮಗೆ ಮಾತ್ರ ಕೊಟ್ಟಿಲ್ಲ ಎಂದರೆ ಹೇಗೆ?. ಬ್ರ್ಯಾಂಡ್ ಬೆಂಗಳೂರು ಹೇಗಾಗುತ್ತದೆ?. ಕ್ಷೇತ್ರದಲ್ಲಿ ರಸ್ತೆ ಹಾಳಾಗಿದೆ. ಜಯನಗರಕ್ಕೆ ಕರೆದರೂ ಡಿಸಿಎಂ ಬಂದಿಲ್ಲ. ನೀವು ಬೆಂಗಳೂರು ನಗರಾಭಿವೃದ್ಧಿ ಸಚಿವರು ಅದಕ್ಕೆ ಕೇಳಿದ್ದು, ಮತ್ತಿನ್ಯಾರನ್ನ ಕೇಳಬೇಕು.
-ಸಿ.ಕೆ.ರಾಮಮೂರ್ತಿ, ಶಾಸಕ

ತಗ್ಗಿ ಬಗ್ಗಿ ನಡೆಯುತ್ತೇವೆ

ಜಯನಗರ ಕ್ಷೇತ್ರಕ್ಕೆ 10 ಕೋಟಿ ಅನುದಾನ ತಕ್ಷಣವೇ ಬಿಡುಗಡೆ ಮಾಡಬೇಕು. ನಾನು ಉಪಮುಖ್ಯಮಂತ್ರಿಗಳನ್ನು ಭೇಟಿ ಮಾಡುತ್ತೇನೆ. ಸದ್ಯ ಅವರು ಮಹಾರಾಷ್ಟ್ರ ಚುನಾವಣಾ ಪ್ರಚಾರದಲ್ಲಿ ಇದ್ದಾರೆ. ಎಲ್ಲ ಒಕ್ಕೂಟ ಸೇರಿ ಭೇಟಿ ಮಾಡಿ ಮನವಿ ಮಾಡುತ್ತೇನೆ. ಮತ್ತೊಂದು ಸಭೆ ಕರೆಯುತ್ತೇವೆ. ಮತದಾರರ ಮುಂದೆ ನಾನು ತಲೆಬಾಗಬೇಕು. ಡಿ.ಕೆ. ಶಿವಕುಮಾರ್ ಅವರು ನಮಗೆ ತಗ್ಗಿ ಬಗ್ಗಿ ಇರಬೇಕು ಎಂದಿದ್ದಾರೆ. ನಾವು ಅದೇ ರೀತಿ ನಡೆದುಕೊಳ್ಳುತ್ತೇವೆ. ನಾನು ಯಾರಿಗೆ ತಗ್ಗಿ ಬಗ್ಗಿ ನಡೀಬೇಕು ಎಂದು ಹೇಳಿದ್ದಾರೋ ಅದೇ ರೀತಿ ಇರುತ್ತೇನೆ. ಡಿಸಿಎಂ ಅವರು ದೊಡ್ಡವರು ನಾವು ಚಿಕ್ಕವರು, ಹೀಗಾಗಿ ಅವರು ನಮಗೆ ಅನುದಾನ ನೀಡಲಿ ಎಂದು ಮನವಿ ಮಾಡುತ್ತೇನೆ ಎಂದು ಶಾಸಕ ಸಿ.ಕೆ.ರಾಮಮೂರ್ತಿ ನುಡಿದಿದ್ದಾರೆ.

ನೂರು ಕೃತಿಯಿಂದ ಲಕ್ಷ ಸ್ನೇಹಿತರನ್ನು ಗಳಿಸಿದೆ: ಜೋಗಿ

ಬಿ.ಪಿ.ವಾಡಿಯಾ ಸಭಾಂಗಣದಲ್ಲಿ ಜೋಗಿ ಅವರ ನೂರನೇ ಕೃತಿ ಇಳಂಗೋವನ್ ಮತ್ತು ಸಾವಣ್ಣ ಪ್ರಕಾಶನದ ಹದಿನೈದನೇ ವಾರ್ಷಿಕೋತ್ಸವ ನಡೆಯಿತು. ನಟ ಪ್ರಕಾಶ್ ರಾಜ್, ಜಮೀಲ್ ಸಾವಣ್ಣ ಮತ್ತಿತರಿದ್ದರು.

ಬೆಂಗಳೂರು: ನೂರು ಅಂತ ನಾನು ಹೇಳಲಾರೆ. ಮೊದ ಮೊದಲು ನನಗೆ ಕೃತಿ ಪ್ರಕಟಿಸುವ ಆಸಕ್ತಿ ಇರಲಿಲ್ಲ. ರಾಜಚಂಡೂರು ಅವರು ನನ್ನ ಮೊದಲ ಕೃತಿ ಪ್ರಕಟಿಸಿದರು. ಆ ಮೊದಲ ಮೂರು ಕೃತಿಗಳು ಈಗ ಲಭ್ಯವಿಲ್ಲ. ನೂರು ಕೃತಿಗಳಿಂದ ಲಕ್ಷ ಸ್ನೇಹಿತರನ್ನು ಗಳಿಸಿದೆ ಎಂದು ಲೇಖಕ ಜೋಗಿ ಹೇಳಿದರು.

ಬಿ.ಪಿ.ವಾಡಿಯಾ ರಸ್ತೆಯಲ್ಲಿರುವ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್ ವೇದಿಕೆಯಲ್ಲಿ ಭಾನುವಾರ ಜೋಗಿ ಅವರ ನೂರನೇ ಕೃತಿ ಇಳಂಗೋವನ್ ಮತ್ತು ಸಾವಣ್ಣ ಪ್ರಕಾಶನದ ಹದಿನೈದನೇ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ನಡೆಯಿತು.ನಟ ಪ್ರಕಾಶ್ ರಾಜ್ ಮಾತನಾಡಿ, ಜೋಗಿ ಬಲ, ಪ್ರಕಾಶ್ ರಾಜ್ ಎಡ ಅದು ಹೇಗೆ ಅವರಿಬ್ಬರು ಸ್ನೇಹಿತರು ಎಂಬ ಮಾತು ಇತ್ತೀಚೆಗೆ ಕೇಳಿದೆ. ಆದರೆ ಆ ಮಾತು ಆಡಿದ ವ್ಯಕ್ತಿ ನನ್ನ ಮತ್ತು ಜೋಗಿಯ ಪ್ರಪಂಚ ಕಂಡಿಲ್ಲ. ಅವರ ಮನೆ, ಮಗಳು, ಮಡದಿ ಇರುವ ಆ ಪ್ರಪಂಚ ನೋಡಿಲ್ಲ. ನಾನು ಆ ರೀತಿಯ ಸ್ನೇಹ ಹೊಂದಿರುವವನು ಎಂದರು.

ಟಿ.ಎನ್.ಸೀತಾರಾಮ್ ಅವರು ಜೋಗಿ ಅವರ ಸೂಟ್ ಕವಿತೆ ವಾಚಿಸಿದರು. ಜೋಗಿ ಅವರ ಬರವಣಿಗೆಯೇ ಆಕರ್ಷಣೆ. ಪತ್ತೇದಾರಿ ಅಲ್ಲದಿದ್ದರೂ ಅವರ ಕಥನಗಳು ಓದಿಸುತ್ತದೆ. ಅವರು ಕೊಪ ಮಾಡಿಕೊಳ್ಳುವುದು ಕಡಿಮೆ. ಆದರೆ ಕೊನೆಯ ದಿನದ ವರೆಗೆ ಹಸ್ತಪ್ರತಿ ಕೊಡದೇ ನಮಗೆ ಕೊಪ ಬರಿಸುತ್ತಾರೆ ಎಂದು ಪ್ರಕಾಶ್ ಕಂಬತ್ತಳ್ಳಿ ಜೋಗಿ ಜತೆಗಿನ ಒಡನಾಟ ನೆನೆದರು.

ಜೋಗಿ ಅವರನ್ನು ಒತ್ತಾಯಿಸಿ ನಾನೆ ನೂರನೇ ಪುಸ್ತಕ ಬರೆಸಿದೆ. ಜೋಗಿ ಅವರು ನನ್ನ ಪಬ್ಲಿಕೇಶನ್ ಆರಂಭದ ದಿನದಿಂದ ಸಹಕಾರ ನೀಡುತ್ತಾ ಬಂದಿದ್ದಾರೆ ಎಂದು ಜಮೀಲ್ ಸಾವಣ್ಣ ಹೇಳಿದರು.

ಶಿವಾನಂದ ತಗಡೂರು ಕೋವಿಡ್ ಕಥೆಗಳು ಕೃತಿಗೆ ಅಮ್ಮ ಪ್ರಶಸ್ತಿ ಪುರಸ್ಕಾರ

ಬೆಂಗಳೂರು: ಕಲಬುರಗಿಯ ಸೇಡಂ ತಾಲೂಕಿನ ಮಾತೋಶ್ರೀ ಮಹಾದೇವಮ್ಮ ನಾಗಪ್ಪ ಮುನ್ನೂರ್ ಪ್ರತಿಷ್ಠಾನದಿಂದ ಕೊಡ ಮಾಡುವ ರಾಜ್ಯಮಟ್ಟದ ಪ್ರತಿಷ್ಠಿತ 'ಅಮ್ಮ ಪ್ರಶಸ್ತಿ'ಯ ವಿಶೇಷ ಪುರಸ್ಕಾರ ಹಿರಿಯ ಪತ್ರಕರ್ತ ಶಿವಾನಂದ ತಗಡೂರು ಅವರ ಕೋವಿಡ್ ಕಥೆಗಳು ಕೃತಿಗೆ ಲಭಿಸಿದೆ.



ಮಾಧ್ಯಮ ರಂಗದಲ್ಲಿ ತುಂಬಾ ಪರಿಣಾಮ ಬೀರಿರುವ ಪುಸ್ತಕ ಶಿವಾನಂದ ತಗಡೂರು ಹೇಳಿದ ಕೋವಿಡ್ ಕಥೆಗಳು ಕೃತಿ ತೀರಾ ಭಿನ್ನವಾಗಿ ಮೂಡಿದೆ. ಕೋವಿಡ್ ಕಾಲಘಟ್ಟದಲ್ಲಿ ಆಗಿರುವ ಸಾವು- ನೋವು, ವಿಶೇಷವಾಗಿ ಕೋವಿಡ್‌ನಲ್ಲಿ ಜೀವ ಕಳೆದುಕೊಂಡ ಪತ್ರಕರ್ತರ ಬದುಕಿನ ವಾಸ್ತವ ಸಂಗತಿಗಳ ಕಥೆಗಳನ್ನೊಳಗೊಂಡ ಈ ಕೃತಿ, ಪತ್ರಿಕಾ ವಲಯದಲ್ಲಿ ಗಂಭೀರ ಪರಿಣಾಮ ಉಂಟುಮಾಡಿದೆ. ನೊಂದ ಕುಟುಂಬಗಳ ಬದುಕು ಬೀದಿಗೆ ಬೀಳುವ ಹೊತ್ತಿನಲ್ಲಿ ಅವರಿಗೆ ಆರ್ಥಿಕವಾಗಿ ಆಸರೆಯಾಗಿ ನಿಂತ ನೈಜ ಘಟನೆಗಳು ಪುಸ್ತಕದಲ್ಲಿವೆ. ಕೊರೋನಾ ಸಂದರ್ಭದಲ್ಲಿ ಟಿವಿ ಸಂದರ್ಶನವೊಂದರಲ್ಲಿ ಶಿವಾನಂದ ತಗಡೂರು ಅವರ ಮಾತು ಮತ್ತು ಚಿಕಿತ್ಸೆಯ ಸಲಹೆಗಳನ್ನು ಕೇಳಿದ ಪೊಲೀಸ್ ಅಧಿಕಾರಿಯೊಬ್ಬರು ತಮ್ಮ ತಂದೆಯವರನ್ನು ಉಳಿಸಿಕೊಳ್ಳುವುದಕ್ಕೆ ಸಾಧ್ಯವಾಗಿದೆ ಎಂದು ಹೇಳಿಕೊಂಡಿದ್ದರು.

ನ.26ರಂದು ಪ್ರಶಸ್ತಿ ಪ್ರದಾನ

ಇಂತಹ ಜನಪರವಾದ ಕೃತಿಗೆ ಅಮ್ಮ ವಿಶೇಷ ಪುರಸ್ಕಾರ ನೀಡಲಾಗುತ್ತಿದ್ದು, ಪ್ರಸ್ತುತ ವರ್ಷದಿಂದ ಪ್ರತಿ ವರ್ಷವೂ ಮಾಧ್ಯಮದವರು ಬರೆದ ಒಂದು ಪುಸ್ತಕಕ್ಕೆ ವಿಶೇಷ ಪುರಸ್ಕಾರ ನೀಡಲಾಗುವುದು. ನವೆಂಬರ್ 26 ರಂದು ಸಂಜೆ 5.30ಕ್ಕೆ ಸೇಡಂನ ಶ್ರೀ ಪಂಚಲಿಂಗೇಶ್ವರ ದೇವಾಲಯದ ಶಾಂಭವಿ ರಂಗಮಂಟಪದಲ್ಲಿ ಜರುಗುವ ಸಮಾರಂಭದಲ್ಲಿ 'ಅಮ್ಮ ಪ್ರಶಸ್ತಿ' ಪ್ರದಾನ ಸಮಾರಂಭದಲ್ಲಿಯೇ ಈ ವಿಶೇಷ ಪುರಸ್ಕಾರ ನೀಡಲಾಗುವುದು ಎಂದು ಮಾತೋಶ್ರೀ ಮಹಾದೇವಮ್ಮ ನಾಗಪ್ಪ ಮುನ್ನೂರ್ ಪ್ರತಿಷ್ಠಾನದ ಸಂಸ್ಥಾಪಕ ಸಂಚಾಲಕ ಮಹಿಪಾಲರೆಡ್ಡಿ ಮುನ್ನೂರ್ ತಿಳಿಸಿದ್ದಾರೆ.

ಕೀನ್ಯಾದಲ್ಲಿ ನೆಲೆಸಿರುವ 150ಕ್ಕೂ ಹೆಚ್ಚು ಅನಿವಾಸಿ ಕನ್ನಡಿಗರು ಒಟ್ಟುಗೂಡಿ ಕನ್ನಡ ರಾಜ್ಯೋತ್ಸವನ್ನು ಅದ್ದೂರಿಯಾಗಿ ಆಚರಿಸುವ ಮೂಲಕ ವಿದೇಶಿ ನೆಲದಲ್ಲೂ ಕನ್ನಡ ಕಂಪು ಬೀರಿದ್ದಾರೆ.

ಪೊಲೀಸ್ ಕ್ಲಿಯರೆನ್ಸ್ ಸರ್ಟಿಫಿಕೇಟ್ ಭರವಸೆ | ಕೊರಿಯರ್ ಸಂಸ್ಥೆ ಪ್ರತಿನಿಧಿ ಹೆಸರಿನಲ್ಲಿ ಭಾರಿ ಮೋಸ

ಸಾಫ್ಟ್‌ವೇರ್ ಉದ್ಯೋಗಿಗೆ 40.18 ಲಕ್ಷ ರು. ವಂಚನೆ

ಬೆಂಗಳೂರು: ವಿದೇಶಕ್ಕೆ ಮಾದಕದ್ರವ್ಯ ಸಾಗಾಟದ ಪ್ರಕರಣದಲ್ಲಿ ಸಿಲುಕಿರುವಂತೆ ನಂಬಿಸಿ, ಪೊಲೀಸರ ಸೋಗಿನಲ್ಲಿ ಸಹಾಯ ಮಾಡುವುದಾಗಿ ಸಾಫ್ಟ್‌ವೇರ್ ಉದ್ಯೋಗಿಯೊಬ್ಬರಿಗೆ ವಂಚಿಸಿರುವ ಘಟನೆ ನಗರದಲ್ಲಿ ನಡೆದಿದೆ.

30 ವರ್ಷ ವಯಸ್ಸಿನ ಯುವತಿಯೊಬ್ಬರು ನೀಡಿರುವ ದೂರಿನನ್ವಯ ಮುಂಬೈ ಏರ್ ಕಸ್ಟಮ್ಸ್ ಅಧಿಕಾರಿಗಳ ಹೆಸರಿನಲ್ಲಿ 40.18 ಲಕ್ಷ ರು. ವರ್ಗಾಯಿಸಿಕೊಂಡು ವಂಚಿಸಿರುವ ವಂಚಕರ ವಿರುದ್ಧ ಬೆಂಗಳೂರು ಪಶ್ಚಿಮ ವಿಭಾಗದ ಸಿಇಎನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಇರಾನ್‌ನಿಂದ ಪಾರ್ಸೆಲ್; ಕರೆ

ನವೆಂಬರ್ 7ರಂದು ಅಪರಿಚಿತ ನಂಬರ್‌ನಿಂದ ದೂರುದಾರ ಯುವತಿಗೆ ಕರೆಮಾಡಿದ್ದ ವಂಚಕನೊಬ್ಬ ತನ್ನನ್ನು ಕೊರಿಯರ್ ಕಂಪನಿಯೊಂದರ ಪ್ರತಿನಿಧಿ ಎಂದು ಪರಿಚಯಿಸಿಕೊಂಡಿದ್ದ. ಬಳಿಕ ನಿಮ್ಮ ಹೆಸರಿನಲ್ಲಿ ಮುಂಬೈನಿಂದ ಇರಾನ್‌ಗೆ ಕಳುಹಿಸಿರುವ ಪಾರ್ಸೆಲ್‌ನಲ್ಲಿ ಎಂಡಿಎಂಎ ಸೇರಿದಂತೆ ಇತರ ಮಾದಕ ಪದಾರ್ಥಗಳಿವೆ. ನಿಮ್ಮ ವೈಯಕ್ತಿಕ ದಾಖಲಾತಿಗಳು ಮತ್ತು ಫೋನ್ ನಂಬರ್ ಕೊರಿಯರ್‌ಗೆ ಲಿಂಕ್ ಆಗಿದೆ. ಈ ಕುರಿತು ನಿಮಗೆ ಏನಾದರೂ ಗೊತ್ತಾ ಎಂದು ಕೇಳಿದ್ದಾನೆ. ದೂರುದಾರ ಯುವತಿ ತನಗೆ ಗೊತ್ತಿಲ್ಲ ಎಂದಾಗ ಮುಂಬೈ ಏರ್ ಕಸ್ಟಮ್ಸ್ ಕಂಟ್ರೋಲ್ ರೂಂಗೆ ಕರೆ ಕನೆಕ್ಟ್ ಮಾಡುತ್ತೇನೆ ಎಂದು ಮತ್ತೊಬ್ಬ ವಂಚಕನಿಗೆ ಕರೆ ವರ್ಗಾಯಿಸಿದ್ದ.

ಏರ್ ಕಸ್ಟಮ್ಸ್ ಅಧಿಕಾರಿ ಸೋಗಿನಲ್ಲಿ ವಂಚನೆ

ಏರ್ ಕಸ್ಟಮ್ಸ್ ಅಧಿಕಾರಿಯ ಸೋಗಿನಲ್ಲಿ ಮಾತನಾಡಿದ ಇನ್ನೊಬ್ಬ ವಂಚಕ, ದೂರುದಾರಳಿಗೆ ಟೆಲಿಗ್ರಾಂ ಆ್ಯಪ್ ಡೌನ್ ಲೋಡ್ ಮಾಡಿಸಿ ವಿಡಿಯೋ ಕರೆ ಮಾಡಿದ್ದಾನೆ. ನಂತರ ನಾವು 6 ತಿಂಗಳ ಹಿಂದೆ ಬಂಧಿಸಿದ್ದ ಒಬ್ಬ ಕ್ರಿಮಿನಲ್ ವ್ಯಕ್ತಿ ಸಾರ್ವಜನಿಕರ ದಾಖಲೆಗಳನ್ನು ಪಡೆದು ಕೊರಿಯರ್/ಪಾರ್ಸೆಲ್ ರವಾನೆಗೆ ಬಳಸುತ್ತಿದ್ದ. ನಿಮಗೂ ಸಹ ಹಾಗೆಯೇ ಆಗಿರಬಹುದು. ನಾವು 3 ರೀತಿಯಲ್ಲಿ ತನಿಖೆ ನಡೆಸಿ ನಿಮಗೆ ಪಿಸಿಸಿ (ಪೊಲೀಸ್ ಕ್ಲಿಯರೆನ್ಸ್ ಸರ್ಟಿಫಿಕೆಟ್) ಕೊಡುತ್ತೇವೆ ಎಂದು ನಂಬಿಸಿದ್ದ. ನಂತರ ದೂರುದಾರಳ ವೈಯಕ್ತಿಕ ದಾಖಲೆಗಳು, ಕುಟುಂಬ ಸದಸ್ಯರ ವಿವರ, ಬ್ಯಾಂಕ್ ಖಾತೆಯ ವಿವರಗಳನ್ನು ಪಡೆದುಕೊಂಡು, ನಿಮ್ಮ ಖಾತೆಯಲ್ಲಿರುವ ಹಣವನ್ನು ನಾವು ಹೇಳಿದ ಖಾತೆಗೆ ವರ್ಗಾಯಿಸಿ, ಆರ್‌ಬಿಐನಿಂದ ಪರಿಶೀಲನೆ ನಡೆಸಿ ವಾಪಸ್ ನಿಮ್ಮ ಖಾತೆಗೆ ಮರು ವರ್ಗಾವಣೆ ಮಾಡಲಿದ್ದೇವೆ ಎಂದು ತಿಳಿಸಿದ್ದ.

ಅಪರಿಚಿತನ ಖಾತೆಗೆ 40.18 ಲಕ್ಷ ಜಮಾ

ಆರೋಪಿಗಳ ಮಾತು ನಿಜವೆಂದು ನಂಬಿದ್ದ ದೂರುದಾರ ಯುವತಿ ತನ್ನ ಮೂರು ವಿವಿಧ ಬ್ಯಾಂಕ್ ಖಾತೆಗಳಲ್ಲಿದ್ದ ಒಟ್ಟು 40.18 ಲಕ್ಷ ರು. ಹಣ ಅವರು ಹೇಳಿದ ಖಾತೆಗಳಿಗೆ ವರ್ಗಾಯಿಸಿದ್ದರು. ತನ್ನ ಖಾತೆಗೆ ಹಣ ಮರು ವರ್ಗಾವಣೆಯಾಗದಿದ್ದಾಗ ತಾನು ವಂಚನೆಗೊಳಗಾಗಿರುವುದು ತಿಳಿದ ಯುವತಿ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ದೂರಿನನ್ವಯ ಪ್ರಕರಣ ದಾಖಲಿಸಿಕೊಂಡಿರುವ ಬೆಂಗಳೂರು ಪಶ್ಚಿಮ ವಿಭಾಗದ ಸಿಇಎನ್ ಪೊಲೀಸರು ತನಿಖೆ ಆರಂಭಿಸಿದ್ದು, ಹಣ ಜಮೆಯಾದ ಖಾತೆಗಳ ವಿವರಗಳನ್ನು ಕಲೆಹಾಕುತ್ತಿರುವುದಾಗಿ ತಿಳಿಸಿದ್ದಾರೆ.

ಇಂಡಿಯನ್ ಕ್ಲಬ್ ಬಹರೈನ್‌ನಲ್ಲಿ ಜರುಗಿದ ಕನ್ನಡ ವೈಭವ ಕಾರ್ಯಕ್ರಮದಲ್ಲಿ ಭಾರತದ ರಾಯಭಾರಿ ವಿನೋದ್ ಕೆ.ಜಾಕೋಬ್, ಸಂಸದ ಕ್ಯಾ.ಬ್ರಿಜೇಶ್ ಚೌಟ, ಮಿಥುನ್ ರೈ, ಡಾ. ಯು.ಟಿ. ಇಫ್ತಿಕಾರ್ ಫರೀದ್, ಡಾ.ಬಾಲಕೃಷ್ಣ ಶೆಟ್ಟಿ, ಡಾ.ಶಿವಶರಣ್ ಶೆಟ್ಟಿ, ಕಾವು ಹೇಮನಾಥ್ ಶೆಟ್ಟಿ, ಚಿತ್ರನಟ ನೆನಪಿರಲಿ ಪ್ರೇಮ್, ನಟಿ ಅಮೃತಾ ಪ್ರೇಮ್ , ಪ್ರವೀಣ್ ಶೆಟ್ಟಿ ವಕ್ವಾಡಿ, ಸೌರಭ್ ಶೆಟ್ಟಿ, ಕನ್ನಡ ಸಂಘದ ಅಧ್ಯಕ್ಷ ಅಮರನಾಥ್ ರೈ, ಉಪಾಧ್ಯಕ್ಷ ಮಹೇಶ್ ಕುಮಾರ್, ಪ್ರಧಾನ ಕಾರ್ಯದರ್ಶಿ ರಾಮಪ್ರಸಾದ್ ಅಮ್ಮೆನಡ್ಕ ಇದ್ದರು. ಈ ವೇಳೆ ಸಂಘದ ವಾರ್ಷಿಕ ಸ್ಮರಣಸಂಚಿಕೆ ಕಾವೇರಿ 2024 ಯನ್ನು ಬಿಡುಗಡೆಗೊಳಿಸಲಾಯಿತು.

ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರ ಮತ್ತು ಜೆ.ಎಂ. ಎಫ್.ಸಿ ನ್ಯಾಯಾಲಯ ಕನಕಪುರ
ಸಿ.ಮಿಸ್. ನಂ.691/2024

ಅರ್ಜಿದಾರರು: ಶ್ರೀಮತಿ ಗೋವಿಂದಮ್ಮ ಕೋಂ ಲೇಟ್ ರಾಮಸ್ವಾಮಿ ವಯಸ್ಸು 61 ವರ್ಷಗಳು ವಾಸ: ಅರಳಿಮರದೊಡ್ಡಿ ಗ್ರಾಮ, ದೊಡ್ಡಕಬ್ಬಳ್ಳಿ ಅಂಚೆ, ಕೋಡಿಹಳ್ಳಿ ಹೋಬಳಿ ಕನಕಪುರ ತಾಲ್ಲೂಕು ರಾಮನಗರ ಜಿಲ್ಲೆ ಮತ್ತು ಇತರರು

ವಿರುದ್ಧ

ಎದುರುದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ. 2. ಗ್ರಾಮ ಲೆಕ್ಕಾಧಿಕಾರಿಗಳು ದೊಡ್ಡಕಬ್ಬಳ್ಳಿ ವೃತ್ತ ಕೋಡಿಹಳ್ಳಿ ಹೋಬಳಿ ಕನಕಪುರ ತಾಲ್ಲೂಕು ರಾಮನಗರ ಜಿಲ್ಲೆ

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1ನೇ ಅರ್ಜಿದಾರರ ಗಂಡ ಮತ್ತು 2 ಮತ್ತು 6ನೇ ಅರ್ಜಿದಾರರ ತಂದೆ, 3ನೇ ಅರ್ಜಿದಾರರ ಮಾವ, 4 ಮತ್ತು 5ನೇ ಅರ್ಜಿದಾರರ ತಾತನವರಾದ ರಾಮಸ್ವಾಮಿ ಬಿನ್ ಲೇಟ್ ಕಾಳಿಯಪ್ಪ @ ನಡುಪಯ್ಯಗೌಡ ರವರು, ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಕೋಡಿಹಳ್ಳಿ ಹೋಬಳಿ, ಅರಮರದೊಡ್ಡಿ ಗ್ರಾಮದಲ್ಲಿ ದಿನಾಂಕ 22.03.2011 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣದ ದಿನಾಂಕದ ಬಗ್ಗೆ ಯಾರಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ 24/12/2024 ರಂದು ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದ್ದಲ್ಲಿ ಯಾರದ್ದೂ ತಕರಾರೂ ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.

2024ರ ನವೆಂಬರ್ 16ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.

ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ. ನ್ಯಾಯಾಲಯ, ಕನಕಪುರ
ಅರ್ಜಿದಾರರ ಪರ ವಕೀಲರು
ಮಾದೇಶ. ಎ.ಜಿ,
ವಕೀಲರು, ಕನಕಪುರ
ಸ್ಥಳ : ಕನಕಪುರ
ದಿನಾಂಕ: 28/10/2024

ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರ ಮತ್ತು ಜೆ.ಎಂ. ಎಫ್.ಸಿ ನ್ಯಾಯಾಲಯ ಕನಕಪುರ
ಸಿ.ಮಿಸ್. ನಂ.690/2024

ಅರ್ಜಿದಾರರು: ಶ್ರೀಮತಿ ತೊಳಸಮ್ಮ ಕೋಂ ಲೇಟ್ ಮಾದೇಗೌಡ ವಯಸ್ಸು 84 ವರ್ಷಗಳು ವಾಸ: ಅರಳಿಮರದೊಡ್ಡಿ ಗ್ರಾಮ, ದೊಡ್ಡಕಬ್ಬಳ್ಳಿ ಅಂಚೆ, ಕೋಡಿಹಳ್ಳಿ ಹೋಬಳಿ ಕನಕಪುರ ತಾಲ್ಲೂಕು ರಾಮನಗರ ಜಿಲ್ಲೆ ಮತ್ತು ಇತರರು

ವಿರುದ್ಧ

ಎದುರುದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ. 2. ಗ್ರಾಮ ಲೆಕ್ಕಾಧಿಕಾರಿಗಳು ದೊಡ್ಡಕಬ್ಬಳ್ಳಿ ವೃತ್ತ ಕೋಡಿಹಳ್ಳಿ ಹೋಬಳಿ ಕನಕಪುರ ತಾಲ್ಲೂಕು ರಾಮನಗರ ಜಿಲ್ಲೆ

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1ನೇ ಅರ್ಜಿದಾರರ ಗಂಡ ಮತ್ತು 2 ರಿಂದ 6ನೇ ಅರ್ಜಿದಾರರ ತಂದೆಯವರಾದ ಮಾದೇಗೌಡ ಬಿನ್ ಲೇಟ್ ಆರುಬೆಳ್ಳಿ ವೆಂಕಟರಾಮೇಗೌಡ ರವರು, ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಕೋಡಿಹಳ್ಳಿ ಹೋಬಳಿ, ಅರಮರದೊಡ್ಡಿ ಗ್ರಾಮದಲ್ಲಿ ದಿನಾಂಕ 01.01.2004 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣದ ದಿನಾಂಕದ ಬಗ್ಗೆ ಯಾರಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ 24/12/2024 ರಂದು ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದ್ದಲ್ಲಿ ಯಾರದ್ದೂ ತಕರಾರೂ ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.

2024ರ ನವೆಂಬರ್ 16ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.

ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ. ನ್ಯಾಯಾಲಯ, ಕನಕಪುರ
ಅರ್ಜಿದಾರರ ಪರ ವಕೀಲರು
ಮಾದೇಶ. ಎ.ಜಿ,
ವಕೀಲರು, ಕನಕಪುರ
ಸ್ಥಳ : ಕನಕಪುರ
ದಿನಾಂಕ: 28/10/2024

ಮಾನ್ಯ ಗೌರವಾನ್ವಿತ 1ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಕನಕಪುರ
ಸಿ.ಮಿಸ್.ನಂ : 692/2024

ಅರ್ಜಿದಾರರು: 1. ಕೆ.ಕಾಂತರಾಜು ಬಿನ್ ಲೇಟ್ ಕಾಳಮಾರಯ್ಯ 2. ಕೆ. ನಾಗರಾಜು ಬಿನ್ ಲೇಟ್ ಕಾಳಮಾರಯ್ಯ 3. ಅನಿತಾ ಬಿ.ಕೆ ಬಿನ್ ಲೇಟ್ ಕಾಳಮಾರಯ್ಯ ಯಲ್ಲಮ್ಮ ದೇವಸ್ಥಾನ ಬೀದಿ, ಕುರುಪೇಟೆ, ಕನಕಪುರ ಟೌನ್ ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ.

ವಿರುದ್ಧ

ಪ್ರತಿ ಅರ್ಜಿದಾರರು: 1. ಜನನ ಮತ್ತು ಮರಣ ಪ್ರಮಾಣ ನೋಂದಣಿ ಅಧಿಕಾರಿಗಳು, ತಹಶೀಲ್ದಾರ್ ಕನಕಪುರ 2. ಗ್ರಾಮ ಲೆಕ್ಕಾಧಿಕಾರಿ, ಅಚ್ಚಲು ವೃತ್ತ, ಸಾತನೂರು ಹೋ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ.

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1 ರಿಂದ 3ನೇ ಅರ್ಜಿದಾರರ ತಂದೆ "ಕಾಳಮಾರಯ್ಯ ಬಿನ್ ಲೇಟ್ ಮುದ್ದಿಮಾರಯ್ಯ" ಬೊಮ್ಮನಹಳ್ಳಿ ಗ್ರಾಮ, ಸಾತನೂರು ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ, ದಿನಾಂಕ 06/11/1987 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣಪತ್ರ ನೀಡಲು ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ 24/12/2024 ರ ಬೆಳಿಗ್ಗೆ ಸರಿಯಾಗಿ 11:00 ಗಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದು ತಕರಾರು ಇಲ್ಲವಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥಗೊಳಿಸಲಾಗುವುದು.

16/11/2024 ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.

ನ್ಯಾಯಾಲಯದ ಆದೇಶದ ಮೇರೆಗೆ,
ಶಿರಸ್ತೆದಾರರು,
ಮಾನ್ಯ ಪ್ರಧಾನ ಅಪರ ಸಿವಿಲ್ ನ್ಯಾಯಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಕನಕಪುರ
ಅರ್ಜಿದಾರರ ಪರ ವಕೀಲರು
ಜೈರಾಮೇಗೌಡ.ಎಸ್
ವಕೀಲರು, ಕನಕಪುರ ಟೌನ್
ದಿನಾಂಕ: 29/10/2024
ಸ್ಥಳ: ಕನಕಪುರ

ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಮತ್ತು ಜೆ.ಎಂ.ಎಫ್.ಸಿ ಕನಕಪುರ
ಸಿ.ಮಿಸ್.ನಂ. 671/2024

ಅರ್ಜಿದಾರರು: ಶ್ರೀ ರತ್ನಮ್ಮ ಬಿನ್ ಲೇಟ್ ಮಲ್ಲಪ್ಪ ವಯಸ್ಸು 69 ವರ್ಷ ವಾಸ: ದಾಸಪ್ಪನದೊಡ್ಡಿ ಗ್ರಾಮ, ಐ. ಗೊಲ್ಲಹಳ್ಳಿ ದಾಖ್ಲೆ, ಉಯ್ಯಂಬಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ, ಮತ್ತು ಇನ್ನೊಬ್ಬರು.

ವಿರುದ್ಧ

ಪ್ರತಿ ಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ಕನಕಪುರ ತಹಶೀಲ್ದಾರ್‌ನಗರಸಭೆ ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ ಮತ್ತು ಇನ್ನೊಬ್ಬರು.

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1 ಮತ್ತು 2ನೇ ಅರ್ಜಿದಾರರ ತಾಯಿಯವರಾದ ಗೌರಮ್ಮ ಕೋಂ ಲೇಟ್ ಮಲ್ಲಪ್ಪ ರವರು, ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಉಯ್ಯಂಬಳ್ಳಿ ಹೋಬಳಿ, ಬೋಳಮಲ್ಲಪ್ಪನದೊಡ್ಡಿ ಗ್ರಾಮದಲ್ಲಿ ದಿನಾಂಕ 12/08/1972 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರ–ರಿಗೆ ನಿರ್ದೇಶನ ನೀಡುವಂತೆ ಹಾಗೂ ನ್ಯಾಯಾಲಯದ ಆದೇಶವನ್ನು ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, 24/12/2024 ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರೂ ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಏಕಪಕ್ಷೀಯವಾಗಿ ಇತ್ಯರ್ಥಗೊಳಿಸಲಾಗುವುದು.

2024ರ ನವಬರ್ 16ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರು ಜೆ.ಎಂ. ಎಫ್.ಸಿ. ನ್ಯಾಯಾಲಯ, ಕನಕಪುರ
ಅರ್ಜಿದಾರರ ಪರ ವಕೀಲರು
ಹೆಚ್.ಎಸ್.ಮುರಳಿ
ವಕೀಲರು
ಸ್ಥಳ : ಕನಕಪುರ
ದಿನಾಂಕ:

ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಮತ್ತು ಜೆ.ಎಂ.ಎಫ್.ಸಿ ಕನಕಪುರ
ಸಿ.ಮಿಸ್.ನಂ. 526/2024

ಅರ್ಜಿದಾರರು: ಶ್ರೀ ಸಿದ್ದನಂದಪ್ಪ ಬಿನ್ ಲೇಟ್ ಸಿದ್ದಯ್ಯ ಉ॥ ಸಿದ್ದಪ್ಪ ವಯಸ್ಸು 70 ವರ್ಷ ವಾಸ: ನಂ. 152/1, 15ನೇ ಮುಖ್ಯ ರಸ್ತೆ, ರಾಘವೇಂದ್ರ ಬಡಾವಣೆ, ಸಿದ್ದಾರೋಡ ಆಶ್ರಮ ರಸ್ತೆ, ಶ್ರೀನಗರ, ಬೆಂಗಳೂರು–50 ಮತ್ತು ಇತರರು.

ವಿರುದ್ಧ

ಪ್ರತಿ ಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ನಗರಸಭೆ ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ.

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, ಅರ್ಜಿದಾರರ ತಂದೆಯವರಾದ ಶ್ರೀ ಸಿದ್ದಯ್ಯ ಉ॥ ಸಿದ್ದಪ್ಪ ಬಿನ್ ಲೇಟ್ ಸಿದ್ದಯ್ಯ ರವರು, ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಹಲಸಿನಮರದೊಡ್ಡಿ ಕನಕಪುರ ಟೌನ್‌ನಲ್ಲಿ ದಿನಾಂಕ 20/06/1967 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರ–ರಿಗೆ ನಿರ್ದೇಶನ ನೀಡುವಂತೆ ಹಾಗೂ ನ್ಯಾಯಾಲಯದ ಆದೇಶವನ್ನು ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, 24/12/2024 ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರೂ ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಏಕಪಕ್ಷೀಯವಾಗಿ ಇತ್ಯರ್ಥಗೊಳಿಸಲಾಗುವುದು.

2024ರ ನವಬರ್ 06ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ
ಅರ್ಜಿದಾರರ ಪರ ವಕೀಲರು
ಹೆಚ್.ಎಸ್.ಮುರಳಿ
ವಕೀಲರು
ಸ್ಥಳ : ಕನಕಪುರ
ದಿನಾಂಕ: 06/11/2024

ಆರ್ಟ್ ಆಫ್ ಲಿವಿಂಗ್: ದೀಪೋತ್ಸವ

ಬೆಂಗಳೂರು: ಆರ್ಟ್ ಆಫ್ ಲಿವಿಂಗ್ ಆಶ್ರಮದಲ್ಲಿ ದೀಪೋತ್ಸವದೊಡನೆ ಕೂಡಿದ ಭಕ್ತಿಯ ಮೆರಗಿನಿಂದ ವೈಭವಯುತವಾಗಿ ಕಾರ್ತಿಕ ದೀಪೋತ್ಸವ ಆಚರಿಸಲಾಯಿತು.

ಈ ಕಾರ್ಯಕ್ರಮದಲ್ಲಿ ಮಾತನಾಡಿದ ರವಿಶಂಕರ್ ಗುರೂಜಿ, ಮುರುಗನನ್ನು ವರ್ಣಿಸುತ್ತಾ, ಉರುವ್ವೆ ಅರುವಾಯ್ ಉಳಧಯ್ಯೆ ಇಳಧಾಯ್–ಓ ಮುರುಗ, ನೀನು ರೂಪವನ್ನುಳ್ಳವನು ಮತ್ತು ಅರೂಪನೂ ಹೌದು. ಎಲ್ಲವನ್ನೂ ನಿನ್ನಲ್ಲಿ ಹೊಂದಿರುವವನು, ಅದೇ ಸಮಯದಲ್ಲಿ ನೀನು ಪೂರ್ಣವಾಗಿ ಖಾಲಿಯಾಗಿರುವವನು. ಅತೀ ಸಣ್ಣದ್ದರಲ್ಲೂ ಇರುವವನು ನೀನು. ಮರುವ್ವೆ ಮಲರಾಯ್ ಮಣಿಯ್ಯೆ ಒಲಿಯಾಯ್– ಹೂವಿನಲ್ಲಿ, ಗಂಟೆಯ ನಾದದಲ್ಲಿ, ಬೆಳಕಾಗಿ ಇರುವೆ. ಕರುವ್ವೆ ಉಯಿರಾಯ್ ಗತಿಯಾಯ್ ವಿಧಿಯಾಯ್– ಗರ್ಭದಲ್ಲಿರುವವನೂ ನೀನೇ, ಜೀವವೂ ನೀನೇ. ಜೀವನದ ಗತಿಯೂ ನೀನೇ, ಅದಕ್ಕೆ ವಿಧಿಯನ್ನು ಕೊಡುವವನೂ ನೀನೇ. ಗುರುವಾಯ್ ವರುವಾಯ್ ಅರಳ್ ವಾಯ್ ಗುಹನೆ–ಗುರುವಾಗಿ ಬಂದು ನಿನ್ನ ಆಶೀರ್ವಾದ ನಮಗೆಲ್ಲರಿಗೂ ನೀಡು ಎಂದು ಒಂದು ಪ್ರಾಚೀನ ತಮಿಳಿನ ಬರಹ ವಿವರಿಸಿದರು.

ಆರ್ಟ್ ಆಫ್ ಲಿವಿಂಗ್ ಆಶ್ರಮದಲ್ಲಿ ವೈಭವಯುತವಾಗಿ ನಡೆದ ಕಾರ್ತಿಕ ದೀಪೋತ್ಸವ.

ಮಧ್ಯಮ ಗಾತ್ರದ ಲಗೇಜ್‌ಗೆ 70 ರು., ದೊಡ್ಡ ಗಾತ್ರದ ಲಗೇಜ್‌ಗೆ 100 ರು. ದರ ನಿಗದಿ

ಮೆಟ್ರೋ: ಡಿಜಿಟಲ್ ಲಾಕರ್ ವ್ಯವಸ್ಥೆ

ಬೆಂಗಳೂರು: ನಮ್ಮ ಮೆಟ್ರೋ ಪ್ರಯಾಣಿಕರ ಅನುಕೂಲಕ್ಕಾಗಿ ಮೆಜೆಸ್ಟಿಕ್‌ಮೆಟ್ರೋ ನಿಲ್ದಾಣದಲ್ಲಿ ಹಾಗೂ ಇತರೆ ಆಯ್ದ ನಿಲ್ದಾಣಗಳಲ್ಲಿ ಡಿಜಿಟಲ್ ಲಗೇಜ್ ಲಾಕರ್ ವ್ಯವಸ್ಥೆ ಅಳವಡಿಸಿದೆ.

ಈ ಯಂತ್ರವನ್ನು ಸ್ವಯಂಪ್ರೇರಿತರಾಗಿ ಆಪರೇಟ್ ಮಾಡುವ ಮೂಲಕ ಲಗೇಜ್‌ನ್ನು ಇಟ್ಟು ತೆರಳಬಹುದಾಗಿದ್ದು, ಬೇರೆ ಬೇರೆ ಊರುಗಳಿಂದ ಬೆಂಗಳೂರಿಗೆ ಒಂದು ದಿನದ ಮಟ್ಟಿಗೆ ಬರುವವರಿಗೆ ಲಗೇಜ್ ಸುರಕ್ಷಿತವಾಗಿರಿಸಲು ಸಹಾಯಕವಾಗಲಿದೆ. ನಮ್ಮ ಮೆಟ್ರೋ ಮೆಜೆಸ್ಟಿಕ್ ನಿಲ್ದಾಣ ಸೇರಿದಂತೆ ಒಂದೆರಡು ನಿಲ್ದಾಣಗಳಲ್ಲಿ ಈ ಹೊಸ ಸ್ಮಾರ್ಟ್ ಡಿಜಿಟಲ್ ಲಗೇಜ್ ಲಾಕರ್ ಸೌಲಭ್ಯ ದೊರೆಯಲಿದ್ದು, ಮಧ್ಯಮ ಗಾತ್ರದ ಬ್ಯಾಗ್‌ಗಳನ್ನು ಆರು ಗಂಟೆಗಳ ಕಾಲ ಇಡಬಹುದಾಗಿದೆ. ಮಧ್ಯಮ ಗಾತ್ರದ ಲಗೇಜ್‌ಗೆ 70 ರು. ಹಾಗೂ ದೊಡ್ಡ ಗಾತ್ರದ ಲಗೇಜ್‌ಗೆ 100 ರು. ದರ ನಿಗದಿ ಮಾಡಲಾಗಿದೆ. ಈ ಸೌಲಭ್ಯವನ್ನು ನಮ್ಮ ಮೆಟ್ರೋ ಅಧಿಕಾರಿ ಗಳು ಕೆಲವೇ ಕೆಲವು ಮೆಟ್ರೋ ನಿಲ್ದಾಣಗಳಲ್ಲಿ ಅಳವಡಿಸಿದ್ದಾರೆ. ಮೆಜೆಸ್ಟಿಕ್ ಪ್ರಮುಖ ಇಂಟರ್ ಚೇಂಜ್ ನಿಲ್ದಾಣ ಆಗಿದ್ದರಿಂದ ಅಲ್ಲಿ ಈ ಸೌಲಭ್ಯ ಮೊದಲು ಅಳವಡಿಕೆ ಆಗಿದೆ. ಮುಂದಿನ ದಿನಗಳಲ್ಲಿ ಅಗತ್ಯತೆ ಆಧಾರದಲ್ಲಿ ಬೇರೆ ಕಡೆಗೂ ಈ ಸ್ಮಾರ್ಟ್ ಡಿಜಿಟಲ್ ಲಗೇಜ್ ಲಾಕರ್ ಅಳವಡಿಕೆ ಆಗಲಿವೆ.

ಲಾಕರ್ ಬಳಕೆ ವಿಧಾನ

- ಮೆಟ್ರೋ ನಿಲ್ದಾಣಗಳಲ್ಲಿ ಡಿಜಿಟಲ್ ಲಗೇಜ್ ಲಾಕರ್ ಬಳಸುವುದಾದರೆ, ಮೊದಲು ನೀವು ಈ ಲಾಕರ್‌ನ ಮೇಲೆ ನೀಡಲಾದ ಸ್ಥಳದಲ್ಲಿ ನಿಮ್ಮ ಹತ್ತು ಸಂಖ್ಯೆಯ ಮೊಬೈಲ್ ನಂಬರ್ ಹಾಕಬೇಕು.
- ಬಳಿಕ ನಿಮ್ಮ ಮೊಬೈಲ್‌ಗೆ ಬರುವ ಒಟಿಪಿ ಸಂಖ್ಯೆ ನಮೂದಿಸಬೇಕು. ನಂತರ ನಿಮ್ಮ ಇ ಮೇಲ್ ಐಡಿ ವಿವರ ಹಾಕಬೇಕು.
- ಡಿಜಿಟಲ್ ಸ್ಕ್ರೀನ್ ಮೇಲೆ ಲಗೇಜ್ ಇಡುವ ಸಮಯ, ಗಂಟೆಗಳನ್ನು ಕೇಳುತ್ತದೆ.
- 6 ಗಂಟೆ ಇಲ್ಲವೇ 12 ಸಮಯ ಕೇಳುತ್ತದೆ. ಎಷ್ಟು ಹೊತ್ತು ಲಗೇಜ್ ಇಡಲು ಬಯಸುವ ಸಮಯ ಆಯ್ಕೆ ಮಾಡಿಕೊಳ್ಳಬೇಕು.
- ಮುಂದಿನ ಹಂತದಲ್ಲಿ ಪರದೆ ಮೇಲೆ ಕ್ಯೂಆರ್ ಕೋಡ್ ಪ್ರದರ್ಶನ ಆಗುತ್ತದೆ.
- ಮೊಬೈಲ್ ಪೇಮೆಂಟ್ ಆಪ್, ಯುಪಿಐ ಆಪ್ ಇತ್ಯಾದಿ ಮೂಲಕ ಹಣ ಪಾವತಿಸಬೇಕು.
- ಇದಾಗುತ್ತಿದ್ದಂತೆ ನೀವು ಆಯ್ಕೆ ಮಾಡಿಕೊಂಡ ಕಂಪಾರ್ಟ್‌ಮೆಂಟ್ ಡೋರ್ ತೆರೆದುಕೊಳ್ಳುತ್ತದೆ. ಲಗೇಜ್ ಇಡಬಹುದು.

40 ಪರ್ಸೆಂಟ್ ಲಂಚ ಆರೋಪ ನಿರಾಧಾರ ಎಂದ ಲೋಕಾಯುಕ್ತ ಪೊಲೀಸರು

ಸಿಎಂ ಸುಳ್ಳಿನ ಮಹಲು ಕುಸಿದಿದೆ: ಅಶೋಕ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಸಿಎಂ ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್, ಅಂಬಿಕಾಪತಿ ಕಟ್ಟಿದ್ದ 40 ಪರ್ಸೆಂಟ್ ಕಮಿಷನ್ ಸುಳ್ಳಿನ ಮಹಲು ಈಗ ಕುಸಿದು ಬಿದ್ದು ಹೋಗಿದೆ ಎಂದು ವಿಪಕ್ಷ ನಾಯಕ ಆರ್.ಅಶೋಕ ಹೇಳಿದರು.

ರಾಜ್ಯ ಬಿಜೆಪಿ ಕಚೇರಿಯಲ್ಲಿ ಸಂಸದ ಗೋವಿಂದ ಕಾರಜೋಳ ಜೊತೆ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಸಿಎಂ ಸುಳ್ಳು ರಾಮಯ್ಯ ಅನ್ನುವುದು ಇಂದು ನಿಜವಾಗಿದೆ ಎಂದು ಟೀಕಿಸಿದರು.

ಕಾಂಗ್ರೆಸ್‌ನವರು ಮಾಡಿದ 40% ಆರೋಪದಿಂದ ನಾವು ಮುಕ್ತವಾಗಿದ್ದೇವೆ. ಕೆಂಪಣ್ಣ ಮತ್ತೆ ಪದ್ಮನಾಭ ಅವರು ಕಾಂಗ್ರೆಸ್ ಟೂಲ್‌ಕಿಟ್ ಆಗಿ ಕೇಸ್ ದಾಖಲು ಮಾಡಿದ್ದರು. ಆರು ವರ್ಷದಿಂದ ಅಂಬಿಕಾಪತಿ ಗುತ್ತಿಗೆ ಕೆಲಸ ಮಾಡಿಲ್ಲ. ನಿರುದ್ಯೋಗಿ ಕಾಂಟ್ರಾಕ್ಟರ್ ಎಲ್ಲಾ ಸೇರಿ 40% ಸರ್ಕಾರ ಎಂದು ಆರೋಪ ಮಾಡಿದ್ದರು. ಕೋವಿಡ್ ಹಗರಣ ಬಗ್ಗೆ ಹೇಳುತ್ತಿದ್ದಾರೆ. 40% ಆರೋಪ ಸಂಬಂಧ ಹೈಕೋರ್ಟ್ ನಲ್ಲಿ ದಾಖಲೆ ಕೊಟ್ಟಿಲ್ಲ. ನೋಟಿಸ್ ಕೊಟ್ಟರೂ ಹಾಜರಾಗಿಲ್ಲ. ಲೋಕಾಯುಕ್ತ ಕ್ಲೀನ್ ಚಿಟ್ ಕೊಟ್ಟಿದೆ. ಅವರು ಆರು ವರ್ಷದಿಂದ ಕೆಲಸ ಮಾಡಿಲ್ಲ. ಹೇಗೆ ಪರ್ಸೆಂಟೇಜ್ ಕೊಡ್ತಾರೆ ಎಂದು ಲೋಕಾಯುಕ್ತ ಕೇಸ್ ವಜಾ ಮಾಡಿದೆ ಎಂದರು.

ಅಧಿವೇಶನ ನಡೆಯುವುದೇ ಡೌಟ್: ಸಾಕಷ್ಟು ವಿಚಾರ ಇಟ್ಟುಕೊಂಡು ಬೆಳಗಾವಿ ಅಧಿವೇಶನದಲ್ಲಿ ಚರ್ಚೆ ಮಾಡುತ್ತೇವೆ. ಅಧಿವೇಶನ ಕರೆಯುತ್ತಾರೋ ಇಲ್ಲವೋ ಎಂದು ಗೊತ್ತಿಲ್ಲ. ಈಗಾಗಲೇ ಸಿದ್ದರಾಮಯ್ಯ ಭಯದಲ್ಲಿ ಇದ್ದಾರೆ. ಬಹುತೇಕ ಅಧಿವೇಶನ ಕರೆಯೋದು ಅನುಮಾನವಿದೆ ಎಂದರು.

ಸಿದ್ದರಾಮಯ್ಯ ಮುಸ್ಲಿಮರ ಹೀರೋ

ಸಿದ್ದರಾಮಯ್ಯ ತೆರೆದ ಪುಸ್ತಕ ಅಂತಾರೆ. ದಿನ ಒಬ್ಬೊಬ್ಬ ಮಂತ್ರಿ ದರೋಡೆಯ ಪುಸ್ತಕ ತೆರೆಯುತ್ತಿದ್ದಾರೆ. ಕನ್ನ ಹಾಕುವ ಮಂತ್ರಿ ರಾಜ್ಯದಲ್ಲಿ ಇದ್ದಾರೆ. ತೆರೆದ ಪುಸ್ತಕ ನಾವು ನೋಡಿದ್ರೆ ಕಪ್ಪು ಚುಕ್ಕೆ ಇಡೋಕೆ ಜಾಗನೆ ಇಲ್ಲ. ಸಿದ್ದರಾಮಯ್ಯ ಅವರ ಕುಟುಂಬ ಲೂಟಿ ಮಾಡ್ತಿದೆ. ನನ್ನ ಮುಟ್ಟಿ ನೋಡಿ, ಕೇಸ್ ಹಾಕಿ ನೋಡಿ ಸಿಎಂ ಪದವಿಯಿಂದ ಇಳಿಯುವುದಿಲ್ಲ ಅಂತಿದ್ದಾರೆ. ತಪ್ಪು ಮಾಡಿಲ್ಲ ಅಂದ್ರೆ ಯಾಕೆ ಹೀಗೆ ಹೇಳ್ತಿರಾ?. 14 ಸೈಟ್ ಗಳನ್ನು ಯಾಕೆ ವಾಪಸ್ ಕೊಟ್ರಿ?. ಏಕ ವಚನದಲ್ಲಿ ಮಾತಾಡ್ತಾರೆ. ಕೇಳಿದರೆ ಹಳ್ಳಿಯಿಂದ ಬಂದವನು ಅಂತಾರೆ. ನಾನು ಸೈಟ್ ವಾಪಸ್ ಮಾಡಿಲ್ಲ. ನನ್ನ ಪತ್ನಿ ನನಗೆ ಗೊತ್ತಿಲ್ಲದೆ ಕೊಟ್ಟಿದ್ದಾರೆ ಅಂತಾರೆ. ಅಹಿಂದ ನಾಯಕರಾಗಿಲ್ಲಾ ಅವರು. ಈಗ ಅಲ್ಪಸಂಖ್ಯಾತರ ಚಾಂಪಿಯನ್ ಆಗಿದ್ದಾರೆ. ಮುಸ್ಲಿಮರ ಹೀರೋ ಆಗುವುದಕ್ಕೆ ಹೊರಟಿದ್ದಾರೆ ಎಂದು ಟೀಕಿಸಿದರು.

ಕೃಷಿ ಮೇಳದ ಮುಕ್ತಾಯ ಸಮಾರಂಭದ ವೇಳೆ ರಾಜ್ಯ ಜೈವಿಕ ಇಂಧನ ಇಂಧನ ಅಭಿವೃದ್ಧಿ ಮಂಡಳಿಯ ಮಳಿಗೆಗೆ ರಾಜ್ಯ ಸರಕಾರದ ಮುಖ್ಯ ಕಾರ್ಯದರ್ಶಿ ಡಾ.ರಜನೀಶ್ ಗೋಯಲ್ ಭೇಟಿ ನೀಡಿದ್ದರು. ಮಂಡಳಿಯ ಅಧ್ಯಕ್ಷ ಸುಧೀಂದ್ರ, ಕೃಷಿ ವಿ.ವಿ. ಕುಲಪತಿ ಎಸ್.ವಿ.ಸುರೇಶ್, ಮಂಡಳಿಯ ವ್ಯವಸ್ಥಾಪಕ ನಿರ್ದೇಶಕ ಎಲ್.ಶಿವಶಂಕರ್ ಇದ್ದರು.

ಅಂಡರ್‌ಪಾಸ್‌ಗಳ ನಿರ್ಮಾಣ

ಬೆಂಗಳೂರು: ನಗರದ ಸಂಚಾರ ದಟ್ಟಣೆಯ ನಿರ್ವಹಣೆಗೆ ಎನ್‌ಎಚ್‌ಎಐ ಪ್ರಮುಖ ಜಂಕ್ಷನ್‌ಗಳಲ್ಲಿ ಅಂಡರ್ ಪಾಸ್ ಗಳನ್ನು ನಿರ್ಮಾಣ ಮಾಡಲು ಮುಂದಾಗಿದೆ. ವಾಹನ ಸವಾರರು ಸಂಚಾರ ದಟ್ಟಣೆ ನಿರ್ವಹಿಸುವುದೇ ದೊಡ್ಡ ಸಮಸ್ಯೆಯಾಗಿದ್ದು, ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಹೋಗುವ ಮಾರ್ಗದಲ್ಲಿ ಸಂಚಾರ ದಟ್ಟಣೆ ತಡೆಯಲು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಯೋಜನೆಯೊಂದನ್ನು ಹಾಕಿಕೊಂಡಿದೆ. ಬೆಂಗಳೂರಿನ ಬಳ್ಳಾರಿ ರಸ್ತೆಯಲ್ಲಿ ದಿನದಿಂದ ದಿನಕಗಕೆ ಸಂಚಾರ ದಟ್ಟಣೆ ಹೆಚ್ಚಾಗುತ್ತಲೇ ಇದೆ. ಇದನ್ನು ನಿಯಂತ್ರಿಸುವ ಉದ್ದೇಶದಿಂದ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಕೊಡಿಗೇಹಳ್ಳಿ, ಬ್ಯಾಟರಾಯನಪುರ, ಜಕ್ಕೂರು ಮತ್ತು ಅಲ್ಲಾಳಸಂದ್ರದಂತಹ ಪ್ರಮುಖ ಜಂಕ್ಷನ್‌ಗಳಲ್ಲಿ ಅಂಡರ್‌ಪಾಸ್‌ಗಳನ್ನು ನಿರ್ಮಿಸಲು ಯೋಜನೆ ಹಾಕಿಕೊಂಡಿದೆ.

ಯುವತಿ ಮೇಲೆ ಅತ್ಯಾಚಾರ: ಪ್ರಕರಣ ದಾಖಲು

ಬೆಂಗಳೂರು: ಮದುವೆಯಾಗುವುದಾಗಿ ನಂಬಿಸಿ ಯುವತಿಯ ಮೇಲೆ ಅತ್ಯಾಚಾರ ಎಸಗಿದ ಆರೋಪಿ ವಿರುದ್ಧ ಮಡಿವಾಳ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ನಿಹಾಲ್ ಹುಸೇನ್ ಅತ್ಯಾಚಾರ ಎಸಗಿದ ಆರೋಪಿ. ಇದೇ ವರ್ಷ ಮಾರ್ಚ್‌ನಲ್ಲಿ ಯುವತಿಗೆ ನಿಹಾಲ್ ಹುಸೇನ್ ಡೇಟಿಂಗ್ ಆ್ಯಪ್ ಮೂಲಕ ಪರಿಚಯವಾಗಿದ್ದಾನೆ. ಬಳಿಕ, ನಿಹಾಲ್ ಹುಸೇನ್ ಇಬ್ಬರೂ ಅನ್ಯೋನ್ಯವಾಗಿ ಸುತ್ತಾಡಲು ಆರಂಭಿಸಿದ್ದಾರೆ. ಒಂದು ದಿನ, ಆರೋಪಿ ನಿಹಾಲ್ ಹುಸೇನ್ ಪಾರ್ಟಿಗೆಂದು ಹೋಟೆಲ್‌ಗೆ ಕರೆಸಿಕೊಂಡಿದ್ದಾನೆ ಎಂದು ಯುವತಿ ದೂರಿನಲ್ಲಿ ದಾಖಲಿಸಿದ್ದಾಳೆ. ಬಳಿಕ, ಜ್ಯೂಸ್‌ನಲ್ಲಿ ಮದ್ಯ ಬೆರೆಸಿ ಯುವತಿಗೆ ಕುಡಿಸಿದ್ದಾನೆ. ನಂತರ, ಯುವತಿ ಮೇಲೆ ಅತ್ಯಾಚಾರ ಎಸಗಿದ್ದಾನೆ ಎಂಬ ಆರೋಪ ಕೇಳಿಬಂದಿದೆ. ಯುವತಿ ಗರ್ಭಿಣಿಯಾದ ವಿಚಾರ ತಿಳಿಯುತ್ತಿದ್ದಂತೆ ನಿಹಾಲ್ ಹುಸೇನ್ ಗರ್ಭಪಾತ ಮಾಡಿಸಿದ್ದಾನೆ ಎಂದು ಯುವತಿ ದೂರಿನಲ್ಲಿ ಉಲ್ಲೇಖಿಸಿದ್ದಾಳೆ. ನಂತರ, ಯುವತಿ ಮದುವೆ ಆಗುವಂತೆ ನಿಹಾಲ್ ಹುಸೇನ್‌ಗೆ ಹೇಳಿದ್ದಾಳೆ. ಆದರೆ, ಇದಕ್ಕೆ ಒಪ್ಪದ ನಿಹಾಲ್ ಹುಸೇನ್ ತನ್ನ ಮೇಲೆ ಹಲ್ಲೆ ಮಾಡಿದ್ದಾನೆ ಎಂದು ಯುವತಿ ಆರೋಪಿಸಿದ್ದಾಳೆ.



ಕರಾಳರಾತ್ರಿ ನಾಟಕ ಪ್ರದರ್ಶನ ನಾಳೆ

ಬೆಂಗಳೂರು: ಆಂಗ್ಲಕವಿ ರೂಫರ್ಟ್ ಬ್ರೂಕ್ ರಚಿತ ಲಿಥುವೇನಿಯಾ ಗ್ರಂಥದಿಂದ ಆಯ್ದ ಕಥೆ 'ಕರಾಳ ರಾತ್ರಿ' ನಾಟಕ ನ.19ರಂದು (ಮಂಗಳವಾರ) 'ಂಜೆ 7ಗಂಟೆಗೆ ಪ್ರದರ್ಶನಗೊಳ್ಳಲಿದೆ. ಈ ಕೃತಿಯನ್ನು ಮೋಹನ್ ಹಬ್ಬು ಕನ್ನಡಕ್ಕೆ ತರ್ಜುಮೆ ಮಾಡಿದ್ದು, ಗೋವಿಂದೇಗೌಡ(ಜಿ.ಜಿ) ನಿರ್ದೇಶನದಲ್ಲಿ 'ಕರಾಳ ರಾತ್ರಿ' ನಾಟಕ ಮೂಡಿಬರುತ್ತಿದೆ. ಮುಖ್ಯ ರಂಗಭೂಮಿಕೆಯಲ್ಲಿ ಕವಿತಾ.ಟಿ. ಕಾಣಿಸಿಕೊಳ್ಳುತ್ತಿದ್ದಾರೆ. ಭರತ್ ಜಿ.ವಿ. ಬೆಳಕಿನ ವಿನ್ಯಾಸ, ಜಯರಾಜ್ ಹೊಸ್ಕೂರ್ ಪ್ರಸಾದನ, ದಿವ್ಯಶ್ರೀ ಮೋಹನ್ ವಸ್ತ್ರ ವಿನ್ಯಾಸ ಮಾಡಲಿದ್ದಾರೆ. ರತ್ನರವಿ, ರಾಮಕೃಷ್ಣ, ನಾಗರಾಜ್, ಮಂಜುನಾಥ್ ಹೊಸ್ಮನೆ, ವಿಜಯ್ ಕುಮಾರ್ ಕಾಂಬರ್ ಸುನಿಲ್ ಬಿ.ವಿ. ಪಾತ್ರವರ್ಗವಿದೆಂದು ಪ್ರಕಟಣೆ ತಿಳಿಸಿದೆ.

ಕೃಷಿ ಮೇಳಕ್ಕೆ ತೆರೆ

ಬೆಂಗಳೂರು: ನಗರದ ಜಿಕೆವಿಕೆಯಲ್ಲಿ ನಾಲ್ಕು ದಿನಗಳ ಕಾಲ ನಡೆದ ಕೃಷಿ ಮೇಳಕ್ಕೆ ಭಾನುವಾರ ಅದ್ದೂರಿ ತೆರೆ ಬಿದ್ದಿದೆ. ಸಮಾರೋಪ ಮತ್ತು ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಚಿಕ್ಕಬಳ್ಳಾಪುರ ಮತ್ತು ಕೋಲಾರ ತಾಲೂಕು ಮತ್ತು ಜಿಲ್ಲಾ ಮಟ್ಟದ ಅತ್ಯುತ್ತಮ ಯುವ ರೈತ ಹಾಗೂ ರೈತ ಮಹಿಳಾ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಯಿತು. ಡಾ. ಎಂ. ಎಚ್. ಮರೀಗೌಡ ಅವರಿಗೆ ರಾಜ್ಯ ಮಟ್ಟದ ಅತ್ಯುತ್ತಮ ತೋಟಗಾರಿಕಾ ರೈತ ಪ್ರಶಸ್ತಿ, ಡಾ. ಆರ್. ದ್ವಾರಕೀನಾಥ್ ಅವರಿಗೆ ಅತ್ಯುತ್ತಮ ರೈತ ಪ್ರಶಸ್ತಿ ಪ್ರಶಸ್ತಿ ನೀಡಲಾಯಿತು. ನಾಲ್ಕು ದಿನಗಳ ನಡೆದ ಕೃಷಿ ಮೇಳದಲ್ಲಿ 34.13 ಲಕ್ಷ ಜನರು ಭಾಗವಹಿಸಿದ್ದರು. ಕೃಷಿಮೇಳದಲ್ಲಿ ಹಾಕಲಾಗಿದ್ದ ಸ್ಟಾಲ್‌ಗಳಲ್ಲಿ ಒಟ್ಟು 6.17 ಕೋಟಿ ರು. ವ್ಯಾಪಾರ ವಾಹಿವಾಟು ನಡೆದಿದೆ. ಕೃಷಿಮೇಳದಲ್ಲಿ ಭಾಗವಹಿಸಿದ ಸಾರ್ವಜನಿಕರಿಗೆ ರಿಯಾಯಿತಿ ದರದಲ್ಲಿ ಮಧ್ಯಾಹ್ನದ ಊಟದ ವ್ಯವಸ್ಥೆಯನ್ನು ಆಯೋಜನೆ ಮಾಡಲಾಗಿತ್ತು. ಕಾರ್ಯಕ್ರಮದಲ್ಲಿ ಕುಲಸಚಿವ ಡಾ. ಕೆ. ಸಿ. ನಾರಾಯಣಸ್ವಾಮಿ, ಸಂಶೋಧನಾ ನಿರ್ದೇಶಕರಾದ ಡಾ. ಎಚ್.ಎಸ್. ಶಿವರಾಮು ಇತರರು ಭಾಗವಹಿಸಿದ್ದರು.

ಕರ್ನಾಟಕ ಸರ್ಕಾರ

ಉದ್ಘಾಟನೆ
ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಬೆಂಗಳೂರು ಟೆಕ್ ಸಮ್ಮಿಟ್
19ರಿಂದ 21ನೇ ನವೆಂಬರ್ 2024 ಬೆಂಗಳೂರು ಅರಮನೆ

ಘನ ಉಪಸ್ಥಿತಿ
ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ನಾಳೆಯಿಂದ, ಏಷ್ಯಾದ ಅತಿದೊಡ್ಡ ಟೆಕ್ ಕಾನ್‌ಕ್ಲೇವ್‌ನಲ್ಲಿ ಭಾಗವಹಿಸಿ ಹೊಸ ಆವಿಷ್ಕಾರದಲ್ಲಿ ಕೈ ಜೋಡಿಸಿ.
ಉದ್ಘಾಟನೆ, ಬೆಳಿಗ್ಗೆ 10:00 ಗಂಟೆಗೆ, ಬೆಂಗಳೂರು ಅರಮನೆ

ಗೌರವಾನ್ವಿತ ಅತಿಥಿಗಳು

ಡಾ. ಅನ್ನಾ ಕ್ರೈ ಸ್ಟ್ ಮನ್
ಜರ್ಮನಿಯ ಆರ್ಥಿಕ ವ್ಯವಹಾರಗಳು ಮತ್ತು ಹವಾಮಾನ ಕ್ರಿಯೆಗಳ ಫೆಡರಲ್ ಸಚಿವಾಲಯದಲ್ಲಿ (BMWK) ಸಂಸದ ಸದಸ್ಯರು ಮತ್ತು ಸ್ಟಾರ್ಟ್‌ಅಪ್ಸ್ ಮತ್ತು ಡಿಜಿಟಲ್ ಅರ್ಥವ್ಯವಸ್ಥೆಯ ಆಯುಕ್ತರು

ಶ್ರೀಮತಿ ಅಲೆಕ್ಸಾಂಡ್ರಾ ಡ್ಯುಬ್ಲಾಂಚ್
ಪ್ಯಾರಿಸ್ ಪ್ರದೇಶ, ಫ್ರಾನ್ಸ್‌ನ ಪುನರುತ್ಥಾನ, ಆರ್ಥಿಕ ಅಭಿವೃದ್ಧಿ, ಆಕರ್ಷಣೆ ಮತ್ತು ಆವಿಷ್ಕಾರಗಳ ಉಸ್ತುವಾರಿ ಉಪಾಧ್ಯಕ್ಷರು

ಶ್ರೀ ಸಂತೋಷ್ ಕುಮಾರ್
ವ್ಯವಸ್ಥಾಪಕ ನಿರ್ದೇಶಕರು
ಟೆಕ್ಸಾಸ್ ಇನ್‌ಸ್ಟ್ರುಮೆಂಟ್ಸ್

ಶ್ರೀ ಶ್ರೀಹರ್ಷ ಮಾಜೇಟಿ
ಸಹ-ಸಂಸ್ಥಾಪಕರು ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಸ್ವಿಗ್ಗಿ

ಟೆಕ್ ಸಮಿಟ್ ಆಕರ್ಷಣೆ

ಬಿ2ಬಿ ಅಂತರರಾಷ್ಟ್ರೀಯ ಪ್ರದರ್ಶನ
ಸ್ಟಾರ್ಟ್-ಅಪ್ ಸ್ಪ್ರಿಂಗ್‌ಬೋರ್ಡ್

ಮಲ್ಟಿಟ್ರ್ಯಾಕ್ ಕಾನ್ಫರೆನ್ಸ್
ಪ್ರೊಡಕ್ಟ್ ಲಾಂಚ್‌ಗಳು

ಎಸ್‌ಟಿಪಿಐ ಐಟಿ ಎಕ್ಸ್‌ಪೋರ್ಟ್ ಪ್ರಶಸ್ತಿಗಳು
ಟಿಸಿಎಸ್ ಗ್ರಾಮೀಣ ಐಟಿ ರಸಪ್ರಶ್ನೆ

ಸ್ಮಾರ್ಟ್ ಬಯೋ ಪ್ರಶಸ್ತಿಗಳು
ಬಯೋ ಪೋಸ್ಟರ್‌ಗಳು
ಮತ್ತು ಬಯೋ ಕ್ವಿಜ್

ಜಾಗತಿಕ ನಾವೀನ್ಯತಾ ಒಕ್ಕೂಟದ ಪಾಲುದಾರರು

ARGENTINA, AUSTRALIA, AUSTRIA, BELGIUM, BHUTAN, COLOMBIA, DENMARK, DOMINICAN REPUBLIC, EU, FINLAND, FRANCE, GERMANY, ISRAEL, IRAN, ITALY, JAPAN, LITHUANIA, MALAYSIA, NETHERLANDS, NEW ZEALAND, OMAN, POLAND, SINGAPORE, SOUTH KOREA, SWEDEN, SWITZERLAND, THAILAND, UAE, UNITED KINGDOM, USA, VIETNAM

ಸಹ-ಆಯೋಜಕರು
STPI, k-tech, STARTUP KARNATAKA, Karnataka Digital Economy Mission

ಸಮ್ಮೇಳನದಲ್ಲಿ ಭಾಗವಹಿಸಿ | ಎಕ್ಸ್‌ಪೋಗೆ ಭೇಟಿ ನೀಡಿ
www.bengalurutechsummit.com

ಸಮಾಚಾರ ಸಣ್ಣದಲ್ಲ

ಮೃತ್ಯುಂಜಯ ನದಿಯಲ್ಲಿ ಕಾಣಿಸಿಕೊಂಡ ಸಲಗ

ಬೆಳ್ತಂಗಡಿ: ಚಾರ್ಮಾಡಿ ಗ್ರಾಮದ ಮೈಕಾನ್, ಪರ್ಲಾಣಿ ಸ್ಥಳದಲ್ಲಿ ಭಾನುವಾರ ಮುಂಜಾನೆ ಮೃತ್ಯುಂಜಯ ನದಿಯಲ್ಲಿ ಒಂಟಿ ಸಲಗ ಕಾಣಿಸಿಕೊಂಡಿದೆ. ಹೊಸಮಠ ಕಡೆಗೆ ತೆರಳಿರುವ ಬಗ್ಗೆ ವರದಿಯಾಗಿದೆ. ಕೃಷಿಗೆ ಹಾನಿಯಾಗಿರುವ ಬಗ್ಗೆ ವರದಿಯಾಗಿಲ್ಲ. ಪದೇ ಪದೇ ಆನೆಯ ದಾಳಿಯಾಗುತ್ತಲೇ ಇರುವರಿಂದ ಪ್ರದೇಶದ ಜನರು ಭಯಭೀತಗೊಂಡಿದ್ದಾರೆ. ಈ ಬಗ್ಗೆ ಅರಣ್ಯ ಇಲಾಖೆ, ಸರಕಾರ ಸೂಕ್ತ ಶಾಶ್ವತ ಪರಿಹಾರ ಒದಗಿಸಬೇಕೆಂದು ಆಗ್ರಹಿಸಿದ್ದಾರೆ.

ಬೋನಿಗೆ ಬಿದ್ದ ಚಿರತೆ

ಚಿತ್ರದುರ್ಗ: ಚಿತ್ರದುರ್ಗ ತಾಲೂಕಿನ ಕಡ್ಲೆಗುದ್ದು ಗ್ರಾಮದಲ್ಲಿ ಕೆಲ ದಿನಗಳಿಂದ ಜನರ ನೆಮ್ಮದಿ ಕೆಡಿಸಿದ್ದ ಚಿರತೆ ಕೊನೆಗೂ ಬೋನಿಗೆ ಬಿದ್ದಿದೆ. ಕಳೆದ ಒಂದು ತಿಂಗಳಿಂದ ಕಡ್ಲೆಗುದ್ದು, ಸಿದ್ದಾಪುರ, ಕುರುಬರಹಳ್ಳಿ ಅನೇಕ ಗ್ರಾಮಗಳಲ್ಲಿ ಭಾರಿ ಆತಂಕ ಸೃಷ್ಟಿಸಿದ್ದ ಚಿರತೆ ಬೋನಿಗೆ ಬಿದ್ದಿದೆ. ಈ ಚಿರತೆ ಹಲವು ಬಾರಿ ಜಾನುವಾರುಗಳ ಮೇಲೆ ದಾಳಿ ನಡೆಸಿತ್ತು. ಇದರಿಂದ ಸಂಜೆಯಾದರೆ ಗ್ರಾಮಸ್ಥರು ಮನೆಯಿಂದ ಹೊರಬರಲು ಭಯಪಡುವ ವಾತಾವರಣ ನಿರ್ಮಾಣವಾಗಿತ್ತು. ಹೀಗಾಗಿ ಎಚ್ಚೆತ್ತ ಅರಣ್ಯ ಇಲಾಖೆ ಅಧಿಕಾರಿಗಳು ಚಿರತೆ ಸೆರೆಗೆ ಬೋನನ್ನು ಇಟ್ಟಿದ್ದರು. ಶನಿವಾರ ತಡರಾತ್ರಿ ಚಿರತೆ ಬೋನಿಗೆ ಬಿದ್ದಿದ್ದು, ಅದನ್ನು ಸುರಕ್ಷಿತವಾಗಿ ಆಡುಮಲ್ಲೇಶ್ವರ ಕಿರು ಮೃಗಾಲಯಕ್ಕೆ ಸ್ಥಳಾಂತರಿಸಲಾಗಿದೆ.ಇದರಿಂದಾಗಿ ಗ್ರಾಮಸ್ಥರು ನೆಮ್ಮದಿಯ ನಿಟ್ಟುಸಿರು ಬಿಟ್ಟಿದ್ದಾರೆ.

ಟ್ರ್ಯಾಕ್ಟರ್ ಉರುಳಿ ತಂದೆ-ಮಗ ಸಾವು

ಕುಣಿಗಲ್: ಹಳ್ಳಕ್ಕೆ ಟ್ರ್ಯಾಕ್ಟರ್ ಉರುಳಿಬಿದ್ದು ಸಾಹಿತಿ ಜಾಣಗೆರೆ ವೆಂಕಟರಾಮಯ್ಯ ಅವರ ತಮ್ಮ ಹಾಗೂ ತಮ್ಮನ ಮಗ ಸ್ಥಳದಲ್ಲೇ ಮೃತಪಟ್ಟ ಘಟನೆ ಕೊತ್ತಗೆರೆ ಹೋಬಳಿ ಲಕ್ಕೇಗೌಡನಪಾಳ್ಯದಲ್ಲಿ ನಡೆದಿದೆ. ಜಾಣಗೆರೆ ಗ್ರಾಮದ ಶಿವರಾಮಯ್ಯ (50) ಮತ್ತು ಅವರ ಮಗ ಹರೀಶ್ (21) ಮೃತ ದುರ್ದೈವಿಗಳು. ಈ ಇಬ್ಬರು ತಮ್ಮ ಜಮೀನಿನಲ್ಲಿ ಇದ್ದ ಅಡಿಕೆಯನ್ನು ಮಿನಿ ಟ್ರ್ಯಾಕ್ಟರ್‌ನಲ್ಲಿ ತುಂಬ್ಕಿಕೊಂಡು ಜಾಣಗೆರೆ ಗ್ರಾಮಕ್ಕೆ ಬರುತ್ತಿರುವಾಗ, ಲಕ್ಕೇಗೌಡನಪಾಳ್ಯ ಗ್ರಾಮದ ಬಳಿ ರಸ್ತೆ ತಿರುವಿನಲ್ಲಿ ನಿಯಂತ್ರಣ ತಪ್ಪಿ ಹಳ್ಳಕ್ಕೆ ಉರುಳಿಬಿದ್ದು ತಂದೆ-ಮಗ ಗಂಭೀರ ಗಾಯಗೊಂಡು ಮೃತಪಟ್ಟಿದ್ದಾರೆ.

ಶಿವಲಿಂಗೇಶರ ಸ್ವಾಮೀಜಿ ಲಿಂಗೈಕ್ಯ

ಶಿವಮೊಗ್ಗ: ಶಿಕಾರಿಪುರ ತಾಲೂಕಿನ ಬಳ್ಳಿಗಾವಿಯ ಅಲ್ಲಮಪ್ರಭು ಅನುಭಾವ ಪೀಠ ವಿರಕ್ತಮಠದ ಪೀಠಾಧಿಪತಿಯಾಗಿದ್ದ ಶಿವಲಿಂಗೇಶ್ವರ ಸ್ವಾಮೀಜಿ ಭಾನುವಾರ ಬೆಳಗ್ಗೆ ಹುಬ್ಬಳ್ಳಿಯ ಖಾಸಗಿ ಆಸ್ಪತ್ರೆಯಲ್ಲಿ ಲಿಂಗೈಕ್ಯರಾಗಿದ್ದಾರೆ.

ಶಿವಲಿಂಗೇಶ್ವರ ಸ್ವಾಮೀಜಿ ಅವರು ಸೊರಬ ತಾಲೂಕಿನ ಗೆರೆಕೊಪ್ಪ ಬೆಪ್ಪಗೊಂಡನಕೊಪ್ಪ ಇಂದೂಧರೇಶ್ವರ ಮಠ, ಬೀದರ್ ಜಿಲ್ಲೆ ಬಸವಕಲ್ಯಾಣದ ಕೆಳಗಿ ಪೀಠದ ಪೀಠಾಧಿಪತಿಯೂ ಆಗಿದ್ದರು. ಶಿವಲಿಂಗೇಶ್ವರ ಸ್ವಾಮೀಜಿ, ವಚನಕಾರ ಅಲ್ಲಮಪ್ರಭು ಜನ್ಮಸ್ಥಳ ಬಳ್ಳಿಗಾವಿಯ ವಿರಕ್ತಮಠವನ್ನು ಅಭಿವೃದ್ಧಿಪಡಿಸುವ ಸಂಕಲ್ಪ ಹೊಂದಿದ್ದರು. ಅಲ್ಲಮಪ್ರಭು ಅವರ ಮನೆಯನ್ನು ಅನುಭವ ಮಂಟಪವನ್ನಾಗಿಸಲು ಸಿದ್ಧತೆ ನಡೆಸಿದ್ದರು. ಅಲ್ಲದೆ, ಗ್ರಂಥ ಪ್ರಕಟಣೆಗಳ ಮೂಲಕ ವಚನ ಸಂರಕ್ಷಣೆಗೆ ಮುಂದಾಗಿದ್ದರು. ಶಿವಲಿಂಗೇಶ್ವರ ಸ್ವಾಮೀಜಿ ಅವರ ನಿಧನದಿಂದ ಅವರ ಅಪಾರ ಭಕ್ತ ಸಮೂಹ ದುಃಖಿತರಾಗಿದ್ದಾರೆ. ಅವರ ಆತ್ಮಕ್ಕೆ ಭಗವಂತ ಚಿರಶಾಂತಿ ಕರುಣಿಸಲಿ ಎಂದು ಸಂಸದ ಬಿ. ವೈ. ರಾಘವೇಂದ್ರ ಸೇರಿದಂತೆ ನೂರಾರು ಗಣ್ಯರು ಸಂತಾಪ ಸೂಚಿಸಿದ್ದಾರೆ.

..ನಂದಿಗೆ ಮಹಾಮಜ್ಜನ

← ಮೊದಲಪುಟದಿಂದ

ಮಜ್ಜನದ ಬಳಿಕ ಮಹಾಮಂಗಳಾರತಿ ಹಾಗೂ ಪ್ರಸಾದ ವಿನಿಯೋಗ ನೆರವೇರಿತು.

ದೇಶದಲ್ಲೇ 3ನೇ ಅತಿದೊಡ್ಡ ನಂದಿ ವಿಗ್ರಹ: 1659ರಿಂದ 1673ರವರೆಗೆ ಮೈಸೂರನ್ನು ಆಳಿದ ದೊಡ್ಡ ದೇವರಾಜ ಒಡೆಯರ್ ಕಾಲದಲ್ಲಿ ನಂದಿಯ ನಿರ್ಮಾಣವಾಗಿದ್ದು, 350ಕ್ಕೂ ಹೆಚ್ಚು ವರ್ಷಗಳ ಇತಿಹಾಸ ಹೊಂದಿದೆ. ತಮಿಳುನಾಡಿನ ತಂಜಾವೂರಿನ ಬೃಹದೇಶ್ವರ ದೇವಾಲಯದ ನಂದಿ ಹಾಗೂ ಆಂಧ್ರಪ್ರದೇಶದ ಲೇಪಾಕ್ಷಿಯ ವೀರಭದ್ರ ದೇವಸ್ಥಾನದ ನಂದಿಯನ್ನು ಹೊರತುಪಡಿಸಿದರೆ ಇದೇ ಬೃಹದಾಕಾರದ ನಂದಿ. ಮೆಟ್ಟಿಲುಗಳ ಮೂಲಕ ಚಾಮುಂಡಿ ಬೆಟ್ಟ ಹತ್ತುವ ಹಾದಿಯಲ್ಲಿ 700ನೇ ಮೆಟ್ಟಿಲಿನ ಬಳಿ ಈ ಏಕಶಿಲಾ ಮೂರ್ತಿಯನ್ನು ನಿರ್ಮಿಸಲಾಗಿದ್ದು, 16 ಅಡಿ ಎತ್ತರ ಹಾಗೂ 25 ಅಡಿ ಉದ್ದವಿದೆ.

ಈಜುಕೊಳದಲ್ಲಿ ಮೂವರ ಯುವತಿಯರ ಸಾವು

ಉಳ್ಳಾಲದ ಖಾಸಗಿ ರೆಸಾರ್ಟ್‌ನಲ್ಲಿ ಘೋರ ದುರಂತ | ಮಾಲೀಕ ಪೊಲೀಸ್ ವಶಕ್ಕೆ, ರೆಸಾರ್ಟ್‌ಗೆ ಬೀಗಮುದ್ರೆ

ಮಂಗಳೂರು: ಉಳ್ಳಾಲ ಸೋಮೇಶ್ವರ ಫೆರಿಬೈಲ್‌ನ ಖಾಸಗಿ ರೆಸಾರ್ಟ್‌ನ ಈಜುಕೊಳದಲ್ಲಿ ಮುಳುಗಿ ಮೈಸೂರಿನ ಮೂವರು ಎಂಜಿನಿಯರಿಂಗ್ ವಿದ್ಯಾರ್ಥಿನಿಯರು ಮೃತಪಟ್ಟ ಘೋರ ಘಟನೆ ಭಾನುವಾರ ನಡೆದಿದೆ.

ಮೈಸೂರು ವಿಜಯನಗರದ ದೇವರಾಜ್ ಮೊಹಲ್ಲಾದ ನವೀನ್ ಕುಮಾರ್ ಪುತ್ರಿ ಕೀರ್ತನಾ ಎನ್.(21), ಮೈಸೂರು ಕುರುಬರ ಹಳ್ಳಿ ಮಲ್ಲೇಶ್‌ರ ಪುತ್ರಿ ನಿಶಿತಾ ಎಂ.ಡಿ.(21) ಹಾಗೂ ಮೈಸೂರು ಕೆ.ಆರ್.ಮೊಹಲ್ಲಾದ ರಾಮಾನುಜ ರಸ್ತೆಯ ಎಂ.ಎನ್.ಶ್ರೀನಿವಾಸ್ ಎಂಬವರ ಪುತ್ರಿ ಪಾರ್ವತಿ ಎಸ್.(20) ಮೃತಪಟ್ಟ ನತದೃಷ್ಟರು.

ಈ ದುರಂತಕ್ಕೆ ರೆಸಾರ್ಟ್ ಮಾಲೀಕರು ಸೂಕ್ತ ಸುರಕ್ಷಾ ಕ್ರಮಗಳನ್ನು ಅನುಸರಿಸದೆ ನಿರ್ಲಕ್ಷ್ಯ ವಹಿಸಿದ್ದೇ ಕಾರಣವೆಂದು ಪೊಲೀಸರು ವಶಕ್ಕೆ ತೆಗೆದುಕೊಂಡು ವಿಚಾರಣೆ ನಡೆಸಿದ್ದಾರೆ. ಇದರ ಬೆನ್ನಲ್ಲೇ ರೆಸಾರ್ಟ್‌ಗೆ ಬೀಗಮುದ್ರೆ ಹಾಕಲಾಗಿದೆ.

ಮೊಬೈಲ್‌ನಲ್ಲಿ ದುರಂತದ ಚಿತ್ರೀಕರಣ: ಸೋಮೇಶ್ವರದ ಬಟ್ಟಪ್ಪಾಡಿ ಅಡ್ಡರಸ್ತೆ ಪೆರಿಬೈಲ್‌ನ ಖಾಸಗಿ ರೆಸಾರ್ಟ್ ಗೆ ಶನಿವಾರ ಬೆಳಗ್ಗೆ ಮೂವರು ಆಗಮಿಸಿದ್ದರು. ಈ ಮೂವರು ಯುವತಿಯರು ಭಾನುವಾರ ಬೆಳಗ್ಗೆ ರೆಸಾರ್ಟ್ ಮುಂಭಾಗದ ಈಜುಕೊಳದಲ್ಲಿ ನೀರಾಟವಾಡುತ್ತಿದ್ದರು. ಈ ವೇಳೆ ಮೊಬೈಲ್ ಫೋನ್ ವೊಂದನ್ನು ಈಜುಕೊಳಕ್ಕೆ ಗುರಿಯಾಗಿಸಿ ವಿಡಿಯೊ ರೆಕಾರ್ಡ್ ಚಾಲನೆಯಲ್ಲಿಟ್ಟು ಈಜುಕೊಳಕ್ಕೆ ಇಳಿದಿದ್ದಾರೆ. ಸರಿಯಾಗಿ ಈಜುಬಾರದ ಯುವತಿಯರು ಆಳವಿರುವ ಕಡೆ ತೆರಳಿದ್ದರಿಂದ ಮುಳುಗಿ ಮೃತಪಟ್ಟಿರುವ ಶಂಕೆ ವ್ಯಕ್ತವಾಗಿದೆ. ರೆಸಾರ್ಟ್ ಸಿಬ್ಬಂದಿ ಬಂದು ನೋಡಿದಾಗ ಘಟನೆ ಬೆಳಕಿಗೆ ಬಂದಿದೆ.

ಘಟನೆ ನಡೆದಿದ್ದು ಹೇಗೆ..?: ಈಜುಕೊಳದಲ್ಲಿ ಸಹಾಯಕ್ಕಾಗಿ ಹಾಗೂ ವಿಶ್ರಾಂತಿಗಾಗಿ ಗಾಳಿ ತುಂಬಿದ ಟ್ಯೂಬ್‌ಗಳನ್ನು ಹಾಕಲಾಗಿತ್ತು. ಆದರೆ ಟ್ಯೂಬ್‌ಗಳು ಆಳ ನೀರಿನ ಮೇಲ್ಭಾಗದಲ್ಲಿತ್ತು. ಟ್ಯೂಬ್ ಮೇಲೆ ವಿಶ್ರಾಂತಿ ಪಡೆಯುವ ಅಥವಾ ಟ್ಯೂಬ್ ಬಳಸಿ ಮತ್ತಷ್ಟು ಜಲಕ್ರೀಡೆಯಾಡುವ ಆಲೋಚನೆಯಲ್ಲಿ ಒಬ್ಬ ಯುವತಿ ಟ್ಯೂಬ್ ತರಲು ನೀರಿನಲ್ಲಿ ನಡೆದು ಸಾಗಿದ್ದಾಳೆ.

ಆದರೆ ಆಕೆಗೆ ಟ್ಯೂಬ್ ಹಿಡಿದು ವಾಪಸ್ ತರಲು ಸಾಧ್ಯವಾಗಿಲ್ಲ. ಹೀಗಾಗಿ ಟ್ಯೂಬನ್ನು ಅಲ್ಲೇ ಬಿಟ್ಟಿದ್ದಾಳೆ. ಇದೇ ವೇಳೆ ಟ್ಯೂಬ್ ತರಲು ಹೋದ ಯುವತಿಯ ಹಿಂಭಾಗದಲ್ಲಿದ್ದ ಒಬ್ಬ ಯುವತಿ ನೀರಿನಲ್ಲೇ ಆಯತಪ್ಪಿ, ಪಾರಾಗಲು ಕೈಕಾಲು ಬಡಿದುಕೊಳ್ಳಲು ಆರಂಭಿಸಿದ್ದಾಳೆ. ಆಗ ಪಕ್ಕದಲ್ಲಿದ್ದ ಯುವತಿ ನೆರವಿಗೆ ಧಾವಿಸಿದ್ದು, ಕೈಚಾಚಿ ರಕ್ಷಿಸಲು ಮುಂದಾಗಿದ್ದಾಳೆ. ಆದರೆ ಮುಳುಗುತ್ತಿದ್ದ ಯುವತಿಯನ್ನು ರಕ್ಷಿಸಲು ಸಾಧ್ಯವಾಗಿಲ್ಲ. ನೆರವಿಗೆ ಕೈಚಾಚಿದ ಯುವತಿ ಕೂಡ ನೀರಿನಲ್ಲಿ ಮುಳುಗಲು ಆರಂಭಿಸಿದ್ದಾಳೆ.

ಈ ವೇಳೆ ಮತ್ತಷ್ಟು ಗಾಬರಿಗೊಂಡ ಮೂರನೇ ಯುವತಿ ಇಬ್ಬರನ್ನು ರಕ್ಷಿಸಲು ಕೈ ನೀಡಿದ್ದಾಳೆ. ಪರಿಣಾಮ ಮೂವರು ನೀರಿನಲ್ಲಿ ಮುಳುಗಿದ್ದಾರೆ. ಬದುಕುಳಿಯಲು ಹಲವು ಪ್ರಯತ್ನ ಮಾಡಿದರೂ ಯುವತಿಯರಿಗೆ ಸಾಧ್ಯವಾಗಿಲ್ಲ. ಸರಿಯಾಗಿ ಈಜುಬರದ ಕಾರಣ ಮೂವರು ಯುವತಿಯರು ನೀರಿನಲ್ಲೇ ಪ್ರಾಣ ಬಿಟ್ಟಿದ್ದಾರೆ.

ಉಳ್ಳಾಲದ ಖಾಸಗಿ ರೆಸಾರ್ಟ್‌ನ ಈಜುಕೊಳ.

- ಭಾನುವಾರ ಬೆಳಗ್ಗೆ ರೆಸಾರ್ಟ್ ಮುಂಭಾಗದ ಈಜುಕೊಳದಲ್ಲಿ ಈಜಲು ಹೋದ ಯುವತಿಯರು
- ಸರಿಯಾಗಿ ಈಜುಬಾರದ ಕಾರಣ ಮೂವರೂ ಎಂಜಿನಿಯರಿಂಗ್ ವಿದ್ಯಾರ್ಥಿನಿಯರು ಸಾವು
- ಮುಗಿಲು ಮುಟ್ಟಿದ ಕುಟುಂಬದವರ ಆಕ್ರಂದನ
- ಸೂಕ್ತ ಸುರಕ್ಷಾ ಕ್ರಮ ಕೈಗೊಳ್ಳಲು ರೆಸಾರ್ಟ್ ಮಾಲೀಕ ವಿಫಲ,ಸಿಬ್ಬಂದಿಯೂ ಹಾಜರಿಲ್ಲ
- ಮಾಲೀಕ ಪೊಲೀಸ್ ವಶಕ್ಕೆ, ರೆಸಾರ್ಟ್‌ಗೆ ಬೀಗ ಜಡಿದ ಆರಕ್ಷಕ ಸಿಬ್ಬಂದಿ
- ರೆಸಾರ್ಟ್ ಪರವಾನಗಿ ತಾತ್ಕಾಲಿಕ ರದ್ದು

ವಿಡಿಯೊ ವೈರಲ್

ಕೊನೆಯ ಕ್ಷಣದ ದುರಂತ ದ ವಿಡಿಯೊ ಇದೀಗ ಸೋಶಿಯಲ್ ಮೀಡಿಯಾಗಳಲ್ಲಿ ಹರಿದಾಡುತ್ತಿದೆ. ಶುಕ್ರವಾರ ಮೈಸೂರಿನ ನಿಶ್ಚಿತ, ಪಾರ್ವತಿ ಹಾಗೂ ಕೀರ್ತನಾ ಎಂಬ ಯುವತಿಯರು ಆನ್‌ಲೈನ್ ಮೂಲಕ ರೆಸಾರ್ಟ್ ವೀಕೆಂಡ್‌ಗೆ ಬುಕ್ ಮಾಡಿದ್ದಾರೆ.. ಆದರೆ ಮೂವರು ಈಜುಕೊಳದಲ್ಲಿ ಅಂತ್ಯಕಂಡಿದ್ದಾರೆ. ಯುವತಿಯರ ಮನೆಯಲ್ಲಿ ಪೋಷಕರ ಆಕ್ರಂದನ ಮುಗಿಲು ಮುಟ್ಟಿದೆ. ತನಿಖೆ ನಡೆಸುತ್ತಿರುವ ಪೊಲೀಸರು ರೆಸಾರ್ಟ್ ಮಾಲೀಕನ ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದಾರೆ. ರೆಸಾರ್ಟ್ ಸುರಕ್ಷಾ ನಿಯಮ ಪಾಲಿಸಿಲ್ಲ ಎಂದು ಆರೋಪಿಸಲಾಗಿದೆ.

ಪೊಲೀಸ್ ತನಿಖೆ ಚುರುಕು

ಬೀಚ್ ರೆಸಾರ್ಟ್ ನಿಯಮ ಉಲ್ಲಂಘಿಸಿರುವ ಕಾರಣ ಪರವಾನಗಿಯನ್ನು ತಾತ್ಕಾಲಿಕವಾಗಿ ರದ್ದುಗೊಳಿಸಲಾಗಿದೆ. ತನಿಖೆ ಮುಗಿಯುವ ವರೆಗೂ ರೆಸಾರ್ಟ್‌ಗೆ ಪೊಲೀಸರು ಬೀಗ ಹಾಕಿದ್ದಾರೆ. ರೆಸಾರ್ಟ್ ಸೀಲ್ ಮಾಡಿರುವ ಪೊಲೀಸರು ತನಿಖೆ ಚುರುಕುಗೊಳಿಸಿದ್ದಾರೆ. ಇದೇ ವೇಳೆ ನಿಯಮ ಉಲ್ಲಂಘಿಸಿರುವ ಇತರ ರೆಸಾರ್ಟ್ ಕುರಿತು ಪೊಲೀಸರು ಮಾಹಿತಿ ಕಲೆ ಹಾಕುತ್ತಿದ್ದಾರೆ.

ಈ ಘಟನೆಯನ್ನು ಆಧಾರವಾಗಿಟ್ಟುಕೊಂಡು ಎಲ್ಲಾ ರೆಸಾರ್ಟ್‌ಗಳಿಗೆ ಎಚ್ಚರಿಕೆ ನೀಡಲು ಪೊಲೀಸರು ಮುಂದಾಗಿದ್ದಾರೆ. ಹಲವು ರೆಸಾರ್ಟ್‌ಗಳು ನಿಯಮಬಾಹಿರವಾಗಿ ಕಾರ್ಯನಿರ್ವಹಿಸುತ್ತಿದೆ ಎಂಬ ಮಾತುಗಳು ಕೇಳಿಬಂದಿವೆ. ಹೀಗಾಗಿ ಇಂತಹ ರೆಸಾರ್ಟ್‌ಗೆ ಬೀಗ ಹಾಕಲು ಪೊಲೀಸರು ಮುಂದಾಗಿದ್ದಾರೆ.

ಆರ್ಥಿಕ ಅದಕ್ಷತೆಗೆ ಸರಕಾರ ದಿವಾಳಿ

ಖಜಾನೆ ಬರಿದಾಗಿ ಸರಕಾರ ಸಾಲದ ದವಡೆಗೆ : ಸಚಿವ ಎಚ್‌ಡಿಕೆ ಕಿಡಿ

ಕೋಲಾರ: ಗ್ಯಾರಂಟಿಗಳಿಂದ ರಾಜ್ಯ ದಿವಾಳಿಯಾಗಿದೆ ಎಂದು ನಾನು ಹೇಳುವುದಿಲ್ಲ, ಬದಲಿಗೆ ಆರ್ಥಿಕ ಅದಕ್ಷತೆ, ಅಸಮರ್ಪಕ ನಿರ್ವಹಣೆಯಿಂದ ಖಜಾನೆ ಬರಿದಾಗಿ ಸರಕಾರ ಸಾಲದ ದವಡೆಗೆ ಸಿಲುಕಿದೆ ಎಂದು ಕೇಂದ್ರದ ಬೃಹತ್ ಕೈಗಾರಿಕೆ ಹಾಗೂ ಉಕ್ಕು ಖಾತೆ ಸಚಿವ ಎಚ್.ಡಿ. ಕುಮಾರಸ್ವಾಮಿ ಆರೋಪಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ರಾಜ್ಯದಲ್ಲಿ ಅಪಾರ ಪ್ರಮಾಣದಲ್ಲಿ ತೆರಿಗೆ ಸಂಗ್ರಹ ಆಗುತ್ತಿದೆ. ಸರಕಾರ ಅಧಿಕಾರಕ್ಕೆ ಬಂದಾಗಿನಿಂದ ತೆರಿಗೆ, ಶುಲ್ಕ ಹೆಚ್ಚಿಸುತ್ತಾ ಬಂದಿದೆ. ಗ್ಯಾರಂಟಿಗಳಿಗೆ ವರ್ಷಕ್ಕೆ 60 ಸಾವಿರ ಕೋಟಿ ಆಗುತ್ತದೆ ಎಂದು ಸರಕಾರ ಹೇಳುತ್ತಿದೆ. ಆದರೆ, ಸಂಗ್ರಹ ಆಗುತ್ತಿರುವ ಜನರ ತೆರಿಗೆ ದುಡ್ಡು ಎಲ್ಲಿಗೆ ಹೋಗುತ್ತಿದೆ ಎಂದು ಪ್ರಶ್ನಿಸಿದರು.

ಅಭಿವೃದ್ಧಿಶೂನ್ಯ: ವರ್ಷದಿಂದ ವರ್ಷಕ್ಕೆ ತೆರಿಗೆ ಸಂಗ್ರಹ ಹೆಚ್ಚುತ್ತಲೇ ಇದ್ದರೂ ಅಭಿವೃದ್ಧಿ ಶೂನ್ಯವಾಗಿದೆ. ಪ್ರತಿಯೊಂದಕ್ಕೂ ಗ್ಯಾರಂಟಿಗಳ ನೆಪ ಮಾಡಿಕೊಂಡು ಅಭಿವೃದ್ಧಿ ಬಗ್ಗೆ ನಿರ್ಲಕ್ಷಿಸುತ್ತಿದ್ದಾರೆ. ಬೆಂಗಳೂರು ರಸ್ತೆಗಳಲ್ಲಿ ಗುಂಡಿಮುಚ್ಚಲು ಇವರ ಬಳಿ ಹಣ ಇಲ್ಲ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರೇ ಹೇಳಿದ್ದಾರೆ. ಹಾಗಾದರೆ, ತೆರಿಗೆ ಹಣ ಏನಾಗುತ್ತಿದೆ ಎಂದು ಎಚ್‌ಡಿಕೆ ಆಕ್ರೋಶ ವ್ಯಕ್ತಪಡಿಸಿದರು.

ಬಿಪಿಎಲ್ ಗ್ರಾಹಕರಿಗೆ ಬರೆ

11 ಲಕ್ಷ ಬಿಪಿಎಲ್ ಕಾರ್ಡ್ ಗಳನ್ನು ಎಪಿಎಲ್ ಮಾಡುವ ಮೂಲಕ ಅನ್ನವನ್ನು ಸರಕಾರ ಕಿತ್ತುಕೊಳ್ಳುತ್ತಿದೆ. ಕೇಂದ್ರ ಸರಕಾರ ರಾಜ್ಯಕ್ಕೆ ಕೊಡುತ್ತಿರುವ ಅಕ್ಕಿ ಕಡಿತ ಮಾಡಿಲ್ಲ. ಇವರು ಮಾಡಿರುವ ತಪ್ಪಿನಿಂದ ಎಪಿಎಲ್ ಕಾರ್ಡುದಾರರು ಅಕ್ಕಿ ಖರೀದಿ ಮಾಡಬೇಕು. ಕರ್ನಾಟಕದ ಗ್ಯಾರಂಟಿಗಳ ಬಗ್ಗೆ ಪ್ರಧಾನಿ ಮೋದಿ ಅವರನ್ನು ರಾಜ್ಯಕ್ಕೆ ಕರೆದಿರುವ ಸಿಎಂ ಸಿದ್ದರಾಮಯ್ಯ ಪ್ರಧಾನಿಗೆ ವಿಮಾನ ಬುಕ್ ಮಾಡಿ ಕೊಡುತ್ತೇವೆ ಎಂದಿರುವ ಬಗ್ಗೆ ಕುಮಾರಸ್ವಾಮಿ ಕಿಡಿಕಾರಿದರು.

ಮಾಜಿ ಸ್ಪೀಕರ್ ರಮೇಶ್‌ಕುಮಾರ್ ಮಾಡಿರುವ ಅರಣ್ಯ ಭೂಮಿ ಒತ್ತುವರಿ ಬಗ್ಗೆ ರಾಜ್ಯ ಸರಕಾರ ಮತ್ತು ಅರಣ್ಯ ಸಚಿವರು ಜಾಣ ನಿದ್ದೆ ಮಾಡುತ್ತಿದ್ದಾರೆ. ಕುದುರೆಮುಖ ಗಣಿ ಯೋಜನೆ ಹಾಗೂ ಎಚ್‌ಎಂಟಿ ಕಾರ್ಖಾನೆ ಬಗ್ಗೆ ಇನ್ನಿಲ್ಲದ ತಗಾದೆ ತೆಗೆಯುತ್ತಿರುವ ಅರಣ್ಯ ಸಚಿವರು ಮಾಜಿ ಸ್ಪೀಕರ್ ಭೂ ಒತ್ತುವರಿ ಬಗ್ಗೆ ಯಾಕೆ ಸುಮ್ಮನಿದ್ದಾರೆ? ರೈತರ ಭೂಮಿಯನ್ನು ಅರಣ್ಯ ಹಾಗೂ ಕಂದಾಯ ಅಧಿಕಾರಿಗಳು ವೀರಾವೇಶದಲ್ಲಿ ತೆರವು ಮಾಡಿದ್ದಾರೆ. ಮಾಜಿ ಸ್ಪೀಕರ್ ಕಂಡರೆ ಅರಣ್ಯ ಇಲಾಖೆಗೆ ಭಯವೇಕೆ?

-ಎಚ್.ಡಿ.ಕುಮಾರಸ್ವಾಮಿ ಕೇಂದ್ರ ಸಚಿವ

ನೊಂದವರ ಬಾಳಿಗೆ ಮಂತ್ರ ಮಾಂಗಲ್ಯದ ಚೈತನ್ಯ!

ರಾಷ್ಟ್ರಕವಿ ಕನಸಿಗೆ ನೀರೆರೆದ ರಾಜ್ಯ ಮಹಿಳಾ ನಿಲಯ

ಕುವೆಂಪು ಅವರ ಮಂತ್ರಮಾಂಗಲ್ಯದ ಮೂಲಕ ನಾಲ್ಕು ಜೋಡಿಗಳು ಕಲಬುರಗಿಯ ಮಹಿಳಾ ನಿಲಯದಲ್ಲಿ ಭಾನುವಾರ ವೈವಾಹಿಕ ಜೀವನ ಕಾಲಿಟ್ಟವು. ಉಪಲೋಕಾಯುಕ್ತ ನ್ಯಾ.ಬಿ.ವೀರಪ್ಪ, ಜಿಲ್ಲಾಧಿಕಾರಿ ಫೌಜಿಯಾ ತರನ್ನುಮ್ ಹಾಗೂ ಇತರ ಅಧಿಕಾರಿಗಳು ಈ ವಿಶಿಷ್ಟ ಕಾರ್ಯಕ್ರಮಕ್ಕೆ ಸಾಕ್ಷಿಯಾದರು.

ದೇವೇಂದ್ರ ಜಾಡಿ ಕಲಬುರಗಿ

ಮಂತ್ರಘೋಷಗಳ ಸದ್ದಿಲ್ಲದೇ, ಬಾಜಾ ಭಜಂತ್ರಿಯ ಅಬ್ಬರವಿಲ್ಲದೇ, ಯಾವುದೇ ಆಡಂಬರಕ್ಕೆ ಅವಕಾಶ ನೀಡದೇ, ರಾಷ್ಟ್ರಕವಿ ಕುವೆಂಪು ಅವರ ಪರಿಕಲ್ಪನೆಯ 'ಮಂತ್ರ ಮಾಂಗಲ್ಯ' ಮದುವೆಯ ಮೂಲಕ ನೊಂದವರ ಬಾಳಿಗೆ ಇಲ್ಲಿನ ಕಲಬುರಗಿಯ ರಾಜ್ಯ ಮಹಿಳಾ ನಿಲಯ ನವ ಚೈತನ್ಯ ನೀಡಿದೆ.

ಸದಾ ಅನಾಥ ಯುವತಿಯರಿಗೆ ಬಾಳು ಕಟ್ಟಿ ಕೊಡುವಲ್ಲಿ ಮಹತ್ವದ ಪಾತ್ರ ವಹಿಸುತ್ತಾ ಬಂದಿರುವ ರಾಜ್ಯ ಮಹಿಳಾ ನಿಲಯವು ಇದೀಗ, ರಾಷ್ಟ್ರಕವಿ ಕುವೆಂಪು ಅವರ ಆಶಯದಂತೆ, ಎಲ್ಲಾ ಶಾಸ್ತ್ರಗಳನ್ನು, ಜಾತಿ-ಧರ್ಮದ ಕಟ್ಟಪಾಡುಗಳನ್ನು ಮೀರಿದ ಅರ್ಥಪೂರ್ಣ ಮಂತ್ರ ಮಾಂಗಲ್ಯ ವಿವಾಹ ಪದ್ಧತಿಯ ಪ್ರಕಾರ ನಾಲ್ಕು ಜೋಡಿಗಳನ್ನು ವೈವಾಹಿಕ ಜೀವನಕ್ಕೆ ಕಾಲಿರಿಸುವ ಮೂಲಕ ನಾಡಿಗೆ ವಿಶ್ವಮಾನವತೆಯ ಸಂದೇಶ ಸಾರಿದೆ.

ರಾಜ್ಯ ಮಹಿಳಾ ನಿಲಯದ ನಿವಾಸಿಗಳಾದ ಕು. ಸುಜಾತಾ ತಂದೆ ಬಸವರಾಜ ಜತೆ ಚಿ.ಪ್ರವೀಣ ತಂದೆ ಜನಾರ್ದನ ರಾಯಚೂರು, ಕು. ಭವಾನಿ ತಂದೆ ಬಸವರಾಜ ಜತೆ ಭರತ್ ಎಂ. ಎಸ್ ತಂದೆ ಸಿದ್ದರಾಮಯ್ಯ ತುಮಕೂರು, ಕು. ಅಶ್ವಿನಿ ತಂದೆ ಶ್ರೀರಾಮ್ ಜತೆ ಚಿ. ಸಮರ್ಥ ತಂದೆ ಉಮೇಶ ಬಳ್ಳಾರಿ, ಹಾಗೂ ಕು. ಪ್ರಿಯಾಂಕ ಜತೆ ಚಿ. ವೀರಾರೆಡ್ಡಿ ತಂದೆ ಹಣಮಂತರೆಡ್ಡಿ ಸೇಡಂ ಅವರ ವಿವಾಹವು ಮಂತ್ರ ಮಾಂಗಲ್ಯ ಪದ್ಧತಿಯಂತೆ ಉಪ ಲೋಕಾಯುಕ್ತ ನ್ಯಾ.ಬಿ. ವೀರಪ್ಪ, ಜಿಲ್ಲಾಧಿಕಾರಿ ಫೌಜಿಯಾ ತರನ್ನುಮ್ ಸೇರಿ ಜಿಲ್ಲಾಡಳಿತ ಅವರ ಸಮ್ಮುಖದಲ್ಲಿ ನೇರವೇರಿತು.

ರಾಜ್ಯ ಮಹಿಳಾ ನಿಲಯದಲ್ಲಿ ಮದುವೆಗೆ ಸಿದ್ಧತೆ ನಡೆದಿತ್ತಲ್ಲದೇ, ಇಡೀ ದಿನ ಸಂಭ್ರಮ ಎಲ್ಲೆಡೆ ಮನೆ ಮಾಡಿತ್ತು. ಅತ್ಯಂತ ಸರಳ, ಕ್ರಮಬದ್ಧವಾಗಿ ಜಿಲ್ಲಾಡಳಿತ ಹಾಗೂ ಮಹಿಳಾ ಮತ್ತು ಮಕ್ಕಳ ಇಲಾಖೆಯ ಅಧಿಕಾರಿಗಳು ವಧುವಿನ ತವರು ಮನೆಯವರಂತೆ ನಿಂತು, ಮದುವೆಯ ಎಲ್ಲಾ ಶಾಸ್ತ್ರಗಳನ್ನು ನೆರವೇರಿಸಿ, ನವ ಜೋಡಿಗಳಿಗೆ ಆದರ್ಶ ದಂಪತಿಗಳಾಗಿ ಬಾಳುವಂತೆ ಶುಭ ಹಾರೈಸಿ, ಆಶೀರ್ವದಿಸುವ ಮೂಲಕ ಜಿಲ್ಲಾಡಳಿತ ಹಾಗೂ ಮಹಿಳಾ ಮತ್ತು ಮಕ್ಕಳ ಇಲಾಖೆ ತವರು ಮನೆಯ ಜವಾಬ್ದಾರಿ ನಿರ್ವಹಿಸಿತು.

ಇದೆ ಮೊದಲ ಬಾರಿಗೆ ನಾಲ್ಕು ಜೋಡಿಗಳ ವಿವಾಹವು ಮಂತ್ರ ಮಾಂಗಲ್ಯ ಪದ್ಧತಿಯಂತೆ ನೆರವೇರಿಸುವ ಮೂಲಕ ಯಾವ ಕಾಲದ ಶಾಸ್ತ್ರವೇನು ಹೇಳಿದರೇನು, ಎದೆಯ ದನಿಗೂ ಮಿಗಿಲು ಶಾಸ್ತ್ರವಿಹುದೇನು, ಎಂದೊ ಮನು ಬರೆದಿಟ್ಟುದಿಂದೆಮಗೆ ಕಟ್ಟೇನು, ನಿನ್ನೆದೆಯ ದನಿಯೆ ಋಷಿ ಮನು ನಿನಗೆ ನೀನು ಎನ್ನುವ ರಾಷ್ಟ್ರಕವಿ ಕುವೆಂಪು ಅವರು ಹಾಕಿಕೊಟ್ಟ ಸರಳವಾದ ಮಂತ್ರ ಮಾಂಗಲ್ಯದಲ್ಲಿ ನವ ದಂಪತಿಗಳು ಹೊಸ ಜೀವನಕ್ಕೆ ಕಾಲಿಟ್ಟಿದ್ದಾರೆ.

ಮಾತು ಬಾರದ ಪ್ರಿಯಾಂಕಾ ಬದುಕಲ್ಲಿ ಮೂಡಿದ ಬೆಳಕು: ಕಳೆದ ಆರು ವರ್ಷಗಳಿಂದ ರಾಜ್ಯ ಮಹಿಳಾ ನಿಲಯದಲ್ಲಿ ಆಶ್ರಯ ಪಡೆಯುತ್ತಿರುವ ಪ್ರಿಯಾಂಕಾ ಅವರಿಗೆ ಮಾತು ಬರುವುದಿಲ್ಲ. ಮಾತು ಬಾರದ ಯುವತಿಗೆ ಕಲಬುರಗಿ ಜಿಲ್ಲೆಯ ಸೇಡಂ ತಾಲೂಕಿನ ಕೊಡ್ಲಾ ಗ್ರಾಮದಲ್ಲಿ ಖಾಸಗಿ ಶಾಲೆಯಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿರುವ ವೀರಾರೆಡ್ಡಿ ಅವರು ಕೈಹಿಡಿಯುವ ಮೂಲಕ ಮಾತು ಬಾರದ ಪ್ರಿಯಾಂಕಾ ಅವರ ಬದುಕಲ್ಲಿ ಹೊಸ ಬೆಳಕು ಮೂಡಿಸಿದ್ದಾರೆ.

ಇಂತಹ ಸರಳ ವಿವಾಹಗಳು ಎಲ್ಲೆಡೆ ನಡೆಯಬೇಕು. ದುಂದು ವೆಚ್ಚ ಮಾಡದೇ ಸರಳ ಜೀವನ ಶೈಲಿ ಎಲ್ಲರೂ ಅನುಸರಿಸಬೇಕು. ದೇಹಗಳು ಮಾತ್ರವಲ್ಲದೇ ಮನಸ್ಸುಗಳು ಒಂದಾಗಬೇಕು. ಸಮರಸ ಸಹಬಾಳ್ವೆಯ ಜೀವನ ಅನುಸರಿಸಿದಾಗ ಮಾತ್ರ ಬದುಕು ಪರಿಪೂರ್ಣವಾಗಲು ಸಾಧ್ಯ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇಂತಹ ಮಹತ್ವದ ಕಾರ್ಯ ಜರುಗಿಸಿದ್ದು ಶ್ಲಾಘನೀಯ. ಇಂತಹ ಮಹತ್ವದ ಕಾರ್ಯಕ್ಕೆ ಜನರನ್ನು ಪ್ರೇರೇಪಿಸಬೇಕು.

- ನ್ಯಾ. ಬಿ. ವೀರಪ್ಪ ಉಪ ಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ

ಸಮಾಜಕ್ಕೆ ಮಾದರಿಯಾಗಬೇಕು

ಮಂತ್ರ ಮಾಂಗಲ್ಯದ ಮೂಲಕ ಮದುವೆಗಳು ಸಮಾಜದಲ್ಲಿ ನಡೆಯಬೇಕು. ಬಹಳ ಜನ ಇದೀಗ ಭೋಗದಿಂದ ಮದುವೆ ಮಾಡುತ್ತಿದ್ದಾರೆ. ಅದೆಲ್ಲವೂ ಕೇವಲ ತೋರಿಕೆ ಆಗಿದೆ. ಮಗಳ ಮದುವೆ ಕೇವಲ ಪ್ರತಿಷ್ಠೆ ಆಗಬಾರದು. ಹೆಣ್ಣುಮಕ್ಕಳ ಮದುವೆ ಮಾಡಿ ಅನೇಕ ತಂದೆ-ತಾಯಿಗಳು ಹೊಲ, ಮನೆ, ತೋಟ ಕಳೆದುಕೊಂಡ ಬೀದಿಗೆ ಬಿದ್ದಿದ್ದಾರೆ. ಅಂತಹ ಘಟನೆಗಳಿಗೆ ಆಸ್ಪದ ನೀಡಬಾರದು. ಸರಳ ಮದುವೆಗಳಿಗೆ ಹೆಚ್ಚಿನ ಆದ್ಯತೆ ನೀಡಬೇಕು. ಮಂತ್ರ ಮಾಂಗಲ್ಯ ಮದುವೆ ಪದ್ಧತಿ ಎಲ್ಲರಿಗೂ ಮಾದರಿಯಾಗಬೇಕು. ಇಂತಹ ಕಾರ್ಯಗಳಿಗೆ ಜನಪ್ರತಿನಿದಿನಗಳು ಪ್ರೋತ್ಸಾಹ ನೀಡಬೇಕು ಎಂದು ಉಪ ಲೋಕಾಯುಕ್ತ ನ್ಯಾ.ಬಿ.ವೀರಪ್ಪ ಕರೆ ನೀಡಿದರು.

ಹಿಟ್ ಅಂಡ್ ರನ್: ಆರೋಪಿ ಬಂಧನ

ಉಡುಪಿ: ಕಾಪುವಿನಲ್ಲಿ ನಡೆದ ಹಿಟ್ ರನ್ ಪ್ರಕರಣದಲ್ಲಿ ಜೀಪ್ ಚಾಲಕನನ್ನು ಪೊಲೀಸರು ಬಂಧಿಸಿದ್ದಾರೆ.

ಕಾಂಗ್ರೆಸ್ ಮುಖಂಡ ಬೆಳಪು ದೇವಿಪ್ರಸಾದ್ ಶೆಟ್ಟಿ ಪುತ್ರ ಪ್ರಜ್ವಲ್ ಶೆಟ್ಟಿ ಕಾರು ಚಲಾಯಿಸುತ್ತಿದ್ದ. ಭೀಕರ ಅಪಘಾತದ ದೃಶ್ಯ ಸಿಸಿಟಿವಿಯಲ್ಲಿ ಸೆರೆಯಾಗಿತ್ತು. ಪ್ರಕರಣ ನಡೆದ ಬೆನ್ನಲ್ಲೇ ಪ್ರಜ್ವಲ್ ಶೆಟ್ಟಿ ತಲೆಮರೆಸಿಕೊಂಡಿದ್ದ. ಪೊಲೀಸರು ಹಿಟ್ ರನ್ ಕೇಸ್ ದಾಖಲು ಮಾಡಿದ್ದರು. ಈ ಸಂಬಂಧ ಆರೋಪಿಯನ್ನು ಶಿರ್ವ ಪೊಲೀಸರು ಆರೋಪಿಯನ್ನು ಬಂಧಿಸಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಸಾವನ್ನಪ್ಪಿದ ಮೊಹಮ್ಮದ್ ಹುಸೇನ್ ತಂದೆ ಉಮ್ಮರಬ್ಬ ಪ್ರತಿಕ್ರಿಯಿಸಿ, ನನ್ನ ಮಗ ಮುಂಜಾನೆ ಕೆಲಸಕ್ಕೆ ಹೋಗುವಾಗ ಈ ಘಟನೆ ನಡೆದಿದೆ. ಒಂದು ಗಂಟೆ ರಕ್ತದ ಮಡುವಿನಲ್ಲಿಯೇ ಒದ್ದಾಡುತ್ತಿದ್ದ. ತಕ್ಷಣ ಆಸ್ಪತ್ರೆಗೆ ದಾಖಲಿಸಿದ್ದರೆ ನನ್ನ ಮಗ ಬದುಕುಳಿಯುತ್ತಿದ್ದ. ಪೊಲೀಸ್ ಇಲಾಖೆಯಿಂದ ನ್ಯಾಯ ಸಿಗಬೇಕು, ಆರೋಪಿಗೆ ಶಿಕ್ಷೆ ವಿಧಿಸಬೇಕು ಎಂದು ಆಗ್ರಹಿಸಿದ್ದಾರೆ.

ಚಿನ್ನಾಭರಣ ಮರಳಿಸಿ ಮಾನವೀಯತೆ ಮೆರೆದ ನಿರ್ವಾಹಕ

ಬೀದರ್: ಬಸ್ಸಿನಲ್ಲಿ ಪ್ರಯಾಣಿಕ ಮರೆತು ಹೋಗಿದ್ದ ಲಕ್ಷಾಂತರ ರು. ಮೌಲ್ಯದ ಚಿನ್ನಾಭರಣ ಮರಳಿಸಿ ಕಂಡಕ್ಟರ್ ಮಾನವೀಯತೆ ಮೆರೆದ ಘಟನೆ ಬೀದರ್‌ನಲ್ಲಿ ನಡೆದಿದೆ. ಭಾಲ್ಕಿ ನಿಲ್ದಾಣದಿಂದ ಮಹಾರಾಷ್ಟ್ರದ ನಿಲಂಗಾಕ್ಕೆ ಪ್ರಯಾಣಿಸಿದ್ದ ಮಹಮದ್ 3 ಲಕ್ಷ ರು. ಮೌಲ್ಯದ ಚಿನ್ನಾಭರಣವನ್ನು ಬಸ್ಸಿನಲ್ಲಿ ಮರೆತು ಹೋಗಿದ್ದರು. ಚಿನ್ನಾಭರಣ ಬಸ್ಸಿನಲ್ಲಿ ಬಿಟ್ಟಿದ್ದು, ನೆನಪಾದ ಬಳಿಕ ಗಾಬರಿಗೊಂಡು ಬಸ್ ನಿಲ್ದಾಣಕ್ಕೆ ವಾಪಸಾಗಿದ್ದಾರೆ. ಬಳಿಕ ನಿರ್ವಾಹಕ ಪ್ರಕಾಶ ಹತ್ತಿರ ಚಿನ್ನಾಭರಣ ಸುರಕ್ಷಿತವಾಗಿರುವ ವಿಷಯ ಗೊತ್ತಾಗಿ ನಿಟ್ಟುಸಿರುಬಿಟ್ಟಿದ್ದಾರೆ. ಬೀದರ್ ಜಿಲ್ಲೆಯ ಭಾಲ್ಕಿ ಡಿಪೋದ ಬಸ್‌ನಲ್ಲಿ ಚಿನ್ನಾಭರಣ ಮರೆತು ಹೋಗಿದ್ದ ಪ್ರಯಾಣಿಕನಿಗೆ ಲಕ್ಷಾಂತರ ರುಪಾಯಿ ಮೌಲ್ಯದ ಚಿನ್ನಾಭರಣ ಮರಳಿ ಕೊಟ್ಟು ನಿರ್ವಾಹಕ ಮಾನವೀಯತೆ ಮೆರೆದಿದ್ದಾರೆ. ಪ್ರಕಾಶ್ ಅವರ ಪ್ರಮಾಣಿಕತೆಗೆ ಮೆಚ್ಚಿ ಪ್ರಯಾಣಿಕ ಮಹಮದ್ ಅಜರ್ ಹಾಗೂ ಸಾರಿಗೆ ಅಧಿಕಾರಿಗಳು ಚಾಲಕ ಹಾಗೂ ನಿರ್ವಾಹಕನನ್ನು ಸನ್ಮಾನಿಸಿ ಗೌರವಿಸಿದ್ದಾರೆ.

..ಜೀವರಕ್ಷಕ ಔಷಧಗಳ ಕೊರತೆ

← ಮೊದಲಪುಟದಿಂದ

ಹಲವು ವರ್ಷಗಳಿಂದ ಬಾಕಿ ಔಷಧ ಬಿಲ್‌ಗಳಿಗೆ ಹಣ ಪಾವತಿಸಲು ವಿಳಂಬವಾಗುತ್ತಿದೆ. ಟೆಂಡರ್ ನಿಯಮಾನುಸಾರ 30 ದಿನದೊಳಗೆ ಔಷಧ ಬಿಲ್‌ಗಳಿಗೆ ಹಣ ಪಾವತಿಸಬೇಕೆಂಬ ನಿಯಮವಿದೆ. ನೆರೆಯ ತಮಿಳುನಾಡು ಸೇರಿ ಇನ್ನಿತರ ರಾಜ್ಯಗಳಲ್ಲಿ ನಿಗದಿತ ಸಮಯದಲ್ಲಿ ಔಷಧ ಪೇಮೆಂಟ್ ಯಾಗುತ್ತಿದೆ. ಆದರೆ, ಕೆಎಸ್‌ಎಂಎಸ್ ಸಿಎಲ್‌ನಲ್ಲಿ ಸರಿಯಾದ ಸಮಯಕ್ಕೆ ಬಾಕಿ ಬಿಲ್‌ಗಳಿಗೆ ಹಣ ಪಾವತಿಯಾಗುತ್ತಿಲ್ಲ. ಬಿಡ್ಡರ್ ಟೆಂಡರ್‌ನಲ್ಲಿ ಭಾಗವಹಿಸಿದಾಗ ಇಲಾಖೆಯು ಅರ್ನೆಸ್ಟ್ ಮನಿ ಡೆಪಾಸಿಟ್ ಅನ್ನು ಸಂಗ್ರಹಿಸುತ್ತದೆ. ಟೆಂಡರ್‌ನಲ್ಲಿ ಎಲ್ 1ಗೆ ಆಯ್ಕೆಯಾದ ಬಿಡ್ಡರ್ ಭದ್ರತಾ ಠೇವಣಿಯನ್ನು ಇಲಾಖೆಗೆ ಸಲ್ಲಿಸಿದ ನಂತರ ಕೆಟಿಪಿಪಿ ಕಾಯಿದೆ ಪ್ರಕಾರ ಅವರಿಗೆ ಮರುಪಾವತಿಸಬೇಕು. ರದ್ದಾದ ಮತ್ತು ಮತ್ತೆ ಟೆಂಡರ್ ನಡೆಸಿದ್ದ ಬಳಿಕವೂ ಬಿಡ್ಡರ್‌ಗೆ ಭದ್ರತಾ ಠೇವಣಿ ಮತ್ತು ಇಎಂಡಿ ಮರುಪಾವತಿಸುತ್ತಿಲ್ಲ.

ಯಾವ್ಯಾವ ಔಷಧ ಅಭಾವ?

ಪ್ಯಾರಸಿಟಮಾಲ್, ಅಲ್ಬುಮಿನಿ, ಆ್ಯಂಪ್ಸಿಲಿನ್, ಲೆವೊಥ್ರಕ್ಸಿನ್, ವಿಲ್ಡಗ್ಲಿಪ್ಟಿನ್, ಅಕ್ಲೇವಿರ್, ಪ್ಯಾರಾಸಿಟಾ, ನ್ಯುಸ್ಟೋಜಿಮೈನ್, ಸಲ್ಬೋಟಮಲ್, ಅಸ್ಟೋಫೈನ್, ಡಿಕ್ಲೋಮೈನ್, ಮಿಡಝೊಲಂ,ಅಝುಥ್ರೊಮೈಸಿನ್, ಥಿಯೋಪ್ಲಲೈನ್, ಡಿಕ್ಲೋಪೆನಕ್ ಸೇರಿ ವಿವಿಧ ಬಗೆಯ ಮಾತ್ರೆ ಹಾಗೂ ಚುಚ್ಚುಮದ್ದು ಔಷಧಗಳ ಕೊರತೆ ಉಂಟಾಗಿದೆ. ಗ್ಲೂಕೋಸ್, ಬ್ಯಾಂಡೇಜ್, ಸರ್ಜಿಕಲ್ ಮತ್ತು ಇಂಜೆಕ್ಷನ್‌ಗಳ ಅಭಾವ ಎದುರಾಗಿದೆ.

40% ಕುರಿತು ಲೋಕಾ ವರದಿ ಕಾಂಗ್ರೆಸ್-ಬಿಜೆಪಿ ವಾಕ್ಸಮರ

← ಮೊದಲಪುಟದಿಂದ

ಕರ್ನಾಟಕ ಗುತ್ತಿಗೆದಾರರ ಸಂಘದ ಅಧ್ಯಕ್ಷರಾಗಿದ್ದ ದಿ.ಕೆಂಪಣ್ಣ ಅವರು ಅಂದಿನ ರಾಜ್ಯ ಸರಕಾರದ ವಿರುದ್ಧ ಪ್ರಧಾನಮಂತ್ರಿ, ನರೇಂದ್ರ ಮೋದಿ ಅವರಿಗೆ ಪತ್ರ ಬರೆದಿದ್ದರು. ಭ್ರಷ್ಟಾಚಾರ ಜಾಸ್ತಿಯಾಗಿದೆ. ಕಾಮಗಾರಿಗಳಲ್ಲಿ ಹಣ ತೆಗೆದುಕೊಳ್ಳುತ್ತಿದ್ದಾರೆ ಎಂದು ಪತ್ರದಲ್ಲಿ ಉಲ್ಲೇಖಿಸಿದ್ದ ಆಧಾರದ ಮೇಲೆ ನಾವು 40 ಪರ್ಸೆಂಟ್ ಆರೋಪ ಮಾಡಿದ್ದೇವೆ ಎಂದು ಹೇಳಿದರು.

ನೋಂದಾಯಿತ ಸಂಘವೊಂದು ಅಧಿಕೃತವಾಗಿ ಪ್ರಧಾನಮಂತ್ರಿಗೆ ಪತ್ರ ಬರೆದಾಗ ನಾವು ಕೂಡ ಪಕ್ಷವಾಗಿ ಜನರ ಹಿತದೃಷ್ಟಿಯಿಂದ ಪ್ರಶ್ನೆ ಮಾಡಿದ್ದೇವೆ. ಯಾವ ಆಧಾರದ ಮೇಲೆ 40 ಪರ್ಸೆಂಟ್ ನಡೆದಿಲ್ಲ ಎನ್ನುತ್ತಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. ಚುನಾವಣೆ ಸಂದರ್ಭದಲ್ಲಿ ಜನಗಳಿಗೆ ಗ್ಯಾರಂಟಿ ಯೋಜನೆಗಳನ್ನು ಕೊಡುತ್ತೇವೆ ಎಂದು ನಾವು ಭರವಸೆ ಕೊಟ್ಟಿದ್ದೇವೆ. ಬರೀ 40 ಪರ್ಸೆಂಟ್ ಆರೋಪದಿಂದ ನಾವು ಅಧಿಕಾರಕ್ಕೆ ಬಂದಿದ್ದೇವೆ ಎಂಬುದು ಸುಳ್ಳು ಎಂದು ಸಮರ್ಥಿಸಿಕೊಂಡಿದ್ದಾರೆ.

ಹಾವೇರಿ: ಹಳೆಯ ಮತಪೆಟ್ಟಿಗೆ ಕಳವು ಪ್ರಕರಣ, ಐವರ ಬಂಧನ

ಹಾವೇರಿ: ಹಳೆಯ ಬ್ಯಾಲೆಟ್ ಬಾಕ್ಸ್‌ಗಳನ್ನು ಕಳವು ಮಾಡಿದ್ದ ನಾಲ್ವರು ಮತ್ತು ಬ್ಯಾಲೆಟ್ ಬಾಕ್ಸ್ ಖರೀದಿಸಿದ್ದ ಗುಜರಿ ವ್ಯಾಪಾರಿಯನ್ನು ಪೊಲೀಸರು ಬಂಧಿಸಿದ್ದಾರೆ. ಸಂತೋಷ ಮಾಳಗಿ, ಗಣೇಶ ಹರಿಜನ, ಮುತ್ತಪ್ಪ ದೇವಿಹೊಸೂರು, ಕೃಷ್ಣ ಹರಿಜನ, ಮೊಹಮ್ಮದ್ ಜಾವಿದ್ ಮಕಾನದಾರ ಬಂಧಿತರು.

ಬಂಧಿತರೆಲ್ಲರೂ ಹಾವೇರಿಯ ಸುಭಾಷ್ ನಗರ, ಪುರದ ಓಣಿ, ಗುತ್ತಲ ಮತ್ತು ಯತ್ತಿನಹಳ್ಳಿ ಗ್ರಾಮದವರು ಎಂದು ಗುರುತಿಸಲಾಗಿದೆ. ಬಂಧಿತರಿಂದ ಒಂದು ಆಟೋ ಹಾಗೂ 27 ಮತ ಪೆಟ್ಟಿಗೆಗಳನ್ನು ಹಾವೇರಿ ನಗರ ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಗೋದಾಮಿನಲ್ಲಿ ಪೆಟ್ಟಿಗೆಗಳು: ಯತ್ತಿನಹಳ್ಳಿಯ ಬಳಿಯ ಲೇಔಟ್‌ನ ಕಾಲುವೆಯಲ್ಲಿ ಗ್ರಾಪಂ ಚುನಾವಣೆಗಳಿಗೆ ಬಳಸಲಾಗುತ್ತಿದ್ದ ನಿರುಪಯುಕ್ತ 10 ಬ್ಯಾಲೆಟ್ ಬಾಕ್ಸ್‌ಗಳು 3 ದಿನಗಳ ಹಿಂದೆ ಪತ್ತೆಯಾಗಿದ್ದವು. ಎಪಿಎಂಸಿಯ ಹಳೆಯ ಗೋದಾಮಿನಲ್ಲಿ ಇಡಲಾಗಿದ್ದ ಹಳೆಯ ನಿರುಪಯುಕ್ತ ಮತಪೆಟ್ಟಿಗೆಗಳು ಇವಾಗಿದ್ದವು. ಕಂದಾಯ ಇಲಾಖೆಯವರು ಹಲ ವರ್ಷಗಳ ಹಿಂದೆ ಗೋದಾಮಿನಲ್ಲಿ ತಂದಿಟ್ಟಿದ್ದರು. ಬಾಕ್ಸ್‌ಗಳನ್ನು ಮಾರುವ ಉದ್ದೇಶದಿಂದ ಕಳ್ಳತನ ಮಾಡಿಕೊಂಡು ಹೋಗುವಾಗ ಸಾಗಿಸಲಾಗದೇ ಕಳ್ಳರು ಲೇಔಟ್‌ನ ಕಾಲುವೆಯಲ್ಲಿ ಬಿಟ್ಟುಹೋಗಿದ್ದರು. ಬ್ಯಾಲೆಟ್ ಬಾಕ್ಸ್ ಕಳ್ಳತನವಾಗಿದ್ದು ಹಾವೇರಿ ಜಿಲ್ಲೆಯಲ್ಲಿ ಬಹಳಷ್ಟು ಚರ್ಚೆಗೆ ಕಾರಣವಾಗಿತ್ತು.

ಟ್ವೀಟೂ-ಖಾರಾ

ಡಿ.ಕೆ.ಶಿವಕುಮಾರ್, ಡಿಸಿಎಂ

ವಕ್ಫ್ ವಿಚಾರದಲ್ಲಿ ಕಾಂಗ್ರೆಸ್ ಮುಖಂಡರು ಮಾತನಾಡಿದರೆ ಮಾಧ್ಯಮಗಳು ಬಿತ್ತರಿಸುತ್ತಿಲ್ಲ. ಕೇವಲ ಬಿಜೆಪಿಯವರ ಆರೋಪಗಳನ್ನು ಮಾತ್ರ ತೋರಿಸುತ್ತಿವೆ. ಈ ಬಗ್ಗೆ ಈಗಾಗಲೇ ಸಿಎಂ, ಸಚಿವರು ಸ್ಪಷ್ಟನೆ ನೀಡಿದ್ದಾರೆ. ವಕ್ಫ್ ಆಸ್ತಿ ವಿಚಾರದಲ್ಲಿ ಬಿಜೆಪಿಯ ಎಲ್ಲ ಕೈವಾಡವನ್ನು ನಾವು ಬಹಿರಂಗಪಡಿಸುತ್ತೇವೆ.

ಗುರು ಗುರುಪಾದಪ್ಪ, ಬೆಂಗಳೂರು

ರೈತರ ಪಹಣಿಯಲ್ಲಿ ವಕ್ಫ್ ಬೋರ್ಡ್ ಹೆಸರು ಹೇಗೆ ಬಂತು ತನಿಖೆ ನಡೆಸಿ.ಬೇಕಾದರೆ ನಿಮ್ಮ ಆಸ್ತಿ ಕೊಡಿ. ರೈತರ ಭೂಮಿ ಮೇಲೆ ಯಾಕೆ ನಿಮ್ಮ ಕಣ್ಣು..? ನಿಮ್ಮ ಸರಕಾರ ಬಂದ ಮೇಲೆ ರೈತರಿಗೆ ಯಾವ ಉಪಯೋಗವಿಲ್ಲ.

ಲಕ್ಷಗಳಿಂದ ಕೋಟಿಗೆ ತಲುಪಿದ ಬೆಟ್ಟಿಂಗ್ ದಂಧೆ। ಬಾಜಿಕಟ್ಟೆಗೆ ಕಾಲಿಟ್ಟ ತೆಲಂಗಾಣ, ಆಂಧ್ರ, ತಮಿಳುನಾಡು, ಕೇರಳದ ಮಂದಿ

ಬೊಂಬೆನಾಡಿನಲ್ಲಿ ಜೋರಾದ ಕೋಟಿಗಳ ಬೆಟ್ಟಿಂಗ್ ದಂಧೆ

ಡಿ.ಟಿ.ತಿಲಕ್‌ರಾಜ್, ರಾಮನಗರ

ಚನ್ನಪಟ್ಟಣ ಉಪಚುನಾವಣೆ ಮತದಾನ ಪರ್ವ ಮುಕ್ತಾಯಗೊಂಡ ಬೆನ್ನಲ್ಲೇ ಕ್ಷೇತ್ರದಲ್ಲಿ ಬೆಟ್ಟಿಂಗ್ ಭರಾಟೆ ಬಿರುಸುಗೊಂಡಿದೆ. ಈ ಹಿಂದೆ ಕ್ಷೇತ್ರ ವ್ಯಾಪ್ತಿಯಲ್ಲಿ ಮಾತ್ರ ಬಾಜಿಕಟ್ಟೆ ಸೀಮಿತವಾಗಿತ್ತು ಆದರೆ ಈ ಬಾರಿ ರಾಜ್ಯ, ಹೊರರಾಜ್ಯದ ಮಂದಿಯೂ ಗೆಲ್ಲುವ ಕುದುರೆ ಹಿಂದೆ ಬಿದ್ದಿದ್ದಾರೆ.

ಹೌದು, ಪ್ರತಿಬಾರಿ ಕ್ಷೇತ್ರದಲ್ಲಿ ಸಹಜವಾಗಿಯೇ ಸ್ಥಳೀಯರು ಬೆಟ್ಟಿಂಗ್ ಕಟ್ಟುತ್ತಿದ್ದುದು ಸಾಮಾನ್ಯವಾಗಿತ್ತು, ತಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ಹಣ, ನಿವೇಶನ, ಜಮೀನು, ಕುರಿ, ಕೋಳಿ, ಮರ, ಮನೆ, ಬೆಳೆ ಬಾಜಿ ಕಟ್ಟುತ್ತಿದ್ದರು. ಆದರೆ ಈ ಬಾರಿ ಇವೆಲ್ಲದರ ಜತೆಗೆ ಕ್ಷೇತ್ರದ ಹೊರಗಿನ ಮಂದಿ ಹಣದ ಮೇಲೆ ಬೆಟ್ಟಿಂಗ್ ಮಾಡುತ್ತಿದ್ದಾರೆ.

ಈ ಹಿಂದೆ ಚುನಾವಣೆ ಮತದಾನ ಪ್ರಕ್ರಿಯೆ ನಂತರ ಅಭ್ಯರ್ಥಿಗಳ ಪರವಾಗಿ ಬೆಂಬಲಿಗರು ಸಾಮಾನ್ಯವಾಗಿ 1 ಲಕ್ಷ ರು.ಗಳಿಂದ ಹಿಡಿದು 10 ಲಕ್ಷ ರು.ಗಳವರೆಗೆ ಬಾಜಿ ಕಟ್ಟುತ್ತಿದ್ದರು. ಹಾಗೆಯೇ ತಮಗೆ ಸೇರಿದ ಜಾಗದ ಮೇಲೆ ಬೆಟ್ಟಿಂಗ್ ಕಟ್ಟುತ್ತಿದ್ದರು. ಅವರೆಲ್ಲರೂ ಸ್ಥಳೀಯ ಮುಖಂಡರೇ ಆಗಿರುತ್ತಿದ್ದರು. ಈ ಬಾರಿ ಬಾಜಿ ಕಟ್ಟಲು ನೆರೆಹೊರೆಯ ಮಂಡ್ಯ, ತುಮಕೂರು, ಹಾಸನ, ಚಾಮರಾಜನಗರ, ಕೋಲಾರ, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ಹುಬ್ಬಳ್ಳಿ, ಮಂಗಳೂರು ಅಲ್ಲದೆ, ತೆಲಂಗಾಣ, ಆಂಧ್ರಪ್ರದೇಶ, ತಮಿಳುನಾಡು, ಕೇರಳದ ಮಂದಿಯೂ ಚನ್ನಪಟ್ಟಣಕ್ಕೆ ಆಗಮಿಸಿದ್ದಾರೆ.

ಸ್ಟ್ರೈಟ್‌ಫೈಟ್ ಹಿನ್ನೆಲೆ; ಕಾಂಗ್ರೆಸ್ ಹಾಗೂ ಎನ್‌ಡಿಎ ಅಭ್ಯರ್ಥಿಗಳು ಬಾರಿ ನೇರ ಹಣಾಹಣಿ ಎದುರಿಸಿದ್ದಾರೆ. ಇಬ್ಬರೂ ಹೇಳಿಕೇಳಿ ದೈತ್ಯ ಹೋರಾಟಗಾರರು, ಒಬ್ಬರ ಪರವಾಗಿ ಇಡೀ ಸರಕಾರ ಕ್ಷೇತ್ರಕ್ಕೆ ಬಂದಿದೆ. ಇನ್ನೊಬ್ಬರ ಪರವಾಗಿ ಬಿಜೆಪಿ ಜೆಡಿಎಸ್ ಎರಡೂ ಪಕ್ಷಗಳು ಒಗ್ಗಟ್ಟಾಗಿ ಚುನಾವಣೆ ಎದುರಿಸುವೆ. ಹಾಗಾಗಿ ನೇರ ಹಣಾಹಣಿ ಇದ್ದು ಸ್ಥಳೀಯರು ಬಾಜಿಕಟ್ಟಲು ಹಿಂಜರಿಯುತ್ತಿದ್ದಾರೆ. ಇಬ್ಬರ ನಡುವಿನ ಗೆಲುವಿಗೆ ಅಷ್ಟೇನು ಹೆಚ್ಚಿನ ಅಂತರ ಎದುರಾಗದ ಕಾರಣಕ್ಕೆ ಭಾಜಿಯಿಂದ ಕೊಂಚ ಹಿಂದೆ ಉಳಿದಿದ್ದಾರೆ, ಆದರೆ ಹೊರಗಿನ ಮಂದಿ ಮಾತ್ರ ಬೆಟ್ಟಿಂಗ್‌ಗೆ ಹಾತೊರೆಯುತ್ತಿದ್ದಾರೆ. ಈಗಾಗಲೇ ಭರ್ಜರಿ ಬೆಟ್ಟಿಂಗ್‌ನಲ್ಲಿ ತೊಡಗಿದ್ದಾರೆ. ನ.23ರಂದು ಫಲಿತಾಂಶ ಹೊರಬೀಳಲಿದ್ದು, ಯಾರ ಕೈ ಮೇಲಾಗುವುದೋ, ಯಾರು ಹೊರೆ ಇಳಿಸುವರೋ ಕಾದುನೋಡಬೇಕಾಗಿದೆ.

ಕುರಿ-ಕೋಳಿಗಿಲ್ಲ ಬೆಲೆ

ಗ್ರಾಮೀಣ ಭಾಗದಲ್ಲಿ ಕುರಿ, ಕೋಳಿ, ರಾಸುಗಳು, ಮನೆಗಳ ಮೇಲೆ ಬಾಜಿ ಕಟ್ಟುತ್ತಿದ್ದರು. ಆದರೆ ಇವೆಲ್ಲವೂ ಚನ್ನಪಟ್ಟಣ ಉಪಚುನಾವಣೆಯಲ್ಲಿ ನಗಣ್ಯವಾಗಿವೆ. ಇಲ್ಲಿ ಈ ಬಾರಿ ಏನಿದ್ದರೂ ಲಕ್ಷದಿಂದ ಕೋಟಿ ರು.ಗಳ ವರೆಗೆ ಝಣ ಝಣ ಕಾಂಚಾಣ ಸದ್ದು ಮಾಡುತ್ತಿದೆ.

ಕೋಟಿ ತಲುಪಿದ ಬೆಟ್ಟಿಂಗ್

ಪ್ರತಿ ಚುನಾವಣೆಯ ಫಲಿತಾಂಶದಲ್ಲಿ ತೀವ್ರ ಕುತೂಹಲ ಕೆರಳಿಸುವ ಚನ್ನಪಟ್ಟಣ ಕ್ಷೇತ್ರದಲ್ಲಿ ಲಕ್ಷರು.ಗಳ ವರೆಗೆ ಬೆಟ್ಟಿಂಗ್ ನಡೆಯುತ್ತಿತ್ತು. ಅದರಲ್ಲೂ ಅಭ್ಯರ್ಥಿಗಳಾದವರೇ ತಮ್ಮ ಬೆಂಬಲಿಗರ ಮೂಲಕ ಬೆಟ್ಟಿಂಗ್ ಕಟ್ಟಿಸುತ್ತಿದ್ದುದು ಸಾಮಾನ್ಯವಾಗಿತ್ತಾದರೂ ಅದು ಬಹಿರಂಗವಾಗುತ್ತಿರಲಿಲ್ಲ. ಕೆಲವೊಮ್ಮೆ ಬಹಿರಂಗವಾಗಿ ಅಭ್ಯರ್ಥಿಯೇ ನಾನು ಸೋಲುತ್ತೇನೆ, ನನ್ನ ಪರವಾಗಿ ಬೆಟ್ಟಿಂಗ್ ಕಟ್ಟಬೇಡಿ ಎಂದು ಹೇಳುತ್ತಾ ಎದುರಾಳಿಗಳು ಬೆಟ್ಟಿಂಗ್ ಮಾಡುವಂತೆ ಆಹ್ವಾನ ನೀಡುತ್ತಿದ್ದುದು ಇಲ್ಲಿ ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ಆದರೆ ಈ ಬಾರಿ ಮಾತ್ರ ಬೆಟ್ಟಿಂಗ್ ಲಕ್ಷ ರು.ದಾಟಿ ಕೋಟಿ ರು.ಗೆ ತಲುಪಿದೆ. ಹೊರಗಿನಿಂದ ಬಂದಿರುವ ಮಂದಿ ಹೊರಗಿನವರ ಜೊತೆಗೇ ಬಾಜಿಗೆ ಇಳಿದಿರುವುದು ಸಾಮಾನ್ಯವಾಗಿದೆ. ಕ್ಷೇತ್ರದ ಹಳ್ಳಿಗಳನ್ನು ಎಡತಾಕಿರುವ ಬಾಜಿ ಕಟ್ಟುವವರು, ಅಲ್ಲಿನ ಸ್ಥಿತಿಗತಿಗಳನ್ನು ಮತದಾರರಿಂದಲೇ ವಿಚಾರಿಸಿ ಬಾಜಿ ಕಟ್ಟುವ ತೀರ್ಮಾನ ಮಾಡುತ್ತಿದ್ದಾರೆ. ಇದು ಮತದಾನದ ದಿನದಿಂದಲೇ ತಳಮಟ್ಟದಿಂದ ಆರಂಭಗೊಂಡಿರುವ ತಂತ್ರಗಾರಿಕೆ ಎನ್ನುತ್ತಾರೆ ಬೆಟ್ಟಿಂಗ್‌ನಲ್ಲಿ ಪರಿಣಿತರಾಗಿರುವ ಮಂದಿ.

ಅರ್ಹರ ಕಾರ್ಡ್‌ಗಳಿಗೆ ತೊಂದರೆ ಇಲ್ಲ: ಮುಖ್ಯಮಂತ್ರಿ ಸ್ಪಷ್ಟನೆ

ಅನರ್ಹರ ಬಿಪಿಎಲ್ ಕಾರ್ಡ್ ಮಾತ್ರ ವಾಪಸ್

ಬಾಗಲಕೋಟೆ: ಅನರ್ಹರ ಬಿಪಿಎಲ್ ಕಾರ್ಡ್‌ಗಳನ್ನು ಮಾತ್ರ ವಾಪಸ್ ಪಡೆಯಬಹುದು. ಅರ್ಹರ ಕಾರ್ಡ್‌ಗಳಿಗೆ ತೊಂದರೆ ಇಲ್ಲ. ಅರ್ಹರು ವಂಚಿತರಾಗಬಾರದು ಹಾಗೂ ಅನರ್ಹರಿಂದ ಇದು ದುರುಪಯೋಗವಾಗಬಾರದು ಎನ್ನುವುದಷ್ಟೇ ನಮ್ಮ ಕಾಳಜಿ ಎಂದು ಸಿಎಂ ಸಿದ್ದರಾಮಯ್ಯ ಸ್ಪಷ್ಟಪಡಿಸಿದ್ದಾರೆ.

ನಗರದಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿಪಿಎಲ್ ಕಾರ್ಡ್‌ಗಳು ರದ್ದಾಗುತ್ತಿವೆ ಎನ್ನುವ ಪ್ರಶ್ನೆಯೇ ತಪ್ಪು. ಅನರ್ಹರ ಕಾರ್ಡ್‌ಗಳನ್ನು ವಾಪಸ್ ಪಡೆಯಬಹುದು ಎನ್ನುವ ಆಲೋಚನೆ ಮಾತ್ರ ನಮ್ಮದಾಗಿದೆ. ಇದನ್ನು ಆಹಾರ ಇಲಾಖೆ ಪರಿಶೀಲಿಸುತ್ತಿದೆ. ಇನ್ನು ಅಂತಿಮ ತೀರ್ಮಾನ ಆಗಿಲ್ಲ ಎಂದರು. ಆದಾಯ ತೆರಿಗೆ ಪಾವತಿಸುವವರಿಗೂ, ಸರಕಾರಿ ನೌಕರರಿಗೂ ಬಿಪಿಎಲ್ ಕಾರ್ಡ್ ಕೊಡಬೇಕಾ ಎಂದು ಮರು ಪ್ರಶ್ನಿಸಿದ ಸಿಎಂ, ಯಾವ ಕಾರ್ಡ್‌ಗಳೂ ರದ್ದಾಗದು. ಅನರ್ಹರಿಂದ ವಾಪಸ್ ಪಡೆಯಬಹುದು ಸಿದ್ದರಾಮಯ್ಯ ನುಡಿದರು.

ಆಪರೇಷನ್ ಕಮಲ ವಿಫಲ: ಆಪರೇಷನ್ ಕಮಲಕ್ಕಾಗಿ ಕಾಂಗ್ರೆಸ್ ಶಾಸಕರಿಗೆ ತಲಾ 50 ಕೋಟಿ ಆಮಿಷ ನೀಡಲಾಗಿತ್ತು ಎಂಬ ಪ್ರಶ್ನೆಗೆ ಉತ್ತರಿಸಿದ ಸಿಎಂ, ಬಿಜೆಪಿಯವರು ಆಪರೇಷನ್ ಕಮಲಕ್ಕೆ ಪ್ರಯತ್ನಿಸಿದರು, ವಿಫಲರಾದರು ಅವರು ವ್ಯಂಗ್ಯವಾಡಿದರು.

ಸಾಕ್ಷ್ಯ ಇಲ್ಲ; ಆದರೆ ಭ್ರಷ್ಟಾಚಾರ ಸುಳ್ಳೇ..?

ಶೇ. 40 ಕಮೀಷನ್ ಆರೋಪದಿಂದ ಮುಕ್ತರಾಗಿದ್ದೇವೆ ಎನ್ನುವ ವಿರೋಧ ಪಕ್ಷದ ನಾಯಕ ಆರ್.ಅಶೋಕ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ಗುತ್ತಿಗೆದಾರರ ಸಂಘದ ಅಧ್ಯಕ್ಷರಾಗಿದ್ದ ಕೆಂಪಣ್ಣ ಅವರು ಕೊಟ್ಟ ದೂರಿನ ಆಧಾರದಲ್ಲಿ ನಾವು ತನಿಖೆಗೆ ಸೂಚಿಸಿದ್ದೆವು. ಸಾಕ್ಷ್ಯಾಧಾರಗಳ ಕೊರತೆಯಿಂದ ಕೊಲೆ ಆರೋಪಿಗಳು ಬಿಡುಗಡೆ ಆಗುತ್ತಾರೆ. ಹಾಗಂತ ಕೊಲೆಯೇ ಆಗಿಲ್ಲ ಅಂದರೆ ಅದರಲ್ಲಿ ಅರ್ಥ ಇಲ್ಲ. ಕೊಲೆ ನಡೆದಿದೆ. ಸಾಕ್ಷಿಗಳು ಸಾಕ್ಷ್ಯ ಹೇಳಿರುವುದಿಲ್ಲ ಅಷ್ಟೇ ಎಂದು ಸಿಎಂ ಸಿದ್ದರಾಮಯ್ಯ ತಿರುಗೇಟು ನೀಡಿದರು.



ಬಾಗಲಕೋಟೆಯಲ್ಲಿ ಹಮ್ಮಿಕೊಂಡಿದ್ದ 71ನೇ ಅಖಿಲ ಭಾರತ ಸಹಕಾರಿ ಸಪ್ತಾಹ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ಸಹಕಾರಿ ಮಹಾ ಮಂಡಳಿಯ ಅಧ್ಯಕ್ಷ ಜಿ.ಟಿ.ದೇವೇಗೌಡ, ಬಾಗಲಕೋಟೆ ಡಿಸಿಸಿ ಬ್ಯಾಂಕ್ ಅಧ್ಯಕ್ಷ ಅಜಯ್ ಕುಮಾರ್ ನಾಯಕ್, ಶಾಸಕ ಎಚ್.ವೈ. ಮೇಟಿ, ಇದ್ದರು.

ನಾಡ ಸಮಸ್ಯೆಗೆ ಸಿಎಂ ಪರಿಹಾರ

- **ಸ್ಥಳ : ಹಾಸನ**

ಸಮಸ್ಯೆಯೇನು..?

- ಹಾಸನ ತಾಲೂಕು ಸಾಲಗಾಮೆ ಹೋಬಳಿ ಸೀಗೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸೀಗೆ ಗೇಟ್‌ನಲ್ಲಿರುವ ಬಸ್ ಶಿಥಿಲಗೊಂಡಿವುದು.
- **ಇಲಾಖೆ:** ಗ್ರಾಮ ಪಂಚಾಯಿತಿ
- **ಪರಿಹಾರ:** ಹಾಸನ ತಾಲೂಕು ಸಾಲಗಾಮೆ ಹೋಬಳಿ ಸೀಗೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸೀಗೆ ಗೇಟ್‌ನಲ್ಲಿರುವ ಬಸ್ ಶಿಥಿಲಾವಸ್ಥೆ ತಲುಪಿದ್ದು, ಸದರಿ ಬಸ್ ನಿಲ್ದಾಣಕ್ಕೆ ಅಡ್ಡಲಾಗಿ ಮುಳ್ಳು ಹಾಕಿ ದಾರಕಟ್ಟಿ ಸಾರ್ವಜನಿಕರು ಪ್ರವೇಶಿಸದಂತೆ ಕ್ರಮವಹಿಸಲಾಗಿದೆ.

ಹೊಸ ಬಾಂಬ್ ಸಿಡಿಸಿದ ಮಾಜಿ ಕೇಂದ್ರ ಸಚಿವ ಸಿಎಂ ಇಬ್ರಾಹಿಂ

ಮಂತ್ರಾಲಯ ಜಾಗ ನವಾಬ್ ಕೊಟ್ಟಿದ್ದು

ರಾಯಚೂರು: ಮಂತ್ರಾಲಯ ರಾಯರ ಮಠದ ಜಾಗ ಆದವಾನಿ ನವಾಬರು ಕೊಟ್ಟಿದ್ದು ಎಂದು ಮಾಜಿ ಕೇಂದ್ರ ಸಚಿವ ಸಿಎಂ ಇಬ್ರಾಹಿಂ ಹೊಸಬಾಂಬ್ ಸಿಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮಂತ್ರಾಲಯ ಮಠದ ಜಾಗ ಆದವಾನಿ ನವಾಬರು ನೀಡಿದ್ದು., ಅದನ್ನು ಹೇಗೆ ವಕ್ಫ್ ಬೋರ್ಡ್ ಆಸ್ತಿ ಎಂದು ಯಾರಾದರೂ ಕೇಳಲು ಹೋಗಿದ್ದರಾ..? ರಾಘವೇಂದ್ರ ಸ್ವಾಮಿಗಳು ಮಂತ್ರಾಲಯಕ್ಕೆ ಬಂದಾಗ ನಮ್ಮ ಬೃಂದಾವನ ಇಲ್ಲಿ ಮಾಡುತ್ತೇವೆ ಎಂದು ಹೇಳಿದ್ದರು. ಆಗ ಮಂತ್ರಾಲಯವನ್ನು ಖಾಜಿಗೆ ಕೊಟ್ಟ ಜಾಗ ರದ್ದುಗೊಳಿಸಿ, ಆದವಾನಿ ನವಾಬರು ಮಂತ್ರಾಲಯ ಸ್ವಾಮೀಜಿಗೆ ಕೊಟ್ಟರು. ಈ ಕಥೆಯನ್ನು ಮಂತ್ರಾಲಯ ಸ್ವಾಮೀಜಿಗಳೇ ಹೇಳುತ್ತಾರೆ ಎಂದರು.

ಶೃಂಗೇರಿಯನ್ನು ರಕ್ಷಿಸಿದ್ದು ಟಿಪ್ಪು

ಶೃಂಗೇರಿ ಶಾರದಾ ಪೀಠದ ಮೇಲೆ ದಾಳಿ ನಡೆದಾಗ ಟಿಪ್ಪು ಸುಲ್ತಾನ್ ಸೈನ್ಯ ಕಳುಹಿಸಿ ಮತ್ತೆ ಶಾರದಾ ಪೀಠವನ್ನು ಸ್ಥಾಪಿಸಿದ್ದರು. ಇದು ಇತಿಹಾಸ, ಇದು ನಮ್ಮ ಪರಂಪರೆ, ಇದು ನಮ್ಮ ಸಂಸ್ಕೃತಿ. ಈ ಚಿಲ್ಲರೆಗಳು ರಾಜಕಾರಣಕ್ಕೆ ಬಂದು ಈ ಸಂಸ್ಕೃತಿಯನ್ನು ಹಾಳುಮಾಡುತ್ತಿದ್ದಾರೆ ಎಂದು ಇಬ್ರಾಹಿಂ ಬೇಸರ ವ್ಯಕ್ತಪಡಿಸಿದರು.

ಇದರಿಂದ ಯಾರೂ ಆತಂಕ ಪಡುವಂತಹದ್ದಲ್ಲ. ತಹಸೀಲ್ದಾರ್, ಜಿಲ್ಲಾಧಿಕಾರಿಗಳು ಪರಿಶೀಲಿಸಿ ನಿರ್ಧಾರ ತೆಗೆದುಕೊಳ್ಳುತ್ತಾರೆ. ಪ್ರಕರಣದಿಂದ ಪ್ರಕರಣಕ್ಕೆ ವ್ಯತ್ಯಾಸ ಇರುತ್ತದೆ. ಅನುಭವ ಇಲ್ಲದಿರುವ ಒಬ್ಬ ಮಂತ್ರಿ ಆವೇಶದಲ್ಲಿ ಏನೋ ಮಾಡಲು ಹೋಗಿ ಏನೋ ಮಾಡಿದ್ದಾನೆ ಎಂದು ಅವರು ಪರೋಕ್ಷವಾಗಿ ಜಮೀರ್ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಜಮೀರ್ ಹೇಳಿಕೆಗೆ ಖಂಡನೆ

ಎಚ್.ಡಿ. ಕುಮಾರಸ್ವಾಮಿ ಬಗೆಗಿನ ಜಮೀರ್ ಅಹ್ಮದ್ ಹೇಳಿಕೆಯನ್ನು ಖಂಡಿಸುತ್ತೇನೆ. ಅವರ ಹೇಳಿಕೆ ತಪ್ಪು, ಒಕ್ಕಲಿಗರ ಸಮಾಜ, ಮುಸ್ಲಿಂ ಸಮಾಜ, ಟಿಪ್ಪು ಸುಲ್ತಾನ್ ಕಾಲದಿಂದ ಕೂಡಿಕೊಂಡು ಬಂದಿದೆ. ಆ ಸಮಾಜಕ್ಕೆ ನೋವಾಗಿದೆ, ನಾನೇ ಕ್ಷಮೆ ಕೇಳುತ್ತೇನೆ. ದೇವೇಗೌಡರ ವಯಸ್ಸಿಗಾದರೂ ನಾವು ಗೌರವ ಕೊಡಬೇಕು. ಕಾಂಗ್ರೆಸ್ ಅಧ್ಯಕ್ಷರು ಕೂಡ ಇದನ್ನು ತಪ್ಪು ಎಂದು ಹೇಳಿದ್ದಾರೆ. ಈಗಾಗಲೇ ಮತದಾನವಾಗಿದ್ದು, ಅದರ ಪರಿಣಾಮ ಬಗ್ಗೆ ನಾನೇನೂ ಹೇಳಲ್ಲ. ದೇವೇಗೌಡರು ಪುತ್ರ ವಾತ್ಸಲ್ಯದಲ್ಲಿ ಸಿಕ್ಕಿಹಾಕಿಕೊಂಡಿದ್ದಾರೆ ಎಂದು ಮಾಜಿ ಕೇಂದ್ರ ಸಚಿವ ಸಿಎಂ ಇಬ್ರಾಹಿಂ ವ್ಯಂಗ್ಯವಾಗಿ ನುಡಿದರು. ಹೇಳಿದರು.

ಬಸವ ಜಯಮೃತ್ಯುಂಜಯ ಸ್ವಾಮೀಜಿ ಘೋಷಣೆ। ಡಿ.10ರಂದು ಸುವರ್ಣಸೌಧ ಮುತ್ತಿಗೆ

ಪಂಚಮಸಾಲಿ ಮೀಸಲಿಗೆ ಆಗ್ರಹ

ಹುಬ್ಬಳ್ಳಿ: ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿಗೆ ಆಗ್ರಹಿಸಿ ಡಿ.10ರಂದು ಟ್ರ್ಯಾಕ್ಟರ್ ಚಳವಳಿಯೊಂದಿಗೆ ಬೆಳಗಾವಿ ಸುವರ್ಣ ಸೌಧಕ್ಕೆ ಮುತ್ತಿಗೆ ಹಾಕಲು ನಿರ್ಧರಿಸಲಾಗಿದೆ ಎಂದು ಕೂಡಲಸಂಗಮದ ಬಸವಜಯ ಮೃತ್ಯುಂಜಯ ಸ್ವಾಮೀಜಿ ತಿಳಿಸಿದರು.

ಹುಬ್ಬಳ್ಳಿಯಲ್ಲಿ ಲಿಂಗಾಯತ ಪಂಚಮಸಾಲಿ ವಕೀಲರ ಪ್ರಥಮ ಮಹಾಪರಿಷತ್ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಸರಕಾರ ಡಿ.9ರಿಂದ ಬೆಳಗಾವಿಯ ಸುವರ್ಣಸೌಧದಲ್ಲಿ ಚಳಿಗಾಲದ ಅಧಿವೇಶನ ನಡೆಸಲು ನಿರ್ಧರಿಸಿದೆ. ಮೊದಲ ದಿನ ಸಂತಾಪ ಸೂಚಕ ಗೊತ್ತುವಳಿ ಮಂಡನೆಯಾಗುವುದರಿಂದ 10ರಂದು ಮುತ್ತಿಗೆ ಹಾಕುವುದು ಸೂಕ್ತ ಎಂಬ ನಿರ್ಧಾರಕ್ಕೆ ಬಂದಿದ್ದೇವೆ ಎಂದರು.

ಪ್ರತಿಭಟನೆಯಲ್ಲಿ 5 ಲಕ್ಷ ಜನರ ಭಾಗಿ

ಒಂದು ವೇಳೆ ರಾಜ್ಯ ಸರಕಾರ ಅಧಿವೇಶನದ ದಿನಾಂಕ ಬದಲಾವಣೆ ಮಾಡಿದಲ್ಲಿ, ಯಾವ ದಿನಾಂಕದಂದು ಅಧಿವೇಶನ ನಡೆಸಲಾಗುವುದೋ ಅದರ ಮಾರನೇ ದಿನ ಸುವರ್ಣಸೌಧಕ್ಕೆ ಮುತ್ತಿಗೆ ಹಾಕಲು ಪಂಚಮಸಾಲಿ ಬಾಂಧವರು ಸಿದ್ಧರಿದ್ದಾರೆ. 10 ಸಾವಿರ ವಕೀಲರು ಸೇರಿ 5 ಲಕ್ಷ ಜನ ಸೇರಲಿದ್ದೇವೆ. ಪ್ರತಿ ಹಳ್ಳಿಯಿಂದ ಹತ್ತರಂತೆ 5 ಸಾವಿರ ಟ್ರ್ಯಾಕ್ಟರ್‌ಗಳೊಂದಿಗೆ ಸುವರ್ಣ ಸೌಧಕ್ಕೆ ಮುತ್ತಿಗೆ ಹಾಕುತ್ತೇವೆ ಎಂದು ತಿಳಿಸಿದರು.

ಶಾಸಕ ಬಸನಗೌಡ ಪಾಟೀಲ ಯತ್ನಾಳ, ಮಾಜಿ ಸಚಿವ ಸಿ.ಸಿ. ಪಾಟೀಲ, ಎಚ್.ಎಸ್. ಶಿವಶಂಕರಪ್ಪ, ಶಂಕರಗೌಡ ನಾಗನಗೌಡ್ರ, ಶಶಿಶೇಖರ ಡಂಗನವರ, ರಾಜಶೇಖರ ಮೆಣಸಿನಕಾಯಿ, ಮೈಲಾರಿ ಧಾರವಾಡ ಇತರರು ಸುದ್ದಿಗೋಷ್ಠಿಯಲ್ಲಿದ್ದರು.

ಸರಕಾರದ ವಿರುದ್ಧ ಕಿಡಿ

2ಎ ಮೀಸಲಾತಿಗೆ ಆಗ್ರಹಿಸಿ ಕಳೆದ ಮೂರೂವರೆ ವರ್ಷಗಳಿಂದ ಹೋರಾಟ ನಡೆಸುತ್ತಿದ್ದೇವೆ. ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿಯಾಗಿದ್ದಾಗ ಸರಕಾರ ಸ್ಪಂದಿಸುತ್ತಿತ್ತು. ಇಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಲೋಕಸಭೆ ಹಾಗೂ ಉಪ ಚುನಾವಣೆ ನೀತಿಸಂಹಿತೆ ಎಂದು ಜಾರಿಕೊಂಡಿದ್ದಾರೆ ಎಂದು ಕೂಡಲಸಂಗಮದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಆಕ್ಷೇಪಿಸಿದರು.

ಅಧಿವೇಶನದಲ್ಲಿ ಸದನದ ಒಳಗೆ ಲಿಂಗಾಯತ ಪಂಚಾಮಸಾಲಿ ಸಮಾಜದ ಶಾಸಕರು ಅಹೋರಾತ್ರಿ ಧರಣಿ ನಡೆಸಲಿದ್ದಾರೆ. ಇದರಲ್ಲಿ ಪಕ್ಷಾತೀತವಾಗಿ ಸಮಾಜದ ಎಲ್ಲ ಶಾಸಕರು ಭಾಗವಹಿಸಬೇಕು. ತಪ್ಪಿದಲ್ಲಿ ಸಮಾಜದ ವಿಶ್ವಾಸ ಕಳೆದುಕೊಳ್ಳುವ ಸ್ಥಿತಿ ಶಾಸಕರಿಗೆ ಬರಬಹುದು. ಈ ಹಿಂದೆ ಸಮಾಜದ ಶಾಸಕರು ಅಧಿವೇಶನದಲ್ಲಿ ಮಾತನಾಡದಿದ್ದಕ್ಕೆ ವಕೀಲರ ಪರಿಷತ್ ರಚನೆ ಮಾಡಿದ್ದು, ನಾವು ಶಾಸಕರಿಗಿಂತ ಸಮಾಜದ ಜನರ ಮೇಲೆ ಅವಲಂಬಿತ ಆಗಿದ್ದೇವೆ .

-ಬಸವ ಮೃತ್ಯುಂಜಯ ಸ್ವಾಮೀಜಿ, ಕೂಡಲಸಂಗಮ

ಯತ್ನಾಳ್ ವಿರುದ್ಧ ರೇಣುಕಾ ವಾಗ್ದಾಳಿ

4ನೇ ದರ್ಜೆ ರಾಜಕಾರಣಿ

ದಾವಣಗೆರೆ: ಯತ್ನಾಳ್ ನನ್ನನ್ನು ಥರ್ಡ್ ರೇಟ್ ರಾಜಕಾರಣಿ ಎಂದು ಹೇಳಿದ್ದಾರೆ. ಅವರು ರಾಜಕಾರಣದಲ್ಲಿ ದೊಡ್ಡವರು. ನಾನು ಥರ್ಡ್ ಆದರೆ ಅವರು ಫೋರ್ತ್ ಗ್ರೇಡ್ ರಾಜಕಾರಣಿ. ಎಲ್ಲವೂ ಅವರೇ ಎಂದು ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ವಾಗ್ದಾಳಿ ನಡೆಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಯತ್ನಾಳ್ ಅವರು ಟಿಆರ್‌ಪಿಗಾಗಿ ಮಾತನಾಡುತ್ತಿದ್ದಾರೆ. ನಾನು ಅಟಲ್ ವಾಜಪೇಯಿ ಸಂಪುಟದ ಸಚಿವ ಎಂದು ಹೇಳಿಕೊಳ್ಳುವ ಮೂಲಕ ವಾಜಪೇಯಿ ಅವರಿಗೆ ಅವಮಾನ ಮಾಡುತ್ತಿದ್ದಾರೆ. ವಾಜಪೇಯಿ ಇದ್ದಿದ್ದರೆ ಅವರ ಮಾತು ಕೇಳಿ ನೋವು ಮಾಡಿಕೊಳ್ಳುತ್ತಿದ್ದರು ಎಂದು ತಿಳಿಸಿದರು.

ಅಧಿಕೃತ ತಂಡ ಅಲ್ಲ: ಯಡಿಯೂರಪ್ಪ ಪಾದಯಾತ್ರೆ ನಡೆಸಿದರು. ಸೈಕಲ್ ಹೊಡೆದರು. ಪಕ್ಷ ಕಟ್ಟಿದವರು. ಅವರ ಬಗ್ಗೆ ಮಾತನಾಡಲು ಯಾವುದೇ ನೈತಿಕತೆ ಇಲ್ಲ. ಯಡಿಯೂರಪ್ಪ ಮತ್ತು ವಿಜಯೇಂದ್ರ, ಯತ್ನಾಳ್ ಅವರ ಕನಸಲ್ಲೂ ಹೋಗುತ್ತಾರೆ. ಅವರ ಬಗ್ಗೆ ಮಾತನಾಡದಿದ್ದರೆ ಅವರಿಗೆ ಊಟ ಸೇರಲ್ಲ, ನಿದ್ರೆ ಬರಲ್ಲ. ಅವರು ಬಾಯಿಚಪಲಕ್ಕೆ ಮಾತನಾಡುತ್ತಿದ್ದಾರೆ ಎಂದು ರೇಣುಕಾಚಾರ್ಯ ದೂರಿದರು.

ವಿಜಯೇಂದ್ರ ಸಿಎಂ ಏಕೆ ಆಗಬಾರದು?: ವಿಜಯೇಂದ್ರ ಅವರು ಮುಖ್ಯಮಂತ್ರಿ ಯಾಕೆ ಆಗಬಾರದು. ಜನಾಶೀರ್ವಾದದಿಂದ ಮುಖ್ಯಮಂತ್ರಿ ಆಗುತ್ತಾರೆ. ಅದಕ್ಕಾಗಿಯೇ ಯತ್ನಾಳ್ ಅವರಿಗೆ ಹೊಟ್ಟೆ ಉರಿ. ಹಾದೀಬೀದೀಲಿ ಅವರ ಬಗ್ಗೆ ಮಾತನಾಡುತ್ತಿದ್ದಾರೆ. ನಮಗೆ ಯಾವುದೇ ರೀತಿಯ ರಹಸ್ಯ ಸಭೆಗಳ ನಡೆಸಬಾರದು ಎಂದು ಯಡಿಯೂರಪ್ಪ, ವಿಜಯೇಂದ್ರ ಅವರು ಹೇಳಿದ್ದರಿಂದ ಮಾಡಿರಲಿಲ್ಲ. ಮಾತನಾಡಿರಲಿಲ್ಲ. ಇನ್ನು ಮುಂದೆ ನಾವೂ ಸಭೆ ಮಾಡುತ್ತೇವೆ. ದೆಹಲಿಗೂ ಹೋಗುತ್ತೇವೆ ಎಂದು ಮಾಜಿ ಸಚಿವ ರೇಣುಕಾಚಾರ್ಯ ಎಚ್ಚರಿಕೆ ಕೊಟ್ಟರು.

ನೂರಾರು ಅಭ್ಯರ್ಥಿಗಳಿಂದ ರಸ್ತೆ ತಡೆದು ಪ್ರತಿಭಟನೆ। ಅಧಿಕಾರಿಗಳ ವಿರುದ್ಧ ಆಕ್ರೋಶ

ಪಿಡಿಒ ಪರೀಕ್ಷೆ ಪ್ರಶ್ನೆ ಪತ್ರಿಕೆ ಸೋರಿಕೆ ಆರೋಪ

ರಾಯಚೂರು: ಪಂಚಾಯತ್ ಅಭಿವೃದ್ಧಿ ಅಧಿಕಾರಿ (ಪಿಡಿಒ) ಪರೀಕ್ಷೆಯ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿರುವ ಆರೋಪ ಕೇಳಿ ಬಂದಿದೆ. ರಾಯಚೂರು ಜಿಲ್ಲೆಯ ಸಿಂಧನೂರು ಪಟ್ಟಣದ ಅಭ್ಯರ್ಥಿಗಳು ಪರೀಕ್ಷೆಗೆ ಹಾಜರಾಗದೇ ಸರಕಾರಿ ಪದವಿ ಕಾಲೇಜಿನ ಮುಂದಿನ ಕುಷ್ಟಗಿ-ಸಿಂಧನೂರು ರಸ್ತೆ ತಡೆದು ಪ್ರತಿಭಟನೆ ನಡೆಸಿದರು.

ಪಿಡಿಒ ಸಾಮಾನ್ಯ ಪ್ರಶ್ನೆ ಪ್ರತಿಕೆ ಪರೀಕ್ಷೆಯಲ್ಲಿ ಕೆಪಿಎಸ್‌ಸಿ ಯಡವಟ್ಟು ಮಾಡಿದೆ. ಒಂದು ಕೋಣೆಯಲ್ಲಿ 24 ಅಭ್ಯರ್ಥಿಗಳಿಗೆ ಪರೀಕ್ಷೆ ಬರೆಯಲು ಅವಕಾಶ ನೀಡಲಾಗಿದೆ. ಆದರೆ 24 ಪ್ರಶ್ನೆ ಪತ್ರಿಕೆಗಳ ಬದಲು ಕೇವಲ 12 ಪ್ರಶ್ನೆ ಪ್ರತಿಕೆಯನ್ನಷ್ಟೇ ಕೆಪಿಎಸ್‌ಸಿ ಕಳುಹಿಸಿಕೊಟ್ಟಿದೆ. ಪ್ರಶ್ನೆ ಪತ್ರಿಕೆ ಲೀಕ್ ಆಗಿದೆ ಎಂದು ಆರೋಪಿಸಿ, ಅಭ್ಯರ್ಥಿಗಳು ಪ್ರತಿಭಟನೆ ನಡೆಸಿದರು.

ಬೀದರ್, ಕಲಬುರಗಿ ಹಾಗೂ ಯಾದಗಿರಿಯಿಂದ ಪರೀಕ್ಷೆ ಬರೆಯಲು ಅಭ್ಯರ್ಥಿಗಳು ಆಗಮಿಸಿದ್ದು, ನೂರಾರು ಮಂದಿ ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು.

ಸ್ಥಳಕ್ಕೆ ಸಿಂಧನೂರು ನಗರ ಠಾಣೆ ಪೊಲೀಸರು ಹಾಗೂ ತಹಸೀಲ್ದಾರ್ ಭೇಟಿ ನೀಡಿ, ಎಲ್ಲಾ ರೀತಿಯ ಭದ್ರತಾ ವ್ಯವಸ್ಥೆಯನ್ನು ಕೈಗೊಳ್ಳಲಾಗಿದೆ. ಯಾವುದೇ ಪರೀಕ್ಷಾ ಮೇಲ್ವಿಚಾರಕರು ತಪ್ಪೆಸಗಿರುವುದು ಕಂಡಬಂದಲ್ಲಿ ಅವರ ವಿರುದ್ಧ ಖಂಡಿತವಾಗಿಯೂ ಕ್ರಮ ಕೈಗೊಳ್ಳಲಾಗುವುದು. ಯಾರೂ ನಿಮ್ಮ ಭವಿಷ್ಯದ ಜೊತೆಗೆ ಚೆಲ್ಲಾಟವಾಡುತ್ತಿಲ್ಲ. ಗಾಳಿಸುದ್ದಿಗೆ ಕಿವಿಗೊಟ್ಟು ನಿಮ್ಮ ಭವಿಷ್ಯವನ್ನು ನೀವೇ ಹಾಳು ಮಾಡಿಕೊಳ್ಳಬೇಡಿ. ಪರೀಕ್ಷೆ ಬರೆಯಿರಿ. ಒಂದು ವೇಳೆ ಪ್ರಶ್ನೆ ಪತ್ರಿಕೆ ಸೋರಿಕೆ ಆಗಿದ್ದೇ ಆದಲ್ಲಿ, ಇಡೀ ರಾಜ್ಯದಲ್ಲಿ ಮರುಪರೀಕ್ಷೆ ನಡೆಯುತ್ತದೆ ಎಂದು ಅಭ್ಯರ್ಥಿಗಳು ಪರೀಕ್ಷೆ ಬರೆಯುವಂತೆ ಮನವೊಲಿಸಲು ಪ್ರಯತ್ನಿಸಿದರು.

ಕಲಬುರಗಿಯಲ್ಲೂ ಮೊದಲ ಪತ್ರಿಕೆ ವಿಳಂಬ

ಕಲಬುರಗಿ: ಕರ್ನಾಟಕ ಲೋಕಸೇವಾ ಆಯೋಗದಿಂದ ಭಾನುವಾರ ನಡೆದ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ನೇಮಕಾತಿ ಪರೀಕ್ಷೆ ವೇಳೆಯಲ್ಲಿ ಮೊದಲ ಸಾಮಾನ್ಯ ಪ್ರಶ್ನೆ ಪತ್ರಿಕೆ ವಿಳಂಬವಾಗಿದ್ದರಿಂದ ಅಭ್ಯರ್ಥಿಗಳು ಪ್ರತಿಭಟನೆ ನಡೆಸಿದ ಘಟನೆ ನಡೆದಿದೆ.

ನಗರದ ಗುಡ್ ಶೆಫರ್ಡ್ ಪರೀಕ್ಷಾ ಕೇಂದ್ರದಲ್ಲಿ ಪ್ರಶ್ನೆ ಪತ್ರಿಕೆ ವಿತರಣೆ ವೇಳೆ ಗೊಂದಲ ಸೃಷ್ಟಿಯಾಗಿ ಅಭ್ಯರ್ಥಿಗಳು ಪರೀಕ್ಷಾ ಕೇಂದ್ರದ ಮುಂದೆ ಪ್ರತಿಭಟಿಸಿದರು. ಪರೀಕ್ಷಾ ಕೇಂದ್ರದಲ್ಲಿ ನಾಲ್ಕೈದು ಕೋಣೆಗಳಲ್ಲಿ 24ರ ಬದಲಾಗಿ 12 ಪ್ರಶ್ನೆ ಪತ್ರಿಕೆ ಮಾತ್ರ ವಿತರಿಸಲಾಗಿತ್ತು. ಬಾಕಿ ಉಳಿದಿದ್ದ 12 ಅಭ್ಯರ್ಥಿಗಳಿಗೆ 10 ನಿಮಿಷ ವಿಳಂಬವಾಗಿ ಪ್ರಶ್ನೆ ಪತ್ರಿಕೆ ವಿತರಿಸಿದ್ದು, ಅಭ್ಯರ್ಥಿಗಳಲ್ಲಿ ಅನುಮಾನ ಮೂಡಿಸಿತ್ತು.

ಅಲ್ಲದೇ, ನಿಗದಿತ ಸಮಯಕ್ಕಿಂತ 20 ನಿಮಿಷ ತಡವಾಗಿ ಅಭ್ಯರ್ಥಿಗಳಿಗೆ ಪ್ರಶ್ನೆ ಪತ್ರಿಕೆ ವಿತರಣೆ ಮಾಡಿ ಗೊಂದಲ ಉಂಟಾಗಿದೆ. 20 ನಿಮಿಷ ಪತ್ರಿಕೆ ವಿಳಂಬ ಮಾಡಿದ್ದು ಯಾಕೆ ಎಂದು ಪ್ರಶ್ನಿಸಿದರು. ಕೆಲ ಪ್ರಶ್ನೆ ಪತ್ರಿಕೆಯ ಬಂಡಲ್‌ಗಳು ಕೋಣೆಗೆ ತರುವ ಮುನ್ನವೇ ಒಡೆದಿದ್ದವು ಎಂದು ಅಭ್ಯರ್ಥಿಯೊಬ್ಬ ಆರೋಪಿಸಿದ್ದಾರೆ.

ರಾಯಚೂರು ಜಿಲ್ಲೆಯ ಸಿಂಧನೂರು ಪಟ್ಟಣದ ಅಭ್ಯರ್ಥಿಗಳು ಪರೀಕ್ಷೆಗೆ ಹಾಜರಾಗದೇ ಸರಕಾರಿ ಪದವಿ ಕಾಲೇಜಿನ ಮುಂದಿನ ಕುಷ್ಟಗಿ–ಸಿಂಧನೂರು ರಸ್ತೆ ತಡೆದು ಪ್ರತಿಭಟನೆ ನಡೆಸಿದರು.

ಸಮಾಚಾರ ಸಣ್ಣದಲ್ಲ

ಪಡಿತರ ನೀಡಲು ಹಣದ ಕೊರತೆ ಇಲ್ಲ

ಮಂಗಳೂರು: ರಾಜ್ಯದಲ್ಲಿ ಪಡಿತರ ಧಾನ್ಯ ನೀಡಲು ಹಣದ ಕೊರತೆ ಇಲ್ಲ. ಪಡಿತರ ಚೀಟಿ ಪರಿಷ್ಕರಣೆ ವೇಳೆ ಬಿಪಿಎಲ್ ವ್ಯಾಪ್ತಿಗೆ ಬರದವರನ್ನು ಎಪಿಎಲ್‌ಗೆ ಪರಿವರ್ತಿಸಲಾಗಿದೆ.ಎಪಿಎಲ್‌ಗೆ ಸೇರಿಸಿದವರ ಕಾರ್ಡ್ ರದ್ದು ಮಾಡುವುದಿಲ್ಲ. ಅರ್ಹರಿಗೆ ಬಿಪಿಎಲ್ ಕಾರ್ಡ್ ಕೊಡಲು ಸಮಸ್ಯೆ ಇಲ್ಲ ಎಂದು ಆಹಾರ ಮತ್ತು ನಾಗರಿಕ ಸರಬರಾಜು ಖಾತೆ ಸಚಿವ ಕೆ.ಎಚ್. ಮುನಿಯಪ್ಪ ಸ್ಪಷ್ಟವಾಗಿ ಹೇಳಿದ್ದಾರೆ. ರಾಜ್ಯದಲ್ಲಿ 11 ಲಕ್ಷ ಪಡಿತರ ಚೀಟಿ ರದ್ದಾಗಿದೆ ಎಂಬ ಶಾಸಕ ಸುನೀಲ್ ಕುಮಾರ್ ಆರೋಪಕ್ಕೆ ಪ್ರತಿಕ್ರಿಯಿಸಿ, ರಾಜ್ಯದಲ್ಲಿ 6.50 ಕೋಟಿ ಜನರಿದ್ದಾರೆ. 4.50 ಕೋಟಿ ಕಾರ್ಡ್ ಕೊಟ್ಟಿದ್ದೇವೆ. ಅರ್ಹರಲ್ಲದವರು ಜಾಸ್ತಿ ಇರುವ ಶಂಕೆಯಿರುವ ಕಾರಣ ಪರಿಷ್ಕರಣೆಗೆ ನಿಯಾಮವಳಿ ಹಾಕಿಕೊಂಡಿದ್ದೇವೆ. ಪರಿಷ್ಕರಿಸುವಾಗ ಅರ್ಹರಿಗೆ ಬಿಪಿಎಲ್ ಕಾರ್ಡ್ ಕೊಡುತ್ತೇವೆ. ನಮ್ಮಲ್ಲಿ ಇದಕ್ಕಾಗಿ 8 ಸಾವಿರ ಕೋಟಿ. ರು. ಇದೆ. ಇದರಲ್ಲಿ ತಿಂಗಳಿಗೆ 650 ಕೋಟಿಯೂ ಖರ್ಚು ಆಗುವುದಿಲ್ಲ ಎಂದು ಸುನಿಲ್ ಕುಮಾರ್ ಅವರಿಗೆ ಮನವರಿಕೆ ಮಾಡುತ್ತೇವೆ ಎಂದು ಸಚಿವ ಮುನಿಯಪ್ಪ ತಿಳಿಸಿದರು.

ವಿರಾಮ
ಪ್ರತಿ ಭಾನುವಾರ

ಅಮಾನವೀಯ ಘಟನೆ ಖಂಡಿಸಿ ದಲಿತ ಸಂಘಟನೆಗಳ ಪ್ರತಿಭಟನೆ

ಕಾರ್ಮಿಕನ ಶವ ರಸ್ತೆಯಲ್ಲಿಟ್ಟು ಹೋದ ಮಾಲೀಕ

ಪುತ್ತೂರು: ಕೆಲಸದ ವೇಳೆ ಮೃತಪಟ್ಟ ಕಾರ್ಮಿಕರೊಬ್ಬರನ್ನು ಪಿಕಪ್ ವಾಹನದಲ್ಲಿ ತಂದು ಮೃತರ ಮನೆ ಎದುರಿನ ರಸ್ತೆಯಲ್ಲಿ ಬಿಟ್ಟು ಹೋದ ಅಮಾನವೀಯ ಘಟನೆ ಪುತ್ತೂರಿನಲ್ಲಿ ನಡೆದಿರುವುದು ವರದಿಯಾಗಿದೆ. ಘಟನೆ ಖಂಡಿಸಿ ದಲಿತ ಸಂಘಟನೆಗಳು ಪುತ್ತೂರು ನಗರ ಠಾಣೆಯ ಮುಂಭಾಗದಲ್ಲಿ ಪ್ರತಿಭಟನೆ ನಡೆಸಿದರು.

ಪುತ್ತೂರು ತಾಲೂಕಿನ ಚಿಕ್ಕಮುಡ್ನೂರು ಗ್ರಾಮದ ಸಾಲ್ಮರ ಕೆರೆಮೂಲೆ ಎಂಬಲ್ಲಿ ಶನಿವಾರ ಈ ಘಟನೆ ನಡೆದಿದ್ದು, ಕೂಲಿ ಕಾರ್ಮಿಕ ಸಾಲ್ಮರ ತಾರಿಗುಡ್ಡೆ ನಿವಾಸಿ ಶಿವಪ್ಪ(69) ಮೃತಪಟ್ಟ ದುರ್ದೈವಿ. ಶಿವಪ್ಪರನ್ನು ಶನಿವಾರ ಬೆಳಗ್ಗೆ ಸಾಲ್ಮರ ತ್ರಾವೋ ಇಂಡಸ್ಟ್ರೀಸ್‌ನ ಹೆನ್ರಿ ತ್ರಾವೋ ಕೆಲಸಕ್ಕೆಂದು ಪಿಕಪ್ ವಾಹನದಲ್ಲಿ ಕರೆದೊಯ್ದಿದ್ದರೆನ್ನಲಾಗಿದೆ. ಕೆಲಸದ ಸ್ಥಳದಲ್ಲಿ ಶಿವಪ್ಪರಿಗೆ ತೀವ್ರ ಅನಾರೋಗ್ಯ ಕಾಣಿಸಿಕೊಂಡಿದ್ದು, ಮಧ್ಯಾಹ್ನದ ವೇಳೆ ಪಿಕಪ್ ನಲ್ಲೇ ಶಿವಪ್ಪರನ್ನು ಕರೆತಂದು ಅವರ ಮನೆಯ ಮುಂಭಾಗದಲ್ಲಿನ ರಸ್ತೆಯಲ್ಲಿ ಮಲಗಿಸಿ ತೆರಳಿದ್ದಾರೆ.

ರಸ್ತೆಯಲ್ಲೇ ಸಾವು: ತಕ್ಷಣ ತಾವು ಹಾಗೂ ತಾಯಿ ರಸ್ತೆ ಬದಿ ಹೋಗಿ ನೋಡಿದಾಗ ತಂದೆ ಮೃತಪಟ್ಟಿದ್ದರು. ಬಳಿಕ ಸ್ಥಳೀಯರ ನೆರವಿನಿಂದ ಮೃತದೇಹವನ್ನು ಮನೆಯೊಳಗೆ ತಂದೆವು ಎಂದು ಶಿವಪ್ಪರ ಪುತ್ರಿ ಉಷಾ ಪೊಲೀಸ್ ದೂರಿನಲ್ಲಿ ಉಲ್ಲೇಖಿಸಿದ್ದಾರೆ. ಉಷಾ ನೀಡಿದ ದೂರಿನಂತೆ ಪುತ್ತೂರು ನಗರ ಠಾಣೆಯ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಶಿವಪ್ಪರ ಮೃತದೇಹವನ್ನು ರಸ್ತೆಯಲ್ಲಿಟ್ಟು ಹೋದ ಅಮಾನವೀಯ ಘಟನೆಯನ್ನು ಖಂಡಿಸಿ ವಿವಿಧ ದಲಿತ ಸಂಘಟನೆಗಳು ರವಿವಾರ ಪುತ್ತೂರು ನಗರ ಠಾಣೆಯ ಎದುರು ಪ್ರತಿಭಟನೆ ನಡೆಸಿದವು. ಬಳಿಕ ಪೊಲೀಸರು ಸಾಲ್ಮರದ ತಾವ್ರೋ ಮಿಲ್‌ಗೆ ತೆರಳಿ ಗೇಟ್ ತೆರೆದು ಮೃತದೇಹ ಸಾಗಣೆ ಮಾಡಿದ್ದ ಪಿಕಪ್ ವಾಹನವನ್ನು ಪೊಲೀಸರು ಜಪ್ತಿಮಾಡಿ ವಶಕ್ಕೆ ಪಡೆದುಕೊಂಡಿದ್ದಾರೆ.

ಈ ಸಂದರ್ಭ ಪುತ್ತೂರು ಶಾಸಕ ಅಶೋಕ್ ಕುಮಾರ್ ರೈ, ದಲಿತ ಸಂಘಟನೆಗಳ ಮುಖಂಡರು, ಬಿಜೆಪಿ ಮುಖಂಡ ಅರುಣ್ ಕುಮಾರ್ ಪುತ್ತಿಲ ಮತ್ತಿತರರು ಇದ್ದರು.

ಸಾಲ್ಮರ ಕೆರೆಮೂಲೆಯ ಕೂಲಿ ಕಾರ್ಮಿಕ ಶಿವಪ್ಪ ಶವವನ್ನು ರಸ್ತೆಯಲ್ಲೇ ಬಿಟ್ಟುಹೋದ ಹಿನ್ನೆಲೆಯಲ್ಲಿ ದಲಿತ ಸಂಘಟನೆಗಳ ನಾಯಕರು ಹಾಗು ಜನಪ್ರತಿನಿಧಿಗಳು ಶಿವಪ್ಪ ಮನೆಗೆ ಭೇಟಿ ನೀಡಿದ್ದರು.

ಜೋಗ್ ಫಾಲ್ಸ್ ಅಂತಾರಾಷ್ಟ್ರೀಯ ಮಟ್ಟದ ಪ್ರವಾಸಿ ತಾಣವಾಗಲಿ

ಶಿವಮೊಗ್ಗ: ಜಿಲ್ಲೆಯ ಜೋಗ ಜಲಪಾತ ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರವಾಸೋದ್ಯಮ ತಾಣ ಆಗಬೇಕು ಎಂದು ಸಂಸದ ಬಿ.ವೈ ರಾಘವೇಂದ್ರ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮಲೆನಾಡಿನ ಪ್ರಕೃತಿ ಕೊಟ್ಟ ಪ್ರವಾಸೋದ್ಯಮ ಸ್ಥಳ ಜೋಗ ಜಲಪಾತ. ಇಲ್ಲಿ ಪ್ರವಾಸಿಗರಿಗಾಗಿ ಹೋಟೆಲ್ ನಿರ್ಮಾಣಕ್ಕೆ ಅನುಮತಿ ಸಿಕ್ಕಿದೆ. ಆದರೆ ಸರ್ಕಾರ ಅನುದಾನ ಬಿಡುಗಡೆ ಮಾಡಿಲ್ಲ ಎಂದು ಆರೋಪಿಸಿದ್ದಾರೆ.

ಅಭಿವೃದ್ಧಿ ಬಗ್ಗೆ ಅನೇಕ ಸರಕಾರಗಳು ಭಾಷಣ ಮಾಡಿಕೊಂಡು ಬರುತ್ತಿವೆ. ಜೋಗ ಅಭಿವೃದ್ಧಿಗೆ ಯಡಿಯೂರಪ್ಪ ಸಾಕಷ್ಟು ಅನುದಾನ ಕೊಟ್ಟು, ಸಾಕಷ್ಟು ಅಭಿವೃದ್ಧಿಯಾಗುತ್ತಿದೆ. ಹೋಟೆಲ್ ನಿರ್ಮಾಣ ಮಾಡಲು ಅನುಮತಿ ಸಿಕ್ಕಿದೆ. ಹೊರಗಡೆಯಿಂದ ಬರುವ ಪ್ರವಾಸಿಗರಿಗೆ ಹೋಟೆಲ್ ಅವಶ್ಯಕತೆ ಇತ್ತು. ಆದಷ್ಟು ಬೇಗ ಕಾಮಗಾರಿ ಮುಗಿಯಬೇಕು. ಶಿವಮೊಗ್ಗ ಸಮಗ್ರ ಪ್ರವಾಸಿ ತಾಣವಾಗಬೇಕು ಎಂದಿದ್ದಾರೆ.

ಪ್ರವಾಸಿಗರು ಬಂದಾಗ ಎಲ್ಲಾ ರೀತಿಯ ಸೌಲಭ್ಯಗಳು ಇಲ್ಲಿ ಸಿಗಬೇಕು. ನೋವಿನ ಸಂಗತಿ ಎಂದರೆ ಪ್ರವಾಸೋದ್ಯಮ ಇಲಾಖೆ ಸಕ್ರೆಬೈಲು ಅಭಿವೃದ್ಧಿಯ 60 ಕೋಟಿ ರು. ಹಣ ವಾಪಸ್ ಪಡೆದಿದೆ. ಜೋಗದ ಅಭಿವೃದ್ಧಿಗೆ 180 ಕೋಟಿ ರು. ಹಣ ಹಿಂದಿನ ಸರಕಾರ ಬಿಡುಗಡೆ ಮಾಡಿತ್ತು. ಈಗ ಕೇವಲ 80 ಕೋಟಿ ರು. ಮಾತ್ರ ಹಣ ಬಿಡುಗಡೆ ಮಾಡಿದ್ದಾರೆ. 100 ಕೋಟಿ ರು. ಬಿಡುಗಡೆ ಆಗಬೇಕಿದೆ. ಅಲ್ಲಮಪ್ರಭು ಜನ್ಮಸ್ಥಳ, ಚಂದ್ರಗುತ್ತಿ ಅಭಿವೃದ್ಧಿ ಹಣ ಹಿಂಪಡೆದಿದ್ದಾರೆ. ಪ್ರವಾಸೋದ್ಯಮ ಸಚಿವರಿಗೆ ಹಣ ಬಿಡುಗಡೆ ಮಾಡುವಂತೆ ಮನವಿ ಮಾಡುತ್ತೇನೆ ಎಂದಿದ್ದಾರೆ.

ವಿಶ್ವವಾಣಿ

ಸಂಪಾದಕೀಯ

ವಿಶ್ವಗುರು ಆಗುವತ್ತ ಭಾರತ

ಮುಂದಿನ 20 ವರ್ಷಗಳಲ್ಲಿ ಭಾರತವು ವಿಶ್ವಶ್ರೇಷ್ಠ ಎನಿಸಿಕೊಳ್ಳಲಿದ್ದು, ಆರ್ಥಿಕವಾಗಿಯೂ ಮೊದಲ ಸ್ಥಾನಕ್ಕೇರಲಿದೆ ಎಂಬ ವಿಶ್ವಾಸವನ್ನು ವ್ಯಕ್ತಪಡಿಸಿದ್ದಾರೆ ರಾಷ್ಟ್ರೀಯ ಸ್ವಯಂಸೇವಕ ಸಂಘದ ಮುಖ್ಯಸ್ಥರಾದ ಮೋಹನ್ ಭಾಗವತ್ ಅವರು. ಈ ಮಾತಿಗೆ ಪುಷ್ಟಿ ನೀಡುವ ರೀತಿಯಲ್ಲಿ ಅಥವಾ ಅಂಥದೊಂದು ಪಯಣದ ಒಂದು ಭಾಗವೆಂಬಂತೆ, ಎಲಾನ್ ಮಸ್ಕ್ ಒಡೆತನದ ಸ್ಪೇಸ್ ಎಕ್ಸ್ ಸಂಸ್ಥೆಯೊಂದಿಗೆ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯು (ಇಸ್ರೋ) ಮಹತ್ವದ ಒಡಂಬಡಿಕೆಯೊಂದನ್ನು ಮಾಡಿಕೊಂಡಿದೆ. ಇದರನ್ವಯ, ಇಸ್ರೋ ಅಭಿವೃದ್ಧಿಪಡಿಸಿರುವ 'ಜಿಸ್ಯಾಟ್-20' ಎಂಬ ಅತ್ಯಾಧುನಿಕ ಸಂವಹನಾ ಉಪಗ್ರಹವನ್ನು, ಸ್ಪೇಸ್ ಎಕ್ಸ್ ಸಂಸ್ಥೆಯ 'ಫಾಲ್ಕನ್-9' ವಾಹಕವು ಉಡಾವಣೆ ಮಾಡಲಿದ್ದು, ಈ ಕಾರ್ಯವು ಅಮೆರಿಕದ ಕೇಪ್ ಕೆನವರಾಲ್‌ನಿಂದ ನಡೆಯಲಿದೆ. ದೂರದ ಪ್ರದೇಶಗಳಿಗೆ ಅಂತರ್ಜಾಲ ಸಂಪರ್ಕ ಸೇರಿದಂತೆ ಭಾರತದ ಉದ್ದಗಲಕ್ಕೂ ಹಲವು ಪ್ರಮುಖ ಸೇವೆಗಳನ್ನು ಒದಗಿಸುವುದು 'ಜಿಸ್ಯಾಟ್-20' ಸಂವಹನಾ ಉಪಗ್ರಹದ ವೈಶಿಷ್ಟ್ಯವಾಗಿದೆ ಎಂಬುದು ಗಮನಿಸಬೇಕಾದ ಸಂಗತಿ. ಒಂದು ಕಾಲಕ್ಕೆ 'ಹಾವಾಡಿಗರ ದೇಶ' ಎಂದು ಅವರಿವರಿಂದ ಗೇಲಿಗೊಳಗಾಗಿದ್ದ ಭಾರತವು ಇಂದು ವಿಜ್ಞಾನ, ತಂತ್ರಜ್ಞಾನ, ಬಾಹ್ಯಾಕಾಶ ವಿಜ್ಞಾನ ಸೇರಿದಂತೆ ಹಲವು ಕಾರ್ಯಕ್ಷೇತ್ರಗಳಲ್ಲಿ ಸ್ಪಷ್ಟವಾದ ಛಾಪನ್ನು ಮೂಡಿಸುತ್ತಿದೆ, ತನ್ಮೂಲಕ ವಿಶ್ವಭೂಪಟದಲ್ಲಿನ ತನ್ನ ಹೆಸರನ್ನು ಇನ್ನಷ್ಟು ಉಜ್ವಲವಾಗಿಸಿಕೊಂಡಿದೆ. ಬಾಹ್ಯಾಕಾಶ ವಲಯವನ್ನೇ ಉಲ್ಲೇಖಿಸುವುದಾದರೆ, 'ಮಂಗಳ ಕಕ್ಷಾಯಾನ'ಕ್ಕೆ ಇಸ್ರೋ ಮುಂದಾದಾಗ ಒಂದಿಡೀ ವಿಶ್ವವು ಭಾರತದೆಡೆಗೆ ತಿರುಗಿ ನೋಡುವಂತಾಯಿತು. ಈ ಸಾಧನೆಯ ಮುಂದುವರಿದ ಭಾಗವೆಂಬಂತೆ, 'ಚಂದ್ರಯಾನ-3' ಯೋಜನೆಯು ಯಶಸ್ವಿಯಾದಾಗ ಭಾರತೀಯರು ಮತ್ತಷ್ಟು ಹೆಮ್ಮೆಯಿಂದ ಬೀಗುವಂತಾಯಿತು. ಏಕೆಂದರೆ, ಅತ್ಯಂತ ಕ್ಲಿಷ್ಟ ಎನ್ನಲಾಗುವ, ಚಂದ್ರನ ದಕ್ಷಿಣ ಧ್ರುವದಲ್ಲಿ ಬಾಹ್ಯಾಕಾಶ ನೌಕೆಯೊಂದನ್ನು ಇಳಿಸುವ ಸವಾಲನ್ನು ಇಸ್ರೋ ಅತ್ಯಂತ ಯಶಸ್ವಿಯಾಗಿ ನಿರ್ವಹಿಸಿತು. ಇದೇ ರೀತಿಯಲ್ಲಿ, ಮಿಕ್ಕ ಕಾರ್ಯಕ್ಷೇತ್ರಗಳಲ್ಲೂ ಕಾರ್ಯಕ್ಷಮತೆ ಮತ್ತು ಬದ್ಧತೆಗಳು ಕೆನೆಗಟ್ಟಿದರೆ, ವಿಶ್ವದ ಬೃಹತ್ ಆರ್ಥಿಕ ಶಕ್ತಿ ಎನಿಸಿಕೊಳ್ಳುವುದರ ಜತೆಜತೆಗೆ ಮತ್ತಷ್ಟು ವಿಕ್ರಮಗಳನ್ನು ಭಾರತವು ಸಾಧಿಸಿ 'ವಿಶ್ವಗುರು' ಎನಿಸಿಕೊಳ್ಳುವ ದಿನಗಳು ದೂರವಿಲ್ಲ.

ಸೊಂಪಾದಕೀಯ

ಮಾರ್ಟಿನ್ ಬಾಡಿಗೆಗೆ!

ಕನ್ನಡ ಚಿತ್ರರಂಗದ ಅತಿ ನಿರೀಕ್ಷಿತ ಸಿನಿಮಾ ಎಂದು ಹವಾ ಎಬ್ಬಿಸಿದ್ದ ಧ್ರುವ ಸರ್ಜಾ ಅಭಿನಯದ 'ಮಾರ್ಟಿನ್' ಸಿನಿಮಾ ಈಗ ಒಟಿಟಿಗೆ ಬರಲು ಸಜ್ಜಾಗಿದೆ. ಧ್ರುವ ಅವರ 'ಬಾಡಿ' ಇಂದಲೇ ಹೆಚ್ಚು ಹೆಸರು ಮಾಡಿದ್ದ ಈ ಸಿನಿಮಾ ಈಗ ಅಮೆಜಾನ್ ಪ್ರೈಮ್‌ನಲ್ಲಿ 'ಬಾಡಿಗೆಗೆ' ಲಭ್ಯವಿದೆ. ಅಂದ ಹಾಗೆ, ಇದು ಅಮೆರಿಕದಲ್ಲಿ ಮಾತ್ರ. ಭಾರತದ ಪ್ರೇಕ್ಷಕರಿಗೆ ಒಟಿಟಿಯಲ್ಲಿ ಮಾರ್ಟಿನ್ ದರ್ಶನ ಆಗಲು ಇನ್ನೂ ತಡವಾಗಬಹುದು. ಭಾರತದಲ್ಲಿ ಅದ್ದೂರಿಯಾಗಿ ತೆರೆಕಂಡಿದ್ದ ಈ ಸಿನಿಮಾ ಬಾಕ್ಸ್ ಆಫೀಸ್‌ನಲ್ಲಿ ಸದ್ದೇನೂ ಮಾಡಲಿಲ್ಲ. ಧ್ರುವ ಅವರ 'ಬಾಡಿ' ಸದ್ದು ಮಾಡಿದರೂ ಚಿತ್ರಮಂದಿರಗಳಲ್ಲಿ ಬಿಡುಗಡೆಯಾದ ಕೆಲವೇ ದಿನಗಳ ನಂತರ ನಿರ್ಮಾಪಕರಿಗೆ ಚಿತ್ರಮಂದಿರದ 'ಬಾಡಿಗೆ'ಯೂ ಗಿಟ್ಟಲಿಲ್ಲ. ಚಿತ್ರ ಚೆನ್ನಾಗಿಲ್ಲ ಎಂದು ವಿಮರ್ಶೆ ಮಾಡಿದವರ ಮೇಲೆ ಚಿತ್ರತಂಡ ಆರ್ಭಟ-ಅಬ್ಬರ ತೋರಿಸಿದ್ದು ಬಿಟ್ಟರೆ, ಅದೇ ರೀತಿಯ ಆರ್ಭಟ-ಅಬ್ಬರ ಚಿತ್ರಮಂದಿರಗಳಲ್ಲಿ ಕಂಡುಬರಲಿಲ್ಲ. ಹಾಗಾಗಿ ಕೋಟಿಗಟ್ಟಲೆ ದುಡ್ಡು ಹಾಕಿ ಸಿನಿಮಾ ಮಾಡಿದ ನಿರ್ಮಾಪಕರಿಗೆ ಈ ಸಿನಿಮಾದಿಂದ ಹಣ ಬಂದಿದ್ದು ಅಷ್ಟರಲ್ಲೇ ಇದೆ. ಮೂಲಗಳ ಪ್ರಕಾರ 100 ಕೋಟಿ ರು. ಬಜೆಟ್‌ನ ಚಿತ್ರ ಎಂದು ಪ್ರಚಾರ ಪಡೆದುಕೊಂಡಿತ್ತು ಮಾರ್ಟಿನ್. ಅಷ್ಟೇ ಅಲ್ಲದೆ ಬಿಡುಗಡೆಗೆ ಮುನ್ನ ಪ್ರಪಂಚದ ಎಲ್ಲ ಕಡೆಯಿಂದಲೂ ಪತ್ರಕರ್ತರನ್ನು ಕರೆಸಿ ಚಿತ್ರಕ್ಕೆ ಅದ್ದೂರಿಯಾಗಿ ಪ್ರಚಾರ ಮಾಡಲಾಗಿತ್ತು. ಆದರೆ ಚಿತ್ರದ ಬಿಡುಗಡೆಯ ನಂತರ ಈ ರೀತಿ ಪ್ರಚಾರ ಮಾಡಿದ್ದು, ತಮ್ಮ ದಡ್ಡತನವನ್ನು ತಾವೇ ಜಗತ್ತಿನಾದ್ಯಂತ ಸಾರಿಕೊಂಡಂತೆ ಕಂಡಿದ್ದು ಸುಳ್ಳಲ್ಲ. ನಿರ್ಮಾಪಕ ಉದಯ್ ಮೆಹತ ಈ ಚಿತ್ರದ ಮೂಲಕ ಕೋಟಿಗಟ್ಟಲೆ ಹಣ ಕಳೆದುಕೊಂಡಿದ್ದು, ಈಗ ಒಟಿಟಿಯಲ್ಲಾದ್ರೂ ಜನ ಈ ಸಿನಿಮಾ ನೋಡಿದರೆ ಸಾಕು ಅಂತ ಕಾದು ಕುಳಿತಿದ್ದಾರೆ. ಆದರೆ ಚಿತ್ರಮಂದಿರಗಳಲ್ಲಿ 'ಭೈರತಿ ರಣಗಲ್' ಚಿತ್ರದ ಹವಾ ನೋಡಿದರೆ, ಒಟಿಟಿಯಲ್ಲೂ 'ಮಾರ್ಟಿನ್' ಸಿನಿಮಾ ನೋಡಲು ಜನ ಕಾದು ಕುಳಿತಿರುವುದು ಅನುಮಾನವೇ ಸರಿ. ಧ್ರುವ ಸರ್ಜಾ ಅವರ ಕೆರಿಯರ್‌ನ ಅತಿ ದೊಡ್ಡ ಸಿನಿಮಾ ಅಂತಾನೆ ಹೆಸರು ಮಾಡಿದ್ದ 'ಮಾರ್ಟಿನ್', ಅವರ ಕೆರಿಯರ್‌ಗೆ ಕರಿಚುಕ್ಕೆಯಂತೆ ಆಗಿದ್ದು ಬಿಟ್ಟರೆ ಚಿತ್ರಮಂದಿರಗಳಲ್ಲಿ ಇನ್ನೇನೂ ಸಾಧನೆ ಮಾಡಿಲ್ಲ. ಈಗ ಒಟಿಟಿಯಲ್ಲಿ ಏನಾಗುತ್ತದೆ ಅಂತ ಕಾದು ನೋಡಬೇಕಾಗಿದೆ.

ಸಂಪಾದಕರ ಸದ್ಯಶೋಧನೆ

ದುಬೈನ ಮಾಲ್‌ಗಳು

ಆಗ್ರಾಕ್ಕೆ ಹೋದವರು ತಾಜ್‌ಮಹಲ್ ನೋಡಿಯೇ ಮರಳುತ್ತಾರೆ. ಅಷ್ಟಕ್ಕೂ ಅಲ್ಲಿಗೆ ಹೋಗುವುದೇ ಅದಕ್ಕೆ. ಹಾಗೆಯೇ ಮಂತ್ರಾಲಯಕ್ಕೆ ಹೋದವರು ಗುರು ರಾಘವೇಂದ್ರರ ಬೃಂದಾವನವನ್ನು ನೋಡದೇ ವಾಪಸ್ ಬರುವುದಿಲ್ಲ. ಅದೇ ರೀತಿ ದುಬೈಗೆ ಹೋದವರು ಅಲ್ಲಿನ ಬೃಹತ್ ಮಾಲ್‌ಗಳಿಗೆ ಭೇಟಿ ನೀಡದೇ ಮರಳುವುದು ಸಾಧ್ಯವೇ ಇಲ್ಲ. ಅನೇಕರಿಗೆ ಬೇರೇನೂ ಕೆಲಸವಿಲ್ಲ, ಮಾಲ್‌ಗಳಲ್ಲಿ ಶಾಪಿಂಗ್ ಮಾಡಲೆಂದೇ ದುಬೈಗೆ ಹೋಗುತ್ತಾರೆ. ಅಲ್ಲಿ ನೋಡಲು ಸಾಕಷ್ಟು ಸ್ಥಳಗಳಿವೆ. ಆದರೆ ಅಲ್ಲಿನ ಲಕ್ಷುರಿ ಮಾಲ್‌ಗಳಿಗೆ ಹೋಗದೇ ಯಾರೂ ಬರುವುದಿಲ್ಲ. ಬರೀ ಮಾಲ್‌ಗಳನ್ನು ನೋಡುತ್ತಾ ಹತ್ತು ದಿನ ಕಳೆದುಬಿಡಬಹುದು. ಆದರೂ ಎಲ್ಲ ಮಾಲ್‌ಗಳನ್ನು ನೋಡಲು ಸಾಧ್ಯವಿಲ್ಲ. ಕೆಲವು ಮಾಲ್‌ನಲ್ಲಿ ಏನೂ ಖರೀದಿಸದೇ, ಸುಮ್ಮನೆ ಎಲ್ಲ ಅಂಗಡಿಗಳನ್ನು ನೋಡುತ್ತಾ ಒಂದು ಸುತ್ತು ಹಾಕಲು ಒಂದೆರಡು ದಿನಗಳಾದರೂ ಬೇಕು. ದುಬೈ ವಿಶ್ವದ ಪ್ರಮುಖ ಶಾಪಿಂಗ್ ಕೇಂದ್ರಗಳಲ್ಲಿ ಒಂದಾಗಿದ್ದು, ಇಲ್ಲಿನ ಮಾಲ್‌ಗಳು ವೈಶಿಷ್ಟ್ಯಪೂರ್ಣ ಹಾಗೂ ಆಕರ್ಷಣೆಯ ಕೇಂದ್ರಗಳಾಗಿವೆ. ದುಬೈನಲ್ಲಿ ಹಲವಾರು ದೊಡ್ಡ ಮತ್ತು ಅತ್ಯಾಧುನಿಕ ಶಾಪಿಂಗ್ ಮಾಲ್‌ಗಳಿದ್ದು ಇವು ಪ್ರತಿ ವಯೋಮಾನದವರಿಗೆ ಆಕರ್ಷಕವಾಗಿವೆ. ದುಬೈನ ಶೇಖ್ ಝಾಯದ್ ರಸ್ತೆ ಬಳಿ, ಬುರ್ಜ್ ಖಲೀಫಾದ ಪಕ್ಕದಲ್ಲಿರುವ ದುಬೈ ಮಾಲ್ (The Dubai Mall) ವಿಶ್ವದ ಅತಿದೊಡ್ಡ ಮಾಲ್‌ಗಳಲ್ಲಿ ಒಂದು. ಇದು ಸುಮಾರು 50 ಫುಟ್ಬಾಲ್ ಕ್ರೀಡಾಂಗಣಕ್ಕೆ ಸಮ. ಇಲ್ಲಿ ಏನಿಲ್ಲವೆಂದರೂ 1,200ಕ್ಕೂ ಹೆಚ್ಚು ಅಂಗಡಿಗಳಿವೆ. ಬೃಹತ್ ಅಕ್ವೇರಿಯಂ ಮತ್ತು ಅಂಡರ್‌ವಾಟರ್ ಝೂ ಇಲ್ಲಿನ ಪ್ರಮುಖ ಆಕರ್ಷಣೆ. ಒಲಿಂಪಿಕ್ ಗಾತ್ರದ ಐಸ್ ರಿಂಕ್ (Ice Rink), ವಿಆರ್ ಪಾರ್ಕ್, ಕಿಡ್ಜಾನಿಯಾ, ಬಾಸ್ಕೆಟ್‌ಬಾಲ್ ಕೋರ್ಟ್ ಸೇರಿದಂತೆ ಹಲವು ಆಕರ್ಷಣೆಗಳಿವೆ. ಈ ಮಾಲ್‌ನಲ್ಲಿರುವ ಫ್ಯಾಶನ್ ಅವೆನ್ಯೂನಲ್ಲಿ ಜಗತ್ತಿನ ಲಕ್ಷುರಿ ಬ್ರ್ಯಾಂಡ್ ವಸ್ತುಗಳೆಲ್ಲ ಸಿಗುತ್ತವೆ. ಜಗತ್ತಿನ ಅತಿ ಗಣ್ಯ ವ್ಯಕ್ತಿಗಳನ್ನು, ಸಿನಿಮಾ ನಟ-ನಟಿಯರನ್ನು ಅಲ್ಲಿ ನೋಡಬಹುದು. ಇತ್ತೀಚೆಗೆ ನಾನು ಅಲ್ಲಿ ಓಡಾಡುವಾಗ ಪಾಕಿಸ್ತಾನದ ಮಾಜಿ ಪ್ರಧಾನಿ ನವಾಜ್ ಷರೀಫ್ ತಮ್ಮ ಕುಟುಂಬ ಸದಸ್ಯರೊಂದಿಗೆ ಕಾಫಿ ಕುಡಿಯುತ್ತಿದ್ದರು. ಪ್ರತಿದಿನ ದುಬೈ ಮಾಲ್‌ಗೆ ಕನಿಷ್ಠ 1 ಲಕ್ಷ ಜನರಾದರೂ ಭೇಟಿ ನೀಡುತ್ತಾರೆ. ಪ್ರತಿವರ್ಷ ಸುಮಾರು 75 ದಶಲಕ್ಷ ಜನ ಅಲ್ಲಿಗೆ ಭೇಟಿ ನೀಡುತ್ತಾರಂತೆ. ಅಲ್ಲಿ ಸುಮಾರು 14,000 ಕಾರುಗಳ ಪಾರ್ಕಿಂಗ್‌ಗೆ ಅವಕಾಶ ಕಲ್ಪಿಸಲಾಗಿದೆ. ದುಬೈ ಮಾಲ್‌ನಲ್ಲಿ ಜಗತ್ತಿನಲ್ಲಿಯೇ ದೊಡ್ಡದಾದ ಕ್ಯಾಂಡಿ ಶಾಪ್ ಇದೆ. ಅದನ್ನು 10 ಸಾವಿರ ಚದರಡಿ ಜಾಗದಲ್ಲಿ ನಿರ್ಮಿಸಲಾಗಿದೆ. ದುಬೈ ಮಾಲ್ ಅನ್ನು ಕೇವಲ ಮಾಲ್ ಎಂದು ಕರೆದರೆ ಅಪಚಾರವಾದೀತು. ಅದೇ ಒಂದು ಪ್ರೇಕ್ಷಣೀಯ ತಾಣ (Destination). Mall of the Emirates ಎಂಬ ಶಾಪಿಂಗ್ ಮಾಲ್‌ನಲ್ಲಿ 600ಕ್ಕೂ ಹೆಚ್ಚು ಅಂಗಡಿಗಳಿವೆ. ಫ್ಯಾಶನ್, ಇಲೆಕ್ಟ್ರಾನಿಕ್ಸ್, ಜ್ಯುವೆಲ್ಲರಿ ಮತ್ತು ಅಂತಾ ರಾಷ್ಟ್ರೀಯ ಬ್ರ್ಯಾಂಡ್‌ಗಳು ಅಲ್ಲಿ ಲಭ್ಯ. ಉಷ್ಣಪ್ರದೇಶದಲ್ಲಿರುವ ಮೊದಲ ಆಂತರಿಕ ಹಿಮಾಲಯ ಪಾರ್ಕ್- ಸ್ಕಿ ದುಬೈ ಮತ್ತು ಹಲವಾರು ಅತಿಥಿ ಹೋಟೆಲ್‌ಗಳು ಹಾಗೂ ಉತ್ಕೃಷ್ಟ ರೆಸ್ಟೋರೆಂಟ್‌ಗಳು ಅಲ್ಲಿವೆ. ದುಬೈ ಮರೀನಾ ಮಾಲ್ 'ಫ್ಯಾಮಿಲಿ ಮಾಲ್' ಎಂದು ಕರೆಯಿಸಿಕೊಂಡಿದೆ. ಹಲವಾರು ರೆಸ್ಟೋರೆಂಟ್‌ಗಳು ಮತ್ತು ಕಾಫಿ ಶಾಪ್‌ಗಳಿರುವ ಈ ಮಾಲ್‌ನಲ್ಲಿ ಸುಮಾರು 140 ಅಂಗಡಿಗಳಿವೆ. ಇಬ್ನ್ ಬಟೂಟಾ ಮಾಲ್ ಅನ್ನು ಐತಿಹಾಸಿಕ ಪಠ್ಯಗಳಲ್ಲಿ ಪ್ರೇರಿತವಾಗಿರುವ ವಿವಿಧ ಥೀಮ್‌ಗಳ ಮೇಲೆ ವಿನ್ಯಾಸಗೊಳಿಸಲಾಗಿದೆ. 270ಕ್ಕೂ ಹೆಚ್ಚು ಅಂಗಡಿಗಳಿರುವ ಅಲ್ಲಿ ಚೀನಾ, ಇಂಡಿಯಾ, ಪರ್ಷಿಯಾ, ಅರೇಬಿಯಾ, ಇಜಿಪ್ಟ್‌ಗಳ ಪ್ರತಿಕೃತಿಯನ್ನು ನಿರ್ಮಿಸಲಾಗಿದೆ. ದುಬೈ ಕ್ರೀಕ್ ಬಳಿ ಇರುವ ಫೆಸ್ಟಿವಲ್ ಸಿಟಿ ಮಾಲ್, ಹೈಪರ್ ಮಾರ್ಕೆಟ್‌ಗಳು ಮತ್ತು ಪ್ರಸಿದ್ಧ ರೆಸ್ಟೋರೆಂಟ್‌ಗಳಿಗೆ ಪ್ರಸಿದ್ಧ. ಇವಲ್ಲದೇ ಸಿಟಿ ಸೆಂಟರ್ ದೇರಾ, ಮಿರ್ಡಿಫ್ ಸಿಟಿ ಸೆಂಟರ್, ದುಬೈ ಔಟ್‌ಲೆಟ್ ಮಾಲ್, ವಾಫಿ ಸಿಟಿ ಮಾಲ್, ಬುರ್ಜುಮನ್ ಸೆಂಟರ್, ಮೆರ್ಕ್ಯಾಟೋ ಶಾಪಿಂಗ್‌ಮಾಲ್ ಸಹ ಪ್ರಮುಖ ಮಾಲ್‌ಗಳಾಗಿವೆ.

ಜೆಡಿಎಸ್ ಸಾರಥಿಯಾಗಲು ನಿಖಿಲ್ ರೆಡಿ

ಮೂರ್ತಿಪೂಜೆ

ಆರ್.ಟಿ.ವಿಠ್ಠಲಮೂರ್ತಿ
vveditoped@gmail.com

ಕಳೆದ ಶುಕ್ರವಾರ ರಾಜ್ಯ ಬಿಜೆಪಿಯ ಕೆಲ ನಾಯಕರು ಡಾಲರ್ಸ್ ಕಾಲನಿಯಲ್ಲಿರುವ ಯಡಿಯೂರಪ್ಪ ಅವರ ನಿವಾಸಕ್ಕೆ ಹೋಗಿದ್ದಾರೆ. ಹೀಗೆ ಹೋದವರು ಪಕ್ಷದ ಭಿನ್ನಮತೀಯರು ಇಡುತ್ತಿರುವ ಹೆಜ್ಜೆಗಳ ಬಗ್ಗೆ ಆಕ್ರೋಶ ವ್ಯಕ್ತಪಡಿಸಿದ್ದಾರೆ. ''ಏನ್ ಸರ್, ಈ ಯತ್ನಾಳ್, ಲಿಂಬಾವಳಿ ಅವರೆಲ್ಲ ಸೇರಿ ವಕ್ಫ್ ಗೋಜಲಿನ ವಿರುದ್ಧ ಯಾತ್ರೆ ಮಾಡಲು ನಿರ್ಧರಿಸಿದ್ದಾರೆ. ಇವತ್ತು ಅಧ್ಯಕ್ಷರು ಘೋಷಿಸಿರುವ ಹೋರಾಟಕ್ಕೆ ಪ್ರತಿಯಾಗಿ ಇವರ ಹೋರಾಟ ಶುರುವಾದರೆ ಪಕ್ಷದ ಗತಿಯೇನು? ಇವರಿಗ್ಯಾರೂ ಹೇಳುವವರು ಕೇಳುವವರೇ ಇಲ್ಲವೇ?'' ಅಂತ ಈ ನಾಯಕರು ಕೇಳಿದಾಗ ಯಡಿಯೂರಪ್ಪ ಮೌನವಾಗಿದ್ದರಂತೆ.

ಆಗ ಮಾತು ಮುಂದುವರಿಸಿದ ಈ ನಾಯಕರು, ''ಒಂದು ಪಕ್ಷದಲ್ಲಿ ಈ ರೀತಿ ಎರಡು ಬಣಗಳು ಕಂಡರೆ ನಮ್ಮ ಹೋರಾಟಕ್ಕೆ ಅರ್ಥವೇ ಇಲ್ಲ. ಎಲ್ಲಕ್ಕಿಂತ ಮುಖ್ಯವಾಗಿ ಈ ಯತ್ನಾಳ್, ಜಾರಕಿಹೊಳಿ, ಲಿಂಬಾವಳಿಯಂಥವರ ಪಕ್ಷ ವಿರೋಧಿ ಚಟುವಟಿಕೆಯನ್ನು ಹತ್ತಿಕ್ಕುವ ಕೆಲಸವಾಗದಿದ್ದರೆ ನಾವು ಮುಂದುವರಿಯುವುದು ಹೇಗೆ?'' ಎಂದು ಪ್ರಶ್ನಿಸಿದ್ದಾರೆ.

ಈ ವೇಳೆ ಮೌನಮುರಿದ ಯಡಿಯೂರಪ್ಪ, ''ನಿಜ, ಇವರದೆಲ್ಲ ಅತಿಯಾಗಿದೆ. ಹಾಗಂತ ನಾನು ಪಕ್ಷದ ರಾಷ್ಟ್ರೀಯ ಅಧ್ಯಕ್ಷ ನಡ್ಡಾ ಅವರಿಗೆ ಹಲವು ಬಾರಿ ಹೇಳಿದ್ದೇನೆ. ಹೀಗೆ ಅಪಸ್ವರ ಎತ್ತುತ್ತಿರುವವರಿಗೆ ವಾರ್ನ್ ಮಾಡಿ, ಇಲ್ಲವೇ ಪಕ್ಷದಿಂದ ಉಚ್ಚಾಟಿಸಿ ಅಂತ ಹೇಳಿದ್ದೇನೆ. ನಾನು ಹೇಳಿದಾಗಲೆಲ್ಲ ಅವರು 'ಡೋಂಟ್ ವರಿ, ಯತ್ನಾಳ್, ಜಾರಕಿಹೊಳಿ ಅವರಿಗೆಲ್ಲ ನಾನು ವಾರ್ನ್ ಮಾಡುತ್ತೇನೆ' ಅನ್ನುತ್ತಾರೆ. ಅವರು ಹಾಗೆ ವಾರ್ನ್ ಮಾಡಿದ ಮೇಲೆ ಇವರೂ ನಾಲ್ಕು ದಿನ ಸುಮ್ಮನಿರುತ್ತಾರೆ. ಆಮೇಲೆ ಯಥಾಪ್ರಕಾರ ಅಪಸ್ವರ ಎತ್ತುತ್ತಾರೆ. ಹೀಗಾಗಿ ಹೇಳಿ ಹೇಳಿ ನನಗೂ ಬೇಸತ್ತುಹೋಗಿದೆ'' ಎಂದಿದ್ದಾರೆ.

ಯಡಿಯೂರಪ್ಪ ಅವರ ಮಾತಿನಲ್ಲಿದ್ದ ನೋವನ್ನು ಗಮನಿಸಿದ ಈ ನಾಯಕರು, ''ಸರ್, ಇದೆಲ್ಲ ಆ ಸಂಘಪರಿವಾರದ ಲೀಡರ್ ಕೊಟ್ಟಿರುವ ಕುಮ್ಮಕ್ಕು. ಇದು ಹೀಗೇ ಮುಂದುವರಿಯಲು ಬಿಟ್ಟರೆ ನಾಳೆ ಯತ್ನಾಳ್, ಜಾರಕಿಹೊಳಿ, ಲಿಂಬಾವಳಿ ಇವರೆಲ್ಲ ವಿಜಯೇಂದ್ರರ ಕೈಕಟ್ಟಿ ಹಾಕುತ್ತಾರೆ. ಹಾಗಂತ ಈ ಆಟವನ್ನು ಎಷ್ಟು ದಿನ ಅಂತ ಸಹಿಸಿಕೊಳ್ಳೋದು? ಹೀಗಾಗಿ ನೀವು ನಮಗೆ ಪರ್ಮಿಷನ್ ಕೊಡಿ. ನಾವು 20-30 ಮಂದಿ ದಿಲ್ಲಿಗೆ ಹೋಗಿ ಪಕ್ಷದ ರಾಷ್ಟ್ರೀಯ ಅಧ್ಯಕ್ಷರು ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾರನ್ನು ಭೇಟಿಯಾಗಿ ದೂರು ಕೊಡುತ್ತೇವೆ. ಒಂದೋ ಈ ಭಿನ್ನಮತೀಯರ ಬಾಯನ್ನು ಅವರು ಮುಚ್ಚಿಸಲಿ. ಇಲ್ಲವೇ ಪಕ್ಷದಿಂದ ಉಚ್ಚಾಟಿಸಲಿ'' ಎಂದಿದ್ದಾರೆ.

ಆದರೆ ಈ ನಾಯಕರ ಮಾತಿಗೆ ಯಡಿಯೂರಪ್ಪ ಅವರು, ''ನೋ ನೋ, ಹಾಗೆಲ್ಲ ನಿಯೋಗದಲ್ಲಿ ಹೋಗಿ ದೂರು ಕೊಡೋದು ಸರಿಯಲ್ಲ. ಹಾಗೇನಾದ್ರೂ ಹೋದ್ರೆ ಪಕ್ಷದ ಒಳಜಗಳದ ಬಗ್ಗೆ ನಾವೇ ವಿಪಕ್ಷದವರಿಗೆ ಮೆಸೇಜು ಕೊಟ್ಟಂತಾಗುತ್ತದೆ'' ಅಂದಿದ್ದಾರೆ. ಯಾವಾಗ ಯಡಿಯೂರಪ್ಪ ಈ ಮಾತು ಹೇಳಿದರೋ, ಅಲ್ಲಿದ್ದ ನಾಯಕರಿಗೆ ಮತ್ತಷ್ಟು ಬೇಸರವಾಗಿದೆ. ಹಾಗಂತಲೇ ಅವರು, ''ಸರ್, ಈ ಭಿನ್ನಮತೀಯರನ್ನು ಈಗಲೇ ಕಂಟ್ರೋಲಿಗೆ ತರದಿದ್ದರೆ, ವಿಜಯೇಂದ್ರರನ್ನು ಅಧ್ಯಕ್ಷ ಸ್ಥಾನದಿಂದ ಕೆಳಗಿಳಿಸಿ ಅಂತ ನಾಳೆ ಬಹಿರಂಗವಾಗಿಯೇ ಹೋರಾಟ ಶುರುಮಾಡ್ತಾರೆ. ಹೀಗಾಗಿ ಅವರ ಆಟಕ್ಕೆ ಪ್ರತಿಹೋರಾಟ ಶುರುಮಾಡದಿದ್ದರೆ ಕಷ್ಟ. ಅಂದ ಹಾಗೆ, ಈ ಯತ್ನಾಳ್ ಅವರೆಲ್ಲ ತಮ್ಮಿಚ್ಛೆಯಂತೆ ಯಾತ್ರೆ ಶುರುಮಾಡಿದರು ಅಂತಿಟ್ಟುಕೊಳ್ಳಿ. ಆಮೇಲೆ ಅದನ್ನು ನಿಲ್ಲಿಸಲು ಸಾಧ್ಯವಿಲ್ಲ. ಒಂದೊಮ್ಮೆ ಈ ಯಾತ್ರೆ ನಡೆದೇಹೋದರೆ, ಆಗ ವಿಜಯೇಂದ್ರರ ನಾಯಕತ್ವಕ್ಕೆ ಪವರ್ರು ಇರುವುದಿಲ್ಲ'' ಅಂದಿದ್ದಾರೆ. ಆಗ ಯಡಿಯೂರಪ್ಪ, ''ಇಲ್ಲ ಇಲ್ಲ, ಅವರ ಯಾತ್ರೆ ನಡೆಯುವುದಿಲ್ಲ. ನಾನು ಕೂಡಾ ನಡ್ಡಾ ಅವರಿಗೆ ಈ ಕುರಿತು ಸ್ಪಷ್ಟವಾಗಿ ಹೇಳಿದ್ದೇನೆ. ಅವರು ಕೂಡಾ, ಈ ಯಾತ್ರೆ ನಡೆಯುವುದಿಲ್ಲ. ಕ್ಯಾನ್ಸಲ್ ಮಾಡಿಸುತ್ತೇನೆ ಅಂತ ಪ್ರಾಮಿಸ್ಸು ಮಾಡಿದ್ದಾರೆ'' ಅಂತ ವಿವರಿಸಿದ್ದಾರೆ.

• ದಿಲ್ಲಿಗೆ ಧಾವಿಸಲಿದ್ದಾರೆ ನಿಷ್ಠರು

ಹೀಗೆ ಭಿನ್ನಮತೀಯರ ವಿರುದ್ಧ ಆರ್ಭಟಿಸದಂತೆ ಯಡಿಯೂರಪ್ಪ ತಮ್ಮ ನಿಷ್ಠರಿಗೆ ಸೂಚಿಸಿದ್ದಾರಾದರೂ, ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ ಸೇರಿದಂತೆ ಹಲ ನಾಯಕರು ದಿಲ್ಲಿ ಯಾತ್ರೆಗೆ ಅಣಿಯಾಗತೊಡಗಿದ್ದಾರೆ. ಒಂದು ವೇಳೆ ನಿಗದಿತ ಸಮಯಕ್ಕೆ ಯತ್ನಾಳ್ ಆ್ಯಂಡ್ ಗ್ಯಾಂಗ್‌ನ ಯಾತ್ರೆ ಶುರುವಾದರೆ ದಿಲ್ಲಿಗೆ ಹೋಗಿ ವರಿಷ್ಠರಿಗೆ ದೂರು ನೀಡುವುದು ಈ ನಾಯಕರ ಲೆಕ್ಕಾಚಾರ. ಕರ್ನಾಟಕದಲ್ಲಿ ಪಕ್ಷವನ್ನು ಕಟ್ಟಿದವರು, ಇಡೀ ರಾಜ್ಯ ಸುತ್ತಿ ಪಕ್ಷವನ್ನು ಅಧಿಕಾರಕ್ಕೆ ತಂದವರು ಯಡಿಯೂರಪ್ಪ. ಇವತ್ತು ಯಡಿಯೂರಪ್ಪ ಬೇಡ, ವಿಜಯೇಂದ್ರ ಬೇಡ ಅನ್ನುತ್ತಿರುವ ಭಿನ್ನಮತೀಯರ ಪೈಕಿ ಯಾರಿಗೆ ಈ ಶಕ್ತಿ ಇದೆ? ಅದರಲ್ಲೂ ಬಹುತೇಕರಿಗೆ ತಮ್ಮ ಕ್ಷೇತ್ರದಲ್ಲೇ ಶಕ್ತಿಯಿಲ್ಲ. ಉಳಿದವರಿಗೆ ತಮ್ಮ ಕ್ಷೇತ್ರ ಬಿಟ್ಟು ಮತ್ತೊಂದು ಕಡೆ ಪವರ್ ಇಲ್ಲ. ಇಂಥವರನ್ನು ತಕ್ಷಣ ತಡೆಗಟ್ಟಿ. ಇಲ್ಲವೇ ಪಕ್ಷದಿಂದ ಕಿತ್ತೆಸೆಯಿರಿ ಅಂತ ವರಿಷ್ಠರಿಗೆ ಹೇಳಲು ಈ ಪಡೆ ನಿರ್ಧರಿಸಿದೆ.

ಡಿಸೆಂಬರ್ 2ನೇ ವಾರ ಪ್ರಾರಂಭವಾಗಲಿರುವ ವಿಧಾನ ಮಂಡಲ ಅಧಿವೇಶನದ ನಂತರ ದಿಲ್ಲಿ ಯಾತ್ರೆ ನಡೆಸುವುದು ಯಡಿಯೂರಪ್ಪ ಆಪ್ತರ ಲೆಕ್ಕಾಚಾರ. ಹಾಗೊಂದು ವೇಳೆ ಪಕ್ಷದ ವರಿಷ್ಠರು ಯತ್ನಾಳ್ ಆ್ಯಂಡ್ ಗ್ಯಾಂಗಿನ ಯಾತ್ರೆಗೆ ಬ್ರೇಕ್ ಹಾಕಿದರೆ ಯಡಿಯೂರಪ್ಪ ನಿಷ್ಠರ ದಿಲ್ಲಿ ಯಾತ್ರೆಗೂ ಬ್ರೇಕ್ ಬೀಳಲಿದೆ ಎಂಬುದು ಸದ್ಯದ ಮಾಹಿತಿ.

• ಆಪ್ತರ ಅನುಮಾನ ಏನು?

ಅಂದ ಹಾಗೆ, ಯತ್ನಾಳ್ ಸೇರಿದಂತೆ ಭಿನ್ನಮತೀಯರ ವಿರುದ್ಧ ಯಡಿಯೂರಪ್ಪ ಮತ್ತು ವಿಜಯೇಂದ್ರ ಹಲವು ಬಾರಿ ದೂರು ನೀಡಿರುವುದೇನೋ ಸರಿ. ಇಷ್ಟೆಲ್ಲ ಮಾಡಿದರೂ ವರಿಷ್ಠರೇಕೆ ಸುಮ್ಮನಿದ್ದಾರೆ? ಎಂಬುದು ಅವರ ಆಪ್ತರ ಅನುಮಾನ. ಎಲ್ಲಕ್ಕಿಂತ ಮುಖ್ಯವಾಗಿ ಇಷ್ಟು ಬಾರಿ ದೂರು ನೀಡಿದ ಮೇಲೂ ಭಿನ್ನಮತೀಯರ ಧ್ವನಿ ಏನೂ ಅಡಗಿಲ್ಲ. ಬದಲಿಗೆ ವಿಜಯೇಂದ್ರರನ್ನು ಅಧ್ಯಕ್ಷ ಪಟ್ಟದಿಂದ ಕೆಳಗಿಳಿಸುವುದೇ ತಮ್ಮ ಗುರಿ ಎಂಬ ಮೆಸೇಜನ್ನು ಭಿನ್ನರು ರವಾನಿಸುತ್ತಲೇ ಇದ್ದಾರೆ. ಹೀಗೆ ಭಿನ್ನರು ಹೇಳಿದ ಮಾತ್ರಕ್ಕೆ ವರಿಷ್ಠರು ವಿಜಯೇಂದ್ರರನ್ನು ತಕ್ಷಣ ಇಳಿಸುತ್ತಾರೆ ಅಂತೇನೂ ಅಲ್ಲ. ಆದರೆ ಈಗಿನ ಸ್ಥಿತಿ ನೋಡಿದರೆ ವಿಜಯೇಂದ್ರರನ್ನು ಮುಂಬರುವ ವಿಧಾನಸಭಾ ಚುನಾವಣೆಯ ತನಕ ಮುಂದುವರಿಸುವುದು ಡೌಟು ಎಂಬುದು ಈ ಆಪ್ತರ ಯೋಚನೆ.

ಅಂದ ಹಾಗೆ, ಪಕ್ಷದ ರಾಜ್ಯಾಧ್ಯಕ್ಷ ಹುದ್ದೆಯ ಅವಧಿ 2 ವರ್ಷವಾದರೂ ತಮ್ಮನ್ನು ಎರಡನೇ ಅವಧಿಗೂ ಮುಂದುವರಿಸುತ್ತಾರೆ ಅಂತ ವಿಜಯೇಂದ್ರರೇನೋ ನಂಬಿದ್ದಾರೆ. ಹಾಗಂತಲೇ ರಾಜ್ಯಾದ್ಯಂತ ಯುವಕರ ಪಡೆಯನ್ನು ಬಲಿಷ್ಠಗೊಳಿಸುತ್ತಾ ಮುಂಬರುವ ವಿಧಾನಸಭಾ ಚುನಾವಣೆಯ ನೇತೃತ್ವ ತಮ್ಮದೇ ಅಂತ ನಂಬಿದ್ದಾರೆ. ಆದರೆ ದಿಲ್ಲಿ ಲೆವೆಲ್ಲಿನಲ್ಲಿ ವಿಜಯೇಂದ್ರರನ್ನು ದುರ್ಬಲಗೊಳಿಸಲು ವಿರೋಧಿಗಳು ಒಂದುಗೂಡುತ್ತಿದ್ದಾರೆ. ಹೀಗೆ ಒಂದುಗೂಡುತ್ತಿರುವವರು ಜೆಡಿಎಸ್ ನಾಯಕ ಕುಮಾರಸ್ವಾಮಿ ಅವರ ವಿಶ್ವಾಸ ಗಿಟ್ಟಿಸುತ್ತಿರುವುದನ್ನು ನೋಡಿದರೆ ಮುಂದಿನ ಕೆಲವೇ ಕಾಲದಲ್ಲಿ ವಿಜಯೇಂದ್ರರ ಕೈ ಬಿಗಿ ಮಾಡುವ ಕೆಲಸ ವಿಧ್ಯುಕ್ತವಾಗಿಯೇ ನಡೆಯಲಿದೆ. ಇಂಥ ಪರಿಸ್ಥಿತಿ ನಿರ್ಮಾಣವಾಗುವುದನ್ನು ತಡೆಗಟ್ಟಲು ಈಗಲೇ ವಿಜಯೇಂದ್ರ ಮತ್ತು ಯಡಿಯೂರಪ್ಪ ಸಜ್ಜಾಗದಿದ್ದರೆ ಅಧ್ಯಕ್ಷ ಪಟ್ಟ ಬೇರೆಯವರ ಪಾಲಾದರೂ ಅಚ್ಚರಿ ಇಲ್ಲ ಎಂಬುದು ಈ ಆಪ್ತರ ಅನುಮಾನ.

• ಜೆಡಿಎಸ್‌ಗೆ ನಿಖಿಲ್ ಸಾರಥಿ

ಇನ್ನು, ನಿಖಿಲ್ ಕುಮಾರಸ್ವಾಮಿ ಅವರು ಜೆಡಿಎಸ್ ರಾಜ್ಯಾಧ್ಯಕ್ಷರಾಗುವ ಕಾಲ ಹತ್ತಿರ ಬಂದಿದೆ. ಮೂಲಗಳ ಪ್ರಕಾರ, ಉಪಚುನಾವಣೆಯ ಫಲಿತಾಂಶ ಪ್ರಕಟವಾದ ನಂತರ ಜೆಡಿಎಸ್ ರಾಜ್ಯಾಧ್ಯಕ್ಷ ಸ್ಥಾನಕ್ಕೆ ನಿಖಿಲ್‌ರನ್ನು ನೇಮಕ ಮಾಡಲು ತೀರ್ಮಾನಿಸಲಾಗಿದೆ. ವಾಸ್ತವವಾಗಿ ಕುಮಾರಸ್ವಾಮಿ ಅವರು ಕೇಂದ್ರ ಮಂತ್ರಿಯಾದ ಸಂದರ್ಭದಲ್ಲೇ ನಿಖಿಲ್‌ರಿಗೆ ಪಟ್ಟ ಕಟ್ಟುವ ತೀರ್ಮಾನವಾಗಿತ್ತು. ಆದರೆ ಶಾಸಕರಾಗುವ ಮುನ್ನವೇ ಈ ಜಾಗಕ್ಕೆ ಅವರನ್ನು ತಂದು ಕೂರಿಸುವುದು ಸರಿಯಲ್ಲ. ಹಾಗೇನಾದರೂ ಮಾಡಿದರೆ ಪಕ್ಷದಲ್ಲಿರುವ ಕೆಲ ಹಿರಿಯ ನಾಯಕರು ಮುನಿಸಿಕೊಳ್ಳಬಹುದು ಎಂಬ ಕಾರಣಕ್ಕಾಗಿ ಕುಮಾರಸ್ವಾಮಿ ಮತ್ತು ದೇವೇಗೌಡರು ಸುಮ್ಮನಾಗಿದ್ದರು.

ಆದರೆ ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆ ನಡೆದ ನಂತರ ಕುಮಾರಸ್ವಾಮಿ ಮತ್ತು ದೇವೇಗೌಡರಿಗೆ ಸಂಪೂರ್ಣ ನಂಬಿಕೆ ಬಂದಿದೆಯಂತೆ. ಅರ್ಥಾತ್, ಉಪಚುನಾವಣೆಯಲ್ಲಿ ನಿಖಿಲ್ ಗೆಲ್ಲುವುದು ಪಕ್ಕಾ ಎಂಬುದು ಅವರ ನಂಬಿಕೆ. ಹೀಗಾಗಿ ಜೆಡಿಎಸ್ ರಾಜ್ಯಾಧ್ಯಕ್ಷ ಪಟ್ಟಕ್ಕೆ ಅವರನ್ನು ತಂದು ಕೂರಿಸಬಹುದು ಅಂತ ಈ ಜೋಡಿ ಭಾವಿಸಿದೆ. ಅಂದ ಹಾಗೆ, ಈ ಮುಂಚೆ ನಿಖಿಲ್‌ರಿಗೆ ಪಟ್ಟ ಕಟ್ಟಿದರೆ ಅಪಸ್ವರ ಎತ್ತುವವರು ಯಾರು ಅಂತ ಊಹಿಸಿದ್ದ ಕುಮಾರಸ್ವಾಮಿ ಮತ್ತು ದೇವೇಗೌಡರಿಗೆ ಆ ವಿಷಯದಲ್ಲಿ ಮತ್ತಷ್ಟು ಸ್ಪಷ್ಟತೆ ಬಂದಿದೆ. ಕುತೂಹಲದ ಸಂಗತಿಯೆಂದರೆ ಇಂಥ ನಾಯಕರೆಲ್ಲ ಜೆಡಿಎಸ್‌ಗಿಂತ ಕಾಂಗ್ರೆಸ್‌ಗೆ ಹತ್ತಿರದವರು ಮತ್ತು ಸದಾಕಾಲ ಕೈ ನಾಯಕರ ಸಂಪರ್ಕದಲ್ಲಿರುವವರು. ಇವರಿಗೆ ದೇವೇಗೌಡ, ಕುಮಾರಸ್ವಾಮಿ ಅವರಿಗಿಂತ ಕಾಂಗ್ರೆಸ್‌ನ ನಾಯಕರೇ ಆಪ್ತರು. ಹೀಗಾಗಿ ಇಂಥವರನ್ನು ಗುರುತಿಸಿರುವ ಅವರು ಉಪಚುನಾವಣೆಯ ಫಲಿತಾಂಶ ಬಂದ ನಂತರ ಪಕ್ಷದಿಂದಲೇ ಉಚ್ಚಾಟಿಸಲು ಅಣಿಯಾಗಿದ್ದಾರೆ. ಅಲ್ಲಿಗೆ ನಿಖಿಲ್ ಪಟ್ಟಾಭಿಷೇಕಕ್ಕೂ ಮುನ್ನ ಪಕ್ಷದ ನಾಲ್ಕೈದು ಮಂದಿ ನಾಯಕರ ತಲೆದಂಡ ಆಗುವುದು ಪಕ್ಕಾ ಆದಂತಿದೆ.

• ಲಾಸ್ಟ್ ಸಿಪ್: ಈ ಮಧ್ಯೆ ಚನ್ನಪಟ್ಟಣದ ಉಪಚುನಾವಣೆಯ ವೇಳೆ ಸಚಿವ ಜಮೀರ್ ಅಹ್ಮದ್ ಆಡಿದ ಮಾತು ಕೈ ಪಾಳಯವನ್ನು ತಲ್ಲಣಗೊಳಿಸಿದೆಯಾದರೂ ಡಿ.ಕೆ. ಬ್ರದರ್ಸ್ ಮಾತ್ರ ಯೋಗೇಶ್ವರ್ ಗೆಲ್ಲುತ್ತಾರೆ ಎಂಬ ವಿಶ್ವಾಸದಲ್ಲಿದ್ದಾರಂತೆ. ಅಂದ ಹಾಗೆ, ಚನ್ನಪಟ್ಟಣದ ಕಣಕ್ಕೆ ಮಾಜಿ ಪ್ರಧಾನಿ ದೇವೇಗೌಡರು ನುಗ್ಗಿದ ರೀತಿ ಮತ್ತು ಕುಮಾರಸ್ವಾಮಿ ಅವರನ್ನು 'ಕರಿಯ' ಅಂತ ಸಚಿವ ಜಮೀರ್ ಅಹ್ಮದ್ ಲೇವಡಿ ಮಾಡಿದ ವಿಷಯ ಒಕ್ಕಲಿಗ ಮತಬ್ಯಾಂಕಿನ ಮೇಲೆ ಪರಿಣಾಮ ಬೀರಿದ್ದು ಹೌದಾದರೂ, ಅದು ಯೋಗೇಶ್ವರ್ ಗೆಲುವಿಗೆ ಅಡ್ಡಿಯಾಗುವುದಿಲ್ಲ ಎಂಬುದು ಡಿ.ಕೆ.ಬ್ರದರ್ಸ್ ನಂಬಿಕೆ.

ಅವರ ಈ ನಂಬಿಕೆಗೆ ಕಾರಣವಿದೆ. ಅದೆಂದರೆ ಮುಸ್ಲಿಂ, ಕುರುಬ ಮತ್ತು ದಲಿತ ಮತಬ್ಯಾಂಕು ದೊಡ್ಡ ಮಟ್ಟದಲ್ಲಿ ಯೋಗೇಶ್ವರ್ ಪರವಾಗಿ ಕನ್‌ಸಾಲಿಡೇಟ್ ಆಗಿದೆ ಎಂಬುದು. ಅದೇ ರೀತಿ ಒಕ್ಕಲಿಗ ಮತಬ್ಯಾಂಕಿನ ಮಿನಿಮಮ್ 40 ಪರ್ಸೆಂಟ್ ಷೇರು ಕಾಂಗ್ರೆಸ್‌ಗೆ ಲಭ್ಯವಾಗಿದೆ ಎಂಬುದು ಡಿ.ಕೆ. ಬ್ರದರ್ಸ್ ಲೆಕ್ಕಾಚಾರ. ಇದು ನಿಜವೇ ಆದರೆ ಯೋಗೇಶ್ವರ್ 5ರಿಂದ 10 ಸಾವಿರ ಮತಗಳ ಅಂತರದಲ್ಲಿ ಗೆಲ್ಲುವುದು ಗ್ಯಾರಂಟಿ. ಆದರೆ ಒಂದು ವೇಳೆ ಈ ಲೆಕ್ಕಾಚಾರವನ್ನು ಮೀರಿ ನಿಖಿಲ್ ಗೆದ್ದರೆ ನೋ ಡೌಟ್, ಜಮೀರ್ ಕೈ ಪಾಳಯದ ವಿಲನ್ ಆಗುವುದು ಗ್ಯಾರಂಟಿ.

ವಸ್ತುಸ್ಥಿತಿ ಎಂದರೆ ಕಾಂಗ್ರೆಸ್ ಅಧಿಕಾರಕ್ಕೆ ಬಂದ ಸಂದರ್ಭದಲ್ಲಿ ಮುಸ್ಲಿಂ ಕೋಟಾದಡಿ ಜಮೀರ್ ಮತ್ತು ಎನ್.ಎ.ಹ್ಯಾರಿಸ್ ಪೈಕಿ ಒಬ್ಬರನ್ನು ಸಂಪುಟಕ್ಕೆ ತೆಗೆದುಕೊಳ್ಳಲು ಸಿದ್ದು-ಡಿಕೆಶಿ ಮಧ್ಯೆ ಜಟಾಪಟಿ ನಡೆದಿತ್ತು. ಅವತ್ತು ಹ್ಯಾರಿಸ್ ಪರ ನಿಂತ ಡಿಕೆಶಿ, ''ಚುನಾವಣೆಯಲ್ಲಿ ಪಕ್ಷಕ್ಕಾಗಿ ಹ್ಯಾರಿಸ್ ತುಂಬ ಇನ್‌ವೆಸ್ಟ್ ಮಾಡಿದ್ದಾರೆ. ಹೀಗಾಗಿ ಅವರಿಗೇ ಮಂತ್ರಿಗಿರಿ ಸಿಗಬೇಕು'' ಎಂದಿದ್ದರಂತೆ. ಆದರೆ, ''ಮುಸ್ಲಿಂ ಮತಗಳು ಕನ್‌ಸಾಲಿಡೇಟ್ ಆಗಲು ಜಮೀರ್ ದುಡಿದಿದ್ದಾರೆ. ಹೀಗಾಗಿ ಅವರಿಗೇ ಚಾನ್ಸು ಸಿಗಬೇಕು'' ಅಂತ ಸಿದ್ದು ಪಟ್ಟು ಹಿಡಿದು ಸಕ್ಸಸ್ ಆದರು. ಆದರೆ ಚನ್ನಪಟ್ಟಣದ ಕಣದಲ್ಲೀಗ ಯೋಗೇಶ್ವರ್ ಸೋತರೆ ಜಮೀರ್ ಅವರಿಗೆ ಕಷ್ಟದ ದಿನಗಳು ಕಾದಿವೆ ಅಂತಲೇ ಅರ್ಥ.

ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಚಿಂತನಾರ್ಹ ವಿಚಾರ

ನಾರಾಯಣ ಪಂಡಿತರ 'ಮಣಿಮಂಜರಿ' ಗ್ರಂಥದ ಬಗ್ಗೆ 'ವಿದ್ಯಮಾನ' ಅಂಕಣದಲ್ಲಿ (ವಿಶ್ವವಾಣಿ ನ.17) ವಿನಾಯಕ ಭಟ್ಟರು ಮಾಡಿದ ವಿಶ್ಲೇಷಣೆ ಕುರಿತು ಈ ಪ್ರತಿಕ್ರಿಯೆ: ನಾರಾಯಣ ಪಂಡಿತರು ದ್ವೈತಿಗಳಾಗಿದ್ದು, ಅದ್ವೈತಿಗಳಾದ ಮತ್ತು ಅದ್ವೈತ ಮತದ ಸಂಸ್ಥಾಪಕರಾದ ಶ್ರೀ ಶಂಕರ ಭಗವತ್ಪಾದರನ್ನು 'ಮಣಿಮಂಜರಿ'ಯಲ್ಲಿ ವರ್ಣಿಸಿರುವ ಪರಿ ಕೀಳುಮಟ್ಟದ್ದು ಮತ್ತು ಒಪ್ಪಲಾಗದಂಥದ್ದು ಎಂಬುದು ಅಂಕಣಕಾರರ ಅಭಿಪ್ರಾಯ.

ಈ ಪರಿಯಾಗಿ, ಒಂದು ನಂಬಿಕೆಯವರು ಇನ್ನೊಂದು ನಂಬಿಕೆಯವರನ್ನು ಹೀಯಾಳಿಸುವುದು, ಆ ನಿಟ್ಟಿನಲ್ಲಿ ಗ್ರಂಥಗಳನ್ನು ರಚಿಸಿ, ಮುದ್ರಿಸಿ, ಸಮಾಜದಲ್ಲಿ ಹಂಚುವುದು, ವಿಷಬೀಜ ಬಿತ್ತುವುದು ಈ ಎಲ್ಲವೂ ಮಾನವ ಇತಿಹಾಸದಷ್ಟೇ ಪುರಾತನ ಎಂಬುದು ದಿಟ. ಹೀಗೆ ದ್ವೈತ ಮತ್ತು ಅದ್ವೈತಗಳಾಗಲೀ, ಬೇರಾವ ಸಿದ್ಧಾಂತಗಳೇ ಆಗಲೀ (ಉದಾಹರಣೆಗೆ ಕ್ರೈಸ್ತ, ಮುಸಲ್ಮಾನ, ಲಿಂಗಾಯತ ಇತ್ಯಾದಿ), ಆಯಾ ವಿಚಾರಗಳ ಸಂಸ್ಥಾಪಕರನ್ನು ಬದಿಗಿಟ್ಟು, ಮೂಲತತ್ತ್ವ ವಿಶ್ಲೇಷಣೆ, ವಿಚಾರ ಮಂಥನ ಮಾಡಿದರೆ ಹೆಚ್ಚು ಸೂಕ್ತವೆನಿಸುವುದು ಎಂದು ನನ್ನ ಅಭಿಪ್ರಾಯ. ಈ ವಿಭಿನ್ನ ವಿಚಾರ ಸರಣಿಗಳು ಮಾನವನಲ್ಲಿ, ಆಯಾ ಕಾಲ, ಕ್ಷೇತ್ರಗಳಲ್ಲಿ ಹೇಗೆ ರೂಪುಗೊಂಡವು, ಬೆಳೆದು ಹಬ್ಬಿದವು ಎಂಬುದು ಚಿಂತನಾರ್ಹ ವಿಚಾರ.

- ಡಾ. ಅಲಕಾ ಆಚಾರ್ಯ, ಬೆಂಗಳೂರು

ಪೂರ್ಣವಿರಾಮ ಹಾಕಿ

'ವಿದ್ಯಮಾನ' ಅಂಕಣ (ವಿಶ್ವವಾಣಿ ನ.17) ಸಕಾಲಿಕವಾಗಿ ಮೂಡಿಬಂದಿದೆ. ಸನಾತನ ಧರ್ಮವು ಅಖಂಡತೆಯತ್ತ ಸಾಗುತ್ತಿರುವ ಈ ಹೊತ್ತಿನಲ್ಲಿ ಇಂಥ ಲೇಖನದ ಪ್ರಸ್ತುತತೆಯು ಮಿಗಿಲಾದುದು. ಶತಾವಧಾನಿ ಗಣೇಶ್ ಅವರು ತಮ್ಮ ಉಪನ್ಯಾಸದಲ್ಲಿ 'ಮಣಿಮಂಜರಿ'ಯ ಕುರಿತಾಗಿ ಯಾವ ವಿವಕ್ಷೆಯಿಂದ ತೀಕ್ಷ್ಣವಾದ ಮಾತುಗಳನ್ನು ಆಡಿದರೆಂಬುದನ್ನು ಅಂಕಣಕಾರರು ಸರಿಯಾಗಿ ಗ್ರಹಿಸಿರುವುದು ಕಾಣುತ್ತದೆ. ಗಣೇಶರ ಮಾತುಗಳು ದುರದೃಷ್ಟವಶಾತ್ ಸಾಮಾಜಿಕ ಮಾಧ್ಯಮಗಳಲ್ಲಿ ಶಂಕರ ನಿಂದಕರಿಗೂ ಮಧ್ವ ನಿಂದಕರಿಗೂ ಗ್ರಾಸವಾಗಿಬಿಟ್ಟಿದೆ. ಸನಾತನ ಧರ್ಮದ ಒಗ್ಗಟ್ಟಿನ ದೃಷ್ಟಿಯಿಂದ ಇದು ತುಂಬಾ ಅಪಾಯಕಾರಿಯಾದ ಬೆಳವಣಿಗೆಯಾಗಿದೆ. ಇಂಥ ಸಂದರ್ಭದಲ್ಲಿ ಇಂಥ ಸಮನ್ವಯಕಾರಿ ಲೇಖನವೊಂದರ ಅಗತ್ಯವಿತ್ತು. ಆಚಾರ್ಯ ಮಧ್ವರ ವಿಷಯದಲ್ಲಿ ಗೌರವವು ಜಾರದಂತೆ ಹದವನ್ನು ಕಾಯ್ದುಕೊಂಡು, ಆಚಾರ್ಯ ಶಂಕರರ ನಿಂದನೆಗೆ ತಮ್ಮ ಸಾತ್ವಿಕ ವಿರೋಧವನ್ನು ವ್ಯಕ್ತಪಡಿಸಿರುವ ಲೇಖಕರ ರೀತಿಯು ಬಹಳ ಮೆಚ್ಚುಗೆಯಾಗುವಂತಿದೆ. ಇದು ಆಚಾರ್ಯ ಶಂಕರರ ಕುರಿತಾದ ಅಪಪ್ರಚಾರಗಳಿಗೆ ಪೂರ್ಣವಿರಾಮವನ್ನಿಡುವಂತೆ ಮೂಡಿಬಂದಿರುವುದು ಮತ್ತಷ್ಟು ಮುದ ನೀಡಿದೆ.

- ಸುದರ್ಶನ್, ಬೆಂಗಳೂರು

ಇದು ನ್ಯಾಯವೇ?

ಕಸ ಸಂಗ್ರಹಣೆ ಶುಲ್ಕ ವಸೂಲಿಯ ವಿಷಯದ ಬಗ್ಗೆ ಬಿಬಿಎಂಪಿಯು ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುವುದಾಗಿ ಪತ್ರಿಕೆಗಳಲ್ಲಿ ಕೆಲ ದಿನಗಳ ಹಿಂದೆ ವರದಿಯಾಗಿದೆ. ಆದರೆ, ಈಗಾಗಲೇ ನಾವು ಪ್ರತಿ ವರ್ಷ ಆಸ್ತಿ ತೆರಿಗೆ ಪಾವತಿಸುವಾಗ, ನಮ್ಮ ಮನೆಗೆ 360 ರುಪಾಯಿ ತ್ಯಾಜ್ಯ ನಿರ್ವಹಣಾ ವೆಚ್ಚ ಸೇರಿಸಿ ನೀಡುತ್ತಿದ್ದೇವೆ. ಇದಲ್ಲದೆ ಈಗ ತಿಂಗಳಿಗೆ 200ರಿಂದ 400 ರು.ವರೆಗೆ (ಅಂದರೆ ವರ್ಷಕ್ಕೆ 2,400ರಿಂದ 4,800 ರು. ವರೆಗೆ) ಶುಲ್ಕ ಪಾವತಿಸಬೇಕಾದರೆ ಅದು ಸುಲಿಗೆ ಆಗುತ್ತದೆಯೇ ವಿನಾ ಶುಲ್ಕವಾಗುವುದಿಲ್ಲ. ಬೇರೆ ಎಲ್ಲಾ ಬೆಲೆಗಳು ಜಾಸ್ತಿ ಆಗಿರುವ ಸಂದರ್ಭದಲ್ಲಿ ಈ ಶುಲ್ಕವನ್ನು ಜಾಸ್ತಿ ಮಾಡಿದರೆ ತೆರಿಗೆ ಪಾವತಿಸುವವರಿಗೆ ಬರೆ ಹಾಕಿದಂತೆ ಆಗುತ್ತದೆ. ಸರಕಾರ ಈ ಬಗ್ಗೆ ಆಲೋಚಿಸುವುದು ಒಳ್ಳೆಯದು. ಬಾಕಿ ಇರುವ ಕೋಟ್ಯಂತರ ರುಪಾಯಿ ಆಸ್ತಿ ತೆರಿಗೆಯನ್ನು ವಸೂಲಿ ಮಾಡುವುದು ಬಿಟ್ಟು, ಸರಿಯಾಗಿ ತೆರಿಗೆ ಪಾವತಿಸುತ್ತಿರುವವರ ಮೇಲೆ ಬಿಬಿಎಂಪಿ ಇನ್ನಷ್ಟು ಭಾರ ಹೇರುವುದು ನ್ಯಾಯವೇ?

- ದಾವಣಗೆರೆ ಮುಕುಂದ, ಬೆಂಗಳೂರು

'ವ್ಯಾಸ'ನ ಕೆರೆಯಲ್ಲಿ ಮಿಂದೆದ್ದ ಪ್ರಭಂಜನರಿಗೆ ಕನಕಶ್ರೀ ಗೌರವ

ಬೆಳಕು

ಶ್ರೀನಿವಾಸ ರಾಘವೇಂದ್ರ, (ಶ್ರೀನಿಸುತ)
vveditoped@gmail.com

ನವೆಂಬರ್ ಮಾಸದ ಆಗಮನದೊಂದಿಗೆ ಕನ್ನಡಿಗರು ಭಾವಪೂರ್ಣರಾಗಿ ಗಾಢವಾಗಿ ನೆನೆಪಿಸಿಕೊಳ್ಳುವುದು ಒಂದು ಕನ್ನಡವನ್ನು ಮತ್ತೊಂದು ಖ್ಯಾತ ಹರಿದಾಸ ಸಂತರೆನಿಸಿದ್ದ ಶ್ರೀ ಕನಕದಾಸರನ್ನು (ಕನಕದಾಸ ಜಯಂತಿ ನಿಮಿತ್ತ). ಕನ್ನಡ ಭಾಷೆಯಲ್ಲಿ ಕನಕದಾಸರು ಕೊಟ್ಟ ಶ್ರೇಷ್ಠ ಕೃತಿಗಳನ್ನು ನೋಡಿದಾಗ ಯಾರಿಗಾದರೂ ಅನಿಸುತ್ತದೆ ಕನ್ನಡ ಮತ್ತು ಕನಕ ಒಬ್ಬರೊನ್ನೊಬ್ಬರು ಬಿಟ್ಟಿದ್ದಿಲ್ಲ.

ಕರ್ನಾಟಕದ ಪುಣ್ಯಭೂಮಿಯಲ್ಲಿ ಕನಕದಾಸರು ಹುಟ್ಟಿದ್ದು ಸಾಮಾನ್ಯರಲ್ಲಿ ಸಾಮಾನ್ಯನಾಗಿ ಬ್ರಾಹ್ಮಣೇತರ'ನಾಗಿ. ಆದರೆ ತಮ್ಮ ಜೀವನದಲ್ಲಿ ಅಧ್ಯಾತ್ಮ ಸಂಪತ್ತನ್ನು ಸಾಧಿಸಿ ತೋರಿಸಿ ಮೇಲ್ವರ್ಗದ ಜನರೂ 'ಕರುಬು'ವಂತೆ ಮಾಡಿದ್ದು ವಾಸ್ತವ ಸಂಗತಿ.

ವಿಜಯನಗರ ಸಾಮ್ರಾಜ್ಯದಲ್ಲಿ ಕೃಷ್ಣದೇವರಾಯನ ವೈಭವೋಪೇತ ಆಡಳಿತದ ಕಾಲದಲ್ಲಿ ಅಂದರೆ 16ನೇ ಶತಮಾನದಲ್ಲಿ ರಾಜಗುರುಗಳಾಗಿದ್ದ ಶ್ರೀ ವ್ಯಾಸರಾಜರ ಸಂಪರ್ಕಕ್ಕೆ ಸಿಕ್ಕಿ ಅವರ ಕಾರುಣ್ಯಕ್ಕೆ ಪಾತ್ರರಾದರು. ಉಡುಪಿಯ ಶ್ರೀವಾದಿರಾಜ ಸ್ವಾಮಿಗಳ, ಮತ್ತೊಬ್ಬ ಶ್ರೇಷ್ಠ ಹರಿದಾಸರೆನಿಸಿದ ಶ್ರೀ ಪುರಂದರದಾಸರ ಸಮಕಾಲೀನರು ಕನಕದಾಸರು. ಕನಕದಾಸರು ಮೊದಲಿಗೆ ಕತ್ತಿ, ಗುರಾಣಿ ಹಿಡಿದು ಕ್ಷಾತ್ರಧರ್ಮದಿಂದ ಮಾಡಿದ್ದು ಯುದ್ಧಾಳುವಾಗಿ. ಆದರೆ ತಮ್ಮ ವೈಯಕ್ತಿಕ ಜೀವನದಲ್ಲಿ ನಡೆದುಹೋದ ಘಟನೆಗಳಿಂದ ನೊಂದು, ಬೆಂದು ಅಧ್ಯಾತ್ಮದತ್ತ ಹೊರಳಿದ್ದು ಇತಿಹಾಸ. ಕನಕದಾಸರು ಕೇವಲ ಹರಿದಾಸರಾಗಿರಲಿಲ್ಲ, ಜೊತೆಗೆ ಕವಿಗಳೂ ಕೂಡ. ಅವರು ರಚಿಸಿದ 'ಮೋಹನ ತರಂಗಿಣಿ' ಮಹಾಕಾವ್ಯವನ್ನು ನೋಡಿದಾಗ ಇದು ವೇದ್ಯವಾಗುತ್ತದೆ. 'ಹರಿಭಕ್ತಿಸಾರ' ಅವರ ಸ್ವತಂತ್ರ ಗ್ರಂಥ. ಶತಮಾನಗಳ ತರುವಾಯ 'ಶ್ರೀ ಹರಿಕಥಾಮೃತ ಸಾರ' ರಚಿಸಿದ ಶ್ರೀ ಜಗನ್ನಾಥದಾಸರ ಮೇಲೆ ಹರಿಭಕ್ತಿಸಾರದ ಪ್ರಭಾವ ಎದ್ದುಕಾಣುತ್ತದೆ. 'ರಾಮಧಾನ್ಯ ಚರಿತೆ', 'ನಳ ಚರಿತ್ರೆ' ಮೊದಲಾದ ಕೃತಿಗಳನ್ನು ಕನಕದಾಸರು ಕೊಟ್ಟು ಹೋಗಿದ್ದಾರೆ. ಶ್ರೀವ್ಯಾಸರಾಜರ ಸಂಪರ್ಕಕ್ಕೆ ಬಂದ ಮೇಲೆ ಅವರ ಮೇಲೆ ಅಧ್ಯಾತ್ಮ ಹಾಗೂ ಮಧ್ವಮತದ ಪ್ರಭಾವ ಉಂಟಾಯಿತು. ಅವರು ಕೃತಿ ರಚನೆಯಲ್ಲಿ ಆಚಾರ್ಯ ಮಧ್ವರು ಹಾಕಿಕೊಟ್ಟಿದ್ದ ಪ್ರಮೇಯಗಳ ಚೌಕಟ್ಟನ್ನು ಎಂದೂ ಮೀರಲಿಲ್ಲ! ತಾವು ರಚಿಸಿದ ದೇವರನಾಮಗಳಲ್ಲಿ ಪಾರಮ್ಯದ ದೃಷ್ಟಿಯಲ್ಲಿ ವಿಷ್ಣುವನ್ನು, ತದನಂತರ ಶಿವನನ್ನು ಕೊಂಡಾಡಿ ಶೈವವೈಷ್ಣವರನ್ನು ಸಮನ್ವಯಗೊಳಿಸಿದರು! ಉಳಿದ ಹರಿದಾಸರು ತಮ್ಮ ದೇವರ ನಾಮಗಳಿಗೆ, ಉಗಾಭೋಗಗಳಿಗೆ, ಸುಳಾದಿಗಳಿಗೆ ಪ್ರಸಿದ್ಧರಾದರೆ, ಕನಕದಾಸರು ತಮ್ಮ ದೇವರನಾಮ ಮೊದಲಾದವುಗಳೊಂದಿಗೆ 'ಮುಂಡಿಗೆ'ಗಳಿಂದಾಗಿಯೂ ಪ್ರಸಿದ್ಧರಾಗಿರುವರು. ಮುಂಡಿಗೆ ಎಂದರೆ ವಿಷಯವನ್ನು ನೇರವಾಗಿ ಪ್ರಸ್ತಾಪಿಸದೆ ಸುತ್ತಿ ಬಳಸಿ ಹೇಳಿ, ಮೆದುಳು ತಿಣುಕಾಡುವಂತೆ ಮಾಡುವ ಕಸರತ್ತು ಅಥವಾ ಒಗಟು. ಕಡೆಗೆ ಉತ್ತರ ಹೊಳೆದಾಗ ಮುಂಡಿಗೆಗಳನ್ನು ವಿಮರ್ಶಿಸಿದವರಿಗೆ 'ಮಂಡಿಗೆ' ಭಕ್ಷ್ಯ ತಿಂದಷ್ಟೇ ಖುಷಿಯಾಗುತ್ತದೆ! ಕನಕದಾಸರು ನಿಜಜೀವನದಲ್ಲಿ ಸಹ ಒಗಟುಒಗಟಾದ ಮಾತುಗಳಿಗೆ ಪ್ರಸಿದ್ಧರಾದವರು ಎಂದೇ ಪ್ರತೀತಿ. ಒಮ್ಮೆ ವ್ಯಾಸರಾಜರು ಕನಕರನ್ನು ಕೇಳಿದರು- 'ಕನಕ ಮೋಕ್ಷಕ್ಕೆ ಯಾರು ಹೋಗುತ್ತಾರೆ?' ಎಂದು. ಕನಕದಾಸರು ಹೇಳಿದರು - 'ನಾನು ಹೋದರೆ ಹೋದೇನು!' ನಾನೇ ಜ್ಯೇಷ್ಠ, ಶ್ರೇಷ್ಠ ಎಂಬ ಅಹಮಿಕೆ ಬಿಟ್ಟವರು ಮೋಕ್ಷಕ್ಕೆ ಹೋಗುತ್ತಾರೆ ಎನ್ನುವುದು ಕನಕರ ಅಂಬೋಣ! ಅದಕ್ಕೆ ಮತ್ತೊಂದು ನಿದರ್ಶನ ಹೀಗಿದೆ. ಕನಕದಾಸರು ಆ ಕಾಲದಲ್ಲೇ ತಮ್ಮ ಕೃತಿಗಳಿಂದ ಜ್ಞಾನಿವರೇಣ್ಯರೆನಿಸಿದ್ದರು. ಅವರ ಕೀರ್ತಿ ದೂರ ದೇಶಗಳಿಗೆ ಹರಡಿತ್ತು. ಸಂಚಾರ ಕಾಲದಲ್ಲಿ ಶ್ರೀನಿವಾಸನ ದರುಶನಕ್ಕೆ ಒಮ್ಮೆ ತಿರುಪತಿಗೆ ಹೋಗುವ ಪ್ರಸಂಗ ಬಂದಿತು. ಕನಕದಾಸರನ್ನು ಸ್ವಾಗತಿಸಲು ಸಿದ್ಧರಾಗಿದ್ದ 'ಮಹಂತರು' ಕನಕದಾಸರನ್ನು ನೋಡಿರಲಿಲ್ಲ. ಕನಕದಾಸರು ಆ ಕಾಲದಲ್ಲೂ ಜನದಟ್ಟಣೆಯಿಂದಾಗಿ ದೇವರ ದರುಶನಕ್ಕಾಗಿ ಸರದಿಯಲ್ಲಿ ಸಾಮಾನ್ಯನಂತೆ ನಿಂತಿದ್ದರು. 'ಕನಕದಾಸರು ಎಲ್ಲಿದ್ದಾರೆ?' ಎಂಬ ಮಹಂತರ ಮಾತು ಕೇಳಿಸಿಕೊಂಡ ಅಲ್ಲೇ ಇದ್ದ ಕನಕದಾಸರು ಹೇಳಿದರು 'ಮುಂದಿನವರಿಗೆ ಹಿಂದೆ, ಹಿಂದಿನವರಿಗೆ ಮುಂದೆ'! (ನಿಮ್ಮೆದುರೇ ಇರುವೆ' ಎಂದು ಭಾವ). ಅವರ ಕಾಲದಲ್ಲೂ ಸಮಾಜದಲ್ಲಿ ಧಾರ್ಮಿಕ ಹುಳುಕುಗಳು, ಡಾಂಭಿಕತೆ ತಾಂಡವವಾಡುತ್ತಿತ್ತು. ಆದರೆ ಕನಕರು ಎಂದೂ ಧರ್ಮದಿಂದ ಸಿಡಿದು ಹೊರಗೆ ಹೋಗಲಿಲ್ಲ. ಮಹಾಭಾರತದ ವಿದುರನಂತೆ ದುರ್ಯೋಧನಾದಿ ಕೌರವರ ಅಪಮಾನ, ನಿಂದನೆಗಳಿಗೆ ಒಳಗಾದರೂ, ಲೆಕ್ಕಿಸದೆ ಆ ಜನಗಳ ಮಧ್ಯೆಯೇ ಇದ್ದುಕೊಂಡು ಮಂದಿಯನ್ನು, ಸಮಾಜದ ಓರೆಕೋರೆಯನ್ನು ತಮ್ಮ ಕೃತಿಗಳಲ್ಲಿ ನಿಷ್ಠುರವಾದ ಮಾತು ಗಳಿಂದಲೇ ತಿದ್ದಿ ಜಗನ್ಮಾನ್ಯರಾದರು.



ಪ್ರಭಂಜನಾಚಾರ್ಯರು ಹುಟ್ಟಿದ್ದು ಸಾಮಾನ್ಯ ಮಧ್ಯಮ ವರ್ಗದ ಮಾಧ್ವ ಕುಟುಂಬದಲ್ಲಿ (1945). ಆ ಕಾಲಕ್ಕೆ ಹೊಸಪೇಟೆ ತಾಲೂಕು ವ್ಯಾಸನಕೆರೆ ಕೇವಲ 40 ಮನೆಗಳ ಕುಗ್ರಾಮ. ಶ್ರೀವ್ಯಾಸರಾಜರಿಂದ ಪ್ರತಿಷ್ಠಿತವಾದ ಆಂಜನೇಯ ಹಾಗೂ ಅವರು ನಿರ್ಮಿಸಿದ ಕೆರೆಯಿಂದಾಗಿ ಆ ಹಳ್ಳಿ ವ್ಯಾಸನಕೆರೆ ಎನ್ನಿಸಿತು. ಹನುಮಪ್ಪ ಶರ್ಮಾ ಎಂಬವರು ಆ ಆಂಜನೇಯನ ಅರ್ಚಕರಾಗಿ ಶ್ರೀವ್ಯಾಸರಾಜರಿಂದಲೇ ನೇಮಿತರಾ ದವರು. ಅವರ ವಂಶದ ವಿ.ಕೆ. ರಾಮರಾಯರು ಪ್ರಭಂಜನಾಚಾರ್ಯರ ತಂದೆ. ತಾಯಿ ಲಕ್ಷ್ಮೀಬಾಯಿಯವರು. ಮನೆಯಲ್ಲಿ ಸದಾ ಧಾರ್ಮಿಕ ಮತ್ತು ಸದಾಚಾರದ ವಾತಾವರಣ. ತಾಯಿ ದಾಸರ ಪದಗಳನ್ನು ಹಾಡುತ್ತಿದ್ದರು. ಪ್ರತಿದಿನವೂ ಕನಕದಾಸರ ಕೇಶವನಾಮ'ದ ಪಠಣದ ರಿಂಗಣ ಆ ಮನೆಯ ವಾತಾವರಣ. ಇದರ ಪ್ರಭಾವ ಬಾಲಕ ಪ್ರಭಂಜನರ ಮೇಲೆ ಆಯಿತು. ಅವರ ತಂದೆಯವರದಂತೂ ಕನಕದಾಸರ ಜೀವನಾದರ್ಶ. ಪ್ರಾಥಮಿಕಶಿಕ್ಷಣಕ್ಕೂ ಅವಕಾಶವಿಲ್ಲದ ಅವರ ಸ್ಥಳದಲ್ಲಿ ಅವರ ತಂದೆಯೇ ಇವರ ಗುರು. ಮುಂದೆ ಪ್ರೌಢಶಿಕ್ಷಣ ಹೊಸಪೇಟೆಯ ಮುನ್ಸಿಪಲ್ ಪ್ರೌಢಶಾಲೆಯಲ್ಲಿ. ಪಿಯುಸಿ ಶಿಕ್ಷಣ ಬೆಂಗಳೂರಿನ ನ್ಯಾಷನಲ್ ಕಾಲೇಜಿನಲ್ಲಿ, ಎಂಜಿನಿಯರಿಂಗ್ ಶಿಕ್ಷಣ ಮೈಸೂರಿನ ಎನ್.ಐ.ಇ. ತಾಂತ್ರಿಕ ಸಂಸ್ಥೆಯಲ್ಲಿ. ಜೊತೆಜೊತೆಯಾಗಿ ಅಲ್ಲಿಯ ಖ್ಯಾತವಿದ್ವಾಂಸರಾದ ಶ್ರೀ ಎಚ್. ಸುಬ್ಬರಾವ್ ಎಂಬ ಮಹನೀಯರಲ್ಲಿ ಆಳವಾದ ಶಾಸ್ತ್ರಾಧ್ಯಯನ. ಅದರೊಂದಿಗೆ ಬಿ.ಇ. ಪದವಿಯ ಪ್ರಾಪ್ತಿ. ಎಂಜಿನಿಯರಿಂಗ್ ಓದಿದವರಿಗೆ ಸುಲಭವಾಗಿ ಕೆಲಸ, ಪಗಾರ ಸಿಗುತ್ತಿದ್ದ ಕಾಲ. ಅಧ್ಯಾತ್ಮದ ಸೆಳತಕ್ಕೆ ಒಳಗಾಗಿದ್ದ ಪ್ರಭಂಜನರು ವೃತ್ತಿಗೆ, ಸಂಬಳಕ್ಕೆ ಮರುಳಾಗಲಿಲ್ಲ.

ಸಂಸ್ಕೃತದಲ್ಲಿ ಮತ್ತಷ್ಟು ಅಧ್ಯಯನ ನಡೆಸುವ ಉದ್ದೇಶದಿಂದ ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಅಧ್ಯಯನ ಹಾಗೂ ಬಿ.ಎ. ಪದವಿಯ ಪ್ರಾಪ್ತಿ. ಮುಂದೆ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಸಂಸ್ಕೃತ ಸ್ನಾತಕೋತ್ತರ ಶಿಕ್ಷಣ. ಇವರ ವಿದ್ವತ್ತನ್ನು ಬಹಳವಾಗಿ ಮೆಚ್ಚಿದ ಪ್ರೊ. ಕೆ.ಟಿ.ಪಾಂಡುರಂಗಿಯವರಿಂದ ದೊರೆತ ವಿಶೇಷ ಸಹಕಾರ ಅವರ ಅಧ್ಯಯನದ ವ್ಯಾಪ್ತಿಯನ್ನು ಮತ್ತಷ್ಟು ಹೆಚ್ಚಿಸಿತು. ಮುಂದೆ ಗದಗ (ಜೆ.ಟಿ. ಕಾಲೇಜ್), ಬೆಂಗಳೂರು (ನ್ಯಾಷನಲ್ ಕಾಲೇಜ್), ಚಿಕ್ಕಮಗಳೂರು, ಚಿತ್ರದುರ್ಗ, ತುಮಕೂರು ಹಾಗೂ ಬೆಂಗಳೂರಿನ ಸರ್ಕಾರಿ ಕಾಲೇಜುಗಳಲ್ಲಿ ಅಧ್ಯಾಪನ ವೃತ್ತಿ. ಬಳಿಕ ಬೆಂಗಳೂರಿನ ಕೆ.ಆರ್.ಪುರಂನ ಪ್ರಥಮದರ್ಜೆ ಕಾಲೇಜಿನ ಪ್ರಾಂಶುಪಾಲರಾಗಿ ಕಾರ್ಯನಿರ್ವಹಣೆ. 2001ರಲ್ಲಿ ಸ್ವಯಂ ನಿವೃತ್ತಿ. ಆ ಬಳಿಕ ಹಿಂದಿನಿಂದಲೂ ನಡೆದುಬಂದಿದ್ದ ವ್ಯಾಸ- ದಾಸಸಾಹಿತ್ಯದ ಪ್ರಸಾರಕ್ಕಾಗಿ ಪಾಠ, ಪ್ರವಚನ, ಲೇಖನ, ಪ್ರಕಾಶನ ಮೊದಲಾದ ಕಾರ್ಯಗಳಲ್ಲಿ ಪೂರ್ಣವಾಗಿ ತೊಡಗಿಸಿಕೊಂಡು ಜ್ಞಾನಪ್ರಸಾರದ ಕಾರ್ಯ.

ಪ್ರಾಚೀನ ಹಸ್ತಪ್ರತಿ ಸಂಗ್ರಹಣ: ವಿದ್ಯಾರ್ಥಿದೆಸೆಯಲ್ಲಿಯೇ ಪ್ರಾರಂಭವಾದ ಪ್ರಾಚೀನಹಸ್ತಪ್ರತಿ ಗ್ರಂಥಗಳ ಸಂಗ್ರಹದ ಇವರ ಹವ್ಯಾಸ ಮುಂದೆ ಮತ್ತಷ್ಟು ಹೆಚ್ಚಾಗಿ ಸಾಗಿ, ಸಹಸ್ರಾರು ತಾಡವಾಲೆಗ್ರಂಥಗಳ ಸಂಗ್ರಹ ರೂಪುಗೊಂಡಿತು. ಅದರಿಂದಾಗಿ ವ್ಯಾಕರಣ, ಮೀಮಾಂಸೆ, ವೇದಾಂತ ಮೊದಲಾದವುಗಳಿಗೆ ಸಂಬಂಧಿಸಿದ ನೂರಾರು ಹಸ್ತಪ್ರತಿಸಂಗ್ರಹಗಳು ಸುರಕ್ಷಿತವಾದವು. ಅವೆಲ್ಲವುಗಳನ್ನೂ ಶ್ರೀಜಯತೀರ್ಥಸಂಸ್ಕೃತ ಹಸ್ತಲಿಖಿತ ಗ್ರಂಥಾಲಯ ಎಂಬ ಹೆಸರಿನಲ್ಲಿ ಅವರು ಸಂರಕ್ಷಿಸಿದ್ದು, ಅವುಗಳ ಅಧ್ಯಯನ, ಸಂಶೋಧನೆ, ಪ್ರಕಾಶನ ಮೊದಲಾದ ಕಾರ್ಯಗಳನ್ನು ಮಾಡುತ್ತಿರುವರು. ಅವರ ಸಂಗ್ರಹದಲ್ಲಿರುವ ಪ್ರಾಚೀನ ತಾಡವಾಲೆ ಪ್ರತಿ ಕ್ರಿ.ಶ. 1400ರಷ್ಟು ಹಿಂದಿನದು. ಇದರಿಂದ ಅವರ ಸಂಗ್ರಹಕಾರ್ಯದ ಮಹತ್ತ್ವ ತಿಳಿಯುವುದು. ಇದರಲ್ಲಿ ಶ್ರೀರಾಘವೇಂದ್ರಸ್ವಾಮಿಗಳು ಮೊದಲಾದ ಮಹನೀಯರ ಅಪೂರ್ವಕೃತಿಗಳು ಸಹ ಸೇರಿರುವವು.

ಧಾರ್ಮಿಕ ಪ್ರವಚನ: ಓದಿಕೊಂಡು ವಿದ್ವಾಂಸರಾದವರೆಲ್ಲ ಉತ್ತಮ ವಾಕ್ಪಟುಗಳಾಗಿರಬೇಕೆಂಬ ನಿಯಮವೇನಿಲ್ಲ! ಓದಿನ ವೈದುಷ್ಯದೊಂದಿಗೆ ವಾಕ್ಪಟುತ್ವ ಆಚಾರ್ಯರಿಗೆ ಸಿದ್ಧಿಸಿದೆ. ಕೇಳುಗರನ್ನು ಬೆರಗುಗೊಳಿಸುವ ವಾಗಾಡಂಬರ ಇವರದಲ್ಲ. ವಿಷಯಗಳ ಸರಳ ನೇರ ನಿರೂಪಣೆ ಇವರ ಶೈಲಿ. ರಾಮಾಯಣ, ಮಹಾಭಾರತ, ಭಗವದ್ಗೀತಾ ಮೊದಲಾದ ಉದ್ಗ್ರಂಥಗಳನ್ನು ನಾಡಿನಾದ್ಯಂತ ಪ್ರವಚನ ಮಾಡಿದ್ದಾರೆ. ದಾಸರ ಪದಗಳನ್ನು ಹೆಜ್ಜೆ ಹೆಜ್ಜೆಗೆ ಉಲ್ಲೇಖಿಸುವ ಇವರು ಹಾಡುಗಾರರೇನಲ್ಲ, ನವಿರಾದ ಹಾಸ್ಯಮಿಶ್ರಿತ, ಅನುದ್ವೇಗದ, ಅಸ್ಖಲಿತ ಉಪನ್ಯಾಸ ಶೈಲಿ ಜನರ ಮನ ಗೆದ್ದಿದೆ. ಉಪನ್ಯಾಸಕಾರನಿಗೆ ಮುಖ್ಯವಾಗಿ ಇರಬೇಕಾದ್ದು ತಾನು ಮಾಡುತ್ತಿರುವ ವಿಷಯದ ಪ್ರಸ್ತುತಿಯ ಬಗ್ಗೆ ಎಚ್ಚರ, ಅದರ ಗತಿ (ನಡಿಗೆ) ಮತ್ತು ಸಮಯ ಪ್ರಜ್ಞೆ. ಆಚಾರ್ಯರು ಇವೆಲ್ಲವನ್ನೂ ಮೈಗೂಡಿಸಿಕೊಂಡಿದ್ದಾರೆ. ವಿಶ್ವವಾಣಿ ಕ್ಲಬ್ ಹೌಸ್‌ನಲ್ಲಿ ಒಮ್ಮೆ ಇವರು ಶ್ರೀ ರಾಘವೇಂದ್ರ ಸ್ವಾಮಿಗಳ ಆರಾಧನೆ ನಿಮಿತ್ತ ಮಾತಾಡಿದ್ದು ನನ್ನ ನೆನಪಿಗೆ ಬರುತ್ತಿದೆ. ಇವರ ಉಪನ್ಯಾಸದಲ್ಲಿ 'ಏಕಾದಶೀ ಉಪವಾಸ' ದ ಮಹತ್ತ್ವ ಮನಮಾಡಿದೆ. ಲೌಕಿಕ ದೃಷ್ಟಾಂತಗಳೊಂದಿಗೆ ಪ್ರಶ್ನೆ ಮಾಡುವ ಹವ್ಯಾಸದ ಇಂದಿನ ಯುವಜನತೆ ಇವರ ಉಪನ್ಯಾಸದಿಂದ ಮನವರಿಕೆ ಕಂಡುಕೊಂಡಿದೆ. ಇವರು ಉಪನ್ಯಾಸಗಳನ್ನು ಪ್ರಾರಂಭಿಸಿ ಐವತ್ತು ವರುಷಗಳು ಸಂದಿದ್ದು ಮಾಧ್ವಸಮಾಜದಲ್ಲಿ ಇಂದಿಗೂ 'ಸ್ಟಾರ್ ಉಪನ್ಯಾಸಕ'ರೆನಿಸಿದ್ದಾರೆ ಎಂಬುದು ಉತ್ಪ್ರೇಕ್ಷೆಯ ಮಾತಲ್ಲ!

ಗ್ರಂಥ ಲೇಖನ ಮತ್ತು ಪ್ರಕಾಶನ: ಆಚಾರ್ಯರ ಲೇಖನ ಶೈಲಿ ಓದುಗರ ಮನ ಗೆದ್ದಿದೆ ಎಂಬುದಕ್ಕೆ ಇವರು ಬರೆದಿರುವ ಗ್ರಂಥಗಳೇ ಸಾಕ್ಷಿ. ಇದಕ್ಕಾಗಿಯೇ ಇವರು 'ಶ್ರೀವ್ಯಾಸಮಧ್ವ ಸಂಶೋಧನ ಪ್ರತಿಷ್ಠಾನ' ಎಂಬ ಸಂಸ್ಥೆಯನ್ನು ಸ್ಥಾಪಿಸಿ ಪೋಷಿಸಿದ್ದಾರೆ. ಇದರ ಅಡಿಯಲ್ಲಿ ವಿವಿಧಗ್ರಂಥಗಳ ಪ್ರಕಟಣೆ ಆಗಿದೆ. ಕನ್ನಡದಲ್ಲಿ 'ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯ' ಅನುವಾದದಿಂದ ಪ್ರಾರಂಭಿಸಿ 'ಸ್ತೋತ್ರ ಮಾಲಿಕಾ' ವರೆಗೆ ಒಟ್ಟು 200 ಕ್ಕಿಂತ ಹೆಚ್ಚು ಕೃತಿಗಳು ಪ್ರಕಾಶಿತವಾಗಿವೆ. ಇಂಗ್ಲಿಷ್ ಭಾಷೆಯಲ್ಲಿ 'ಲೈಫ್ ಅಂಡ್ ವರ್ಕ್ಸ್ ಆಫ್ ಶ್ರೀ ಮಧ್ವಾಚಾರ್ಯ' ಇಂದ ಹಿಡಿದು 'ರಾಘವೇಂದ್ರ ದರ್ಶನ' ವರೆಗೆ ಒಟ್ಟು 20 ಕೃತಿಗಳು. ಸಂಸ್ಕೃತ ಭಾಷೆಯಲ್ಲಿ' ಶ್ರೀಮನ್ಮಧ್ವಾಚಾರ್ಯರ ಸರ್ವಮೂಲಗ್ರಂಥ' ಗಳನ್ನೊಳಗೊಂಡಂತೆ ನೂರಕ್ಕಿಂತ ಹೆಚ್ಚು ಗ್ರಂಥಗಳು ಬೆಳಕು ಕಂಡಿವೆ. ಹರಿದಾಸಸಾಹಿತ್ಯಕ್ಕೆ ಸಂಬಂಧಿಸಿದಂತೆ 25ಕ್ಕೂ ಹೆಚ್ಚು ಕೃತಿಗಳು ಪ್ರಕಾಶಿತವಾಗಿದ್ದು ಸಮಗ್ರ ದಾಸಸಾಹಿತ್ಯದ ಪ್ರಮುಖ ಹರಿದಾಸರ ಕೃತಿಗಳನ್ನೊಳಗೊಂಡ ಮತ್ತಷ್ಟು ಸಂಪುಟಗಳು ಪ್ರಕಟಣೆಗೆ ಸಿದ್ಧವಾಗಿವೆ. ಕನಕದಾಸರ ಬಗ್ಗೆಯಂತೂ ಸುಮಾರು 2000 ಪುಟಗಳ ವ್ಯಾಪ್ತಿಯ ಆರು ಸಂಪುಟಗಳನ್ನು ಪ್ರಕಾಶನಪಡಿಸಿರುವರು. ಅದಕ್ಕಾಗಿ ಈ ಕನಕಶ್ರೀ' ಪ್ರಶಸ್ತಿಯು ಇವರಿಗೆ ಸಂದಿದೆ.

ಅಧ್ಯಯನ ಮತ್ತು ಅಧ್ಯಾಪನ: ಸಚ್ಛಾಸ್ತ್ರಗಳ ಅಧ್ಯಯನವನ್ನು ಉಸಿರಾಗಿಸಿಕೊಂಡಿರುವ ಆಚಾರ್ಯರು ಜಿಜ್ಞಾಸುಗಳ ಸಲುವಾಗಿ ಯೂಟ್ಯೂಬ್‌ನಲ್ಲಿ ಶ್ರೀಮಧ್ವಾಚಾರ್ಯರ ಸಮಗ್ರ ಗ್ರಂಥಗಳನ್ನು (ಇದನ್ನು 'ಸರ್ವಮೂಲ' ಎನ್ನುತ್ತಾರೆ.) ಪಾಠ ರೂಪದಲ್ಲಿ ಪ್ರವಚನ ಮಾಡಿದ್ದಾರೆ. ಆಸಕ್ತರು 'ವ್ಯಾಸಮಧ್ವ '(VyasaMadhwa) ಚಾನೆಲ್‌ನಲ್ಲಿ ವೀಕ್ಷಿಸಬಹುದು.

ದೊರೆತ ಪುರಸ್ಕಾರ, ಗೌರವ: ಶ್ರೀ ಪ್ರಭಂಜನಾಚಾರ್ಯರ ಬಹುಮುಖವಾದ ವಾಙ್ಮಯ ಸೇವೆಯನ್ನು ಸರಕಾರ ಹಾಗೂ ಮಾಧ್ವಮಠಮಾನ್ಯಗಳು ಗುರುತಿಸಿವೆ. ಇವರಿಗೆ ದೊರೆತ ಬಿರುದುಗಳಲ್ಲಿ ಅತ್ಯಂತ ಪ್ರಧಾನವಾದದ್ದು ಕೇಂದ್ರ ಸರಕಾರದ ರಾಷ್ಟ್ರಪತಿಪ್ರಶಸ್ತಿ (2005), ಕರ್ನಾಟಕ ಸರಕಾರದ ರಾಜ್ಯೋತ್ಸವ ಪ್ರಶಸ್ತಿ (2002), ಸಂಸ್ಕೃತ ವಿದ್ವಾಂಸ ಪ್ರಶಸ್ತಿ (1999), ಉತ್ತಮ ಸಂಸ್ಕೃತ ಶಿಕ್ಷಕ ಪ್ರಶಸ್ತಿ (2000) ಹಾಗೂ ಈಗ ದೊರಕಿರುವ ಕರ್ನಾಟಕ ಸರ್ಕಾರದ ಕನಕಶ್ರೀ' ಪ್ರಶಸ್ತಿ. ರಾಘವೇಂದ್ರಮಠ ಮೊದಲಾದ ಪ್ರತಿಷ್ಠಿತಮಠಮಾನ್ಯಗಳಿಂದ ಹಾಗೂ ಅನೇಕ ವಿಶ್ವವಿದ್ಯಾನಿಲಯಗಳಿಂದ 'ವಿದ್ಯಾವಾಚಸ್ಪತಿ', 'ವಿದ್ಯಾರತ್ನಾಕರ', ಜ್ಞಾನರತ್ನಾಕರ', ವಿದ್ಯಾಮಾನ್ಯ ಮಹಾಪ್ರಶಸ್ತಿ', ಮಹಾಮಹೋಪಾಧ್ಯಾಯ ಮೊದಲಾದ ಪ್ರಶಸ್ತಿಗಳು ಇವರಿಗೆ ಸಂದಿವೆ. ಪ್ರಸ್ತುತ ಕನಕಶ್ರೀ ಪ್ರಶಸ್ತಿಯು ಇವರಿಗೆ ಸಂದ ನೂರನೆಯ ಪ್ರಶಸ್ತಿ ಎಂಬುದು ವಿಶೇಷ!

ಭಟ್ಟರ್ ಸ್ಕಾಟ್

- **ಉಜ್ಜನಿ ಜಲೇಂದ್ರ, ಮಲ್ಲುಂಗೆರೆ**

ಭಟ್ರೇ, ಕನಸುಗಳು ರಾತ್ರಿ ಹೊತ್ತಲ್ಲೇ ಯಾಕೆ ಬೀಳುತ್ತವೆ?
– ಹಗಲು ಹೊತ್ತಲ್ಲಿ ಅವೂ ಎದ್ದಿರುತ್ತವಲ್ಲ?!

- **ವಿ.ಹೇಮಂತಕುಮಾರ, ಬೆಂಗಳೂರು**

ಭಟ್ರೇ, ನದಿಗಳು ಇಲ್ಲದ ದೇಶದವರು ನೀರಿಗಾಗಿ ಏನು ಮಾಡ್ತಾರೆ?
– ದೇಶ ಕಟ್ಟುವ ಮುನ್ನ ನೀರಿಗೆ ಕಟ್ಟು ಹಾಕಲೇಬೇಕಲ್ಲ?!

- **ಸತೀಶ ಎಲ್.ವಿ., ಮೈಸೂರು**

ಭಟ್ರೇ, ಕೆಲಸ ಮಾಡುವ ಎಲ್ಲರಿಗೂ ರಜೆ ಸಿಗುತ್ತಾ?
– ಸಿಗುತ್ತೆ.. ಆದರೆ ತಾಯಿಯ ಹೊರತಾಗಿ!

- **ಮಹಾನಂದ ಪಾಟೀಲ, (ಇಮೇಲ್ ಮೂಲಕ)**

ಭಟ್ರೇ, ನಿಮ್ಮ ಒಬ್ಬ ಶಿಷ್ಯ, ಮತ್ತೊಬ್ಬ ಶಿಷ್ಯನ ಬಗ್ಗೆ ಟೀಕಿಸಿದ್ದಾರಲ್ಲ?
– ಅವರಿಬ್ಬರೂ ಒಂದೇ ಪಕ್ಷದಲ್ಲಿದ್ದಿದ್ದರೂ ಹೀಗೆ ಮಾಡುತ್ತಿದ್ದರಾ.. ಗೊತ್ತಿಲ್ಲ!

- **ಶಿವಲಿಂಗಪ್ಪ ಸಿಂಗಶೆಟ್ಟಿ, ಕಲಬುರ್ಗಿ**

ಭಟ್ರೇ, 'ಕರಿಯಾ ಐ ಲವ್ ಯು ದೊಡ್ಡ ಗೌಡರ ಮೇಲಾಣೆ' ಅಂತ ಜಮೀರ್ ಹಾಡಿದರೆ?
– 'ಕುಳ್ಳ ಐ ಲವ್ ಯು.. ವಕ್ಫ್ ಬೋರ್ಡ್ ಮೇಲಾಣೆ' ಎಂದು ಕುಮಾರಣ್ಣ ಹಾಡಬಹುದು!

- **ವೀರೇಶ ಕಮತಗಿ, ಅಡಗೂರು**

ಭಟ್ರೇ, 'ಬಾಲಾ ಬಾಲಾ..' ಅಂತ ಅಕ್ಷಯಕುಮಾರ ಹಾಡು ಹೇಳಿದರೆ, ಜಮೀರ್ ಯಾವ ಹಾಡನ್ನು ಹಾಡಬಹುದು?
– 'ಕಾಲಾ ಕಾಲಾ ಶೆಹತಾನ್ ಕಾ ಸಾಲಾ' ಅಂತ ಹಲ್ಲು ಕಡಿಯುತ್ತಾ ಹಾಡಬಹುದು!

- **ಶ್ರೀದೇವಿ ಹರ್ಷ, ಜೆ.ಪಿ.ನಗರ**

ಭಟ್ರೇ, ಹೆಂಗಸರಿಗೂ, ಹೆಣ್ಣು ಸೊಳ್ಳೆಗೂ ಏನಾದರೂ ಸಾಮ್ಯವಿದೆಯಾ?
– ಎರಡರ ಸ್ವಭಾವವೂ ಕಚ್ಚುವುದು!

- **ವೇಣುಗೋಪಾಲ ಕಂಚಿತೋಟ, ಕಡೂರು**

ಭಟ್ರೇ, ಅಮೆರಿಕನ್ನರು ವಿಚಿತ್ರ ಅಂತ ನಿಮಗೆ ಅನಿಸಿದೆಯಾ?
– ಹೂಂ.. ನಾಲ್ಕು ವರ್ಷಗಳ ಹಿಂದೆ ಟ್ರಂಪ್‌ನನ್ನ ಸೋಲಿಸಿ, ಈ ಸಲ ಆರಿಸಿ ತಂದಿದ್ದನ್ನು ನೋಡಿಯೂ ಈ ಪ್ರಶ್ನೆಯ?!

- **ರಘು ಕೇದಾರ, ಮಂಗಳೂರು**

ಭಟ್ರೇ, ವೇದಿಕೆ ಮೇಲೆ ಕೆಲವರು ಹಸಿಸುಳ್ಳು ಹೇಳ್ತಾರಲ್ಲ?
– ಪ್ರಶಸ್ತಿಗಳು ಅವರನ್ನು ಹುಡುಕಿಕೊಂಡು ಹೋದವು ಅನ್ನೋದು ಆ ಪೈಕಿ ಒಂದು!

ಒಂದು ಹೂವಿನ ಹಿಂದಿರುವ ಕತೆ...

ವಿದೇಶವಾಸಿ
ಕಿರಣ್ ಉಪಾಧ್ಯಾಯ ಬಹ್ರೈನ್
dhyapaa@gmail.com

ಅಕ್ಟೋಬರ್–ನವೆಂಬರ್ ತಿಂಗಳು ಬಂದರೆ ಸಾಕು, ಗ್ರೇಟ್ ಬ್ರಿಟನ್ ತುಂಬ ಕೆಂಪು ಬಣ್ಣದ ನಡುವೆ ಕಪ್ಪು ಬಣ್ಣ ಇರುವ ಪೊಪಿ ಹೂವು ಎಲ್ಲ ಕಡೆ ಕಾಣಿಸುತ್ತದೆ. ಮಕ್ಕಳು, ಮುದುಕರು, ಹೆಣ್ಣು, ಗಂಡು, ಆ ದೇಶ, ಈ ದೇಶ, ಯಾವುದೇ ಭೇದವಿಲ್ಲದೆ ಬಹುತೇಕರು ತಮ್ಮ ಉಡುಪಿನ ಮೇಲೆ ಈ ಸಣ್ಣ ಕೆಂಪು ಹೂವನ್ನು ಧರಿಸಿರುತ್ತಾರೆ. ಇಲ್ಲಿಯ ವ್ಯಾಪಾರಸ್ಥರು, ರಾಜಕಾರಣಿಗಳು, ಸಿರಿವಂತರು, ನೌಕರರು, ಎಲ್ಲರೂ ತಮ್ಮ ಕೋಟು, ಅಂಗಿ ಅಥವಾ ಉಡುಪಿನ ಮೇಲೆ ಎದೆಯ ಎಡಭಾಗದಲ್ಲಿ ಈ ಹೂವನ್ನು ತೊಟ್ಟಿರುತ್ತಾರೆ.

ಅವರು ತೊಡುವುದು ನಿಜವಾದ ಹೂವಲ್ಲ, ಹೂವಿನ ರೂಪದಲ್ಲಿಯೇ ಇರುವ, ವೆಲ್ವೆಟ್, ಪ್ಲಾಸ್ಟಿಕ್ ಅಥವಾ ಕಾಗದದಿಂದ ತಯಾರಿಸಿದ ಹೂವು. ಈ ಹೂವು ನೋಡಲು ನಮ್ಮಲ್ಲಿಯ ಗಸಗಸೆ ಹೂವು ಅಥವಾ ಅಫೀಮಿನ ಹೂವಿನಂತೆ ಕಾಣುತ್ತದೆ. ಅಕ್ಟೋಬರ್ ಮತ್ತು ನವೆಂಬರ್ ತಿಂಗಳಿನಲ್ಲಿ ಗ್ರೇಟ್ ಬ್ರಿಟನ್ನಿನ ಉತ್ತರದಿಂದ ಹಿಡಿದು ದಕ್ಷಿಣದವರೆಗೆ, ಪೂರ್ವದಿಂದ ಹಿಡಿದು ಪಶ್ಚಿಮದವರೆಗೆ ಬಹುತೇಕ ಮನೆಯ ಮುಂದೆ, ರಸ್ತೆ ದೀಪದ ಕಂಬದ ಮೇಲೆ, ರಸ್ತೆಯ ನಡುವೆ ಇರುವ ವೃತ್ತದಲ್ಲಿ, ಕಚೇರಿಯ ಒಳಗೆ, ದೊಡ್ಡ ದೊಡ್ಡ ಕಟ್ಟಡದ ಹೊರಗೆ, ಎಲ್ಲೆಂದರಲ್ಲಿ ರಾರಾಜಿಸುತ್ತಿರುತ್ತದೆ. ಜತೆಗೆ, ನವೆಂಬರ್ 11ನೇ ತಾರೀಖಿನ ಬೆಳಗ್ಗೆ 11 ಗಂಟೆಗೆ ಸರಿಯಾಗಿ, ಎಲ್ಲಿದ್ದರೂ, ಯಾವುದೇ ಕೆಲಸದಲ್ಲಿದ್ದರೂ ಜನರು ಈ ಹೂವನ್ನು ತಮ್ಮ ಉಡುಪಿನ ಮೇಲೆ ತೊಟ್ಟೋ ಕೈಯಲ್ಲಿ ಹಿಡಿದೋ ಎದ್ದು ನಿಂತು, ಎರಡು ನಿಮಿಷದ ಮೌನವನ್ನು ಆಚರಿಸುತ್ತಾರೆ. ಯಾಕೆ ಹೀಗೆ? ಅದರ ಹಿಂದೆ ಒಂದು ಕಥೆ ಇದೆ, ದುಃಖ ಇದೆ, ದೇಶಭಕ್ತಿ ಇದೆ, ಸಮರ್ಪಣಾ ಭಾವವಿದೆ.

1914ರಲ್ಲಿ ಆರಂಭವಾದ ಮೊದಲ ವಿಶ್ವಯುದ್ಧದಲ್ಲಿ ಬ್ರಿಟಿಷ್ ಸಾಮ್ರಾಜ್ಯ, ಅಮೆರಿಕ, ಫ್ರಾನ್ಸ್, ಇಟಲಿ, ರಷ್ಯಾ ಇತ್ಯಾದಿ ದೇಶಗಳು ಒಂದುಕಡೆ, ಜರ್ಮನಿ, ಆಸ್ಟ್ರಿಯಾ–ಹಂಗರಿ, ಒಟ್ಟಮನ್ ಸಾಮ್ರಾಜ್ಯ ಇನ್ನೊಂದು ಕಡೆ ಇದ್ದವು. ಲಕ್ಷಾಂತರ ಸೈನಿಕರು ಬ್ರಿಟಿಷ್ ಸೈನ್ಯ ಸೇರಿಕೊಂಡರು. ಆ ಸಮರದಲ್ಲಿ ಸಾಕಷ್ಟು ಸೈನಿಕರು ಮಡಿದರು, ಅಂಗಾಂಗ ಕಳೆದುಕೊಂಡರು, ಗಾಯಾಳುಗಳಾದರು. ಯುದ್ಧದಲ್ಲಿ ಬದುಕಿ, ಹಿಂತಿರುಗಿ ಮನೆಗೆ ಬಂದವರಲ್ಲೂ ಬಹುತೇಕರು ಮೊದಲಿನಂತಿರಲಿಲ್ಲ. 1918ರ ನವೆಂಬರ್ 11ನೇ ತಾರೀಖಿನಂದು ಬೆಳಗ್ಗೆ 11 ಗಂಟೆಗೆ ಯುದ್ಧ ಮುಗಿಯಿತು ಎಂಬ ಸಂಧಾನಕ್ಕೆ ಸಹಿ ಹಾಕಲಾಯಿತು. ಈ ದಿನವನ್ನು 'ಕದನ ವಿರಾಮದ ದಿನ', 'ಸ್ಮರಣಾ ದಿವಸ' (ರಿಮೆಂಬರನ್ಸ್ ಡೇ) ಅಥವಾ 'ಹಿರಿಯರ ದಿನ' (ವೆಟರನ್ಸ್ ಡೇ) ಎಂದೂ ಆಚರಿಸುತ್ತಾರೆ. ವಾಡಿಕೆಯಲ್ಲಿ, ಮಾಜಿ ಸೈನಿಕರನ್ನು ex-servicemen ಎಂದೂ, ಸೈನಿಕನ ಪತ್ನಿಯನ್ನು veteran ಎಂದೂ ಹೇಳುವುದಿದೆ. ಇಂದಿಗೂ ಯುಕೆ ಮತ್ತು ಯುರೋಪ್‌ನ ಬಹು ಭಾಗದಲ್ಲಿ ಪ್ರತಿ ವರ್ಷ ನವೆಂಬರ್ 11ರಂದು ಬೆಳಗ್ಗೆ 11 ಗಂಟೆಗೆ, ಸೈನಿಕರಿಗೆ ಗೌರವ ಸಲ್ಲಿಸುವುದಕ್ಕೆ ಎರಡು ನಿಮಿಷದ ಮೌನಾಚರಣೆ ನಡೆಯುತ್ತದೆ. ಆ ದಿನಗಳಲ್ಲಿ ಬ್ರಿಟನ್‌ನ ಬಹುತೇಕ ಮನೆಗಳ ಮುಂದೆ, ನಮ್ಮಲ್ಲಿ ದೀಪಾವಳಿಯಲ್ಲಿ ಮನೆಯ ಮುಂದೆ ಹೇಗೆ ಗೂಡುದೀಪ (ಆಕಾಶಬುಟ್ಟಿ) ಹಾಕಿರುತ್ತೇವೆಯೋ ಹಾಗೆಯೇ, ಪೊಪಿ ಹೂವಿನ ಆಕೃತಿಯನ್ನು ಹಾಕಿರುತ್ತಾರೆ. ಜನರು ಪೊಪಿ ಹೂವನ್ನು ಎದೆಗೆ ಅಂಟಿಸಿಕೊಂಡಿರುತ್ತಾರೆ. ಪೊಪಿ ಹೂವೇ ಯಾಕೆ? ಇದರ ಮಹತ್ವ ಏನು? ಅದಕ್ಕೆ ಇತಿಹಾಸವಿದೆ.

ನಾಲ್ಕು ವರ್ಷಗಳ ಕಾಲ ನಡೆದ ವಿಶ್ವಯುದ್ಧದಲ್ಲಿ ಸಾಕಷ್ಟು ಸಾವು–ನೋವುಗಳಾಗಿದ್ದವು. ರಕ್ತದ ನದಿಯೇ ಹರಿದಿತ್ತು. ಆ ಯುದ್ಧದಲ್ಲಿ ಕೆನಡಾದ ವೈದ್ಯ ಲೆಫ್ಟಿನೆಂಟ್ ಕರ್ನಲ್ ಜಾನ್ ಮೆಕ್ರೇ ಕೂಡ ಭಾಗಿಯಾಗಿದ್ದರು. ತಮ್ಮ 41ನೆಯ ವಯಸ್ಸಿನಲ್ಲಿ ಸೇನೆಗೆ ಸೇರಿಕೊಂಡ ಮೆಕ್ರೇ ವೃತ್ತಿಯಲ್ಲಿ ವೈದ್ಯರಾಗಿದ್ದು, ವೈದ್ಯರಾಗಿಯೇ ಸೇನೆ ಸೇರುವ ಅವಕಾಶವಿದ್ದರೂ, ಗನ್ನರ್ ಮತ್ತು ವೈದ್ಯರಾಗಿ ಸೇರಿಕೊಂಡಿದ್ದರು. ಅದು 1915ರ ಮೇ 2ನೆಯ ತಾರೀಖು. ಬೆಲ್ಜಿಯಂನ ಉತ್ತರ ಭಾಗದಲ್ಲಿರುವ ಫ್ಲಾಂಡರ್ಸ್ ಪ್ರದೇಶದಲ್ಲಿ ಕದನ ಕೋಲಾಹಲ ಜೋರಾಗಿತ್ತು. ಇತಿಹಾಸದಲ್ಲಿಯೇ ಮೊದಲ ಬಾರಿಗೆ ಅಂದು ಫ್ರಾನ್ಸ್ ಸೇನೆಯ ವಿರುದ್ಧ ಜರ್ಮನಿ ರಾಸಾಯನಿಕ ಆಯುಧ ಬಳಸಿತ್ತು. ಅಂದು ಮೆಕ್ರೇ ತಮ್ಮ ಆತ್ಮೀಯ ಸ್ನೇಹಿತನನ್ನು ಕಳೆದುಕೊಂಡಿದ್ದರು. ಶೋಕದಲ್ಲಿದ್ದ ಮೆಕ್ರೇ, ಆ್ಯಂಬುಲೆನ್ಸ್‌ನಲ್ಲಿ ಪ್ರಯಾಣಿಸುತ್ತಿದ್ದಾಗ ಯುದ್ಧದ ದಾಳಿಗೆ ಸಿಲುಕಿ ಛಿದ್ರವಾದ, ಶವದ ರಾಶಿಯನ್ನೇ ಹೊದ್ದು ಮಲಗಿದ ಭೂಮಿಯ ನಡುವೆಯೂ ಅರಳಿದ ಕೆಂಪು ಬಣ್ಣದ ಹೂವುಗಳನ್ನು ಕಂಡರು. ವಾಹನದಲ್ಲಿಯೇ ಕುಳಿತು 20 ನಿಮಿಷದಲ್ಲಿ ಒಂದು ಕವಿತೆ ಬರೆದರು. ಅಂದು ಅವರು ಬರೆದ 'In Flanders Fields' ಕವಿತೆ ಇಂಗ್ಲಿಷ್ ಭಾಷೆಯಲ್ಲಿ, ಅದರಲ್ಲೂ ಕೆನಡಾದಲ್ಲಿ ಸಾರ್ವಕಾಲಿಕವಾಗಿ ಶ್ರೇಷ್ಠ ಕವಿತೆಗಳ ಪಟ್ಟಿಯಲ್ಲಿ ಸ್ಥಾನ ಪಡೆಯಿತು.

'ಫ್ಲಾಂಡರ್ಸ್ ಮೈದಾನದಲ್ಲಿ ಸೈನಿಕರ ಶವದ ನಡುವೆ, ಸಾಲು ಸಾಲು ಶಿಲುಬೆಗಳ ಮಧ್ಯದಲ್ಲಿ ಪೊಪಿ ಹೂವುಗಳು ಸಾಲು ಸಾಲಾಗಿ ಅರಳುತ್ತವೆ' ಎಂದು ಆರಂಭವಾಗುವ ಕವಿತೆ, ಪೊಪಿ ಹೂವು, ಸೈನಿಕರು, ಅವರ ತ್ಯಾಗವನ್ನು ಸಾರುವ ಕವಿತೆಯಾಗಿತ್ತು. ಕವಿತೆ ಮೊದಲು ಅವರಿಗೇ ಇಷ್ಟವಾಗಿರಲಿಲ್ಲ, ಮೆಕ್ರೇ ಅದನ್ನು ಮುದ್ದೆ ಕಟ್ಟಿ ಕಸದ ಬುಟ್ಟಿಗೆ ಎಸೆದಿದ್ದರು. ಅವರ ಜತೆಗಿರುವ ಸೈನಿಕನಿಗೆ ಅದು ಬಹಳ ಇಷ್ಟವಾಗಿತ್ತು. ಆತ ಅದನ್ನು ಪುನಃ ಬರೆದು, ಪ್ರಕಟಿಸುವಂತೆ ಒತ್ತಾಯಿಸಿದ. ಮೆಕ್ರೇ ಅದನ್ನು ಪುನಃ ಬರೆದು, 'ದಿ ಸ್ಪೆಕ್ಟೇಟರ್' ಪತ್ರಿಕೆಗೆ ಕಳಿಸಿದಾಗ ಅದು ತಿರಸ್ಕೃತಗೊಂಡಿತ್ತು. ನಂತರ ಅದನ್ನು 'ಪಂಚ್' ಪತ್ರಿಕೆ ಪ್ರಕಟಿಸಿತು, ಕವನ ಜನಪ್ರಿಯವಾಯಿತು. ಯುದ್ಧದ ಕೊನೆಯ ದಿನಗಳಲ್ಲಿ ಮೆಕ್ರೇ ನಿಮೋನಿಯಾದಿಂದ ಸಾವನ್ನಪ್ಪಿದರು. ಅವರ ಶವವೇನೋ ಫ್ರಾನ್ಸ್‌ನಲ್ಲಿ ಮಣ್ಣಾಯಿತು, ಆದರೆ ಅವರ ಕವನ ಇಂದಿಗೂ ಶಾಶ್ವತವಾಗಿ ಉಳಿದಿದೆ.

ಆ ಕವಿತೆ ಬಹಳ ಜನರಿಗೆ ಪ್ರೇರಣೆ ನೀಡಿತಾದರೂ, ಅತಿಯಾಗಿ ಪ್ರೇರೇಪಿತರಾದವರು ಅಮೆರಿಕದ ಪ್ರಾಧ್ಯಾಪಕಿ, ಸೇನೆಯಲ್ಲಿ ಕಾರ್ಯದರ್ಶಿಯ ಕೆಲಸ ಮಾಡುತ್ತಿದ್ದ ಮೊಯ್ನಾ ಮೈಕಲ್ ಮತ್ತು ಫ್ರಾನ್ಸ್‌ನ ಶಿಕ್ಷಕಿ ಅನ್ನಾ ಗುರ್ರೈನ್ ಎಂಬ ಇಬ್ಬರು ಮಹಿಳೆಯರು. ಗುರ್ರೈನ್ ಸಾಹಸಿ ಹೆಣ್ಣು. ಆಕೆ ಯುದ್ಧಕ್ಕೂ ಮೊದಲು ತನ್ನ ಇಬ್ಬರು ಹೆಣ್ಣುಮಕ್ಕಳನ್ನು ಕಟ್ಟಿಕೊಂಡು ಫ್ರಾನ್ಸ್‌ನಿಂದ ಬ್ರಿಟನ್‌ಗೆ ಬಂದಿದ್ದಳು. ಯುದ್ಧ ಆರಂಭವಾದ ನಂತರ ಅಮೆರಿಕಕ್ಕೆ ತೆರಳಿದಳು. ಯುದ್ಧ ಮುಗಿದ ನಂತರ, ಅಮೆರಿಕದ ಕೆಲವು ರಾಜ್ಯಗಳಲ್ಲಿ ಓಡಾಡಿ ಸೈನಿಕರ ಗೌರವ ದಿನ ನಿಗದಿಪಡಿಸುವುದಕ್ಕೆ ಮತ್ತು ಪೊಪಿ ಹೂವನ್ನು ಅದರ ಚಿಹ್ನೆಯನ್ನಾಗಿಸುವುದಕ್ಕೆ ಶ್ರಮಿಸಿದಳು. ನಂತರ ಬ್ರಿಟನ್‌ನ ಲಿವರ್‌ಪೂಲ್‌ಗೆ ಬಂದು ಬ್ರಿಟಿಷ್ ಲೀಜನ್ (ಸೇನೆಯ ನಾಲ್ಕು ವಿಭಾಗದ ನಿವೃತ್ತ ಸೈನಿಕ ಸಂಸ್ಥೆಯ ಒಕ್ಕೂಟ) ಗೆ

ತಿಳಿಸಿ, ಒಪ್ಪಿಸಿದಳು. ಮೊದಲ ಹತ್ತು ಲಕ್ಷ ಹೂವನ್ನು ತಾನೇ ತಯಾರಿಸಿಕೊಟ್ಟಳು.

ಅತ್ತ ಮೊಯ್ನಾ ಕೂಡ ಇದರ ಪ್ರಚಾರ ಮಾಡಿದಳು. ಗುರ್ರೈನ್ ಮತ್ತು ಮೊಯ್ನಾ ಸೇರಿ ಆ ವರ್ಷ ರೇಷ್ಮೆಯಿಂದ ತಯಾರಿಸಿದ ಒಟ್ಟು ತೊಂಬತ್ತು ಲಕ್ಷ ಪೊಪಿ ಹೂವನ್ನು ಬ್ರಿಟಿಷ್ ಲೀಜನ್‌ಗೆ ನೀಡಿದರು. ಅಂದಿನಿಂದ ಅದು 'ಪೊಪಿ ಅಪೀಲ್' (ಪೊಪಿ ಮನವಿ) ಎಂದೇ ಖ್ಯಾತವಾಯಿತು. ಅಂದು ಪೊಪಿ ಅಪೀಲ್‌ನಿಂದ ಒಂದು ಲಕ್ಷ ಪೌಂಡ್‌ಗಿಂತಲೂ ಹೆಚ್ಚಿನ ಹಣ ಸಂಗ್ರಹವಾಯಿತು. ಅದು ನಿವೃತ್ತ ಸೈನಿಕರ, ಸೈನಿಕ ವಿಧವೆಯರ, ಅವರ ಮಕ್ಕಳ ಆರೋಗ್ಯ, ಶಿಕ್ಷಣ, ಉದ್ಯೋಗ ಇತ್ಯಾದಿಗಳಿಗೆ ಉಪಯೋಗಿಸುವ ಕಲ್ಯಾಣ ನಿಧಿಯಾಯಿತು. ನಂತರವೂ ಗುರ್ರೈನ್ ತನ್ನ ಕಾರ್ಯ ಮುಂದುವರಿಸಿ, 1928ರಲ್ಲಿ ಕೊನೆಯುಸಿರು ಎಳೆಯುವವರೆಗೆ, ಪೊಪಿ ತಯಾರಿಸಿ ನ್ಯೂಜಿಲೆಂಡ್‌ಗೆ ಕಳಿಸುತ್ತಿದ್ದಳು. ಇಂದು, ನೂರು ವರ್ಷಗಳ ನಂತರವೂ ಪೊಪಿ ಅಪೀಲ್ ಜಾರಿಯಲ್ಲಿದ್ದು, ಸೈನಿಕರ ಯೋಗಕ್ಷೇಮಕ್ಕೆ ಹಣ ಸಂಗ್ರಹಿಸುತ್ತಿದೆ.

ಅಂದಂತೆ, ಬ್ರಿಟಿಷ್ ಲೀಜನ್ ಪೊಪಿ ತಯಾರಿಸುವ ಕಾರ್ಖಾನೆ ಸ್ಥಾಪಿಸಿತು ಎಂದೆನಲ್ಲ, ಆ ಕಾರ್ಖಾನೆ ಸ್ಥಾಪಿಸಿದ್ದು ಯುದ್ಧಕಾಲದಲ್ಲಿ ಫೀಲ್ಡ್ ಮಾರ್ಷಲ್ ಆಗಿದ್ದ ಡಗ್ಲಾಸ್ ಹೈಗ್‌ನ ಪತ್ನಿ ಲೇಡಿ ಹೈಗ್. ಆರಂಭದಲ್ಲಿ ಅವರ ಬಂಡವಾಳವೆಂದರೆ ಸ್ವಲ್ಪ ಕೆಂಪು ಬಣ್ಣದ ಕಾಗದ ಮತ್ತು ಎರಡು ಕತ್ತರಿ. ಏಕೆಂದರೆ ನೂತನವಾಗಿ ಆರಂಭಗೊಂಡ ಕಾರ್ಖಾನೆಯಲ್ಲಿ ಇಬ್ಬರು ನಿವೃತ್ತ ಸೈನಿಕರು ಮಾತ್ರ ಕೆಲಸ ಮಾಡುತ್ತಿದ್ದರು. ಅದೇ ಕಾರ್ಖಾನೆಯಲ್ಲಿ ಇಂದು ಅಂಗಾಂಗ ಕಳೆದುಕೊಂಡ ಸುಮಾರು 50 ನಿವೃತ್ತ ಸೈನಿಕರು ಕೆಲಸಮಾಡುತ್ತಿದ್ದಾರೆ. ಎಡಿನ್‌ಬಗ್‌ನಲ್ಲಿರುವ ಈ ಒಂದೇ ಕಾರ್ಖಾನೆಯಲ್ಲಿ, ಸ್ಕಾಟ್ಲೆಂಡ್‌ನಲ್ಲಿ ಹಂಚಲೆಂದೇ ಪ್ರತಿ ವರ್ಷ 50 ಲಕ್ಷಕ್ಕೂ ಹೆಚ್ಚು ಪೊಪಿ ಹೂವು ತಯಾರಾಗುತ್ತದೆ. ಅದರೊಂದಿಗೆ ಸುಮಾರು 15 ಸಾವಿರಕ್ಕೂ ಹೆಚ್ಚು ಮಾಲೆಗಳು, 10 ಸಾವಿರಕ್ಕೂ ಹೆಚ್ಚು ಸ್ಮರಣಿಕೆಗಳನ್ನು ಕಾರ್ಖಾನೆ ತಯಾರಿಸುತ್ತದೆ. 2018ರಲ್ಲಿ ಮೊದಲ ಬಾರಿ, ವಿಶ್ವಯುದ್ಧದಲ್ಲಿ ಮಡಿದ ಭಾರತೀಯ ಸೈನಿಕರ ಸ್ಮರಣೆಗಾಗಿ ಖಾದಿ ಪೊಪಿಯನ್ನು ತಯಾರಿಸಲಾಯಿತು.

ಬ್ರಿಟನ್ ಬಿಡಿ, ಇಂದು ಅಮೆರಿಕ, ಕೆನಡಾ, ದಕ್ಷಿಣ ಆಫ್ರಿಕಾ, ಚೀನಾ ಸೇರಿದಂತೆ ವಿಶ್ವದ ಬೇರೆ ಬೇರೆ ಕಡೆಗಳಲ್ಲಿ ಪೊಪಿ ತಯಾರಿಸುವ ಕಾರ್ಖಾನೆಗಳಿವೆ. 40 ಸಾವಿರಕ್ಕೂ ಹೆಚ್ಚು ಸ್ವಯಂಸೇವಕರು, ನೂರ ಇಪ್ಪತ್ತಕ್ಕೂ ಹೆಚ್ಚು ದೇಶದಲ್ಲಿ ಐದು ಕೋಟಿಗೂ ಹೆಚ್ಚು ಪೊಪಿ ಹಂಚುತ್ತಾರೆ. ಎಲ್ಲೂ ಇದಕ್ಕೆ ನಿರ್ದಿಷ್ಟ ಬೆಲೆ ನಿಗದಿಪಡಿಸಲಿಲ್ಲ. ಇಂತಿಷ್ಟೇ ಕೊಡಬೇಕು, ಇಂಥವರಿಗೇ ಕೊಡಬೇಕು ಎಂಬ ನಿಯಮವಿಲ್ಲ. ಇಲ್ಲಿಯೇ ಧರಿಸಬೇಕು, ಹೀಗೇ ಧರಿಸಬೇಕು ಎಂಬ ಕಾನೂನೂ ಇಲ್ಲ. ಇದೊಂದು ಒಳ್ಳೆಯ ಉದ್ದೇಶ ಇಟ್ಟುಕೊಂಡು ಮಾಡುವ 'ಚಾರಿಟಿ' ಕೆಲಸ. ನಮಗೆ ಸರಿ ಎನಿಸುವಷ್ಟನ್ನು ನೀಡಿದರಾಯಿತು. ನಾವು ನೀಡುವ ಪ್ರತಿಯೊಂದು ಪೈಸೆಯೂ ಸೈನಿಕರ ಕಲ್ಯಾಣ ನಿಧಿಗೆ ಸಂದಾಯವಾಗುತ್ತದೆ. ಕಳೆದ ವರ್ಷ ಪೊಪಿ ಅಪೀಲ್‌ನಿಂದ ಸಂಗ್ರಹಿಸಿದ ಹಣದಿಂದ ಎರಡೂವರೆ ಸಾವಿರ ಸೈನಿಕರ ಕುಟುಂಬಗಳು ಲಾಭ ಪಡೆದಿವೆ.

ಇಲ್ಲಿ ಬಹಳ ಇಷ್ಟವಾಗುವ ಸಂಗತಿಯೆಂದರೆ, ಬ್ರಿಟನ್‌ನಲ್ಲಿರುವ ಶಾಲೆ–ಕಾಲೇಜು, ಕಚೇರಿ, ಮಳಿಗೆಗಳೆಲ್ಲ ಸರಿಯಾದ ಸಮಯಕ್ಕೆ ಒಟ್ಟಾಗಿ ನಮನ ಸಲ್ಲಿಸುವುದು. ಬ್ರಿಟಿಷ್ ಪ್ರಜೆಗಳಷ್ಟೇ ಅಲ್ಲದೆ, ಇಲ್ಲಿ ಕೆಲಸಕ್ಕೆಂದು ಬಂದು ನೆಲೆಸಿರುವ ಭಾರತೀಯರೂ, ಅನ್ಯದೇಶೀಯರೂ ಅದರಲ್ಲಿ ಬದ್ಧತೆಯಿಂದ ಪಾಲ್ಗೊಳ್ಳುತ್ತಾರೆ. ಇಸ್ರೇಲ್‌ನಲ್ಲಿಯೂ 'ಸೈನಿಕರ ನೆನಪಿನ ದಿನ'ದಂದು ರಾತ್ರಿ ಎಂಟು ಗಂಟೆಗೆ ಸೈರನ್ ಸದ್ದಾಗುತ್ತದೆ. ಸೈರನ್ ಶಬ್ದ ಕೇಳಿದ ತಕ್ಷಣ ಅಲ್ಲಿಯ ಜನ ಎಲ್ಲ ಕೆಲಸ ಬಿಟ್ಟು, ತಾವು ಇದ್ದಲ್ಲಿಯೇ ಸಾವಧಾನ ಸ್ಥಿತಿಯಲ್ಲಿ ನಿಂತು ಮೌನ ಆಚರಿಸಿ ನಮನ ಸಲ್ಲಿಸುತ್ತಾರೆ.

ಯಾವ ದೇಶದವರೇ ಆಗಲಿ, ಸೈನಿಕರು ಸೈನಿಕರು ತಾನೆ? ಅವರೆಲ್ಲರೂ ಹೋರಾಡುವುದು ಅವರ ನೆಲ, ಜಲ, ಜನರ ರಕ್ಷಣೆಗಾಗಿ. ಅವರು ಬದುಕುವುದಷ್ಟೇ ಅಲ್ಲ, ಪ್ರಾಣ ತ್ಯಾಗ ಮಾಡುವುದೂ ಅವರ ನಾಡಿಗಾಗಿ ವಿನಾ ಸ್ವಂತಕ್ಕಲ್ಲ. ಅಂಥವರಿಗೆ ಗೌರವ ಸೂಚಕ ಒಂದು ಕ್ಷಣಕ್ಕೋ, ಒಂದು ದಿನಕ್ಕೋ ಸೀಮಿತವಲ್ಲ, ಸೈನಿಕರಿಗೆ ಸಿಗುವ ಗೌರವ ಯಾವುದೇ ಪರಿಧಿಗೆ, ಪರಿಮಿತಿಗೆ ಒಳಗಾಗದೇ ವಿಶ್ವದಾದ್ಯಂತ ಪಸರಿಸಲಿ. ಭಾರತದಲ್ಲಿಯೂ ಇಂಥದ್ದೊಂದು ಪದ್ಧತಿ ಆರಂಭವಾದರೆ ಒಳ್ಳೆಯದು ಎಂದು ಅನಿಸುವುದಿಲ್ಲವೇ?

ಕಳಕಳಿ

ನಿತ್ಯಾನಂದ ಹೆಗಡೆ, ಮೂರೂರು

ಉಚಿತ–ಖಚಿತ–ನಿಶ್ಚಿತ ಅಂದ ಯಾವುದಾದರೂ ನಿಜಕ್ಕೂ ಹೇಗೆ ಸಾಧ್ಯ? ಪ್ರತಿ ತಿಂಗಳು ಎಲ್ಲಾ ಮಹಿಳೆಯರಿಗೆ 2,000 ರುಪಾಯಿ ಕೊಡುವುದು ಹೇಗೆ? 200 ಯುನಿಟ್ ವಿದ್ಯುತ್‌ನ ಉಚಿತ ನೀಡಿಕೆ ಹೇಗೆ? ಮಹಿಳೆಯರು ಸರಕಾರಿ ಬಸ್ಸುಗಳಲ್ಲಿ ಉಚಿತವಾಗಿ ಅಡ್ಡಾಡುವುದು ಹೇಗೆ ಸಾಧ್ಯ?

ಇದನ್ನು ಬರೆಯುವಾಗ ಮೊದಲಿಗೆ ಯೋಚನೆಯಲ್ಲಿ ಬರುವುದು ರಾಜ್ಯದ ಅಭಿವೃದ್ಧಿಯ ವಿಷಯ. ಇದರ ಹಲವಾರು ಮಜಲುಗಳಲ್ಲಿ ನೀರು ಮತ್ತು ರಸ್ತೆಗೆ ಮೊದಲ ಆದ್ಯತೆ. ಕರ್ನಾಟಕದಾದ್ಯಂತ ಓಡಾಡಿ ಇವೆರಡನ್ನೂ ಗಮನಿಸಿದರೆ, ಈ ಎರಡೂ ಹಾಳಾಗಿರುವುದು ಗಮನಕ್ಕೆ ಬರುತ್ತದೆ. ಎಲ್ಲಿಂದ ಎಲ್ಲಿಗೆ ಹೊರಟರೂ ರಸ್ತೆ ಕಾಮಗಾರಿಯ ಬಗ್ಗೆ ಶಪಿಸುವಂಥ ಸ್ಥಿತಿಯಿದೆ. ಇನ್ನು ನೀರಂತೂ ವಾರಕ್ಕೊಮ್ಮೆಯೋ ಆಚೆಯೋ ಬರುವಂಥದ್ದು. ವಯಸ್ಸಾದ ವ್ಯಕ್ತಿಗಳ್ಯಾರೂ ಒಂದೇ ಒಂದು ಬಸ್ಸನ್ನು ಏರುವಂತಿಲ್ಲ, ಯಾಕಾಗಿ ಈ 'ಉಚಿತ' ಅಂತ ಮಾಡಿಕೊಂಡು ಒದ್ದಾಡುತ್ತಾರೋ ಗೊತ್ತಾಗುತ್ತಿಲ್ಲ.

ಇವನ್ನೆಲ್ಲಾ ಕೂಡಿ ಅಂತ ಕೇಳಿದ್ದು ಯಾರು? ಹೋಗಲಿ ಅಂದರೆ, ಚುನಾವಣೆಯ ಕಾಲಕ್ಕೊಂದು ಬಜೆಟ್ ಇರದಿರುವುದಾ? ಹೀಗಿರುವಾಗ, ಇಂದು ಸಾರ್ವಜನಿಕ ನೆಲೆಯಲ್ಲಿ ಯಾವುದೇ ಅಭಿವೃದ್ಧಿಯಾಗದಿರುವುದು ಮತ್ತು ಉಚಿತವನ್ನು ಕೊಡಲು ಒದ್ದಾಡುವುದು ಬೇಕಿತ್ತಾ? ಹಾಗಂತ, ಈಗ ಅವನ್ನು ನಿಲ್ಲಿಸಲಾಗದು, ಏಕೆಂದರೆ ಚುನಾವಣಾ ಪೂರ್ವದಲ್ಲಿ ಕೊಟ್ಟ ಆಶ್ವಾಸನೆಯನ್ನು ನೆರವೇರಿಸಬೇಕು; ಇಲ್ಲವಾದರೆ ವಿರೋಧ ಪಕ್ಷದವರು ಅದನ್ನೇ ಹಿಡಿದುಕೊಂಡು, ಹಿಂಡಿ ಹಿಪ್ಪೆ ಮಾಡುತ್ತಾರೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಒಂದೇ ಒಂದು ರಸ್ತೆಯೂ ಸರಿಯಿಲ್ಲ, ದಕ್ಷಿಣ ಕನ್ನಡದಲ್ಲಿ ಇಂಥ ಪರಿಸ್ಥಿತಿಯಿಲ್ಲ, ಯಾಕೆಂದರೆ ರಸ್ತೆಯ ಮೇಲೆ ಸಂಚರಿಸುವ ಬಹುತೇಕ ಬಸ್ಸುಗಳು ಖಾಸಗಿಯವು. ಅಲ್ಲಿ ಹೆಂಗೆಳೆಯರಿಗೆ ಯಾವ ವಿನಾಯಿತಿಯೂ ಇಲ್ಲ, ಸರಕಾರಿ ಬಸ್ಸಿನಲ್ಲಿ ಬೈಲಹೊಂಗಲದಿಂದ ಧರ್ಮಸ್ಥಳಕ್ಕೆ ಪುಕ್ಕಟೆ ಹೋದರೆ ನಷ್ಟವಾಗುವುದು ಸರಕಾರಕ್ಕೇ; ಅದೇ ಉಡುಪಿ, ಮಂಗಳೂರಿನಿಂದ ಹೋಗಲು ಇರುವುದು ಖಾಸಗಿ ಬಸ್ಸುಗಳು, ಹೀಗಾಗಿ ಲಾಭ ಖಾಸಗಿಯವರಿಗೆ. ಅವರ ಒತ್ತಡದಿಂದಾಗಿ ಅಲ್ಲಿನ ರಸ್ತೆಗಳು ರಾಜಮಾರ್ಗದಂತಿವೆ. ಆದರೆ ಉತ್ತರ ಕನ್ನಡ ಜಿಲ್ಲೆ ಮತ್ತು ಉತ್ತರ ಕರ್ನಾಟಕ ಭಾಗದಲ್ಲಿ ಇದೇ 'ಲಾಸ್ ಬಜೆಟ್' ಬಸ್ಸುಗಳು, ಹೀಗಾಗಿ ತನ್ನ ನೌಕರರಿಗೇ ಸಂಬಳ ನೀಡಲಾಗದಂಥ ಸ್ಥಿತಿಯನ್ನು ಅವು ಎದುರಿಸುತ್ತಿವೆ. ಮತ್ತೆ, ಅದು ಓಡಾಡಲು ರಸ್ತೆ ಸರಿಯಾಗಬೇಕೆಂದರೆ ಹೇಗೆ ಸಾಧ್ಯ? 'ಅತ್ತ ದರಿ, ಇತ್ತ ಪುಲಿ'. ನಮ್ಮ ಸರಕಾರ ಮಾಡಿಕೊಂಡ ಮಹಾಭಿಲಾಷೆಯ ಪರಿಣಾಮವನ್ನು ಈಗ ಅನುಭವಿಸದೇ ಗತಿಯಿಲ್ಲ. ಉಡುಪಿ, ದಕ್ಷಿಣ ಕನ್ನಡದಲ್ಲಿ ಆದ ಅಭಿವೃದ್ಧಿ ಇಲ್ಲೇಕೆ ಆಗದು ಎಂದರೆ– ಇಲ್ಲಿ ಸರಕಾರದ್ದೇ ಸಾರಿಗೆ, ಸರಕಾರದ್ದೇ ರಸ್ತೆ. ತಿನ್ನುವವರು ತಿಂದ ಮೇಲೆ ರಸ್ತೆಗೆ ಚೆಲ್ಲಬೇಕಲ್ಲವಾ? ತಿಂದು ಹೆಚ್ಚಾದ ಮೇಲೆ ಇದು ಸುಧಾರಿಸಬಹುದು, ಅಲ್ಲಿಯವರೆಗೆ ಕಾಯೋಣ...

(ಲೇಖಕರು ನಿವೃತ್ತ ಪ್ರಾಂಶುಪಾಲರು)

ಸಾರ್ವಕಾಲಿಕ ಸತ್ಯ ಸಾರಿದ ಕನಕದಾಸರು

ತನ್ನಿಮಿತ್ತ
ಡಾ.ಕರವೀರಪ್ರಭು ಕ್ಯಾಲಕೊಂಡ
vveditoped@gmail.com

ಕನಕದಾಸರು ಕರ್ನಾಟಕ ಹರಿದಾಸ ಸಾಹಿತ್ಯದ ಅಶ್ವಿನಿ ದೇವತೆಗಳಲ್ಲೊಬ್ಬರು, ದಾಸ ಸಾಹಿತ್ಯದ ಸುವರ್ಣಯುಗದ ಪ್ರವರ್ತಕರು. ಮಾಂಡಲೀಕ ದೊರೆತನದ ಆಡಳಿತಗಾರನಾಗಿ, ಸಂಸಾರ ಸುಖಸಾಗರದ ಸಾಮ್ರಾಟರಾಗಿ, ಅಧ್ಯಾತ್ಮ ಸಂಪದದ ಅತ್ಯುನ್ನತ ಶಿಖರಾರೋಹಿಯಾಗಿ, ಸಿರಿತನದ ಸಕಲ ಸೌಭಾಗ್ಯಗಳಲ್ಲಿ ನಿರ್ಮೋಹಿಯಾಗಿ, ಇಹದಲ್ಲಿ ಇದ್ದೂ ಪರವನ್ನು ಗೆದ್ದು ಮಹಾಂತರಾದವರು. ಬದುಕಿನ ತತ್ತ್ವಗಳಿಗೆ ಕಾವ್ಯದ ಸೊಗಡನ್ನು ನೀಡಿ ಸಾರ್ವಕಾಲಿಕ ಸತ್ಯವನ್ನು ಸಾರಿದ ಅವರು ಹುಟ್ಟಿನಿಂದ ಶೂದ್ರನಾಗಿ, ನಿಷ್ಠೆಯಿಂದ ಬ್ರಾಹ್ಮಣನಾಗಿ, ಇಷ್ಟದಿಂದ ಭಾಗವತರಾಗಿ, ಕಟ್ಟಕಡೆಗೆ ದೇವರನ್ನು ಕಂಡು ಪುಣ್ಯಶ್ಲೋಕರೆನಿಸಿದ್ದಾರೆ.

ಕನಕದಾಸರು ಕೀರ್ತನೆ, ಕಾವ್ಯ, ಮುಂಡಿಗೆಗಳನ್ನು ರಚಿಸಿ ಒಟ್ಟು ದಾಸಸಾಹಿತ್ಯದ ಹರವನ್ನು, ವೈವಿಧ್ಯವನ್ನು ಹೆಚ್ಚಿಸಿದ್ದು ಮಾತ್ರವಲ್ಲದೆ, ತಮ್ಮ ಸಮಕಾಲೀನ ವಿಕ್ಷಿಪ್ತ ಪರಿಸರಕ್ಕೆ ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಮತ್ತು ಮಾನವೀಯವಾಗಿ ಸ್ಪಂದಿಸಿ, ಬದುಕಿನ ಮೌಲ್ಯ ಶೋಧನೆಗೆ ತೊಡಗಿದರು. ಹೀಗಾಗಿ ಅವರ ಕೃತಿಗಳು ಎಲ್ಲ ಕಾಲದ ಪ್ರಜ್ಞಾವಂತ ಸಾಹಿತ್ಯಾಸಕ್ತರ ಗಮನ ಸೆಳೆಯಬಲ್ಲ, ಎಂಥ ವಿಮರ್ಶಕರ ಆಹ್ವಾನವನ್ನೂ ಸ್ವೀಕರಿಸಬಲ್ಲ ಎದೆಗಾರಿಕೆ ಯನ್ನು ಪಡೆದಿವೆ ಎನ್ನಲಡ್ಡಿಯಿಲ್ಲ. ದಾಸ ಸಾಹಿತ್ಯವು ಪುರಂದರದಾಸರನ್ನು ಕಳೆದುಕೊಂಡಿದ್ದರೆ ಮುಕ್ಕಾಗುತ್ತಿತ್ತು, ಆದರೆ ಕನಕದಾಸರನ್ನು ಕಳೆದುಕೊಂಡಿದ್ದರೆ ಮೂಲೆಗುಂಪಾಗುತ್ತಿತ್ತು ಎಂಬುದನ್ನು ಮರೆಯುವಂತಿಲ್ಲ.

ಪುರಂದರದಾಸರ ಕೀರ್ತನೆಗಳ ಸಂಖ್ಯೆಗೆ ಹೋಲಿಸಿದರೆ ಕನಕದಾಸರವು ಅಲ್ಪ ಪ್ರಮಾಣದವು ಎನಿಸುತ್ತದೆ. ಆದರೆ ಕನಕದಾಸರ ಕೀರ್ತನೆಗಳ ಸತ್ವವು ಪುರಂದರದಾಸರ ಕೀರ್ತನೆಗಳ ಸತ್ವದೊಂದಿಗೆ ಸಮಸ್ಪರ್ಧಿಯಾಗಬಲ್ಲದು. ಪುರಂದರರ ಕೀರ್ತನೆಗಳಲ್ಲಿಯಂತೆ ಮುಖ್ಯವಾದ ಕಾವ್ಯಗುಣ ಕೇವಲ ಪಲ್ಲವಿಯಲ್ಲಿ ಮಡುಗಟ್ಟಿ, ಉಳಿದ ಚರಣಗಳಲ್ಲಿ ಅದರ ಸಮರ್ಥನೆಯ ತರ್ಕವಾಗಿಯೋ ಅಥವಾ ಪಲ್ಲವಿಯಲ್ಲಿನ ಧ್ವನಿಯನ್ನು ವಾಚ್ಯವಾಗಿ ವಿವರಿಸುವ ಪದ್ಧತಿಯಲ್ಲಿಯೋ ಪರ್ಯವಸಾನವಾ ಗುವುದು ಕನಕರಲ್ಲಿ ಕಡಿಮೆಯೆಂದು ಹೇಳಬಹುದು. ಕನಕರಲ್ಲಿ ಕಂಡುಬರುವ ಆಶ್ಚರ್ಯ, ಜಿಜ್ಞಾಸೆಗಳು ಬೇರೆಯವರಲ್ಲಿ ವಿರಳವೆನ್ನಬಹುದು ಎಂಬ ಜಿ.ಎಸ್.ಶಿವರುದ್ರಪ್ಪನವರ ಅಭಿಪ್ರಾಯವನ್ನು ಗಮನಿಸಿದಾಗ, ಕನಕರ ಕೀರ್ತನೆಗಳ ಅಂತಃಸತ್ವ ಮತ್ತು ಹಿರಿಮೆ–ಗರಿಮೆಗಳು ಅರಿವಾಗುತ್ತವೆ.

ಕೀರ್ತನಕಾರ, ದಾರ್ಶನಿಕ, ಸಮಾಜ ಸುಧಾರಕ ಈ ಎಲ್ಲವೂ ಆಗಿದ್ದ ಕನಕರು, ಭಕ್ತರಾಗಿಯೂ ಸ್ವಬಂಡಾಯ ಮನೋಧರ್ಮದ ಚಿಕಿತ್ಸಕರಾಗಿದ್ದರು. ಕಾವ್ಯಪ್ರತಿಭೆಯ ಪ್ರದರ್ಶನಕ್ಕೆ ಭಾಷಾ ಪ್ರೌಢಿಮೆ, ಹೊಗಳಿಕೆಗಳನ್ನು ಸಾಮಾನ್ಯವಾಗಿ ಸಾಮಗ್ರಿ ಮಾಡಿಕೊಳ್ಳುತ್ತಿದ್ದ ಆ ಕಾಲದಲ್ಲಿ ಅನುಭವ–ಅಭಿವ್ಯಕ್ತಿಯನ್ನು ಏಕಮಾಡಿಕೊಂಡು ಸಾಹಿತ್ಯ ರಚಿಸಿದ ಅವರು, ''ಎಲ್ಲಾರು ಮಾಡುವುದು ಹೊಟ್ಟೆಗಾಗಿ, ಗೇಣು ಬಟ್ಟೆಗಾಗಿ'' ಎಂಬ ಕೀರ್ತನೆಯಲ್ಲಿ ಮಾನವ ಬದುಕಿನ ಸಿದ್ಧಾಂತವನ್ನು ತೋರಿಸಿದ್ದಾರೆ, ಬದುಕಿನ ಬೆಡಗನ್ನು ಬಣ್ಣಿಸುತ್ತಲೇ ಅದರ ಗುಟ್ಟನ್ನು ರಟ್ಟಾಗಿಸಿದ್ದಾರೆ.

ಲಕ್ಷ್ಮೀಶ, ಕುಮಾರವ್ಯಾಸ, ಪುರಂದರರ ಹಾಗೆ ವೈಷ್ಣವ ಭಕ್ತಿಪಂಥಕ್ಕೆ ಸೀಮಿತರಾಗದ ಕನಕರು, ''ದಾಸದಾಸರ ಮನೆಯ ದಾಸಿಯರ ಮಗ ನಾನು, ಸಾಸಿರ ನಾಮದೊಡೆಯ ರಂಗಯ್ಯನ ಮನೆಯ ಶಂಕುದಾಸರ ಮನೆಯ ಮಂಕುದಾಸನು ನಾನು, ಬಿಂಕದಿ ಬಾಗಿಲ ಕಾಯ್ವ ಬಡದಾಸ ನಾನಯ್ಯ, ಕಾಳಿದಾಸರ ಮನೆಯ ಕೀಳುದಾಸನು ನಾನು'' ಎಂದು ಮೊರೆಯಿಟ್ಟು, ಮೌಢ್ಯ–ಕಂದಾಚಾರ, ಅನಿಷ್ಟ ನಂಬಿಕೆಗಳನ್ನು ಟೀಕಿಸಿದ್ದಾರೆ. ಹಿಂದೂ ಧರ್ಮಕ್ಕೆ ಶಾಪವಾಗಿದ್ದ ಶ್ರೇಣೀಕೃತ ವರ್ಣವ್ಯವಸ್ಥೆಯನ್ನು ಹೋಗಲಾಡಿಸಿ ಎಂದು ಕರೆನೀಡುವ ಕನಕರು, ತಮ್ಮನ್ನು ಈ ನಿಟ್ಟಿನಲ್ಲಿ ವಿರೋಧಿಸಬಂದವರಿಗೆ ''ಆತ್ಮ ಯಾವ ಕುಲ? ಜೀವ ಯಾವ ಕುಲ?'' ಎಂದು ಕೇಳುತ್ತಾರೆ.

ಕುಲವನ್ನು ಖಂಡಿಸುವಲ್ಲಿ ಬಸವೇಶ್ವರ, ಸರ್ವಜ್ಞರಷ್ಟೇ ಧೈರ್ಯವನ್ನು ಕನಕರು ತೋರಿಸಿದ್ದಾರೆ. ಕುಲಾಚಾರ ವನ್ನು ಮಾಡುವ ಸಮಾಜಕ್ಕೆ, ''ಕುಲ ಕುಲ ಕುಲವೆಂದು ಹೊಡೆದಾಡದಿರಿ ನಿಮ್ಮ ಕುಲದ ನೆಲೆಯನೇನಾದರೂ ಬಲ್ಲಿರಾ?'' ಎಂದು ಧೈರ್ಯವಾಗಿ ಸವಾಲೆಸೆದಿದ್ದಾರೆ. ಕುಲ–ಜಾತಿಗಳ ತಾರತಮ್ಯ ಖಂಡಿಸುವ ಕನಕರ ನಿಷ್ಠು ರತೆ, ಸ್ಪಷ್ಟತೆ ಮಿಕ್ಕ ದಾಸರ ಕೀರ್ತನೆಗಳಲ್ಲಿ ಕಾಣುವುದು ಕಮ್ಮಿ. ಗ್ರಾಮೀಣ ಪರಿಸರದಲ್ಲಿ ಬೆಳೆದ ಕನಕದಾಸರು, ಆ ಗ್ರಾಮೀಣ ಸತ್ವವನ್ನು ತಮ್ಮ ಕೀರ್ತನೆಯ ತತ್ತ್ವಗಳಲ್ಲಿ ಹಿಡಿದಿಡುವಲ್ಲಿ ಯಶಸ್ವಿಯಾಗಿದ್ದಾರೆ. ಕನಕರ ಪ್ರಾಮಾಣಿಕ ದೃಷ್ಟಿಗೆ ಕಪಟ ಕೃತ್ಯಗಳು ಒಗ್ಗುವುದಿಲ್ಲ, ಆದ್ದರಿಂದಲೇ ಅವರ ಆಕ್ಷೇಪಣೆಯ ಧಾಟಿ ಕಟುವಾಗಿರುತ್ತದೆ. ದಿಟವಿದ್ದಲ್ಲಿ ದಿಟ್ಟತನ ತಪ್ಪದಷ್ಟೇ!

ಕನಕರ ಪ್ರತಿ ಮಾತಿನಲ್ಲೂ ಉಪದೇಶಾಮೃತವಿದೆ. ಸಮಾಜದ ನಿಮ್ನವರ್ಗದಿಂದ ಬಂದ ಒಂದೇ ಕಾರಣಕ್ಕೆ ಅನುಭವಿಸಬೇಕಾಗಿ ಬಂದ ಅವಮಾನ– ಅಪಹಾಸ್ಯಗಳಿಂದಾಗಿ ಪಟ್ಟ ಸಂಕಟ, ಒತ್ತಡಗಳ ನಡುವೆ ಅವರು ಹೊಮ್ಮಿಸಿದ ಜೀವಸಂದೇಶ ಅಮೂಲ್ಯವಾ ದುದು. ಆ ಹುಟ್ಟಿನ ಕಾರಣಕ್ಕಾಗಿ ಅನುಭವಿಸಿದ ಸಮಾಜನಿರ್ಮಿತ ನೆಲೆಗಳನ್ನು ಕಿತ್ತೆಸೆಯಲು ಅನುಸರಿಸಿದ ನಿಷ್ಠುರ ಕ್ರಿಯೆಗಳಿಂದಾಗಿ ಕನಕರಿಗೆ ಮಹತ್ವ ಬರುತ್ತದೆ.

ರಾಮಧಾನ್ಯ ಚರಿತ್ರೆ, ಮೋಹನ ತರಂಗಿಣಿ, ನಳಚರಿತ್ರೆ, ಹರಿಭಕ್ತಿಸಾರ, ನೃಸಿಂಹಸ್ತವ ಮುಂತಾದ ಕೃತಿಗಳನ್ನಲ್ಲದೆ, ಕೀರ್ತನೆಗಳು, ಮುಂಡಿಗೆಗಳು, ಸುಳಾದಿಗಳು, ಉಗಾಭೋಗಗಳನ್ನು ರಚಿಸಿದ ಕನಕರು, ಸಮಾಜ ಸಂಘಟನೆ ಮತ್ತು ಪರಿವರ್ತನೆಗಳಲ್ಲಿ ಸರಿಸಾಟಿಯಿಲ್ಲವೆಂಬಂತೆ ದುಡಿದರು. ಅಂದಿನವರು, ಇಂದಿನವರು ಮತ್ತು ಮುಂದಿನವರು ಮರೆಯಲು ಸಾಧ್ಯವಾಗದಂತೆ ಬಾಳಿ ಬದುಕಿದ ಮಹಾಚೇತನ ಕನಕದಾಸರು.

''ಕನಕದಾಸರಲ್ಲಿ ವಿಚಾರ ಸ್ವಾತಂತ್ರ್ಯ, ಜನಜೀವನದ ಜನಭಾಷೆಯ ಅರಿವು ಹೆಚ್ಚು. ತಮ್ಮ ಎಷ್ಟೋ ಕೀರ್ತನೆಗಳಲ್ಲಿ ಅವರು ಸಮಾಜದ ಕುಂದುಕೊರತೆಗಳ ಕುರಿತು ಮುಚ್ಚುಮರೆಯಿಲ್ಲದೆ ನುಡಿದಿದ್ದಾರೆ. ಅವರ ಕಳಕಳಿ ನೈಜ, ಮಾತು ಹರಿತ, ನಿರೀಕ್ಷಣೆ ತೀವ್ರ ಎಂಬುದು ಇದರಿಂದ ತಿಳಿಯುತ್ತದೆ'' ಎಂದಿದ್ದಾರೆ ರಂ.ಶ್ರೀ.ಮುಗಳಿ ಅವರು. ಮತ್ತೊಂದೆಡೆ ವರದರಾಜರಾಯರು, ''ಕೆಚ್ಚು ನುಡಿ, ಭಕ್ತಿಪಾರಮ್ಯ, ರಹಸ್ಯ ತತ್ತ್ವ ವಿಶಾಲದೃಷ್ಟಿಗಳು ಕನಕದಾಸರ ಕೀರ್ತನೆಯ ಮುಖ್ಯ ಲಕ್ಷಣಗಳು. ಇವನ್ನು ಪುನಃ ಓದಿ ಓದಿ ತಿಳಿಯಬಹುದೇ ಹೊರತು ಒಮ್ಮೆ ಪಠಿಸಿ ಬಿಡುವಂತಿಲ್ಲ. ಕನಕದಾಸರ ನಡೆ ಆಧ್ಯಾತ್ಮಿಕ ಲೋಕದಲ್ಲಿ ಒಂದು ಮುನ್ನಡೆ. ಅವರ ನುಡಿ ಮಾನವಕೋಟಿಗೆ ಒಂದು ಕನ್ನಡಿ'' ಎಂದು ಮಾರ್ಮಿಕವಾಗಿ ಹೇಳಿದ್ದಾರೆ.

ವಚನ ಸಾಹಿತ್ಯದಲ್ಲಿ ಕಂಡುಬರುವ 'ಬೆಡಗಿನ ವಚನ'ಗಳಂತೆ, ಕನಕದಾಸರು ರಚಿಸಿರುವ ಮುಂಡಿಗೆಗಳು 'ಕನಕ ಮುಂಡಿಗೆ'ಗಳೆಂದೇ ಪ್ರಖ್ಯಾತವಾಗಿದ್ದು, ಅವರ ಮತ್ತೊಂದು ಮುಖವನ್ನು ಪರಿಚಯಿಸುವಲ್ಲಿ ಯಶಸ್ವಿಯಾಗಿವೆ. ಈ ಮುಂಡಿಗೆಗಳಲ್ಲಿ ಚಮತ್ಕಾರದ ಜತೆಜತೆಯಲ್ಲೇ ಪಾಂಡಿತ್ಯ, ತತ್ತ್ವಜ್ಞಾನ, ಆತ್ಮಾನುಭವ ಮುಂತಾದವು ಆಕರ್ಷಕವಾಗಿ ವ್ಯಕ್ತಗೊಂಡಿವೆ. ಅವನ್ನು ಅರ್ಥಮಾಡಿಕೊಳ್ಳುವುದು ಅಂದುಕೊಂಡಷ್ಟು ಸುಲಭವಲ್ಲ, ಆದ್ದರಿಂದಲೇ, ''ಕನಕನನ್ನು

ಇಂದು ಕನಕದಾಸ ಜಯಂತಿ



ಕೆಣಕಬಾರದು, ಕೆಣಕಿದ ಮೇಲೆ ತಿಣುಕಬಾರದು'' ಎಂಬ ಮಾತು ಹುಟ್ಟಿಕೊಂಡಿರಬೇಕು!

ಕನ್ನಡ ಸಾಹಿತ್ಯದ ಮುಖ್ಯವಾಹಿನಿಯು ಮೊದಲಿನಿಂದಲೂ ಹರಿಯುತ್ತಿದ್ದುದು ಅರಮನೆ ಮತ್ತು ಕೋಟೆ–ಕೊತ್ತಲಗಳ ಸುತ್ತಲಿನ ಕಂದಕದ ಕಡೆಗೆ. ಆದರೆ, ಸಮಕಾಲೀನ ಜೀವನವನ್ನು ಸ್ಪಷ್ಟವಾಗಿ ನೋಡುವ, ನಡೆಯುವ, ಅಳೆಯುವ, ಮಾರ್ಪಡಿಸುವ, ವಿಮರ್ಶೆಗೆ ಗುರಿಮಾಡಿ ಹೊಸದಿಕ್ಕಿಗೆ ಒಯ್ಯುವ ಸಾಮಾಜಿಕ ಧ್ಯೇಯೋದ್ದೇಶದಿಂದ ಕವಿತ್ವವನ್ನು ಸಮಕಾಲೀನವಾಗಿ ಸ್ಪಂದಿಸುವಂತೆ ಬಳಸಿಕೊಂಡು ಕ್ರಾಂತಿಯ ಕಿಚ್ಚನ್ನು ನಿಗಿನಿಗಿ ಎನ್ನುವಂತೆ ಮಾಡಿದವರು ಕನಕದಾಸರು. ಸಾಹಿತ್ಯ, ಜೀವನ ಮತ್ತು ನೈತಿಕ ಮೌಲ್ಯಗಳ ನಿರೂಪಣೆಯ ಕಾರಣದಿಂದಾಗಿ ದಾಸಶ್ರೇಷ್ಠರಾಗಿ ಪರಿಗಣಿಸಲ್ಪಟ್ಟಿದ್ದಾರೆ ಕನಕರು. ಈ ವಿಭೂತಿ ಪುರುಷರು ಸಂತರಾಗುವ ಮುನ್ನ ದಣ್ಣಾಯಕರಾಗಿದ್ದರು ಎಂಬುದನ್ನು, ''ದೊರೆತನವ ಬಿಡಿಸಿ, ಸುಸ್ಥಿರ ಮಾರ್ಗ ತೋರಿಸಿದೆ, ನರಮಾತ್ರದವನೆನದೆ ಹರಿಯೆ...'' ಎಂಬ ಅವರದೇ ಸಾಲು ಹೇಳುತ್ತದೆ. ವ್ಯಕ್ತಿಯು ಹುಟ್ಟಿದ ನೆಲೆ ಮುಖ್ಯವಲ್ಲ, ಆತ ಮುಟ್ಟಿದ ಭೇದರಹಿತ ಎತ್ತರಕ್ಕೆ ಬೆಲೆ ಎಂಬುದನ್ನು ಕನಕರು ಸ್ವಾನುಭವಪೂರ್ಣವಾಗಿ ಹೇಳಿದ್ದಾರೆ. ಇದು ಸಾರ್ವತ್ರಿಕ ಸತ್ಯ.

ಅತೀವ ವಿಚಾರವಂತರಾಗಿದ್ದ ಕನಕದಾಸರು, ಮೇಲ್ವರ್ಗದವರ ಖುಷಿಗಾಗಿ ಹುಟ್ಟುಹಾಕಲಾಗಿದ್ದ ಬೆತ್ತಲೆ ಸೇವೆಯ ಕುರಿತು ಮನನೊಂದು, ಅವಿದ್ಯೆ, ಅಜ್ಞಾನ, ಮೌಢ್ಯಗಳ ಕತ್ತಲ ಕೋಣೆಯಲ್ಲಿ ಕಾಲ ಕಳೆಯುತ್ತಿದ್ದ ಜನಸಾಮಾನ್ಯರಿಗೆ ತಿಳಿಹೇಳಲು ಯತ್ನಿಸಿದ್ದು ಸರ್ವಕಾಲಕ್ಕೂ ಸ್ತುತ್ಯರ್ಹವಾದುದು. ಕಂದಾಚಾರಗಳನ್ನು, ಅರ್ಥವಿಲ್ಲದ ಆಚರಣೆಗಳನ್ನು ಕನಕರಂತೆ ಬೇರಾವ ದಾಸರೂ ಖಂಡಿಸಿಲ್ಲ. ಜನಪದ ಭಾಷೆಯ ಸಾಧ್ಯತೆಗಳನ್ನೆಲ್ಲ ಸೂರೆಮಾಡಿ ಸೆರೆಹಿಡಿದು ಕೊಟ್ಟ ಕನಕರು, ಉಪ್ಪು–ಹುಳಿ–ಖಾರವಿಲ್ಲದ ದಾಸಸಾಹಿತ್ಯದ ಸಪ್ಪೆ ಅಭಿವ್ಯಕ್ತಿಗೆ ಚುರುಕುತನವನ್ನು ತಂದುಕೊಟ್ಟವರು.

ದಾಸ ಸಾಹಿತ್ಯ ಕ್ಷೇತ್ರದಲ್ಲಿ ವಟವೃಕ್ಷದಂತೆ ಬೆಳೆದು ನಿಂತಿದ್ದ ಕನಕರು, ಕರ್ನಾಟಕದಲ್ಲಿ ಮಾತ್ರವಲ್ಲದೆ ಅನ್ಯಪ್ರಾಂತ್ಯಗಳಲ್ಲೂ ಹೆಸರುವಾಸಿಯಾಗಿದ್ದರು. ಕೇರಳದ ಅನಂತಶಯನಂ ಊರ ಬಳಿಯಲ್ಲಿರುವ 'ಕನಕನ ಕೊಳ', ರಾಜಸ್ಥಾನದ ಜೈಪುರ ಅರಮನೆಯ ಮುಂದಿರುವ 'ಕನಕ ಬೃಂದಾವನ' ಎಂಬ ಸ್ಥಳನಾಮಗಳು ಇದಕ್ಕೆ ಸಾಕ್ಷಿಯಾಗಿವೆ. ''ಕನಕ, ಮೀರು ಬಂಗಾರ ತುಣಕ, ಕನ್ನಡ ಕವುಲೆಲ್ಲ ನೂವೆನಕ'' (ಕನಕ, ನೀನು ಬಂಗಾರದ ತುಣುಕು, ಕನ್ನಡ ಕವಿಗಳಲ್ಲೆಲ್ಲ ನೀನು ಅಗ್ರಗಣ್ಯ) ಎಂಬ ಆಂಧ್ರದವರ ಪ್ರಶಂಸೆ ಇಂಥ ಮತ್ತೊಂದು ನಿದರ್ಶನ.

•••

ಸಮಾಜದ ಸ್ಥಿತಿಗತಿಗಳನ್ನು ತೆರೆದ ಕಣ್ಣಿಂದ ನೋಡಿದ ಕನಕದಾಸರು ಜಾತಿವರ್ಗಗಳ ಅನಿಷ್ಟವನ್ನು ನಿಷ್ಠುರವಾಗಿ ಖಂಡಿಸಿದ್ದಾರಲ್ಲದೆ, 'ಭಕ್ತವರ್ಗ'ವೆಂಬ ಜಾತ್ಯತೀತ ಸಮಾಜವನ್ನು 'ಭಕ್ತಿಮೌಲ್ಯ'ದಿಂದ ಕಟ್ಟಿದ್ದಾರೆ. ವ್ಯಂಗ್ಯ, ವಿಡಂಬನೆ, ಮಾರ್ಮಿಕ ನುಡಿಗಟ್ಟಿನಿಂದ ಸಮಾಜವನ್ನು ಚಿಂತನೆಗೆ ಹಚ್ಚಿದವರು ಕನಕರು. ಆದರೆ, ಅವರು ತಮ್ಮ ಸಮಕಾಲೀನ ಸಮಾಜದಲ್ಲಿ ಕಂಡು ಖಂಡಿಸಿದ್ದ ಅಪಮೌಲ್ಯಗಳು ಇಂದಿಗೂ ಹೇಗೋ ಮುಂದುವರಿದುಕೊಂಡು ಉಳಿದಿವೆ. ಪ್ರಗತಿಪರ ಸಮಾಜದ ನಿರೀಕ್ಷೆಯಲ್ಲಿರುವ ನಾವು, ಕನಕದಾಸರ ಬೋಧನೆಗಳನ್ನು ಇಂದಿಗೂ ಅನ್ವಯಿಸಿ, ಪುನರುಚ್ಚರಿಸಿ, ಬೇರುಬಿಟ್ಟ ಅನಿಷ್ಟಗಳಿಂದ ಪಾರಾಗಬೇಕಿದೆ. ಆಗ ಮಾತ್ರವೇ ಅರ್ಥಪೂರ್ಣವಾದ ಆಧ್ಯಾತ್ಮಿಕ ವಾತಾವರಣ ನಮ್ಮ ಮಧ್ಯೆ ತಲೆ ಎತ್ತೀತು. ತಮ್ಮ ಕಾಲಕ್ಕೆ ಕನಕರು ಕಂಡುಕೊಂಡ ಸತ್ಯವು ಇಂದಿಗೂ, ಮುಂದೆಯೂ ಮಾರ್ಗದರ್ಶಿ. ಅಂತೆಯೇ, ಕನಕದಾಸರು ಸಾರ್ವಕಾಲಿಕ ಸತ್ಯವನ್ನು ಸಾರಿದ ಸಂತರಾಗಿದ್ದಾರೆ.

(ಲೇಖಕರು ವಿಶ್ರಾಂತ ಜಿಲ್ಲಾ ಶಸ್ತ್ರಚಿಕಿತ್ಸಕರು)

ನಾರದ ಸಂಚಾರ



ಕಲಹಪ್ರಿಯ
naadigru@gmail.com

ಬಲೆಗೆ ಬಿದ್ದ ತಿಮಿಂಗಿಲ

ಅತ್ಯಾಧುನಿಕ ತಂತ್ರಜ್ಞಾನಗಳ ಕುರಿತು ಸಿಬ್ಬಂದಿಗೆ ಮಾಹಿತಿ ಮತ್ತು ತರಬೇತಿ ನೀಡಿ, ಜನರಿಗೆ ಒದಗಿಸುವ ಸುರಕ್ಷತಾ ಸೇವೆಯನ್ನು ಮತ್ತಷ್ಟು 'ಹೈಟೆಕ್' ಆಗಿಸುವ ನಿಟ್ಟಿನಲ್ಲಿ ಪೊಲೀಸ್ ಇಲಾಖೆ ಹರಸಾಹಸ ಪಡುತ್ತಿದ್ದರೆ, ಮತ್ತೊಂದೆಡೆ ಲಂಚ ತೆಗೆದುಕೊಳ್ಳೋ ವಿಷಯದಲ್ಲಿ ಪೊಲೀಸಪ್ಪನೊಬ್ಬ 'ಹೈಟೆಕ್' ಆಗಲು ಹವಣಿಸಿದ ಸುದ್ದಿ ಗುಜರಾತಿನಿಂದ ವರದಿಯಾಗಿದೆ. ಅಲ್ಲಿನ ನವಸಾರಿ ಜಿಲ್ಲೆಯ ಧೋಲೈ ಬಂದರಿನಲ್ಲಿನ ಪೊಲೀಸ್ ಠಾಣೆಯ ಠಾಣಾಧಿಕಾರಿಯು, ತನಗೆ ಲಂಚದ ಸ್ವರೂಪದಲ್ಲಿ 1.44 ಲಕ್ಷ ರುಪಾಯಿ ಬೆಲೆಯ

'ಐಫೋನ್ 16 ಪ್ರೊ' ಅನ್ನು ಕೊಡುವಂತೆ ಇಂಧನ ವ್ಯಾಪಾರಿಯೊಬ್ಬರಿಗೆ ಡಿಮಾಂಡ್ ಮಾಡಿದ್ದನಂತೆ; ಒಂದೊಮ್ಮೆ ತನ್ನ ಬೇಡಿಕೆಗೆ ಮಣಿಯದಿದ್ದಲ್ಲಿ ಬಂದರು ಪ್ರದೇಶದಲ್ಲಿ ಇಂಧನ ವ್ಯವಹಾರವನ್ನು ಮುಚ್ಚಿಸಬೇಕಾಗುತ್ತದೆ ಎಂದು ಧಮಕಿಯನ್ನೂ ಹಾಕಿದ್ದನಂತೆ! ಇದರ ವಾಸನೆ ಹಿಡಿದ ಭ್ರಷ್ಟಾಚಾರ ನಿಗ್ರಹ ದಳದವರು ನಿಬ್ಬೆರಗಾಗಿ, ''...why ಫೋನ್!... ಅವರಿಗೆ ಯಾಕಂತೆ iPhone..''? ಎಂದು ಹೇಳುತ್ತಲೇ ಬಲೆ ಬೀಸಿದರಂತೆ... ಸಾಗರ ತೀರದ ಠಾಣೆಯಲ್ಲಿ ಆಡಿಕೊಂಡಿದ್ದ ಈ ಲಂಚದ 'ತಿಮಿಂಗಿಲ' ಬಲೆಗೆ ಬಿತ್ತಂತೆ!

'iPhone'ಮನೆ ಹಾಳಾಗ್ಲಿ, Phone a friend ಆಪ್ಷನ್ ತಗೊಂಡು ಯಾರಾದ್ರೂ ಗೆಳೆಯರಿಗೆ ಮಾಮೂಲಿ ಫೋನ್‌ನಲ್ಲೇ ಕರೆಮಾಡಿ ನೆರವು ಪಡೆಯೋಣ ಅಂದ್ರೆ, ಆ ಪೊಲೀಸಪ್ಪನ ಪಾಲಿಗೆ ಅದು 'ಕೌನ್ ಬನೇಗಾ ಕರೋಡ್‌ಪತಿ' ಸೆಟ್ ಆಗಿರಲಿಲ್ಲ, ಬದಲಿಗೆ ಭ್ರಷ್ಟಾಚಾರ ನಿಗ್ರಹ ದಳದವರ ಬಲೆ ಆಗಿತ್ತು. ಹೀಗಾಗಿ, ಆತ ಪಿಳಿಪಿಳಿ ಕಣ್ಣು ಬಿಟ್ಕೊಂಡು ಕೂತ್ಕೋಬೇಕಾಗಿ ಬಂತಂತೆ. ಇಂಧನ ವ್ಯವಹಾರವನ್ನು ಮುಚ್ಚಿಸುವ ಬೆದರಿಕೆ ಹಾಕಿದ್ದ ಠಾಣಾಧಿಕಾರಿಯೇ ಬಾಯಿ ಹಾಗೂ ಮತ್ತೊಂದನ್ನು ಮುಚ್ಚಿಕೊಂಡು ತನ್ನ ಅಂಗಡಿಯನ್ನೂ ಮುಚ್ಚಬೇಕಾಗಿ ಬಂದಿದ್ದು ವಿಪರ್ಯಾಸವಲ್ಲವೇ? 'ಸುಮ್ಮನಿರಲಾರದೆ ಅದೆಲ್ಲಿಗೋ ಇರುವೆ ಬಿಟ್ಕೊಂಡ್ರು,' ಅಂತಾರಲ್ಲ, ಹಾಗಾಯ್ತು ಈ ಕಥೆ!

ಬೆಟ್ಟಿಂಗ್ ಶೂರರ ದರ್ಬಾರು

ಚನ್ನಪಟ್ಟಣ, ಶಿಗ್ಗಾವಿ ಮತ್ತು ಸಂಡೂರು ವಿಧಾನಸಭಾ ಕ್ಷೇತ್ರಗಳಿಗೆ ಉಪಚುನಾವಣೆ ನಡೆದಿದ್ದು ಆಯಿತು. ಜನರು ಒತ್ತಿರುವ ಅಂಗೀಕಾರದ ಮುದ್ರೆಗಳು ವಿದ್ಯುನ್ಮಾನ ಮತಯಂತ್ರದಲ್ಲಿ ಬೆಚ್ಚಗೆ ಕುಳಿತಿವೆ. ಚುನಾವಣಾ ಆಯೋಗದವರು ಈ ಬುಟ್ಟಿಯ ಮುಚ್ಚಳ ತೆಗೆದು 'ಫಲಿತಾಂಶ' ಎಂಬ ಹಾವನ್ನು ಸದ್ಯದಲ್ಲೇ ಹೊರಬಿಡಲಿದ್ದಾರೆ. ಆಯಾ ಕ್ಷೇತ್ರಗಳ, ಆಯಾ ಅಭ್ಯರ್ಥಿಗಳ ಅಭಿಮಾನಿಗಳು ಈ ವಿಷಯದಲ್ಲಿ ಈಗಾಗಲೇ ಸಾಕಷ್ಟು ಕುತೂಹಲಿಗಳಾಗಿದ್ದಾರೆ. ಆದರೆ, ಈ ಬಿಸಿಯಲ್ಲಿ ಮೈಕಾಯಿಸಿಕೊಳ್ಳಲು ಹೊರಟಿರುವುದು ಕೆಲವಷ್ಟು ಬೆಟ್ಟಿಂಗ್ ಶೂರರು.

ಯಾವ ಕ್ಷೇತ್ರದಲ್ಲಿ ಯಾರು ಗೆಲ್ತಾರೆ ಅನ್ನೋದರ ಬಗ್ಗೆ ಸಮಾಜದ ವಿವಿಧ ಸ್ತರಗಳಲ್ಲಿ ಈಗಾಗಲೇ 'ಜೂಜಿನ ಲೆಕ್ಕಾಚಾರ' ಶುರುವಾಗಿದೆಯಂತೆ. ಈ ಬಾಬತ್ತಿನಲ್ಲಿ ಹೆಚ್ಚು ಕುತೂಹಲ ಕೆರಳಿಸಿರೋದು ಚನ್ನಪಟ್ಟಣ ಕ್ಷೇತ್ರ. ಕಾರಣ, ಮತದಾನಕ್ಕೆ ಕೆಲವು ದಿನ ಮುಂಚಿನವರೆಗೂ ಕಾಂಗ್ರೆಸ್‌ನ ಯೋಗೇಶ್ವರ್ ಕಡೆಗೆ ತೂಗುತ್ತಿದ್ದ ತಕ್ಕಡಿಯು, 'ಕರಿಯಣ್ಣ–ಕುಳ್ಳಣ್ಣ' ಎಂಬ ಆರೋಪ–ಪ್ರತ್ಯಾರೋಪಗಳ ಬೆಳವಣಿಗೆಯಾಗುತ್ತಿದ್ದಂತೆ ಬಿಜೆಪಿ–ಜೆಡಿಎಸ್ ಮೈತ್ರಿಕೂಟದ ನಿಖಿಲ್ ಕುಮಾರಸ್ವಾಮಿ ಕಡೆಗೆ ವಾಲಿರುವ ಲಕ್ಷಣಗಳಿವೆ ಎನ್ನಲಾಗುತ್ತಿದೆ. ಬೆಟ್ಟಿಂಗ್ ಮಹಾಶಯರಿಗೆ ಬೇಕಾಗೋದೂ ಇಂಥ 'ತೂಗಾಟದ ಪರಿಸ್ಥಿತಿ'ಯೇ. ಆದರೆ, ಕುರಿ, ಕೋಳಿ, ಮೇಕೆ, ಹಸುಗಳನ್ನು ಮಾತ್ರವಲ್ಲದೆ ಹೊಲ–ಗದ್ದೆ–ತೋಟವನ್ನೂ ಹೀಗೆ ಬೆಟ್ಟಿಂಗ್‌ನಲ್ಲಿ ಪಣವಾಗಿಡುವ ಅತಿರೇಕಿಗಳೂ ಅಲ್ಲಲ್ಲಿ ಇದ್ದಾರಂತೆ. 'ಜೂಜಿನ ಆಮಿಷಕ್ಕೆ ಬಲಿಯಾಗಿ ಬದುಕನ್ನೇ ಮೂರಾಬಟ್ಟೆ ಮಾಡ್ಕೋಬೇಡಿ' ಅನ್ನೋದು ನಾರದರ ಹಿತೋಕ್ತಿ, ಅಷ್ಟೇ!

ನಾರಾಯಣ ನಾರಾಯಣ!

''ಬಿಜೆಪಿ ಮತ್ತು ಆರೆಸ್ಸೆಸ್ ಪಾಲಿಗೆ ಸಂವಿಧಾನದ ಪುಸ್ತಕವು ಖಾಲಿಯಾಗಿರಬಹುದು; ಆದರೆ ಕಾಂಗ್ರೆಸ್ ಮತ್ತು 'ಇಂಡಿಯ' ಒಕ್ಕೂಟದ ಪಾಲಿಗೆ ಅದು ದೇಶದ ಡಿಎನ್‌ಎ. ಇದು ಸೈದ್ಧಾಂತಿಕ ಹೋರಾಟ'' ಎಂಬ ಕಾಂಗ್ರೆಸ್ ನಾಯಕರೊಬ್ಬರ ಹೇಳಿಕೆಯನ್ನು ಕಂಪ್ಯೂಟರ್‌ನಲ್ಲಿ ಕಂಪೋಸ್ ಮಾಡಿಕೊಂಡ ಉಪಸಂಪಾದಕರೊಬ್ಬರು, ''ಸರ್, ಇದನ್ನು ನಗೆಹನಿ ವಿಭಾಗದಲ್ಲಿ ಪ್ರಕಟಿಸಿದ್ರೆ ಹೇಗಿರುತ್ತೆ?'' ಅಂತ ಪತ್ರಿಕೆಯ ಸಂಪಾದಕರನ್ನು ಕೇಳಿ ಹಿಗ್ಗಾಮುಗ್ಗಾ ಬೈಸಿಕೊಂಡರಂತೆ!!

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6332393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:9, Issue: 329

ಸಮಾಚಾರ ಸಣ್ಣದಲ್ಲ

ಉ.ಪ್ರ ಬೆಂಕಿ ದುರಂತ: ಎನ್ನೆಚ್ಚಾರ್ಸಿ ನೋಟಿಸ್

ದೆಹಲಿ: ಉತ್ತರ ಪ್ರದೇಶದ ಝಾನ್ಸಿ ನಗರದಲ್ಲಿನ ಮಹಾರಾಣಿ ಲಕ್ಷ್ಮೀಬಾಯಿ ವೈದ್ಯಕೀಯ ಕಾಲೇಜು-ಆಸ್ಪತ್ರೆಯ ಮಕ್ಕಳ ವಾರ್ಡ್‌ನಲ್ಲಿ ಶುಕ್ರವಾರ ರಾತ್ರಿ ಸಂಭವಿಸಿದ ಬೆಂಕಿ ದುರಂತದಲ್ಲಿ 10 ನವಜಾತ ಶಿಶುಗಳು ಮೃತಪಟ್ಟ ಘಟನೆ ಸಂಬಂಧ ಉತ್ತರ ಪ್ರದೇಶ ಸರಕಾರ ಮತ್ತು ರಾಜ್ಯ ಪೊಲೀಸ್ ಮಹಾನಿರ್ದೇಶಕರಿಗೆ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ(ಎನ್‌ಎಚ್‌ಆರ್‌ಸಿ) ನೋಟೀಸ್ ಜಾರಿ ಮಾಡಿದೆ. ಅಗ್ನಿ ದುರಂತದ ವರದಿಗಳು ಬಹಳ ಗೊಂದಲಕಾರಿಯಾಗಿವೆ, ಮತ್ತು ನಿರ್ಲಕ್ಷ್ಯವನ್ನು ಎತ್ತಿ ತೋರುತ್ತಿವೆ ಎಂದಿರುವ ಎನ್‌ಎಚ್‌ಆರ್‌ಸಿ, ಶಿಶುಗಳು ಸರಕಾರಿ ಸಂಸ್ಥೆಯ ಆರೈಕೆಯಲ್ಲಿದ್ದ ಕಾರಣ ಸಂತ್ರಸ್ತರ ಮಾನವ ಹಕ್ಕುಗಳ ಗಂಭೀರ ಉಲ್ಲಂಘನೆಯಾಗಿದೆ ಎಂದು ಸ್ಪಷ್ಟವಾಗಿ ಹೇಳಿದೆ. ಸಮರ್ಪಕ ಹಾಗೂ ವಿವರವಾದ ವರದಿಯನ್ನು ವಾರದೊಳಗೆ ಸಲ್ಲಿಸುವಂತೆ ರಾಜ್ಯ ಮುಖ್ಯ ಕಾರ್ಯದರ್ಶಿ ಮತ್ತು ಪೊಲೀಸ್ ಮಹಾನಿರ್ದೇಶಕರಿಗೆ ನೋಟಿಸ್ ನೀಡಲಾಗಿದೆ ಎಂದು ಹೇಳಿದೆ. ಇಂಥ ದುರಂತ ಮರುಕಳಿಸದಂತೆ ಮಾಡಲು ಅಧಿಕಾರಿಗಳು ಕೈಗೊಂಡ ಕ್ರಮಗಳ ಬಗೆಗೂ ತಿಳಿಯಲು ಬಯಸುವುದಾಗಿ ಆಯೋಗ ಹೇಳಿದೆ.

ಎಎಪಿ ಸದಸ್ಯತ್ವ, ಸಚಿವ ಸ್ಥಾನ ತ್ಯಜಿಸಿದ ಕೈಲಾಶ್

ದೆಹಲಿ: ದೆಹಲಿಯ ಆಮ್ ಆದ್ಮಿ ಪಕ್ಷದ(ಎಎಪಿ) ಸರಕಾರದಲ್ಲಿನ ಗೃಹ, ಸಾರಿಗೆ, ಐಟಿ ಮತ್ತು ಮಹಿಳಾ-ಮಕ್ಕಳ ಅಭಿವೃದ್ಧಿ ಸಚಿವ ಕೈಲಾಶ್ ಗೆಹ್ಲೋಟ್ ರಾಜೀನಾಮೆ ನೀಡಿದ್ದಾರೆ. ಜತೆಗೆ ಪಕ್ಷದ

ಪ್ರಾಥಮಿಕ ಸದಸ್ಯತ್ವಕ್ಕೂ ರಾಜೀನಾಮೆ ಸಲ್ಲಿಸಿದ್ದಾರೆ. ದೆಹಲಿ ವಿಧಾನಸಭಾ ಚುನಾವಣೆಗೆ ಕೆಲ ತಿಂಗಳಷ್ಟೇ ಬಾಕಿಯಿರುವಾಗಲೇ ಹಿರಿಯ ನಾಯಕ ಕೈಲಾಶ್ ಗೆಹ್ಲೋಟ್ ಪಕ್ಷದಿಂದ ದೂರವಾಗಿರುವುದು ಆಮ್ ಆದ್ಮಿ ಪಕ್ಷಕ್ಕೆ(ಎಎಪಿ) ಭಾರೀ ಹೊಡೆತ ನೀಡಿದಂತಾಗಿದೆ. ಕೈಲಾಶ್ ರಾಜೀನಾಮೆ ಪತ್ರವನ್ನು ಎಎಪಿ ಸಂಚಾಲಕ, ಮಾಜಿ ಸಿಎಂ ಅರವಿಂದ್ ಕೇಜ್ರಿವಾಲ್ ಅವರಿಗೇ ರವಾನಿಸಿದ್ದು, ಪಕ್ಷ ಎದುರಿಸುತ್ತಿರುವ ಗಂಭೀರ ಸವಾಲುಗಳನ್ನು ಉಲ್ಲೇಖಿಸಿದ್ದಾರೆ. ಅಲ್ಲದೆ, ದೆಹಲಿ ಜನರಿಗೆ ಪಕ್ಷ ಚುನಾವಣೆ ವೇಳೆ ನೀಡಿದ್ದ ಅನೇಕ ಭರವಸೆಗಳನ್ನು ಈಡೇರಿಸಿಯೇ ಇಲ್ಲ ಎಂದೂ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಯಮುನಾ ನದಿ ಶುದ್ಧಗೊಳಿಸುವ ಭರವಸೆ ನೀಡಿದ್ದೆವು. ಆದರೆ, ಈಗ ಯಮುನಾ ನದಿ ಮೊದಲಿಗಿಂತಲೂ ಹೆಚ್ಚು ಕಲುಷಿತವಾಗಿದೆ. ಜನರ ಹಕ್ಕುಗಳಿಗಾಗಿ ಹೋರಾಡುವ ಬದಲು ಎಎಪಿ ತನ್ನದೇ ಕಾರ್ಯಸೂಚಿಗೆ ಗಮನ ಕೇಂದ್ರೀಕರಿಸಿದೆ. ದೆಹಲಿ ಜನರಿಗೆ ಮೂಲ ಸೇವೆಗಳನ್ನು ಒದಗಿಸುವ ಸರಕಾರದ ಸಾಮರ್ಥ್ಯವನ್ನು ದುರ್ಬಲಗೊಳಿಸಿದೆ. ಸರಕಾರ ಬಹುಪಾಲು ಸಮಯವನ್ನು ಕೇಂದ್ರ ಸರಕಾರದ ಜತೆಗಿನ ಹೋರಾಟಕ್ಕೆ ಮೀಸಲಿಟ್ಟರೆ ಪ್ರಗತಿ ಹೇಗೆ ಸಾಧ್ಯ ಎಂದು ಪ್ರಶ್ನಿಸಿದ್ದಾರೆ.

ಸೈಬರ್ ಕ್ರೈಮ್ ಹಣ ದುಬೈಗೆ; ಮೂವರ ಸೆರೆ

ಸೂರತ್: ದುಬೈಗೆ ಅಕ್ರಮ ಹಣ ವರ್ಗಾವಣೆ ಮಾಡುತ್ತಿದ್ದ ಸೈಬರ್ ಅಪರಾಧಿಗಳ ಜಾಲವನ್ನು ಭೇದಿಸಿರುವ ಸೂರತ್ ಪೊಲೀಸರು, ಮೂವರನ್ನು ಬಂಧಿಸಿದ್ದಾರೆ. ದುಬೈಗೆ ಹಣ ವರ್ಗಾಯಿಸಲು ಬಳಸುತ್ತಿದ್ದ 281 ಬ್ಯಾಂಕ್ ಖಾತೆಗಳನ್ನೂ ಸ್ಥಗಿತಗೊಳಿಸಲಾಗಿದೆ. ಗುಜರಾತ್ ಪೊಲೀಸ್‌ನ ಸ್ಪೆಷಲ್ ಆಪರೇಷನ್ ಗ್ರೂಪ್ ಭಾನುವಾರ ನಡೆಸಿದ ದಾಳಿಯಲ್ಲಿ ಸೈಬರ್ ಕ್ರೈಮ್ ಚಟುವಟಿಕೆಗಳ ಆರೋಪಿಗಳಾದ ಸಫಿಯಾ ಮಂಜಿಲ್ ಕಟ್ಟಡದ ಮಾಲೀಕ ಮತ್ತು ಇಬ್ಬರು ಪುತ್ರರನ್ನು ಬಂಧಿಸಿದರು. ಮಕ್ಬೂಲ್ (58) ಮತ್ತು ಆತನ ಇಬ್ಬರು ಮಕ್ಕಳಾದ ಕಾಸಿಫ್ (32) ಮತ್ತು ಮಜ್ (25) ಬಂಧಿತರು. ಸೂರತ್ ಪೊಲೀಸ್ ಕಮಿಷನರ್ ಅನುಪಮ್ ಸಿಂಗ್ ಗೆಹ್ಲೋಟ್ ಈ ಮಾಹಿತಿ ನೀಡಿದ್ದು, 281 ಬ್ಯಾಂಕ್ ಖಾತೆ ಸ್ಥಗಿತ ಜತೆಗೇ ಹಲವು ಪಾಸ್ ಬುಕ್‌ಗಳು, ಡೆಬಿಟ್ ಕಾರ್ಡ್‌ಗಳು ಮತ್ತು ಲ್ಯಾಪ್‌ಟಾಪ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. ಜಾಲದಲ್ಲಿ ಭಾಗಿಯಾಗಿರುವ ಇನ್ನೂ ಹಲವು ಆರೋಪಿಗಳಿದ್ದಾರೆ. ಎಲ್ಲಾ ಆರೋಪಿಗಳ ವಿರುದ್ಧ ದೇಶದ ವಿವಿಧ ನಗರಗಳಲ್ಲಿ 210 ಎಫ್‌ಐಆರ್ ದಾಖಲಿಸಲಾಗಿದೆ.

ಲಷ್ಕರೆ ತಯ್ಯಬಾ ಹೆಸರಲ್ಲಿ ಆರ್‌ಬಿಐಗೆ ಬೆದರಿಕೆ ಕರೆ

ಮುಂಬೈ: ಭಾರತೀಯ ರಿಸರ್ವ್ ಬ್ಯಾಂಕ್(ಆರ್‌ಬಿಐ)ಗೆ ಲಷ್ಕರ್ ಎ ತಯ್ಯಬಾ ಹೆಸರಲ್ಲಿ ಬಾಂಬ್ ಸ್ಫೋಟದ ಬೆದರಿಕೆ ಕರೆ ಬಂದಿದೆ. ಆರ್‌ಬಿಐನ ಗ್ರಾಹಕ ಸೇವಾ ಸಂಖ್ಯೆಗೆ ಕರೆ ಮಾಡಿದ ವ್ಯಕ್ತಿ, ತಾನು ಲಷ್ಕರ್-ಎ-ತಯ್ಯಬಾದ ಸಿಇಒ ಎಂದು ಹೇಳಿಕೊಂಡಿದ್ದಾನೆ. ಕರೆಯನ್ನು ಗಂಭೀರವಾಗಿ ಪರಿಗಣಿಸಿ ಆರ್‌ಬಿಐ ಭದ್ರತಾ ಸಿಬ್ಬಂದಿ ನೀಡಿದ ದೂರಿನ ಮೇರೆಗೆ ಮಾತಾ ರಮಾಬಾಯಿ ಮಾರ್ಗ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಇದೇ ವೇಳೆ, ಮುಂಬೈನ ಜೆಎಸ್‌ಎ ಕಾನೂನು ಸೇವಾ ಸಂಸ್ಥೆ 'ಬಲ್ಲಾರ್ಡ್ ಪೇರ್ ಮತ್ತು ಜೆಎಸ್‌ಎ ಕಚೇರಿ ಕಮಲಾ ಮಿಲ್ ಲೋವರ್ ಪರ್ಲ್‌ಗೆ ಬಾಂಬ್ ಬೆದರಿಕೆಯ ಇಮೇಲ್ ಫರ್ಜಾನ್ ಅಹ್ಮದ್ ಎಂಬವನ ಖಾತೆಯಿಂದ ಬಂದಿದೆ.

{ರಾಹುಲ್ ಗಾಂಧಿ } ಪ್ರತಿಪಕ್ಷ ನಾಯಕ

ಮಣಿಪುರದಲ್ಲಿ ಮತ್ತೆ ಹಿಂಸಾಚಾರ ಆರಂಭಗೊಂಡಿದೆ. ಇಂಫಾಲ, ಜಿರಿಭಾಮ್ ಸೇರಿದಂತೆ 6-7 ಜಿಲ್ಲೆಗಳಲ್ಲಿ ನೆತ್ತರು ಹರಿಯುತ್ತಿದೆ. ಇದೆಲ್ಲವೂ ಮನಸ್ಸಿಗೆ ಆಘಾತ ಉಂಟು ಮಾಡಿದೆ. ಈಶಾನ್ಯದ ರಾಜ್ಯ ಹಿಂಸೆಯಲ್ಲಿ ನಲುಗುತ್ತಾ ವರ್ಷವೇ ಕಳೆದರೂ ಕೇಂದ್ರ ಮತ್ತು ರಾಜ್ಯದಲ್ಲಿನ ಬಿಜೆಪಿ ಸರಕಾರ ಸರಿಯಾದ ಕ್ರಮ ಕೈಗೊಳ್ಳುತ್ತಿಲ್ಲ. ಮರಳಿ ಶಾಂತಿ ಸ್ಥಾಪನೆಗೆ ಶ್ರಮಿಸುತ್ತಿಲ್ಲ.

ಎರಡು ರಾಜ್ಯಗಳ ಮತದಾನಕ್ಕೆ ಒಂದೇ ದಿನ ಬಾಕಿ | ಮಹಾರಾಷ್ಟ್ರ 288, ಜಾರ್ಖಂಡ್ 38 ಕ್ಷೇತ್ರ

ಜಾರ್ಖಂಡ್ ಮಹಾ ಪ್ರಚಾರಕ್ಕೆ ಸಂಜೆ ತೆರೆ

ಮುಂಬೈ/ರಾಂಚಿ: ಮಹಾರಾಷ್ಟ್ರ ಮತ್ತು ಜಾರ್ಖಂಡ್ (2ನೇ ಹಂತ) ವಿಧಾನಸಭೆ ಚುನಾವಣೆ ಬುಧವಾರ ನಡೆಯಲಿದ್ದು, ಬಹಿರಂಗ ಪ್ರಚಾರಕ್ಕೆ ಸೋಮವಾರ ಸಂಜೆ 5ರ ವೇಳೆಗೆ ತೆರೆ ಬೀಳಲಿದೆ.

ಮಹಾರಾಷ್ಟ್ರದ 288 ವಿಧಾನಸಭಾ ಕ್ಷೇತ್ರಗಳಿಗೆ ಒಂದೇ ಹಂತದಲ್ಲಿ ಹಾಗೂ ಜಾರ್ಖಂಡ್‌ನ 38 ವಿಧಾನಸಭಾ ಕ್ಷೇತ್ರಗಳಿಗೆ ಎರಡನೇ ಹಂತದಲ್ಲಿ ನ.20ರ ಬುಧವಾರ ಮತದಾನ ನಡೆಯಲಿದೆ. ನ.23ರಂದು ಎರಡೂ ರಾಜ್ಯಗಳಲ್ಲಿನ ವಿಧಾನಸಭೆ ಚುನಾವಣೆಯ ಮತಗಳ ಎಣಿಕೆ ನಡೆಯಲಿದೆ.

2014ರಲ್ಲಿ ನಡೆದ ವಿಧಾನಸಭೆ ಚುನಾವಣೆಯಲ್ಲಿ ಮಹಾರಾಷ್ಟ್ರದಲ್ಲಿ ಶೇ.63.38ರಷ್ಟು ಮತದಾನವಾಗಿದ್ದರೆ, 2019ರಲ್ಲಿ ಮತದಾನ ಪ್ರಮಾಣ ತಗ್ಗಿತು. ಶೇ.61.44 ಮತದಾನವಾಗಿತ್ತು. ಆದರೆ, ಈ ಬಾರಿ ಏರಿಕೆ ಆಗಲಿದೆ. ಕಾರಣ ಮತದಾರರಲ್ಲಿ ಮತದಾನದ ಪ್ರಾಮುಖ್ಯತೆ ಬಗ್ಗೆ ಅರಿವು ಮೂಡಿದೆ. ಜನರಲ್ಲಿ ಜಾಗೃತಿ ಮೂಡಿದೆ. ಈ ಬಾರಿಯ ಮತದಾನ ಪ್ರಮಾಣ ಏರಿಕೆ ಆಗಲಿದೆ ಎಂಬುದು ಚುನಾವಣಾ ಆಯೋಗದ ನಿರೀಕ್ಷೆಯಾಗಿದೆ.

ಮಹಾರಾಷ್ಟ್ರ ವಿಧಾನಸಭಾ ಚುನಾವಣಾ ಪ್ರಚಾರವು ಅಂತಿಮ ಹಂತಕ್ಕೆ ಪ್ರವೇಶಿಸುತ್ತಿದ್ದಂತೆ, ಎಲ್ಲಾ ರಾಜಕೀಯ ಪಕ್ಷಗಳು ಕಡೆಕ್ಷಣದ ಪ್ರಚಾರ ಕಾರ್ಯವನ್ನು ಬಿರುಸುಗೊಳಿಸಿವೆ. ಬಹಿರಂಗ ಪ್ರಚಾರ ಕೊನೆಗೊಳ್ಳಲು ಕೆಲವೇ ಗಂಟೆಗಳಷ್ಟೇ ಬಾಕಿ ಇರುವುದರಿಂದ ಎಲ್ಲಾ ರಾಜಕೀಯ ಪಕ್ಷಗಳಲ್ಲೂ ತರಾತುರಿ ಓಡಾಟ, ಬಿಟ್ಟೂಬಿಡದೇ ಪ್ರಚಾರ, ಪಕ್ಷದೊಳಗೆ ಪರಾಮರ್ಶೆ ಸಭೆಗಳು ನಡೆಯುತ್ತಿವೆ.

ಇನ್ನೊಂದೆಡೆ, ಚುನಾವಣಾ ಆಯೋಗವೂ ಎರಡೂ ರಾಜ್ಯಗಳಲ್ಲಿನ ಮತದಾನ ಸಿದ್ಧತೆಯನ್ನು ಕಡೆಯದಾಗಿ ಪರಿಶೀಲಿಸುತ್ತಿದೆ. ಅದೇ ಕಾರಣವಾಗಿ ಚುನಾವಣಾ ಆಯೋಗದ ವಿಶೇಷ ವೀಕ್ಷಕರಾಗಿ ರಾಮಮೋಹನ್ ಮಿಶ್ರಾ ಅವರು ಮಹಾರಾಷ್ಟ್ರದಲ್ಲಿ ಶನಿವಾರ ಮತ್ತು ಭಾನುವಾರ ಅಧಿಕಾರಿಗಳ ಜತೆ ಸರಣಿ ಸಭೆಗಳನ್ನು ನಡೆಸಿದರು.

ನಾಗಪುರದಲ್ಲಿಯೂ ಸಭೆ ನಡೆಸಿದ ಮಿಶ್ರಾ, ಮತದಾರರಿಗೆ ಎಲ್ಲಾ ಬಗೆಯ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕು. ಕುಡಿಯಲು ನೀರು, ವಿಶೇಷಚೇತನರಿಗೆ ಗಾಲಿಕುರ್ಚಿ, ಮತಗಟ್ಟೆ ಸಿಬ್ಬಂದಿಗೆ ಶೌಚಾಲಯ, ಉಳಿದುಕೊಳ್ಳಲು ವ್ಯವಸ್ಥೆ ಮಾಡಬೇಕು ಎಂದು ನಿರ್ದೇಶನ ನೀಡಿದರು. ನಾಗಪುರ ಜಿಲ್ಲೆಯಲ್ಲಿ 45.25 ಲಕ್ಷ ಮತದಾರರಿದ್ದಾರೆ. 22.63 ಲಕ್ಷ ಪುರುಷರು, 22.61 ಲಕ್ಷ ಮಹಿಳಾ ಮತದಾರರಿದ್ದಾರೆ. 4610 ಮತಗಟ್ಟೆಗಳನ್ನು ವ್ಯವಸ್ಥೆ ಮಾಡಲಾಗಿದೆ



ನಾಗಪುರದಲ್ಲಿ ಭಾನುವಾರ ರಾಜ್ಯ ಚುನಾವಣಾಧಿಕಾರಿಗಳ ಜತೆ ಸಭೆ ನಡೆಸಿದ ಚುನಾವಣಾ ಆಯೋಗದ ವಿಶೇಷ ವೀಕ್ಷಕ ರಾಮಮೋಹನ್ ಮಿಶ್ರಾ

ಚುನಾವಣಾ ಆಯೋಗ ಕಟ್ಟುನಿಟ್ಟಿನ ಪರಿಶೋಧನೆ

ಮಹಾರಾಷ್ಟ್ರ ಮತ್ತು ಜಾರ್ಖಂಡ್ ವಿಧಾನಸಭಾ ಚುನಾವಣೆಗಳ ಕಣದಲ್ಲಿ ಕೇಂದ್ರ ಸಚಿವರು, ಮುಖ್ಯಮಂತ್ರಿಗಳು, ಹಿರಿಯ ಸಚಿವರು, ರಾಜಕೀಯ ಧುರೀಣರ ಎಂಬ ಭೇದವಿಲ್ಲದೇ ಚುನಾವಣಾ ಪ್ರಚಾರದಲ್ಲಿ ಭಾಗಿಯಾಗುತ್ತಿರುವ ಎಲ್ಲಾ ಪ್ರಮುಖ ನಾಯಕರು ಸಂಚರಿಸುವ ವಾಹನ, ಹೆಲಿಕಾಪ್ಟರ್, ಅವರ ಬ್ಯಾಗ್‌ಗಳನ್ನೂ ಬಿಡದೇ ಚುನಾವಣಾ ಆಯೋಗದ ಅಧಿಕಾರಿಗಳು ಪರಿಶೋಧನೆಗೆ ಒಳಪಡಿಸುತ್ತಿದ್ದಾರೆ.
ಭಾನುವಾರ ಮಹಾರಾಷ್ಟ್ರದಲ್ಲಿ ಎನ್‌ಸಿಪಿ (ಶರದ್ ಬಣ) ಹಿರಿಯ ನಾಯಕ ಶರದ್ ಪವಾರ್ ಅವರ ಕೈಚೀಲವನ್ನೂ ಬಿಡದೇ ತಪಾಸಣೆ ಮಾಡಲಾಗಿದೆ. ಮುಖ್ಯಮಂತ್ರಿ ಏಕನಾಥ್ ಶಿಂದೆ ಅವರು ಸಂಚಾರ ಕೈಗೊಂಡ ಹೆಲಿಕಾಪ್ಟರನ್ನೂ ಪರಿಶೋಧನೆ ಮಾಡಲಾಗಿದೆ.
ರಾಜಕೀಯ ಪಕ್ಷಗಳು, ಅದರಲ್ಲೂ ಪ್ರತಿಪಕ್ಷಗಳು ಈ ಪರಿಶೋಧನಾ ಕ್ರಮಕ್ಕೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದರೂ ಚುನಾವಣಾ ಆಯೋಗದ ಅಧಿಕಾರಿಗಳು ತಲೆ ಕೆಡಿಸಿಕೊಳ್ಳದೇ ತಪಾಸಣಾ ಪ್ರಕ್ರಿಯೆ ಮುಂದುವರಿಸಿದ್ದಾರೆ.

ಮಹಾರಾಷ್ಟ್ರ	
ಒಟ್ಟು ಕ್ಷೇತ್ರ 288	
ಮಹಿಳಾ ಮತದಾರರು	4.70 ಕೋಟಿ
ಪುರುಷ ಮತದಾರರು	5.00 ಕೋಟಿ
ತೃತೀಯ ಲಿಂಗಿ	6,101
ಒಟ್ಟು ಮತದಾರರು	9.70 ಕೋಟಿ
ಯುವಜನ	1.88 ಕೋಟಿ
ಶತಾಯುಷಿಗಳು	47,282
ವಿಶೇಷಚೇತನರು	6.41 ಲಕ್ಷ

ಮಹಾರಾಷ್ಟ್ರ ಮತಗಟ್ಟೆ	
ಒಟ್ಟು	1,00,186
ನಗರ	42,604
ಗ್ರಾಮೀಣ	57,582

ಅಮಿತ್ ಶಾ 4 ರ‍್ಯಾಲಿಗಳು ರದ್ದು

ಮಹಾರಾಷ್ಟ್ರದಲ್ಲಿ ಕೊನೆ ಹಂತದಲ್ಲಿ ಭಾನುವಾರ 4 ಕಡೆ 'ಮಹಾಯುತಿ' ಅಭ್ಯರ್ಥಿಗಳ ಪರವಾಗಿ ಬೃಹತ್ ರ‍್ಯಾಲಿಗಳನ್ನು ನಡೆಸಬೇಕಿದ್ದ ಕೇಂದ್ರ ಗೃಹ ಸಚಿವ ಅಮಿತ್ ಶಾ, ಕಡೆ ಕ್ಷಣದಲ್ಲಿ ಚುನಾವಣಾ ಪ್ರಚಾರ ಸಭೆಗಳನ್ನು ರದ್ದುಗೊಳಿಸಿ ದೆಹಲಿಗೆ ವಾಪಸಾದರು. 4 ರ‍್ಯಾಲಿಗಳಿಗಾಗಿಯೇ ಶನಿವಾರವೇ ಮುಂಬೈಗೆ ಬಂದು ರ‍್ಯಾಡಿಸನ್ ಹೋಟೆಲ್‌ನಲ್ಲಿ ತಂಗಿದ್ದ ಅಮಿತ್ ಶಾ, ಮಣಿಪುರದಲ್ಲಿ ಹಿಂಸಾಚಾರ ದಿಢೀರ್ ಎಂಬಂತೆ ಉಲ್ಬಣಿಸಿದ್ದರಿಂದ ಪ್ರಚಾರ ಸಭೆಗಳನ್ನು ರದ್ದುಗೊಳಿಸಿ ಭಾನುವಾರ ಬೆಳಗ್ಗೆ 11 ಗಂಟೆಗೆ ದೆಹಲಿಗೆ ತೆರಳಿದರು. ದೆಹಲಿಯಲ್ಲಿ ಮಣಿಪುರ ವಿಚಾರವಾಗಿ ಗೃಹ ಇಲಾಖೆ ಹಿರಿಯ ಅಧಿಕಾರಿಗಳ ಸಭೆ ನಡೆಸಿದ್ದಾರೆ.
ಅಮಿತ್ ಶಾ ಅವರಿಗಾಗಿ ಆಯೋಜಿಸಿದ್ದ ಪ್ರಚಾರ ಸಭೆಗಳು ನಿಗದಿಯಂತೆಯೇ ನಡೆಯಲಿವೆ. ಅಮಿತ್ ಶಾ ಅವರ ಬದಲಾಗಿ ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ 2 ರ‍್ಯಾಲಿ ಮತ್ತು ಮಾಜಿ ಸಚಿವ ಸ್ಮೃತಿ ಇರಾನಿ 2 ಸಭೆಗಳಲ್ಲಿ ಪ್ರಚಾರ ನಡೆಸಲಿದ್ದಾರೆ ಎಂದು ಬಿಜೆಪಿ ನಾಯಕರು ತಿಳಿಸಿದ್ದಾರೆ.
ಅಮಿತ್ ಶಾ ಅವರು ಕಟೋಲ್ ಮತ್ತು ಸಾವೊನೆರ್ (ನಾಗಪುರ ಜಿಲ್ಲೆ) ಹಾಗೂ ಗಡ್‌ಚಿರೋಲಿ ಮತ್ತು ವಾರ್ಧಾ ಜಿಲ್ಲೆಗಳಲ್ಲಿ ಪ್ರಚಾರ ನಡೆಸಬೇಕಿತ್ತು. ಈ 4 ಪ್ರದೇಶಗಳಲ್ಲಿ ನೆಲೆ ಭದ್ರಪಡಿಸಿಕೊಳ್ಳುವ ಸಲುವಾಗಿಯೇ ಅಮಿತ್ ಶಾ ಅವರ ರ‍್ಯಾಲಿ ಹಮ್ಮಿಕೊಂಡಿದ್ದು, ಬಿಜೆಪಿಯ ಚುನಾವಣಾ ತಂತ್ರದ ಪ್ರಮುಖ ಭಾಗವಾಗಿತ್ತು.

2ನೇ ಹಂತಕ್ಕೆ ಜಾರ್ಖಂಡ್ ಸಜ್ಜು

ರಾಂಚಿ: 81 ಸದಸ್ಯ ಬಲದ ಜಾರ್ಖಂಡ್ ವಿಧಾನಸಭೆಗೆ ಈ ಬಾರಿ ಎರಡು ಹಂತಗಳಲ್ಲಿ ಚುನಾವಣೆ ನಡೆಯುತ್ತಿದೆ.

ನ.20ರಂದು ಎರಡನೇ ಹಂತದಲ್ಲಿ 38 ವಿಧಾನಸಭಾ ಕ್ಷೇತ್ರ ಗಳಿಗೆ ಮತದಾನವಾಗಲಿದೆ. ಬಹಿರಂಗ ಪ್ರಚಾರಕ್ಕೆ ಸೋಮವಾರ ಸಂಜೆ 5ರ ವೇಳೆಗೆ ತೆರೆಬೀಳಲಿದೆ.

ನ.13ರಂದು ಮೊದಲ ಹಂತದಲ್ಲಿ 43 ವಿಧಾನಸಭಾ ಕ್ಷೇತ್ರಗಳಿಗೆ ಶೇ.66.65ರಷ್ಟು ಪ್ರಮಾಣದಲ್ಲಿ ಮತದಾನವಾಗಿದೆ. 2019ರ ಚುನಾವಣೆಗೆ ಹೋಲಿಸಿದಲ್ಲಿ ಮತದಾನ ಪ್ರಮಾಣದಲ್ಲಿ ಶೇ.2.75ರಷ್ಟು ಹೆಚ್ಚಳವಾಗಿದೆ.

ಅಲ್ಲದೇ, ಈ ಬಾರಿ ಪುರುಷರಿಗಿಂತಲೂ ಮಹಿಳೆಯರೇ (ಶೇ.4.8ರಷ್ಟು) ಅಧಿಕ ಪ್ರಮಾಣದಲ್ಲಿ ಮತದಾನ ಮಾಡಿದ್ದಾರೆ. ಪುರುಷ ಮತದಾರರಿಂದ ಶೇ.64.27ರಷ್ಟು ಮತದಾನವಾಗಿದ್ದರೆ, ಮಹಿಳಾ ಮತದಾರರಿಂದ ಶೇ. 69.04ರಷ್ಟು ಮತದಾನವಾಗಿದೆ.

ಜಾರ್ಖಂಡ್ ಚುನಾವಣೆ	
ವರ್ಷ	ಮತ ಪ್ರಮಾಣ
2019	ಶೇ.63.90
2024	
1ನೇ ಹಂತ	ಶೇ.66.65
2ನೇ ಹಂತ ಚುನಾವಣೆ	
ಕ್ಷೇತ್ರ	38
ಅಭ್ಯರ್ಥಿ	257
ಮತದಾರರು	1.23 ಕೋಟಿ

ಸೇನೆಗೆ ಪೂಂಚ್ 26,000 ಯುವಕರು ಸಿದ್ಧ

ಪೂಂಚ್: ಜಮ್ಮು-ಕಾಶ್ಮೀರದ ಪೂಂಚ್ ಭಾಗದ ಸೂರನ್ ಕೋಟ್‌ನಲ್ಲಿ ಭಾರತೀಯ ಸೇನೆ ಆಯೋಜಿಸಿದ್ದ ಸೈನಿಕ ನೇಮಕ ರ‍್ಯಾಲಿಯಲ್ಲಿ 26 ಸಾವಿರ ಯುವಕರು ಭಾಗಿಯಾಗಿದ್ದರು. ಐದು ವರ್ಷಗಳ ಬಳಿಕ ಇಲ್ಲಿ ಸೇನೆಗೆ ನೇಮಕ ರ‍್ಯಾಲಿ ನಡೆದಿದೆ.

ಭಾರತೀಯ ಸೇನೆಯಲ್ಲಿ ಜನರಲ್ ಡ್ಯುಟಿ ವಿಭಾಗದಲ್ಲಿ 307 ಸೈನಿಕ ಹುದ್ದೆ ಹಾಗೂ ಕ್ಲರಿಕಲ್ ಮತ್ತು ಟ್ರೇಡ್ಸ್‌ಮನ್ ಹುದ್ದೆಗೆ ನೇಮಕ ನಡೆದಿದೆ. ಜಮ್ಮು ವಿಭಾಗದ 31 ತಹಸಿಲ್‌ಗಳ ವ್ಯಾಪ್ತಿಯ ಯೋಧರಿಗೆ ನೇಮಕ ರ‍್ಯಾಲಿಗೆ ಭಾಗವಹಿಸಲು ಅವಕಾಶ ನೀಡಲಾಗಿತ್ತು. ಪೂಂಚ್, ರಾಜೌರಿ, ರಿಯಾಸಿ, ಜಮ್ಮು ಜಿಲ್ಲೆಗಳ ಯುವಕರು ಸೇನೆ ಸೇರಲು ಭಾರೀ ಉತ್ಸಾಹದಿಂದ ಆಗಮಿಸಿದ್ದರು.

ಸೂರನ್‌ಕೋಟ್‌ನಲ್ಲಿ 5 ವರ್ಷಗಳ ಬಳಿಕ ನೇಮಕ ರ‍್ಯಾಲಿ ನಡೆದಿದೆ. 27 ಸಾವಿರ ಯುವಕರು ಭಾಗಿಯಾಗಿದ್ದಾರೆ. 10 ದಿನಗಳ ಕಾಲ ನೇಮಕ ರ‍್ಯಾಲಿ ನಡೆಯಲಿದೆ ಎಂದು ಸೇನಾಧಿಕಾರಿ ತಿಳಿಸಿದ್ದಾರೆ. ಸೈನ್ಯ ಸೇರುವ ಆಸೆಯಿಂದ ಬಂದಿದ್ದ ಪೂಂಚ್ ಜಿಲ್ಲೆಯ ಮೊಹಮ್ಮದ್ ಅಸದ್, ದೇಶಕ್ಕಾಗಿ ಸೇವೆ

ಸಲ್ಲಿಸಲು ಸೇನೆ ಸೇರಲು ನಾನು ಸಜ್ಜಾಗಿರುವೆ ಎಂದು ಹೇಳಿದರೆ, ಮತ್ತೊಬ್ಬ ಯುವಕ, ಹವೇಲಿ ಪ್ರದೇಶದಿಂದ ಬಂದಿದ್ದ ಮೊಹಮ್ಮದ್ ಇಕ್ಬಾಲ್, ನಮ್ಮ ಭಾಗದಲ್ಲಿಯೇ ನೇಮಕ ರ‍್ಯಾಲಿ ಆಯೋಜಿಸಿದ್ದಕ್ಕಾಗಿ ಭಾರತೀಯ ಸೇನೆಗೆ ಧನ್ಯವಾದ ಹೇಳುವೆ ಎಂದು ಪ್ರತಿಕ್ರಿಯಿಸಿದ.

ಬಹಳಷ್ಟು ಯುವಕರು, ಸೇನೆ ಸೇರಿ ಬರುವ ಸಂಬಳದಲ್ಲಿ ಕುಟುಂಬದ ನಿರ್ವಹಣೆಗೆ ನೆರವಾಗುವೆವು ಎಂದರು.

ಡೆನ್ಮಾರ್ಕ್‌ನ ವಿಕ್ಟೋರಿಯಾ ವಿಶ್ವ ಸುಂದರಿ

ಮೆಕ್ಸಿಕೊ: ಉತ್ತರ ಅಮೆರಿಕ ಖಂಡದ ಮೆಕ್ಸಿಕೋ ನಗರದಲ್ಲಿ ನಡೆದ 2024ರ ಮಿಸ್ ಯೂನಿವರ್ಸ್ ಸ್ಪರ್ಧೆಯಲ್ಲಿ ಡೆನ್ಮಾರ್ಕ್‌ನ ವಿಕ್ಟೋರಿಯಾ ಕೇರ್ಜ್(21) ವಿಜೇತರಾಗಿದ್ದಾರೆ. ಡೆನ್ಮಾರ್ಕ್‌ಗೆ ಇದು ಮೊದಲ ವಿಶ್ವಸುಂದರಿ ಕಿರೀಟ.

ಮೆಕ್ಸಿಕೊದ ಮರಿಯಾ ಫೆರ್ನಾಂಡಾ ಬೆಲ್ಟ್ರಾನ್ ಮತ್ತು ನೈಜೀರಿಯದ ಸಿನಿದಿಮ್ಮಾ ಅಡೆಟ್ಶಿನಾ ಕ್ರಮವಾಗಿ ಮೊದಲ ಮತ್ತು ಎರಡನೇ ರನ್ನರ್ ಅಪ್ ಆಗಿದ್ದಾರೆ. ಭಾರತದ ಸುಂದರಿ ರಿಯಾ ಸಿಂಘಾ ಅಂತಿಮ ಸುತ್ತಿಗೆ ತಲುಪುವಲ್ಲಿ ವಿಫಲರಾದರು. 2024ರ ಮಿಸ್ ಯೂನಿವರ್ಸ್ ಇಂಡಿಯ ಕಿರೀಟ ಮುಡಿಗೇರಿಸಿದ್ದ ಭಾರತದ ರಿಯಾ ಸಿಂಘಾಗೆ ನಿರಾಶೆಯಾಗಿದೆ.

ಮೆಕ್ಸಿಕೋ ನಗರದಲ್ಲಿ ಆಯೋಜಿತವಾಗಿದ್ದ 73ನೇ ವಿಶ್ವ ಸುಂದರಿ ಸ್ಪರ್ಧೆಯಲ್ಲಿ ವಿವಿಧ ದೇಶಗಳ 130 ಸುಂದರ ತರುಣಿಯರು ಸ್ಪರ್ಧಿಸಿದ್ದರು.

ಕುಕಿ ಉಗ್ರರ ವಿರುದ್ಧ ಸೇನಾ ಕಾರ್ಯಾಚರಣೆ; ಸರಕಾರಕ್ಕೆ ಮೈಥೇಯಿ 24 ಗಂಟೆ ಗಡುವು

ಎನ್‌ಪಿಪಿ ಬೆಂಬಲ ವಾಪಸ್; ಮಣಿಪುರ ಸರಕಾರಕ್ಕೆ ಸಂಕಷ್ಟ

ಇಂಫಾಲ: ಮಣಿಪುರದಲ್ಲಿನ ಬಿಜೆಪಿ ನೇತೃತ್ವದ ಸರಕಾರಕ್ಕೆ ನೀಡಿದ್ದ ಬೆಂಬಲವನ್ನು ಎನ್‌ಪಿಪಿ ಭಾನುವಾರ ವಾಪಸ್ ತೆಗೆದುಕೊಂಡಿದೆ. ರಾಜ್ಯದಲ್ಲಿ ಕಾನೂನು-ಸುವ್ಯವಸ್ಥೆ ನಿರ್ವಹಿಸುವಲ್ಲಿ ರಾಜ್ಯ ಸರಕಾರ ವಿಫಲವಾಗಿದೆ ಎಂದು ಎನ್‌ಪಿಪಿ ನಾಯಕರು ಕಿಡಿಕಾರಿದ್ದಾರೆ. 60 ಸದಸ್ಯ ಬಲದ ಮಣಿಪುರ ವಿಧಾನಸಭೆಯಲ್ಲಿ ಎನ್‌ಪಿಪಿಯ 7 ಶಾಸಕರಿದ್ದಾರೆ.

ಸರಕಾರಕ್ಕೆ ಮೈಥೇಯಿ ಗಡುವು: ಜರಿಬಾಮ್ ಜಿಲ್ಲೆಯಲ್ಲಿ ಮೈಥೇಯಿ ಸಮುದಾಯದ 3 ಮಕ್ಕಳು, ಮೂವರು ಮಹಿಳೆಯರನ್ನು ಕುಕಿ ಉಗ್ರರು ಅಪಹರಿಸಿ ಕೊಲೆ ಮಾಡಿದ್ದಾರೆ. 6 ಮೃತದೇಹಗಳು ಸಿಕ್ಕ ಬಳಿಕ ಮೈಥೇಯಿ ಸಮುದಾಯ ಸರಕಾರದ ವಿರುದ್ಧವೇ ಸಿಡಿದೆದ್ದಿದೆ.

ಮೂವರು ಮೈಥೇಯಿ ಮಹಿಳೆಯರು, ಮೂವರು ಮಕ್ಕಳನ್ನು ಅಪಹರಿಸಿ ಬರ್ಬರವಾಗಿ ಕೊಂದು ಹಾಕಿದ ಶಸ್ತ್ರಧಾರಿ ಕುಕಿ ಉಗ್ರರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಮೈಥೇಯಿ ಸಮುದಾಯದ ನಾಯಕರು ಆಗ್ರಹಿಸಿದ್ದಾರೆ. ಇದೇ ವಿಚಾರವಾಗಿ ಸಮುದಾಯದ 'ಪೀಪಲ್ಸ್ ರೈಟ್ಸ್ ಆಕ್ಟಿವಿಸ್ಟ್'ಗಳು ರಾಜ್ಯ ಮತ್ತು ಕೇಂದ್ರ ಸರಕಾರಕ್ಕೆ 24 ಗಂಟೆಗಳ ಗಡುವು ನೀಡಿದ್ದಾರೆ.

'ಪೀಪಲ್ಸ್ ರೈಟ್ಸ್ ಆಕ್ಟಿವಿಸ್ಟ್' ಸಂಘಟನೆ ವಕ್ತಾರ ಅಥೌಬಾ, ಶಸ್ತ್ರಾಸ್ತ್ರಗಳನ್ನು ಇಟ್ಟುಕೊಂಡು ಮೈಥೇಯಿ ಸಮುದಾಯದ ಮೇಲೆ ದಾಳಿ ನಡೆಸುತ್ತಿರುವ, ಸಮುದಾಯದ ಮಹಿಳೆಯರು, ಮಕ್ಕಳನ್ನು ಅಪಹರಿಸಿ ಕೊಂದಿರುವ ಕುಕಿ ಉಗ್ರರ ವಿರುದ್ಧ ಸೇನಾಬಲವನ್ನು ಬಳಸಿ ಕಠಿಣ ಕ್ರಮವನ್ನು 24 ಗಂಟೆಗಳಲ್ಲಿ ಕೈಗೊಳ್ಳಬೇಕು. ಇಲ್ಲವಾದರೆ ಪರಿಣಾಮ ಬೇರೆಯದೇ ಇರಲಿದೆ ಎಂದು ಎಚ್ಚರಿಸಿದ್ದಾರೆ. ಕೊಕೊಯಿ ಸಂಘಟನೆ ಕೂಡಾ ಇದಕ್ಕೆ ದನಿಗೂಡಿಸಿದೆ.

ಭುಗಿಲೆದ್ದ ಹಿಂಸೆ: ಸರಕಾರದ ಸರಿಯಾದ ಕ್ರಮ ಕೈಗೊಳ್ಳದೇ ಇರುವುದರಿಂದಲೇ ಕುಕಿ ಉಗ್ರರು ಉಪಟಳ ಹೆಚ್ಚಾಗಿದೆ. ಹಾಗಾಗಿಯೇ ಸಮುದಾಯದ 6 ಮಂದಿಯನ್ನು ಕಳೆದುಕೊಳ್ಳಬೇಕಾಯಿತು ಎಂದು ಆಕ್ರೋಶ ವ್ಯಕ್ತಪಡಿಸಿರುವ ಮೈಥೇಯಿ ಸಮುದಾಯದ ಜನತೆ, ಶನಿವಾರ ರಾತ್ರಿ ಮತ್ತು ಭಾನುವಾರ ಮುಖ್ಯಮಂತ್ರಿ ಎನ್.ಬಿರೇನ್ ಸಿಂಗ್ ಅವರ ಪೂರ್ವಜರ ಮನೆ, ಪಿಡಬ್ಲ್ಯುಡಿ ಸಚಿವ ಗೋವಿಂದಾಸ್ ಕೊಂಥೋಜಮ್ ಅವರ ನಿಂಗ್‌ಥೋವ್‌ಖಾಂಗ್‌ನಲ್ಲಿನ ಮನೆಗಳ ಮೇಲೆ ದಾಳಿ ನಡೆಸಿ ಬೆಂಕಿ ಹಚ್ಚಿದ್ದಾರೆ. ಇನ್ನೊಂದೆಡೆ, ತಮ್ಮದೇ ಸಮುದಾಯದ ಇಬ್ಬರು ಬಿಜೆಪಿ ಹಾಗೂ ಕಾಂಗ್ರೆಸ್‌ನ ಒಬ್ಬ ಶಾಸಕರ ಮನೆಗಳ ಮೇಲೆಯೂ ದಾಳಿ ನಡೆಸಿದ್ದಾರೆ.

ಮಣಿಪುರದಲ್ಲಿ ಎರಡು ಚರ್ಚ್ ಸೇರಿದಂತೆ ಹಲವೆಡೆ ಬೆಂಕಿ ಹಚ್ಚಲಾಗಿದೆ. ಮೂವರು ಸಚಿವರು ಮತ್ತು ಆರು ಶಾಸಕರ ಮನೆಗಳನ್ನು ಹಿಂಸಾತ್ಮಕ ಗುಂಪು ಧ್ವಂಸ ಮಾಡಿದೆ. ಒಟ್ಟು 5 ಜಿಲ್ಲೆಗಳಲ್ಲಿ ಉದ್ರಿಕ್ತರ ಗುಂಪಿನಿಂದ ಜನಪ್ರತಿನಿಧಿಗಳ ಮನೆಗಳ ಮೇಲೆ ಸರಣಿ ದಾಳಿಗಳು ನಡೆದಿವೆ. ಈ ಸಂಬಂಧ 23 ಮಂದಿಯನ್ನು ಬಂಧಿಸಿದ ಪ್ರಕರಣ ದಾಖಲಿಸಲಾಗಿದೆ.

ಇಂಟರ್ನೆಟ್ ಸ್ಥಗಿತ

ಇಂಫಾಲ ನಗರ, ಜಿಲ್ಲೆಯಲ್ಲಿ ಪೂರ್ಣ ಕರ್ಫ್ಯೂ ವಿಧಿಸಲಾಗಿದೆ. ಏಳು ಜಿಲ್ಲೆಗಳಲ್ಲಿ ಇಂಟರ್ನೆಟ್ ಸಂಪರ್ಕ ಸ್ಥಗಿತಗೊಳಿಸಲಾಗಿದೆ.

ಅಮಿತ್ ಶಾ ತುರ್ತು ಸಭೆ

ದೆಹಲಿ: ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಭಾನುವಾರ ಮಹಾರಾಷ್ಟ್ರದಲ್ಲಿನ ಚುನಾವಣಾ ಪ್ರಚಾರ ರದ್ದುಗೊಳಿಸಿ ದೆಹಲಿಗೆ ಆಗಮಿಸಿ ಮಣಿಪುರ ಹಿಂಸಾಚಾರ ಮರುಕಳಿಸಿರುವುದನ್ನು ತಹಬಂದಿಗೆ ತರುವ ವಿಚಾರವಾಗಿ ಗೃಹ ಸಚಿವಾಲಯದ ಹಿರಿಯ ಅಧಿಕಾರಿಗಳ ಜತೆ ತುರ್ತು ಸಭೆ ನಡೆಸಿದರು.
ಸಿಆರ್‌ಪಿಎಫ್ ಸೇರಿದಂತೆ ಅರೆಸೇನಾಪಡೆಗಳ ಉನ್ನತ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿದ್ದರು.
ನಂತರದ ಬೆಳವಣಿಗೆಯಲ್ಲಿ, ಕೇಂದ್ರ ಮೀಸಲು ಪೊಲೀಸ್ ಪಡೆ(ಸಿಆರ್‌ಪಿಎಫ್) ಮಹಾ ನಿರ್ದೇಶಕ(ಡಿಜಿಪಿ) ಅನೀಶ್ ದಾಯಾಳ್ ಸಿಂಗ್, ಮಣಿಪುರಕ್ಕೆ ಶೀಘ್ರವೇ ಭೇಟಿ ನೀಡಲಿದ್ದಾರೆ ಎಂದು ಕೇಂದ್ರ ಸರಕಾರದ ಮೂಲಗಳು ತಿಳಿಸಿವೆ.

ನವನೀತ್‌ಗೆ ಹಲ್ಲೆ; 45 ಜನರ ವಿರುದ್ಧ ಎಫ್‌ಐಆರ್

ಅಮರಾವತಿ: ನ.20ರ ವಿಧಾನಸಭೆ ಚುನಾವಣೆಗೆ ಸಜ್ಜಾಗಿರುವ ಮಹಾರಾಷ್ಟ್ರದಲ್ಲಿ ಬಿಜೆಪಿ ಮಾಜಿ ಸಂಸದೆ ನವನೀತ್ ರಾಣಾ ಮೇಲೆ ಹಲ್ಲೆಯಾಗಿದೆ.

ಅಮರಾವತಿ ಜಿಲ್ಲೆಯ ಖಲ್ಲಾರ್ ಪಟ್ಟಣದಲ್ಲಿ ಶನಿವಾರ ರಾತ್ರಿ, ಸಾರ್ವಜನಿಕ ಸಭೆಗೆ ಆಗಮಿಸಿದ ಬಿಜೆಪಿ ಮಾಜಿ ಸಂಸದ ನವನೀತ್ ರಾಣಾ ಮತ್ತು ಬೆಂಬಲಿಗರ ಮೇಲೆ ಜನರ ಗುಂಪು ಹಲ್ಲೆ ನಡೆಸಿದೆ. ಈ ಸಂಬಂಧ 45 ಜನರ ವಿರುದ್ಧ ಪ್ರಥಮ ಮಾಹಿತಿ ವರದಿ(ಎಫ್‌ಐಆರ್) ದಾಖಲಿಸಿರುವ ಅಮರಾವತಿ ಪೊಲೀಸರು, ಮೂವರು ಹಲ್ಲೆಕೋರರನ್ನು ಬಂಧಿಸಿದ್ದಾರೆ.

ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಳ್ಳಲು ರಾಣಾ ಅವರು ಬೆಂಬಲಿಗರೊಂದಿಗೆ ರಾತ್ರಿ 10 ಗಂಟೆಗೆ ಆಗಮಿಸಿದಾಗ ಜನರ ಗುಂಪಿನಲ್ಲಿದ್ದ ಕೆಲವರು ಆಕ್ಷೇಪಾರ್ಹ ಪದಗಳನ್ನು ಬಳಸಿ, ಅಶ್ಲೀಲ ಸನ್ನೆ ಮಾಡಿದರು. ಪುಂಡರನ್ನು ದೂರ ತಳ್ಳಲು ರಾಣಾ ಬೆಂಬಲಿಗರು ಯತ್ನಿಸಿದರು. ಆಗ ಗುಂಪಿನಲ್ಲಿದ್ದ ಆರೋಪಿಗಳು ನವನೀತ್ ರಾಣಾ ಮತ್ತು ಬೆಂಬಲಿಗರ ಮೇಲೆ ಕುರ್ಚಿಗಳನ್ನು ಎಸೆದು ಹಲ್ಲೆ ಮಾಡಿದರು.

ಸದ್ಯ ಘರ್ಷಣೆಯಲ್ಲಿ ಯಾರಿಗೂ ಗಾಯವಾಗಿಲ್ಲ. ಹಲ್ಲೆಕೋರರ ವಿರುದ್ಧ ದೂರು ದಾಖಲಿಸಲಾಗಿದೆ ಎಂದು ಅಮರಾವತಿ ಪೊಲೀಸ್ ವರಿಷ್ಠಾಧಿಕಾರಿ ವಿಶಾಲ್ ಆನಂದ್ ಹೇಳಿದ್ದಾರೆ. ಮಾಜಿ ಸಂಸದೆ ಪೊಲೀಸ್ ಠಾಣೆಗೆ ತೆರಳಿ ಭಾರತೀಯ ನ್ಯಾಯಶಾಸ್ತ್ರ ಸಂಹಿತೆ ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ದೌರ್ಜನ್ಯ ತಡೆ) ಕಾಯ್ದೆಯಡಿ ದೂರು ದಾಖಲಿಸಿದ್ದಾರೆ. ಗಲಭೆ, ಕೊಲೆಯತ್ನ ಮತ್ತಿತರ ನಿಬಂಧನೆಗಳಡಿ ಎಫ್‌ಐಆರ್ ದಾಖಲಿಸಿದ್ದೇವೆ. ಐವರನ್ನು ಹೆಸರಿಸಲಾಗಿದೆ. ಮೂವರನ್ನು ಬಂಧಿಸಲಾಗಿದೆ. 40 ಮಂದಿ ಅಪರಿಚಿತರಾಗಿದ್ದಾರೆ ಎಂದು ಅವರು ತಿಳಿಸಿದರು.

ದೆಹಲಿ ವಾಯು ಮಾಲಿನ್ಯ: 5 ಕೋಟಿ ರು. ದಂಡ ಸಂಗ್ರಹ

ದೆಹಲಿ: ವಾಯುಮಾಲಿನ್ಯದಿಂದ ದೆಹಲಿ ತತ್ತರಿಸಿದ್ದು, ಉಸಿರಾಟ ಸಮಸ್ಯೆಯಿಂದ ಆಸ್ಪತ್ರೆ ಸೇರುವವರ ಸಂಖ್ಯೆ ಹೆಚ್ಚಿದೆ.

ಮಾಲಿನ್ಯ ನಿಯಂತ್ರಣಕ್ಕೆ ದೆಹಲಿ ಸರಕಾರ ಜಿಆರ್‌ಎಪಿ-3 ಕ್ರಮ ಜಾರಿಗೊಳಿಸಿದ್ದು, ಬಿಎಸ್-3 ಪೆಟ್ರೋಲ್, ಬಿಎಸ್-4 ಡಿಸೇಲ್ ವಾಹನಗಳ ಸಂಚಾರ ನಿರ್ಬಂಧಿಸಿದೆ. ರಾಷ್ಟ್ರ ರಾಜಧಾನಿ ಪ್ರವೇಶ ಪ್ರದೇಶಗಳಲ್ಲಿ ವಾಹನಗಳ ತಪಾಸಣೆ ತೀವ್ರಗೊಳಿಸಲಾಗಿದೆ. ಹಾಗಿದ್ದೂ ನಿಯಮ ಉಲ್ಲಂಘಿಸುವವರ ಸಂಖ್ಯೆ ಗಮನಾರ್ಹವಾಗಿದೆ. ನಿಯಮಗಳನ್ನು ಗಾಳಿಗೆ ತೂರಿದವರಿಗೆ ಅಧಿಕಾರಿಗಳು ದಂಡ ವಿಧಿಸುತ್ತಿದ್ದಾರೆ.

ನಿಯಮ ಉಲ್ಲಂಘಿಸಿದ 550ಕ್ಕೂ ಅಧಿಕ ವಾಹನಗಳಿಗೆ 1 ಕೋಟಿ ರು.ಗಿಂತ ಅಧಿಕ ದಂಡ ವಿಧಿಸಲಾಗಿದೆ. ಮಾಲಿನ್ಯ ನಿಯಂತ್ರಣ ಪ್ರಮಾಣಪತ್ರ ಹೊಂದಿಲ್ಲದ 4,855 ವಾಹನಗಳಿಗೆ 4.8 ಕೋಟಿ ದಂಡ ವಿಧಿಸಲಾಗಿದೆ. ಮಾಲಿನ್ಯ ನಿಯಂತ್ರಣ ಪ್ರಮಾಣಪತ್ರ ಹೊಂದಿರದ ವಾಹನಗಳಿಗೆ 10,000 ರು. ದಂಡ ವಿಧಿಸಲಾಗುತ್ತದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಎನ್ನಾರೈಗಳಿಂದ ಮೋದಿಗೆ ಅದ್ಧೂರಿ ಸ್ವಾಗತ

17 ವರ್ಷ ನಂತರ ಭಾರತ ಪ್ರಧಾನಿ ನೈಜೀರಿಯಗೆ

ಅಬುಜಾ: ಪ್ರಧಾನಿ ನರೇಂದ್ರ ಮೋದಿ 3 ದಿನಗಳ ವಿದೇಶ ಯಾತ್ರೆ ಶನಿವಾರ ಆರಂಭವಾಗಿದ್ದು, ನೈಜೀರಿಯದ ರಾಜಧಾನಿ ಅಬುಜಾದಲ್ಲಿ ಅವರಿಗೆ ಅನಿವಾಸಿ ಭಾರತೀಯರು ಅದ್ಧೂರಿ ಸ್ವಾಗತ ಕೋರಿದ್ದಾರೆ.

ನೈಜೀರಿಯ ಅಧ್ಯಕ್ಷರ ಆಹ್ವಾನ ಮೇರೆಗೆ ಮೋದಿ ಎರಡು ದಿನಗಳ ಭೇಟಿ ನೀಡಿದ್ದಾರೆ. ಇದು 17 ವರ್ಷಗಳ ನಂತರ ಭಾರತೀಯ ಪ್ರಧಾನಿಯೊಬ್ಬರ ಮೊದಲ ನೈಜೀರಿಯ ಭೇಟಿಯಾಗಿದೆ. 2007ರ ಅಕ್ಟೋಬರ್‌ನಲ್ಲಿ ಮನಮೋಹನ್ ಸಿಂಗ್ ನೈಜೀರಿಯಕ್ಕೆ ಭೇಟಿ ನೀಡಿದ್ದರು.

ಮೋದಿ ಅವರು ನೈಜೀರಿಯ ಭೇಟಿಯ ಫೋಟೊಗಳನ್ನು 'ಎಕ್ಸ್'ನಲ್ಲಿ ಹಂಚಿಕೊಂಡಿದ್ದು, ಭಾರತೀಯ ಸಮುದಾಯ ನೀಡಿದ ಅದ್ಧೂರಿ ಸ್ವಾಗತ ಹೃದಯ ಮುಟ್ಟಿತು ಎಂದು ಹೇಳಿದ್ದಾರೆ.

ಬಳಿಕ ಮೋದಿ ಜಿ20 ಶೃಂಗಕ್ಕಾಗಿ ನ.18-19ರಂದು ಬ್ರೆಜಿಲ್‌ಗೆ ಭೇಟಿ ನೀಡಲಿದ್ದಾರೆ. ನಂತರ ನ.21ರವರೆಗೆ ಗಯಾನಾದಲ್ಲಿ ಪ್ರವಾಸ ಕೈಗೊಳ್ಳಲಿದ್ದಾರೆ. ಅಲ್ಲಿ ಆಯೋಜಿತವಾಗಿರುವ ಕ್ಯಾರಿಕಾಮ್-ಇಂಡಿಯ ಶೃಂಗಸಭೆಯಲ್ಲಿ ಭಾಗವಹಿಸಲಿದ್ದಾರೆ. ಇದು ಗಯಾನಾಗೆ 50 ವರ್ಷಗಳ ನಂತರ ಭಾರತದ ಪ್ರಧಾನಿಯೊಬ್ಬರ ಮೊದಲ ಭೇಟಿಯಾಗಿದೆ. 'ಜಿ20 ಶೃಂಗದಲ್ಲಿ ಅರ್ಥಪೂರ್ಣ ಮಾತುಕತೆಗೆ ಎದುರು ನೋಡುತ್ತಿರುವೆ' ಎಂದು ಮೋದಿ 'ಎಕ್ಸ್' ಸಂದೇಶದಲ್ಲಿ ಬರೆದಿದ್ದಾರೆ.

ನೈಜಿರಿಯ ರಾಜಧಾನಿ ಅಬುಜಾದಲ್ಲಿ ಬಂದಿಳಿದ ಪ್ರಧಾನಿ ನರೇಂದ್ರ ಮೋದಿ ಅವರನ್ನು ಅಧ್ಯಕ್ಷ ಬೋಲಾ ಅಹಮದ್ ಟಿನುಬು ದಂಪತಿ ಆತ್ಮೀಯವಾಗಿ ಸ್ವಾಗತಿಸಿದರು.

ನಮ್ಮ ಜೀವನದ ಅತ್ಯಮೂಲ್ಯ ಆಸ್ತಿ ತಾಯಿ

ಒಮ್ಮೆ ಒಬ್ಬ ತನ್ನ ಮನೆಯ ಹಸು ಕರುವನ್ನು ಕರೆದುಕೊಂಡು ರಾಜನ ಆಸ್ಥಾನ ಸಭೆಗೆ ಬಂದನು. ಹಸು -ಕರು ಇದರಲ್ಲಿ ವಿಶೇಷ ಎಂದರೆ, ಅಲ್ಲಿಗೆ ತಂದಿದ್ದ ಹಸು- ಕರು (ತಾಯಿ- ಮಗು) ನೋಡಲು ಒಂದೇ ತರ ಇದ್ದವು. ಕರು ತಾಯಿಯಷ್ಟೇ ಬೆಳದಿದೆ. ಗಾತ್ರದಲ್ಲಿ ಯಾವುದು ತಾಯಿ? ಯಾವುದು ಕರು? ಎಂದು ನೋಡಿದರೆ ಗೊತ್ತಾಗುತ್ತಿರಲಿಲ್ಲ. ಎರಡು ಅವಳಿ- ಜವಳಿ ಎನ್ನುವಂತಿದ್ದವು. ಹಸು ಕರುವಿನ ಮಾಲಿಕ, ರಾಜನತ್ತ ನೋಡಿ, 'ಪ್ರಭುಗಳೇ ನಿಮ್ಮ ಸಭೆಯಲ್ಲಿ ಇವುಗಳಲ್ಲಿ ತಾಯಿ ಯಾವುದು, ಕರು ಯಾವುದು ಎಂದು ಯಾರಾದರೂ ಹೇಳುವರೇ?' ಎಂದು ಕೇಳಿದ. ರಾಜನು ನೋಡುತ್ತಾನೆ ಹಸು- ಕರು ಎರಡು ಒಂದೇ ತರ ಇದ್ದು ಯಾವುದೇ ವ್ಯತ್ಯಾಸ ಕಾಣಲಿಲ್ಲ ಸಭೆಯಲ್ಲಿ ಯಾರು ಹೇಳಲು ಮುಂದಾಗಲಿಲ್ಲ.

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ರಾಜನು ಮಂತ್ರಿಗಳ ಕಡೆ ತಿರುಗಿ ನೀವು ಹೇಳುವಿರಾ? ಎಂದು ಕೇಳಿದ. ಮಂತ್ರಿ ಸ್ವಲ್ಪ ಆಲೋಚಿಸಿ ಪ್ರಭು ನನಗೆ ಒಂದು ದಿನ ಸಮಯ ಬೇಕು ಎಂದನು, ರಾಜ ಒಪ್ಪಿದ.

ಹಸು ಕರು ತಂದ ಮಾಲೀಕನಿಗೆ 'ಈ ಒಂದು ದಿನ ಹಸು- ಕರು ಅರಮನೆಯಲ್ಲೇ ಇರಲಿ, ನಾಳೆ ಕರೆದುಕೊಂಡು ಹೋಗು' ಎಂದು ಮಂತ್ರಿ ಹೇಳಿದ. ಅದರಂತೆ ಹಸು-ಕರುವನ್ನು ಅರಮನೆಯಲ್ಲಿ ಬಿಟ್ಟು ಅವನು ಹೊರಟನು. ಮಾರನೇ ದಿನದ ಸಭೆಗೆ ಮಂತ್ರಿ ಹಸು ಕರುವನ್ನು ತಂದನು. ಮತ್ತು ಅವೆರಡಕ್ಕೂ ಬೇರೆ ಬೇರೆಯಾಗಿ ಮೇವು ಮತ್ತು ಕುಡಿಯಲು ನೀರು ಇಡಲಾಯಿತು. ಎರಡು ಹಸುಗಳು ಮೇವು ತಿಂದು ನೀರು ಕುಡಿದ ಮೇಲೆ ಮಂತ್ರಿ, ಅವುಗಳ ಹತ್ತಿರ ಬಂದು, ಒಂದನ್ನು ಮುಟ್ಟಿ ಇದು ತಾಯಿ ಹಸು- ಇದರ ಕರು ಎಂದು ಇನ್ನೊಂದನ್ನು ಮುಟ್ಟಿ ತೋರಿಸಿ ಹೇಳಿದರು. ಹಸು ಕರುವಿನ ಮಂತ್ರಿಗಳ ಮಾತನ್ನು ಮಾಲೀಕ ಒಪ್ಪಿದ. 'ತಾಯಿ ಹಸು ಮತ್ತು ಅದರ ಕರು ಎಂದು ನೀವು ಹೇಗೆ ಗುರುತಿಸಿದಿರಿ?' ರಾಜ, ಮಂತ್ರಿಯನ್ನು ಕೇಳಿದ. ಮಂತ್ರಿಗಳು ಉತ್ತರ ಏನು ಹೇಳುತ್ತಾರೋ ತಿಳಿಯಲು ಸಭಿಕರು ಹಾಗೂ ಹಸು- ಕರುವಿನ ಮಾಲಿಕ, ಕಾತುರದಿಂದ ಕಾಯುತ್ತಿದ್ದರು.

ಮಂತ್ರಿ ಹೇಳುತ್ತಾ, 'ಇಂದು ಬೆಳಗ್ಗೆಯಿಂದ ಹಸು- ಕರುವಿಗೆ ಮೇವಾಗಲಿ, ಕುಡಿಯಲು ನೀರಾಗಲಿ ಕೊಟ್ಟಿರಲಿಲ್ಲ. ಅವುಗಳಿಗೆ ತುಂಬಾ ಹಸಿವು ಬಾಯಾರಿಕೆ ಆಗಿತ್ತು. ತುಂಬಾ ಹೊತ್ತಿನ ನಂತರ ಎರಡರ ಮುಂದೆ ಮೇವು, ನೀರು ಇಟ್ಟಾಗ, ತಾಯಿ ಹಸು ಬಾಯಿ ಹಾಕಿ ಮೇವನ್ನು ತಿನ್ನದೇ, ಪಕ್ಕದ ಕರುವನ್ನು ನೋಡುತ್ತಿತ್ತು. ಕರು ತನ್ನ ಆಹಾರವನ್ನು ಗಬ ಗಬ ತಿಂದು ಮುಗಿಸಿ, ತಾಯಿ ಹಸುವಿನ ಮೇವಿಗೆ ಬಾಯಿ ಹಾಕಿ ತಿನ್ನತೊಡಗಿತು. ತಾಯಿ ಹಸು ತನ್ನ ಮೇವು ತಿನ್ನುವುದನ್ನು ನಿಲ್ಲಿಸಿ, ಕರು ತಿನ್ನುವುದನ್ನು ನೋಡುತ್ತಾ ನಿಂತಿತು. ಹಾಗೂ ಎಲ್ಲ ಮೇವನ್ನು ಅದಕ್ಕೆ ತಿನ್ನಲು ಬಿಟ್ಟಿತು. ಇದಲ್ಲವೇ ತಾಯಿ ಪ್ರೀತಿ' ಎಂದನು ಸಭೆಯಲ್ಲ ಅವನ ಬುದ್ಧಿವಂತಿಕೆ ಮೆಚ್ಚಿ ಕೊಂಡಾಡಿದರು.

ನಮ್ಮಿಡಿ ಜೀವನದಲ್ಲಿ ನಮ್ಮನ್ನು ತಾಯಿಯಂತೆ ಪ್ರೀತಿಸುವ ಜೀವ ಮತ್ತೊಂದು ಇರಲಾರದು. ಅದೇನೆ ಕಷ್ಟ ಬಂದರೂ ಅದೆಂಥ ಸಂಕಟದಲ್ಲಿದ್ದರೂ ತಾಯಿ ಮೊದಲು ತನ್ನ ಮಕ್ಕಳಿಗೆ ಎಲ್ಲ ಮಾಡಿ ನಂತರ ತನ್ನ ಆರೈಕೆ ಮಾಡಿಕೊಳ್ಳುತ್ತಾಳೆ. ಮಕ್ಕಳು ಬೆಳೆಯುತ್ತಾ ಹೋದಂತೆ ತಾಯಿಯ ಬಗ್ಗೆ ಉದಾಸೀನದ ಮಾತುಗಳನ್ನಾಡುತ್ತಾ, 'ನಿನಗೇನೂ ತಿಳಿದಿಲ್ಲ ನೀನು ಸದಾ ನಮ್ಮ ತಪ್ಪುಗಳನ್ನ ಕಂಡು ತಿದ್ದುವೆ' ಎಂದು ಮೂಗು ಮುರಿಯುತ್ತಾರೆ. ಆದರೂ ತಾಯಿ ಪಟ್ಟು ಬಿಡದೆ ಮಕ್ಕಳನ್ನು ನಿರಂತರವಾಗಿ ತಿದ್ದುತ್ತ ಅವರು ಸಮಾಜಮುಖಿಯಾಗಿ ಬದುಕಲು, ಕುಟುಂಬದಲ್ಲಿ ಒಳ್ಳೆಯವರಾಗಿ ಎಲ್ಲರಿಗೂ ತಗ್ಗಿ ಬಗ್ಗಿ ನಡೆಯುವಂತೆ ಮಕ್ಕಳನ್ನು ಬೆಳೆಸುತ್ತಾಳೆ.

ಯಾರ ಮುಂದೆ ಸುಳ್ಳು ಹೇಳಿದರು ತಾಯಿಯ ಮುಂದೆ ಸುಳ್ಳು ಹೇಳಿ ನೀಗಿಸಿಕೊಳ್ಳಲು ಸಾಧ್ಯವಿಲ್ಲ.

ತಾಯಿ ದೇವರಿಗೆ ಸುಳ್ಳು ಹೇಳಿ ಯಾರೂ ಉದ್ಧಾರವೂ ಆಗುವುದಿಲ್ಲ.

ದಿನಕ್ಕೊಂದು ಮಾಹಿತಿ

ತಲೆನಲ್ಲಿ ಕರೆಂಟ್!

ಸಣ್ಣ ಪ್ರಮಾಣದ ವಿದ್ಯುತ್ ಸಂಚಾರವದಾಗ ಮೈ ಜುಮ್ಮ್ ಎನ್ನುವುದುಏನೋ

ಖರೆ, ಅದೇ, ದೊಡ್ಡ ಮಟ್ಟದ ವಿದ್ಯುತ್ ಸಂಚಾರವಾದರೇ? ಮನುಷ್ಯನಿಗೆ ವಿದ್ಯುತ್ ಗೆ ದೊಡ್ಡ ಸಂಬಂಧವಿದೆ, ಹಾಗೇ ಇಡೀ ಪ್ರಪಂಚ ವಿದ್ಯುತ್ ಮೇಲೆ ನಡೆಯುತ್ತೆ, ವಿದ್ಯುತ್ ಯಾವುದ್ಯಾವುದೋ ರೀತಿಯಲ್ಲಿ ಸದಾ ಇರುತ್ತದೆ ಎನ್ನುವುದು ವಿಜ್ಞಾನಿಗಳ ಅನಿಸಿಕೆ. ಆದರೆ, ನಿಮಗೆ ಗೊತ್ತಾ? ಮಿದುಳಿನಲ್ಲೂ ವಿದ್ಯುತ್ ಇದೆ, ಅದು 25 ವ್ಯಾಟ್‌ನಷ್ಟು ವಿದ್ಯುತ್ ಉತ್ಪತ್ತಿ ಮಾಡುತ್ತದೆ. ಅದು ಒಂದು ಬಲ್ಬ್ ನಡೆಸುವಷ್ಟಾದರೂ ಸಾಕಾಗುತ್ತದೆ.

ಪ | ದ | ಬಂ | ಧ



ಎಡದಿಂದ ಬಲಕ್ಕೆ

1. ಕಟ್ಟಡಕ್ಕಿರಬೇಕಾದ ತಳಪಾಯ (3)
4. ನಯವಾಗಿ ಬಂದಿರುವ ಕಾಲ (3)
6. ಮತ್ತೊಂದು ಕಡಿವಾಣ (3)
7. ರಾಷ್ಟ್ರಪಕ್ಷಿ ಮರದ ಮಧ್ಯೆ ಕುಳಿತಿದೆ (3)
8. ತರುವಾಗ ಕಂಡಳು ಯುವತಿ (3)
10. ಗ್ರೀಸ್ ದೇಶದವನು ಎಂದರ್ಥ (3)
12. ದುಃಖಿಸು ಅಥವಾ ಕೊರಗು ಎಂದರ್ಥ (3)
15. ಏಳು ಅಧೋಲೋಕಗಳಲ್ಲಿ ಒಂದು (3)
17. ಮತ್ತೊಂದು ಸದ್ದಿನೊಂದಿಗೆ ಬಂದಿರುವ ಆನೆ (3)
18. ಪರಸ್ಪರ ಪೈಪೋಟಿ (3)
19. ಮರದ ರೆಂಬೆ (3)
20. ತೀಕ್ಷ್ಣತೆ ತಿರುಗಿ ಬಂದಿದೆ (3)

ಎಡದಿಂದ ಬಲಕ್ಕೆ

1. ಅವನು ಬಹಳ ಚತುರ (4)
2. ಮಣಿಯೊಂದಿಗೆ ಬಂದಿರುವ ಭಾಸ್ಕರ (4)
3. ಎಳೆಯ ಸೂರ್ಯ (4)
4. ಸಮೂಹ ಅಥವಾ ಗುಂಪು (4)
5. ಕರಾವಳಿಯ ಪ್ರಸಿದ್ಧ ಕಲೆ (4)
9. ತಲೆಗೆ ಸುತ್ತಿಕೊಂಡ ಮುಂಡಾಸು (3)
11. ಬಲವಂತ, ಒತ್ತಾಯ (3)
12. ಚಂದ್ರನಿಗೊಂದು ಚಂದದ ಹೆಸರು (4)
13. ತಲೆಕೆಳಗು ಎಂದರ್ಥದ ಪದ (4)
14. ಪಂಚತಂತ್ರದಲ್ಲಿ ಬರುವ ಒಂದು ತೋಳ (4)
15. ನಿಶ್ಚಿತವಾದುದಲ್ಲ (4)
16. ಬಳ್ಳಿಗಳಿಂದಲೇ ಮಾಡಿದ ಮಂಟಪ (4)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ: 1. ಅಂಗಾರಕ 4. ಪಂಪ 6. ನೀರವ 8. ನಶ್ವರ 9. ಜೀವನ 11. ಸದರ 13. ನಿಧಿ 15. ರತ್ನ 16. ಕಪ್ಪಡಿ 18. ಯೋಜನ 19. ಹವನ 22. ಸುಗಮ 24. ನತ್ತು 25. ಮಕರಂದ

ಮೇಲಿನಿಂದ ಕೆಳಕ್ಕೆ: 1. ಅಂಜಿಕೆ 2. ರಸನ 3. ವಾರ 5. ಪವನಪುತ್ರ 6. ನೀರಸ 7. ವಜೀರ 10. ವ್ಯಾಧಿ 12. ದರ 13. ನಿಷ್ಪ್ರಯೋಜಕ 14. ತುಪ್ಪ 15. ರಜ್ಜು 16. ಕನಸು 17. ಡಿಹಮ 20. ವರ್ತಕ 21. ದಾರಂದ 23. ಗಡಿ

● ಸಿ. ರವಿಶಂಕರ ಶಾಸ್ತ್ರಿ, ದಂಬೆ

ಮಹಾಕವಿ ಕನಕದಾಸ

ಯೋಧರಾಗಿದ್ದ ಕನಕದಾಸರು, ನಂತರದ ದಿನಗಳಲ್ಲಿ ಯುದ್ಧ ತಂದಿಟ್ಟ ವಿನಾಶ ಕಂಡು, ಅಧ್ಯಾತ್ಮದತ್ತ ಮುಖಮಾಡಿ, ಹಲವು ಶ್ರೇಷ್ಠ ಎನಿಸುವ ಕೀರ್ತನೆ, ಕಾವ್ಯ, ಮುಂಡಿಗೆಗಳನ್ನು ರಚಿಸಿದ್ದು ಬಹು ವಿಶೇಷ ಎನಿಸಿದೆ.

● ಪರಮೇಶ ಕೆ.ಉತ್ತನಹಳ್ಳಿ

ಕರ್ನಾಟಕ ರಾಜ್ಯದ ಧಾರವಾಡ ಜಿಲ್ಲೆಯ ಬಂಕಾಪುರದ ಹತ್ತಿರ ಇರುವ ಬಾಡ ಎಂಬ ಗ್ರಾಮದಲ್ಲಿ ಬೀರಪ್ಪ ಮತ್ತು ಬಚ್ಚಮ್ಮ ಎಂಬುವವರ ಸುಪುತ್ರರಾಗಿ ಜನಿಸಿದ ಕನಕದಾಸರ ಮೂಲ ಅಥವ ಮೊದಲ ಹೆಸರು ತಿಮ್ಮಪ್ಪ. ಇವರ ಕಾಲ ಸುಮಾರು 1508-1606. ಜನಿಸಿದ್ದು ಬಾಡವಾದರೂ ಓಡಾಡಿದ್ದು ವಿಜಯ ನಗರ, ಜೀವಿಸಿ ಬದುಕಿದ್ದು ಕಾಗಿನೆಲೆ. ವಿಜಯ ನಗರ ಸಾಮ್ರಾಜ್ಯದ ಭಾಗವಾಗಿದ್ದ ಬಂಕಾಪುರದಲ್ಲಿನ ಎಪ್ಪತ್ತು ಹಳ್ಳಿಗಳ ಪಾಳೆಪಟ್ಟಿನ ನೇತೃತ್ವ ವಹಿಸಿಕೊಂಡು ಅವುಗಳನ್ನು ನೋಡಿಕೊಳ್ಳುತ್ತಿದ್ದನು. ಒಮ್ಮೆ ಯುದ್ಧ ಮಾಡುತ್ತಿದ್ದಾಗ ಈ ಯುದ್ಧದಲ್ಲಿ ಬಹಳಷ್ಟು ತೀವ್ರವಾಗಿ ಹೊಡೆತ ತಿಂದು ಅತೀವ ನೋವಿಗೆ ಒಳಗಾದಾಗ, ಯುದ್ಧದ ಭೀಕರ ಪರಿಣಾಮದಿಂದಾಗಿ ಸಂಭವಿಸಿದ ಅಪಾರ ಸಾವು-ನೋವಿನಿಂದ ಹೃದಯ ಹಿಂಡಿದಂತಾಯಿತು. ಮನಸ್ಸು ಯುದ್ಧದ ನಿರಾಕರಣೆಯನ್ನೇ ಮಾಡುತ್ತದೆ. ಆದರೂ ಯುದ್ಧದಲ್ಲಿ ಅಪಾರ ನೋವು ಅನುಭವಿಸಿದರು ಯುದ್ಧದಲ್ಲಿ ಗೆಲುವು ಲಭಿಸುತ್ತದೆ. ಯುದ್ಧದಲ್ಲಿ ಜಯಶೀಲವಾಗಿ ವಾಪಾಸು ತನ್ನ ಸ್ವಸ್ಥಳಕ್ಕೆ ಆಗಮಿಸಿದ ಕನಕ ದಾಸರಿಗೆ ಅಭೂತಪೂರ್ವ ಸ್ವಾಗತ ಲಭಿಸುತ್ತದೆ. ಆದರೆ ಅವರ ಮನಸ್ಸು ಯುದ್ಧದ ಭೀಕರತೆಯ ಅರಿತು ಅದರ ನಿರಾಕರಣೆ ಹಾಗೂ ಪಾಳೆಗಾರಿಕೆಯನ್ನು ತೊರೆದು ಬದಲಾದ ವ್ಯವಸ್ಥೆಗೆ ತಮ್ಮನ್ನು ತಾವು ಒಗ್ಗಿಸಿಕೊಂಡು ಮರಳಿ ಮಣ್ಣಿಗೆ ಎನ್ನುವಂತೆ ವಾಪಾಸು ತಮ್ಮ ಸ್ವ-ಗ್ರಾಮಕ್ಕೆ ಬಂದು ನಿಶ್ಚಿಂತೆ-ನೆಮ್ಮದಿಯಾಗಿ ಕಾಲ ನೂಕುತ್ತಾ ವ್ಯವಸಾಯದ ಕಾಯಕದಲ್ಲಿ ನಿರತರಾಗುತ್ತಾರೆ.

ಒಮ್ಮೆ ಜಮೀನಿನಲ್ಲಿ ಬೆವರಿನ ದುಡಿಮೆಯಲ್ಲಿ ನಿರತರಾಗಿದ್ದಾಗ ಚಿನ್ನದ ಕೊಪ್ಪರಿಗೆ ದೊರೆಯುತ್ತದೆ. ಆದರೆ ಐಹಿಕವಾದ ಬದುಕು ನಶ್ವರ ಎಂದು ತಿಳಿದಿದ್ದ ಕನಕದಾಸರು ಸಿಕ್ಕಿದಂತ ಅಷ್ಟೂ ಕನಕವನ್ನು ತ್ಯಾಗ ಮಾಡಿದ್ದರಿಂದ ಬೀರಪ್ಪ ಎಂಬ ನಾಮಾಂಕಿತವು ಕನಕ ದಾಸ ಎಂದು ಬದಲಾಯಿತು. ಈ ಐತಿಹ್ಯವು ಕನಕದಾಸರಲ್ಲಿ ಇದ್ದ ಉದಾರತೆಯನ್ನು ಸಾರುತ್ತದೆ ಮತ್ತು ಸಂಪತ್ತಿಗಾಗಿ ಹೊಡೆದಾಡುವ ಬಡಿದಾಡುವ ಮಂದಿಗೆ ಈ ಸಂಗತಿ ಸ್ಪೂರ್ತಿಯ ಬೆಳಕು.

ಅನಂತರ ವ್ಯಾಸರಾಯರ ಶಿಷ್ಯರಾಗಿ ಆಧ್ಯಾತ್ಮಿಕ ಜ್ಞಾನದಲ್ಲಿ ತಮ್ಮನ್ನು ತಾವು ಅರ್ಪಿಸಿಕೊಂಡು, ತಾಳ-ತಂಬೂರಿ ಹಿಡಿದು ನಡೆಯುತ್ತಾರೆ. ಕೇವಲ ಚಿನ್ನ ಇದ್ದ ಮಾತ್ರಕ್ಕೆ ಆತ ದೊಡ್ಡ ವ್ಯಕ್ತಿಯಾಗುವುದು ಅದರ ಬದಲಿಗೆ ಚಿನ್ನದಂತ ಗುಣ-ವ್ಯಕ್ತಿತ್ವ ಇರಬೇಕು ಆಗಲೇ ವ್ಯಕ್ತಿ ತುಂಬಾ ಎತ್ತರಕ್ಕೆ ಬೆಳೆಯಲು ಸಾಧ್ಯ. ತಂಬೂರಿ ತಾಳ ಹಿಡಿದು, ಕರಾವಳಿಯ ಉಡುಪಿಗೆ ಭೇಟಿ ನೀಡಿದಾಗ ಅಲ್ಲಿ ಒಂದು ಬಗೆಯ ಪವಾಡ ನಡೆಯುತ್ತದೆ. ಕನಕದಾಸರು ಹಿಂದುಳಿದ ವರ್ಗಕ್ಕೆ ಸೇರಿದವರು ಎಂಬ ಒಂದೇ ಕಾರಣಕ್ಕೆ ದೇವಸ್ಥಾನ ಪ್ರವೇಶಕ್ಕೆ ತಡೆ ಒಡ್ಡಿದ್ದಲ್ಲದೆ ಅವಮಾನ ಮಾಡಲಾಗುತ್ತದೆ. ಈ ಅವಮಾನದಿಂದ ಮನ ನೊಂದ ಕನಕದಾಸರು ದೇವಸ್ಥಾನ ಹಿಂಭಾಗಕ್ಕೆ ಬಂದು ಭಕ್ತಿ ಪೂರ್ವಕವಾಗಿ ಪ್ರಾರ್ಥನೆ ಮಾಡಿ 'ಬಾಗಿಲನು ತೆರೆದು ಸೇವೆಯನು ಕೊಡೊ ಹರಿಯೇ...' ಎಂದು ಹೃದಯದಿಂದ ಬೇಡಿ ಪ್ರಾರ್ಥನೆ ಸಲ್ಲಿಸಿದಾಗ, ಉಡುಪಿಯ ಶ್ರೀಕೃಷ್ಣನು ಹಿಮ್ಮುಖವಾಗಿ ತಿರುಗಿ ಒಂದು ರಂಧ್ರದಲ್ಲಿ ದರ್ಶನ ಭಾಗ್ಯವನ್ನು ನೀಡುತ್ತಾನೆ. ಇದರ ನೆನಪಿನಲ್ಲಿ, ಅಂದಿನಿಂದ ಇಂದಿನವರೆಗೂ ಆ ರಂಧ್ರವನ್ನು ಕನಕನ ಕಿಂಡಿ ಎಂದು ಹೇಳುತ್ತಿದ್ದಾರೆ.

ಕನಕದಾಸರು ವ್ಯಾಸರಾಯರ ಆಸರೆಯಲ್ಲಿದ್ದಾಗ, ಹಲವು ವಿದ್ಯಮಾನಗಳಿಗೆ ಸಾಕ್ಷಿಯಾಗಿದ್ದಾರೆ. ಗುರುಗಳು ಶಿಷ್ಯರೆಲ್ಲರನ್ನು ಕರೆದು ಯಾರು ಇಲ್ಲದ ಸ್ಥಳದಲ್ಲಿ ಯಾರಿಗೂ ತಿಳಿಯದಂತೆ ಬಾಳೇಹಣ್ಣನ್ನ ತಿಂದು ಬನ್ನಿ ಎಂದು ಕಳುಹಿಸಲು ಕನಕದಾಸರು ಮಾತ್ರ ದೇವರು ಇಲ್ಲದೆ ಇರುವ ಸ್ಥಳವೇ ಇಲ್ಲ ಎಂದು ಬಾಳೇ ಹಣ್ಣನ್ನು ವಾಪಾಸು ನೀಡಿದ್ದು, ಸ್ವರ್ಗಕ್ಕೆ ಯಾರು ಹೋಗುತ್ತಾರೆ ಎಂದು ಗುರುಗಳು ಕೇಳಿದಾಗ 'ನಾನು ಹೋದರೆ ಹೋದೇನು' ಎಂದು ಹೇಳಿ ಎಲ್ಲರನ್ನೂ ಆಶ್ಚರ್ಯ ಚಕಿತರನ್ನಾಗಿ ಮಾಡಿದ್ದು, ನಾನು ಹೋದರೆ ಹೋದೆನು ಎಂದು ಹೇಳಿದಾಗ ಗುರುಗಳು ಮತ್ತೆ ಪ್ರಶ್ನಿಸಿ ಆಂತರ್ಯದ ಆಳವನ್ನು ಅರ್ಥವಾಗುವಂತೆ ತಿಳಿಸಲು ಕೋರಿದಾಗ ಸಹನಾ ಚಿತ್ತದಲ್ಲಿ ಕನಕದಾಸರು 'ನಾನು ಎಂಬ ಅಹಂಕಾರ ದೂರಾದರೆ ಸ್ವರ್ಗ ತಾನಾಗಿಯೇ ನಮ್ಮನ್ನು ಸ್ವಾಗತಿಸುತ್ತದೆ' ಎಂದದ್ದು, ಇವೆಲ್ಲವೂ ಸಾಕಷ್ಟು ಪ್ರಸಿದ್ಧವಾಗಿವೆ.

ಜಾತಿ ಪದ್ಧತಿಯನ್ನು ಪ್ರಶ್ನಿಸಿದ ಕನಕದಾಸರು, 'ಕುಲ ಕುಲ ಕುಲವೆಂದು ಹೊಡೆದಾಡದಿರಿ ನಿಮ್ಮ ಕುಲದ ನೆಲೆಯನ್ನೇನಾದರೂ ಬಲ್ಲಿರಾ ಬಲ್ಲಿರಾ?' ಎಂದು ಹಾಡಿ, ವಿಶ್ವಭ್ರಾತೃತ್ವವನ್ನು ಸಾರಿದರು. ಅಂತೆಯೇ ಎಲ್ಲಾರೂ ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ ಗೇಣು ಬಟ್ಟೆಗಾಗಿ ಎಂದು ಜೀವನದ ಅವಶ್ಯಕತೆಗೆ ಮಾನವನು

ಕನಕ ಜಯಂತಿ

ಕೈಗೊಳ್ಳುವ ವಿವಿಧ ಬಗೆಯ ವೃತ್ತಿಯನ್ನು ಕುರಿತು ಹೇಳುವ ಕನಕದಾಸರು ಮಾನವನ ಇಹಲೋಕದ ಬದುಕು, ಹೋರಾಟ ಎಲ್ಲವೂ ಹೊಟ್ಟೆ ಪಾಡಿಗಾಗಿ ಎನ್ನುವ ಅಂತಿಮ ಸತ್ಯವನ್ನು ಸಾರುತ್ತಾ ಮಾನವ ಒಂದಲ್ಲ ಒಂದು ಬಗೆಯ ಕಾರ್ಯದಲ್ಲಿ ನಿರತನಾಗಿ ಬದುಕಲೇಬೇಕಾದ ಅನಿವಾರ್ಯವನ್ನು ಸಾರಿದ್ದಾರೆ.

ತಲ್ಲಣಿಸದಿರು ಕಂಡ್ಯ ತಾಳು ಮನವೇ ಎಂದು ಸಾರುತ್ತಾ, ಜನಸಾಮಾನ್ಯರಲ್ಲಿ ಮಾನಸಿಕ ಸ್ಥೈರ್ಯ ತುಂಬಿದ್ದಾರೆ. ಅವರು ಕೇವಲ ದಾಸ ಸಾಹಿತ್ಯದ ಕಾಲಘಟ್ಟಕ್ಕೆ ನಿಲ್ಲುವ ವ್ಯಕ್ತಿಯಾಗಿರದೆ ಅನುಗಾಲ ಸ್ಮರಿಸಬೇಕಾದ ವ್ಯಕ್ತಿತ್ವದ ಮೇರುಪರ್ವತವಾಗಿದ್ದಾರೆ. ಇವರು ಕೇವಲ ಕೀರ್ತಕಾರರು ಮಾತ್ರವಾಗಿರದೆ ಕವಿಯಾಗಿ ಸಾಕಷ್ಟು ಕೃತಿಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಹರಿಭಕ್ತಸಾರ, ಮೋಹನ ತರಂಗಿಣಿ, ರಾಮಧಾನ್ಯ ಚರಿತೆ, ನಳಚರಿತೆ ಅಲ್ಲದೆ ಉಗಾಭೋಗ, ಕೀರ್ತನೆ, ಸುಳಾದಿಗಳು ಹೆಸರುವಾಸಿಯಾಗಿವೆ. ಮಂಡಿಗೆ

ಕನಕದಾಸರ ಪ್ರಮುಖ ಕೃತಿಗಳು

1. ಮೋಹನತರಂಗಿಣಿಯು ಒಂದು ವಿಶಿಷ್ಟ ಕೃತಿ. 42 ಸಂಧಿಗಳಿಂದ ಕೂಡಿದ್ದು ಸಾಂಗತ್ಯದಲ್ಲಿ ರಚಿತವಾಗಿ ಒಟ್ಟು 2700 ಪದ್ಯಗಳನ್ನು ಒಳಗೊಂಡಿದೆ. ಈ ಕೃತಿಯಲ್ಲಿ ಕನಕದಾಸರು ಕೃಷ್ಣಚರಿತ್ರೆಯನ್ನು ಸಾದರಪಡಿಸುತ್ತಾ ಕೃಷ್ಣದೇವರಾಯನನ್ನೇ ಕೃಷ್ಣನಿಗೆ ಹೋಲಿಸುತ್ತಾರೆ. ಅವರ ದ್ವಾರಕಾಪುರಿ ಸ್ವಯಂ ವಿಜಯನಗರವೇ ಆಗಿದೆ. ಮೋಹನತರಂಗಿಣಿ ಅಥವಾ ಕೃಷ್ಣಚರಿತೆ ಎಂಬ ಈ ಕಾವ್ಯದಲ್ಲಿ ಕನಕದಾಸರ ಸಮಕಾಲೀನ ಜೀವನ ಸಂಗತಿಗಳು ಹಾಗೂ ಪೌರಾಣಿಕ ಕಥೆಗಳು ಅಚ್ಚಗನ್ನಡದಲ್ಲಿ ನಿರೂಪಿತವಾಗಿವೆ. ದಣ್ಣಾಯಕನಾಗಿ ಕನಕ ಆಗಾಗ್ಗೆ ರಾಜಧಾನಿ ವಿಜಯ ನಗರಕ್ಕೆ ಹೋಗಬೇಕಾಗಿತ್ತು. ವಿಜಯನಗರ ಸಾಮ್ರಾಜ್ಯದ ರಾಜವೈಭವ, ರಾಜಸಭೆ, ರಾಜಪರಿವಾರದ ಸರಸ ಸುಮ್ಮಾನ, ಶೃಂಗಾರ ಜೀವನ, ಜಲಕ್ರೀಡೆ, ಓಕುಳಿಯಾಟ, ನವರಾತ್ರಿ, ವಿಜಯನಗರದ ಪುರರಚನೆ, ಉದ್ಯಾನವನ, ಪ್ರಜೆಗಳ ವೇಷಭೂಷಣ, ರಾಜ್ಯದ ಯುದ್ಧ ವಿಧಾನ ಇತ್ಯಾದಿಗಳು ಅವನ ಮನಸೂರೆಗೊಂಡಿದ್ದವು. ಆ ಬರಹವೇ ಇಂದು ನಮಗೆ ಲಭ್ಯವಿರುವ ಮೋಹನತರಂಗಿಣಿ.
2. ರಾಮಧಾನ್ಯಚರಿತ್ರೆ: ನಮಗೆ ಅತ್ಯಂತ ಪ್ರೀತಿ ಪೂರ್ವಕವಾಗಿ ಮನಸ್ಸಿಗೆ ನಾಟುವ ವಿಚಾರಗಳು ನೇರವಾಗಿ ಮನುಷ್ಯ ಮನುಷ್ಯನನ್ನೇ ಉದ್ದೀಪನಗೊಳಿಸಿ ಉದಾಹರಣೆಯ ಮೂಲಕ ಕಥೆಗಳನ್ನೋ ಅಥವಾ ಇನ್ಯಾವುದೇ ಸಂಗತಿಯನ್ನು ಪ್ರಚುರ ಪಡಿಸಿದರೆ ಅಷ್ಟು ಪರಿಣಾಮಕಾರಿಯಾಗದೆ ಇರಬಹುದು ಅದಕ್ಕಾಗಿಯೇ ಕೆಲವು ಸಾಹಿತಿಗಳು ಪ್ರಾಣಿ-ಪಕ್ಷಿ-ಕ್ರಿಮಿ-ಕೀಟ-ಗಿಡಮರ ಬಳ್ಳಿ ಮುಂದುವರೆದು ದವಸ ಧಾನ್ಯಗಳನ್ನು ಕಾವ್ಯ-ಸಾಹಿತ್ಯದ ವಸ್ತುವಾಗಿಸಿಕೊಂಡು ನಿರೂಪಿಸಿರುವ ಶೈಲಿ ನೂತನವಾದುದು. ಅಂತೆಯೇ ಕನಕದಾಸರು ಸಹ ರಾಮಧಾನ್ಯಚರಿತ್ರೆ ಕೃತಿಯಲ್ಲಿ ಧಾನ್ಯಗಳನ್ನು ವಸ್ತುವಾಗಿಸಿಕೊಂಡಿದ್ದಾರೆ. ಭಾಮಿನೀ ಷಟ್ಪದಿಯಲ್ಲಿ ರಚಿತವಾಗಿರುವ 156 ಪದ್ಯಗಳನ್ನು ಒಳಗೊಂಡಿದೆ. ಈ ಕೃತಿಯಲ್ಲಿ ಧನಿಕರ ಆಹಾರಧಾನ್ಯ ಅಕ್ಕಿ ಹಾಗೂ ಕೆಳವರ್ಗದವರ ಆಹಾರಧಾನ್ಯವೆಂದು ಪರಿಭಾವಿಸಲಾಗಿರುವ ರಾಗಿಯ ನಡುವಿನ ಸಂಭಾಷಣೆಯ ಮೂಲಕ ರಾಗಿ ಹೇಗೆ ತನ್ನ ಔನ್ನತ್ಯವನ್ನು ಸಾಬೀತು ಪಡಿಸುತ್ತದೆ ಹಾಗೂ ರಾಮಧಾನ್ಯವೆಂಬ ಹೆಸರು ಪಡೆಯುತ್ತದೆ ಎಂಬುದನ್ನು ನಿರೂಪಿಸಲಾಗಿದೆ.
3. ನಳಚರಿತ್ರೆ: ಕನಕದಾಸರ ಹೆಸರನ್ನು ಚಿರಸ್ಥಾಯಿಯಾಗಿಸಿರುವ ಮತ್ತೊಂದು ಕೃತಿ ನಳಚರಿತ್ರೆ. 9 ಸಂಧಿಗಳಿಂದ ಕೂಡಿದ್ದು ಭಾಮಿನೀ ಷಟ್ಪದಿಯಲ್ಲಿ ರಚನೆ ಯಾಗಿರುವ 481 ಪದ್ಯಗಳಿವೆ. ಇದು ನಳ ದಮಯಂತಿಯರ ಕಥೆ. 13ನೇ ಶತಮಾನದ ನಳ ಚಂಪೂವಿಗಿಂತ ಈ ನಳಚರಿತ್ರೆ, ಹೃದಯಸ್ಪರ್ಶಿಯಾದ ಚಿತ್ರಣಗಳಿಂದ ಚಿರಂತನ ಪ್ರೇಮದ ಕಥನದಿಂದ ಅಶ್ಲೀಲತೆಯ ಸೋಂಕಿಲ್ಲದ ಶೃಂಗಾರ ವರ್ಣನೆಯಿಂದ ಶೋಭಿಸುತ್ತಾ ಇಂದಿಗೂ ಅತ್ಯಂತ ಜನಪ್ರಿಯವಾಗಿದೆ.
4. ಹರಿಭಕ್ತಿಸಾರ: ಹರಿಯ ಶ್ರೇಷ್ಟತೆಯನ್ನು ಸಾರುವ ವಿಶಿಷ್ಟವಾದ ಕನಕದಾಸರ ಕೃತಿ ಇದಾಗಿದ್ದು, ಇದು 110 ಭಕ್ತಿಪದ್ಯಗಳಿರುವ ಗ್ರಂಥ. ಭಾಮಿನೀ ಷಟ್ಪದಿಯಲ್ಲಿ ಸರಳಗನ್ನಡದಲ್ಲಿ ರಚಿತವಾಗಿರುವ ಈ ಗ್ರಂಥ ಕನ್ನಡದ ಭಗವದ್ಗೀತೆಯಂತಿದೆ.

ಒಂದು ಅಂದಾಜಿನ ಪ್ರಕಾರ 316 ಕೀರ್ತನೆಗಳನ್ನು ರಚಿಸಿದ್ದಾರೆ. ಕನಕರ ಮುಂಡಿಗೆಗಳೆಂಬ ಚಮತ್ಕಾರಿಕ ಪದ್ಯಗಳು ಹೆಸರುವಾಸಿಯಾಗಿವೆ. ಕನಕದಾಸರ ಭಕ್ತಿ ಪಾರಮ್ಯವನ್ನು ಅವರ ಕೀರ್ತನೆಗಳಲ್ಲಿ ಕಾಣಬಹುದು.

ಬದುಕಿದೆನು ಬದುಕಿದೆನು ಭವ ಎನಗೆ ಇಂಗಿತು, ಪದುಮನಾಭನ ಪಾದದೊಲುಮೆ ಎನಗಾಯಿತು ಎಂದು ಭಕ್ತಿಪರವಶದಲ್ಲಿ ಹಾಡಿದ ಕನಕದಾಸರು, ಕಾಗಿನೆಲೆಯ ಆದಿಕೇಶವ ಎಂಬ ಅಂಕಿತ ನಾಮವನ್ನು ಹೊಂದಿ ಕೊನೆಯ ತನಕವೂ ತಮ್ಮ ಆದರ್ಶದ ಬದುಕನ್ನು ಉಳಿಸಿಕೊಂಡು ಆದಿಕೇಶವರಾಯರಲ್ಲಿಯೇ 1607ರಲ್ಲಿ ಐಕ್ಯರಾದರು.

ಮನೋಕ್ರೀಡೆಗಳು

ನಿತ್ಯ ಜೀವನದಲ್ಲಿ ಭಗವದ್ಗೀತೆ

ಹಿರಿಯ ಐಎಎಸ್ ಅಧಿಕಾರಿ ● ಕೆ.ಶಿವಪ್ರಸಾದ್

ನಮ್ಮ ಇಂದ್ರಿಯಗಳು ನಮ್ಮ ಆಂತರಿಕ ಹಾಗೂ ಬಾಹ್ಯ ಜಗತ್ತುಗಳ ನಡುವೆ ದ್ವಾರಗಳಾಗಿರುವದರಿಂದ ಗೀತೆಯು ಅದಕ್ಕೆ ಹೆಚ್ಚು ಒತ್ತು ಕೊಟ್ಟಿದೆ. 'ಒಟ್ಟಾಗಿ ಕೆರಳಿಸುವ ನರಗಳು ಎಲ್ಲವನ್ನೂ ಒಟ್ಟಾಗಿಸುತ್ತವೆ' ಎಂಬ ಮಾತನ್ನು ನರವಿಜ್ಞಾನ ಸಮರ್ಥಿಸುತ್ತದೆ. ಗೀತೆಯೂ ಕೂಡ ತನ್ನ ಕಾಲದ ಭಾಷೆಯನ್ನು ಉಪಯೋಗಿಸಿ ಅಂತಹದೇ ಸಂದೇಶವನ್ನು ನೀಡುತ್ತದೆ.

ನಮ್ಮ ಮೆದುಳು ಸುಮಾರು ಒಂದುನೂರು ಶತಕೋಟಿ ನರಕೋಶಗಳನ್ನು ಹೊಂದಿದೆ. ಕೆಲವೊಂದು ದೇಹದ ಸ್ವಯಂಚಾಲಿತ ಕಾರ್ಯಗಳನ್ನು ನಿರ್ವಹಿಸಲು ಡಿ.ಎನ್.ಎ.ಯೊಂದಿಗೆ ಜೋಡಿಸಲ್ಪಟ್ಟಿವೆ. ಇನ್ನು ಕೆಲವು ನಮ್ಮ ಜೀವಿತ ಕಾಲದಲ್ಲಿ ನಮ್ಮೊಂದಿಗೆ ಜೋಡಿಸಲ್ಪಟ್ಟಿವೆ. ನಾವು ವಾಹನಚಾಲನೆಯನ್ನು ಕಲಿಯುವ ಮೊದಲದಿನ ಬಹಳ ಕಷ್ಟವನ್ನು ಎದುರಿಸುತ್ತೇವೆ. ನಂತರ ಅದು ನಮಗೆ ರೂಢಿಯಾಗುತ್ತದೆ. ಇದಕ್ಕೆ ಕಾರಣವೇನೆಂದರೆ ಈವರೆಗೆ ಉಪಯೋಗಿಸಲ್ಪಡದ ನರಕೋಶಗಳ ಕಠಿನ ಜೋಡಣೆಯನ್ನು ನಮ್ಮ ಮೆದುಳು ಮಾಡುತ್ತದೆ. ಚಾಲನೆಗೆ ಬೇಕಾಗುವ ಎಲ್ಲ ಚಟುವಟಿಕೆಗಳನ್ನು ಸಂಘಟಿಸುವದಕ್ಕಾಗಿ ಹಾಗಾಗುತ್ತದೆ.

ಸರಳವಾದ ನಡಿಗೆಯಿಂದ ಹಿಡಿದು ಕ್ರೀಡೆ ಹಾಗೂ ಸಂಕೀರ್ಣ ಶಸ್ತ್ರಚಿಕಿತ್ಸೆಯಂತಹ ಕಾರ್ಯ ಮಾಡುವ ಸಾಮರ್ಥ್ಯಕ್ಕೆ ಸಂಬಂಧಪಟ್ಟು ಇದೇ ನಡೆಯುತ್ತದೆ, ಕ್ಲಿಷ್ಟ ಜೋಡಣೆಯು ಮೆದುಳಿನ ಶಕ್ತಿಯನ್ನೂ ಸಾಕಷ್ಟು ಉಳಿಸುತ್ತದೆ ಮತ್ತು ನಮ್ಮ ಜೀವನವನ್ನು ಸರಾಗಗೊಳಿಸುತ್ತದೆ. ಆಗ ತಾನೆ ಜನಿಸಿದ 'ವಿಶ್ವ ಮಗು' ಎಲ್ಲ ಸಾಮರ್ಥ್ಯವನ್ನು ಹೊಂದಿರುತ್ತದೆ. ಕುಟುಂಬ, ಸಮಾನ ವ್ಯಕ್ತಿಗಳು ಮತ್ತು ಸಮಾಜದಿಂದ ಪಳಗಿಸಲ್ಪಟ್ಟು ಅನೇಕ ನರಕೋಶಗಳ ಮಾದರಿ ರಚನೆಗೆ ಕಾರಣವಾಗುತ್ತದೆ. ಈ ಮಾದರಿ ರಚನೆಗಳು ನಾವು ಬಾಹ್ಯ ಜಗತ್ತಿನಿಂದ ನಿರ್ದಿಷ್ಟ ಆವೇಗ ಹಾಗೂ ಸಂವೇದನೆಗಳನ್ನು ಪಡೆಯುವ ನಿರೀಕ್ಷೆಯನ್ನು ಹೊಂದಿರುತ್ತವೆ. ಅವನ್ನು ಪಡೆಯಲು ನಾವು ಬಹುವಾಗಿ ಶ್ರಮಿಸುತ್ತೇವೆ. ಉದಾಹರಣೆಗೆ ನಮ್ಮ ನರಕೋಶಗಳ ರಚನೆಗಳು ನಮ್ಮಿಂದ ಇದನ್ನೇ ನಿರೀಕ್ಷಿಸಿ ಸಂತೋಷ ಹೊಂದುವದರಿಂದ ನಮ್ಮಬಗೆಗಿನ ಹೊಗಳಿಕೆಗಳನ್ನು ನಾವು ಬಯಸುತ್ತೇವೆ. ನಮ್ಮ ನಿರೀಕ್ಷೆಗಳು, ಪೂರ್ವಾಗ್ರಹ ಮತ್ತು ನಮ್ಮ ನಿರ್ಣಯಗಳಿಗೆ ಈ ಮಾದರಿ ರಚನೆಗಳೇ ಆಧಾರಸ್ತಂಭಗಳಾಗಿವೆ.

ನಾವು ಮಾಡಿದ ಪ್ರಯತ್ನದೊಂದಿಗೆ ಕೂಡಿದ ಈ ಮಾದರಿ ರಚನೆಗಳ ಸಂಯೋಜನೆಯೇ ಅಹಂಕಾರ ಮತ್ತೇನೂ ಅಲ್ಲ. ಹಾಗೂ ಇಂದಿನ ಜಗತ್ತಿನಲ್ಲಿ ಯಶಸ್ಸು ಮತ್ತು ಸಂತೋಷಗಳನ್ನು ನಮ್ಮ ನರಕೋಶ ರಚನೆಗೆ ಹೊಂದುವ ಸಂವೇದನೆಗಳನ್ನು ಪಡೆಯುವದಾಗಿದೆ. ಇದಕ್ಕೆ ಭಂಗವಾದರೆ ವ್ಯಕ್ತಿ ತನ್ನ ಆಂತರ್ಯದಲ್ಲಿ ಕೇಂದ್ರೀಕೃತನಾಗುತ್ತಾನೆ. ಇದರ ಪರಿಣಾಮವಾಗಿ ನಾವು ಬಾಹ್ಯ ಸಂವೇದನೆಗಳ ಮೇಲೆ ಅವಲಂಬಿತವಾಗಿಲ್ಲದ್ದರಿಂದ ನಮಗೆ ಸಂತೋಷ ಸಿಗುತ್ತದೆ ಇದನ್ನು ಕೃಷ್ಣ 'ಆತ್ಮಾರಾಮನ್' ಎಂದು ಕರೆಯುತ್ತಾನೆ.

ಗೀತೆ ಹೇಳಿದ ಜೀವನವನ್ನು ನಡೆಸುವದೆಂದರೆ ವಿವಿಧ ತರದ ಸೂಚನೆಗಳನ್ನು, ಉಪಕರಣಗಳನ್ನು (ಗೀತೆಯಲ್ಲಿ ಹೇಳಿದ್ದು) ಈ ರಚನೆಗಳನ್ನು ಮುರಿಯಲು ಉಪಯೋಗಿಸುವದಾಗಿದೆ. ಇದರಿಂದ ನಮಗೆ ಸಂತೋಷ ಸಿಗುವದಲ್ಲದೇ, ನಾವು ನಿರ್ಣಯಮುಕ್ತರಾಗುತ್ತೇವೆ.

ಹನ್ನೊಂದು ಸೈಕಲ್ ಕೊಡಿಸಿದ ಯುವಕ!

● ಈರಣ್ಣ ಬೆಂಗಾಲಿ ರಾಯಚೂರು

ನಮ್ಮ ನೋವು ನಮಗೆ ಅರ್ಥವಾದರೆ ನಾವು ಬದುಕಿದ್ದೇವೆ ಎಂದರ್ಥ, ಬೇರೆಯವರ ನೋವು ನಮಗೆ ಅರ್ಥವಾದರೆ ನಾವು ಮನುಷ್ಯರಾಗಿದ್ದೇವೆ ಎಂದರ್ಥ! ಎಲ್ಲೋ ಓದಿದ, ಕೇಳಿದ ಈ ಅರ್ಥಭರಿತ ಸಾಲುಗಳು, ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಮಲ್ಕಂದಿನ್ನಿ ಗ್ರಾಮದ ಯುವಕ ಆಂಜನೇಯ ಎಂಬುವವರಿಗೆ ಸೂಕ್ತ ಎನಿಸುತ್ತದೆ. ತನ್ನ ಕೂಲಿ ಹಣದ ಸಂಪಾದನೆಯಿಂದ, ವಿದ್ಯಾರ್ಥಿಗಳಿಗೆ ಸಹಾಯ ಮಾಡಿ, ತಾನೂ ಮನುಷ್ಯನೆಂದು ಸಾಬೀತು ಪಡಿಸಿಕೊಂಡಿದ್ದಾನೆ.

ರಸ್ತೆ ಹಾಕಲು, ಹೊಲದ ಕೆಲಸ, ಡ್ರೈವರ್ ಕೆಲಸ ಹೀಗೆ ಏನೇ ಕೆಲಸಕ್ಕೂ ಕರೆದರೆ ಹೋಗುವ ಆಂಜನೇಯ ಓದಿದ್ದು ನಾಲ್ಕನೆ ತರಗತಿ. ಇವರ ತಂದೆ ತಾಯಿ ಕೂಲಿ ಮಾಡಲು ಬೆಂಗಳೂರಿಗೆ ಹೋದಾಗ ಹೆಣ್ಣು ಮಗುವನ್ನು ಅಂದರೆ ತನ್ನ ತಂಗಿಯನ್ನು ನೋಡಿಕೊಳ್ಳಲು ಇವರನ್ನು ಕೂಲಿ ಕೆಲಸದ ಜಾಗಕ್ಕೆ ಕರೆದುಕೊಂಡು ಹೋಗುತ್ತಿದ್ದರಂತೆ.

ಕೊತ್ತದೊಡ್ಡಿ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಮಲ್ಕಂದಿನ್ನಿ, ಕಾಟಮಳ್ಳಿ, ಕೊರಡಾನಿ ಹಳ್ಳಿಗಳಿಗೆ ಬಸ್ ಸೌಲಭ್ಯ ಇಲ್ಲ. ಇಲ್ಲಿನ ವಿದ್ಯಾರ್ಥಿಗಳು ಹೈಸ್ಕೂಲ್ ಓದಲು ಐದು ಕಿ.ಮೀ. ದೂರದ ಯಮನೂರುಗೆ ಹೋಗಬೇಕು. ಹಿಂದೆ ಈ ಮಕ್ಕಳು ಟಾಟಾ ಆಟೋದಲ್ಲಿ ಹೋಗುತ್ತಿದ್ದರು. ಅನಿವಾರ್ಯ ಕಾರಣದಿಂದ ಆಟೋ ಓಡಿಸುವುದನ್ನು ನಿಲ್ಲಿಸಿಬಿಟ್ಟರು. ಇದರಿಂದ ಮಕ್ಕಳಿಗೆ ತೊಂದರೆಯಾಯಿತು. ಶಾಲೆಗೆ ವಿದ್ಯಾರ್ಥಿಗಳು ನಡೆದುಕೊಂಡೇ ಹೋಗುತ್ತಿದ್ದರು.

ಈ ವಿದ್ಯಮಾನ ಗಮನಿಸಿದ ಆಂಜನೇಯ ಅವರು, ವಿದ್ಯಾರ್ಥಿಗಳಿಗೆ ಸಹಾಯ ಮಾಡಲು ಮುಂದಾದರು. ತಮ್ಮೂರಿನ ಮಲ್ಕಂದಿನ್ನಿಯ ಹನ್ನೊಂದು ವಿದ್ಯಾರ್ಥಿಗಳಿಗೆ ತಮ್ಮ ಕೂಲಿ ಹಣದಿಂದಲೇ ಹನ್ನೊಂದು ಸೈಕಲ್ ಕೊಡಿಸಿದ್ದಾರೆ. ಒಟ್ಟು ಐವತ್ತು ಸಾವಿರಕ್ಕೂ ಅಧಿಕ ಮೌಲ್ಯದ ಅತ್ಯಾಧುನಿಕ ಹೊಚ್ಚ ಹೊಸ ಸೈಕಲ್ ಗಳನ್ನು ಖರೀದಿಸಿ, ಶಾಲೆಯ ಆವರಣದಲ್ಲಿ, ಮುಖ್ಯೋಪಾಧ್ಯಾಯರ, ಶಿಕ್ಷಕರ ಸಮ್ಮುಖದಲ್ಲಿ ನೀಡಿದ್ದಾರೆ.

ಸೈಕಲ್ ಪಡೆದ ಮಕ್ಕಳು, ಈಗ ಖುಷಿಯಿಂದ ತಮ್ಮ ಶಾಲೆಗೆ ಸೈಕಲ್‌ನಲ್ಲೇ ಪಯಣಿಸುತ್ತಿದ್ದಾರೆ. ಸಮಾಜದಲ್ಲಿ ಬದುಕಿದ್ದು, ಸಮಾಜಕ್ಕೆ ಏನಾದರೂ ಕೊಡುಗೆ ನೀಡಬೇಕು ಎಂಬ ಅಭಿಲಾಷೆ ಇರುವವರಿಗೆ ಮಲ್ಕಂದಿನ್ನಿಯ ಆಂಜನೇಯ ಅವರು ಮಾದರಿ!



ಸಾರ್ವಕಾಲಿಕ ಸಂದೇಶ

ನವೆಂಬರ 18 ರಂದು ಕನಕದಾಸರ ಜಯಂತಿಯನ್ನು ನಾಡಿನಾದ್ಯಂತ ಸಂಭ್ರಮದಿಂದ ಆಚರಿಸಲಾಗು ತ್ತಿದೆ. ಯಾವುದೇ ಜಾತಿ, ಧರ್ಮ, ಪ್ರದೇಶ, ಭಾಷೆಗೆ ಸೀಮಿತವಾಗದ ಕನಕದಾಸರ ವಿಶ್ವಮಾನವ ಪರಿಕಲ್ಪನೆಯ ಸಂದೇಶಗಳು ಸಾರ್ವಕಾಲಿಕ ಪ್ರಸ್ತುತತೆಯನ್ನು ಪಡೆದಿವೆ. ಇಂದಿನ ಆಧುನಿಕ ಸಮಾಜಕ್ಕೆ ಕನಕದಾಸರ ತತ್ವೋಪದೇಶ ಗಳು, ಜೀವನ ಮೌಲ್ವಿಕ ಸಂದೇಶಗಳು ಅತಿ ಅಗತ್ಯವಾಗಿವೆ. ಕನಕದಾಸರು ಸಾಹಿತ್ಯದ ವಿವಿಧ ಪ್ರಕಾರಗಳಾದ ಕೀರ್ತನೆ ಗಳು, ತತ್ವಪದಗಳು, ಸುಳಾದಿಗಳು ಮತ್ತು ಉಗಾಭೋಗ ಗಳನ್ನು ರಚಿಸುವದರ ಮೂಲಕ ಕನ್ನಡ ಸಾಹಿತ್ಯ ಹಾಗೂ ಮುಂಡಿಗೆಗಳ ರೂಪದಲ್ಲಿ ಸಂಗೀತ ಲೋಕಕ್ಕೆ ನೀಡಿದ ಕೊಡುಗೆ ವಿಶಿಷ್ಟ ಮತ್ತು ಅನನ್ಯವಾದುದು. ಅವರ ಕಾವ್ಯ ಕೃತಿಗಳಲ್ಲಿ ಮೋಹನ ತರಂಗಿಣಿ, ನಳಚರಿತ್ರೆ, ರಾಮಧಾನ್ಯ ಚರಿತೆ, ಹರಿಭಕ್ತಸಾರಗಳಾದಿಯಾಗಿ ಒಟ್ಟು 316 ಕೀರ್ತನೆಗಳನ್ನು ರಚಿಸಿದ ಕೀರ್ತಿ ಕನಕದಾಸರಿಗೆ ಸಲ್ಲುತ್ತದೆ.

ಕನಕದಾಸರು 'ಬಟ್ಟೆ ನೀರೊಳಗೆ ಅದ್ದಿ ಒಣಗಿಸಿ, ಉಟ್ಟುಕೊಂಡರೆ ಅದು ಮಡಿಯಲ್ಲ. ಹೊಟ್ಟೆಯೊಳಗಿನ ಕಾಮ, ಕ್ರೋಧಾದಿಗಳನು ಬಿಟ್ಟು ನಡೆದರೆ ಅದುವೇ ಮಡಿ ಎಂದು ಮನುಷ್ಯನಾದವನು ಜೀವನದಲ್ಲಿ ಕಾಮ, ಕ್ರೋಧ, ಮದ, ಮತ್ಸರ, ಮೋಹ ಮತ್ತು ಲೋಭಗಳೆಂಬ ಅರಿಷಡ್ವ ರ್ಗಗಳನ್ನು ತ್ಯಜಿಸಿ ಬದುಕಿದರೆ ಅದುವೇ ನಿಜವಾದ ಮಡಿ ಯಂಥ ಜೀವನ'ವೆಂದು ಮಾರ್ಮಿಕವಾಗಿ ಹೇಳಿದ್ದಾರೆ.

'ನೀ ಮಾಯೆಯೊಳಗೋ ನಿನ್ನೊಳು ಮಾಯೆಯೋ, ನೀ ದೇಹದೊಳಗೋ ನಿನ್ನೊಳು ದೇಹವೋ, ಕಾಗಿನೆಲೆಯಾದಿಕೇಶವ ಉಸುರಲೆನ್ನಳವಲ್ಲ ಎಲ್ಲ ನಿನ್ನೊಳಗೆ' ಎಂಬ ಕನಕದಾಸರ ದಾಸವಾಣಿಯು ಅರ್ಥಪೂರ್ಣವಾಗಿದೆ. ಮಾನವ ಜನ್ಮ ದೊಡ್ಡದು ಅದನು ಹಾನಿ ಮಾಡಿಕೊಳ್ಳದಿರಿ ಹುಚ್ಚಪ್ಪಗಳೀರಾ ಎಂಬ ವಾಣಿಯಂತೆ, ಜನರು ಪ್ರೀತಿ, ವಿಶ್ವಾಸದಿಂದ ಬದುಕಿ-ಬಾಳಿ, ತಾವು ಸಮಾಜಕ್ಕೆ ಏನನ್ನಾದರೂ ಕೊಡುಗೆ ನೀಡಿ ತಮ್ಮ ಜೀವನವನ್ನು ಸಾರ್ಥಕಪಡಿಸಿಕೊಳ್ಳಬೇಕೆಂದು ಕೀರ್ತನೆಗಳ ಮೂಲಕ ಜನರಲ್ಲಿ ಜಾಗೃತಿ ಮೂಡಿಸಿದ ಶ್ರೇಷ್ಠ ಸಂತರೆಂದರೆ ಕನಕದಾಸರು. ಸಮಾಜದಲ್ಲಿನ ಜಾತಿ-ಮತ,ಪಂಥಗಳೆಂಬ ಕಂದಕಗಳ ವಿರುದ್ಧ ತಮ್ಮ ಕೀರ್ತನೆಗಳ ಮೂಲಕವೇ ಹೋರಾಡಿ ಸಮ ಸಮಾಜದ ನಿರ್ಮಾಣಕ್ಕೆ ಅಪಾರ ಕೊಡುಗೆ ನೀಡಿದ್ದಾರೆ.

● ಮಲ್ಲಪ್ಪ. ಸಿ. ಖೊದ್ನಪೂರ

ಸಮಾಚಾರ ಸಣ್ಣದಲ್ಲ

ಸ್ಪ್ರೈಡ್ ಎಫ್ಸಿಗೆ ಆಚಾರ್ ಶೀಲ್ಡ್

ಬೆಂಗಳೂರು: ಸ್ಪ್ರೈಡ್ ಎಫ್ಸಿ ತಂಡವು ಜಗದೇಶ್ವರ ಆಚಾರ್ ಶೀಲ್ಡ್‌ಗಾಗಿ ನಡೆದ ಬಿಡಿಎಫ್‌ಎ ಬಿ ಡಿವಿಷನ್ ಕ್ಲಬ್‌ಗಳ ಫುಟ್ಬಾಲ್ ಟೂರ್ನಿಯಲ್ಲಿ ಪ್ರಶಸ್ತಿ ಮುಡಿಗೇರಿಸಿಕೊಂಡಿತು. ಕೆಂಗೇರಿಯ ಸಾಯ್ ಮೈದಾನದಲ್ಲಿ ಭಾನುವಾರ ನಡೆದ ಫೈನಲ್ ಹಣಾಹಣಿಯಲ್ಲಿ ಸ್ಪ್ರೈಡ್ ತಂಡವು 3-2ರಿಂದ ಇನ್ಫಿನೆಟ್ ಬೆಳಗಾವಿ ಎಫ್.ಸಿ ತಂಡವನ್ನು ಮಣಿಸಿತು. ಸ್ಪ್ರೈಡ್ ಪರ ಅಭಿನಾಶ್ ದಾಸ್ (8ನೇ ನಿಮಿಷ), ವೇದಾಂತ್ ಬ್ಯಾನರ್ಜಿ (25ನೇ ನಿ) ಮತ್ತು ಕಾರ್ತಿಕೇಯನ್ ಜೆ (31ನೇ ನಿ) ಗೋಲು ಗಳಿಸಿದರು. ಬೆಳಗಾವಿ ಪರ ಮೊಹಮ್ಮದ್ ಶಮಿಲ್ ಪಿ. (40ನೇ ನಿ) ಮತ್ತು ಅಂಕಿತ್ ಮಾನೆ (41ನೇ) ಅವರು ಚೆಂಡನ್ನು ಗುರಿ ಸೇರಿಸಿದರು. ಸ್ಪ್ರೈಡ್‌ನ ರಾಜೇಶ್ ಟಿ. ಸರಣಿಯ ಆಟಗಾರ; ರಿವೈವ್ ಎಫ್.ಸಿ.ಯ ಸತೀಶ್ ಎಸ್. ಉತ್ತಮ ಗೋಲ್‌ಕೀಪರ್; ಜುನೊ ಎಫ್.ಸಿ.ಯ ಬಲ್ವಿಂದರ್ ಸಿಂಗ್ ಉತ್ತಮ ಡಿಫೆಂಡರ್ ಮತ್ತು ಇನ್ಫಿನೆಟ್‌ನ ಮೊಹಮ್ಮದ್ ಶಮಿಲ್ ಅಗ್ರ ಸ್ಕೋರರ್ ಗೌರವಕ್ಕೆ ಪಾತ್ರವಾದರು. ವಿಜೇತ ತಂಡಕ್ಕೆ ಬಿಡಿಎಫ್‌ಎ ಅಧ್ಯಕ್ಷ ಎಸ್.ಎಂ.ಬಾಲು, ಹಿರಿಯ ಸದಸ್ಯ ಆರ್.ಮೋಹನ್ ಟ್ರೋಫಿ ಹಸ್ತಾಂತರಿಸಿದರು.

ಪಾಕ್‌ಗೆ ಇಂಗ್ಲೆಂಡ್ ಭರವಸೆ

ಲಂಡನ್: ಜೀವ ಬೆದರಿಕೆ ಕಾರಣವೊಡ್ಡಿ 2021ರಲ್ಲಿ ಪಾಕಿಸ್ತಾನದಲ್ಲಿ ಸರಣಿ ಆಡಲು ನಿರಾಕರಿಸಿದ್ದ ಇಂಗ್ಲೆಂಡ್ ಕ್ರಿಕೆಟ್ ಮಂಡಳಿ ಇದೀಗ ಮುಂದಿನ ವರ್ಷ ನಡೆಯುವ ಚಾಂಪಿಯನ್ಸ್ ಟ್ರೋಫಿ ಆತಿಥ್ಯ ವಿಚಾರದಲ್ಲಿ ಪಾಕಿಸ್ತಾನ ಕ್ರಿಕೆಟ್ ಮಂಡಳಿಗೆ ಬೆಂಬಲ ಸೂಚಿಸಿದೆ. ಭದ್ರತೆಯ ಕಾರಣ ನೀಡಿ ಟೂರ್ನಿಯನ್ನು ಪಾಕ್‌ನಿಂದ ಸ್ಥಳಾಂತರಿಸಲು ಬಿಸಿಸಿಐ ಐಸಿಸಿಗೆ ಮನವಿ ಮಾಡಿರುವ ಬೆನ್ನಲ್ಲೇ ಈ ಬೆಳವಣಿಗೆ ನಡೆದಿದೆ. ಪಾಕಿಸ್ತಾನ ಕ್ರಿಕೆಟ್ ಮಂಡಳಿ ಮುಖ್ಯಸ್ಥ ಮೊಹ್ಸಿನ್ ನಖ್ವಿ ಲಂಡನ್‌ನಲ್ಲಿ ಇಂಗ್ಲೆಂಡ್ ಕ್ರಿಕೆಟ್ ಮಂಡಳಿ ಅಧ್ಯಕ್ಷ ರಿಚರ್ಡ್ ಥಾಂಪ್ಸನ್ ಅವರನ್ನು ಭೇಟಿಯಾಗಿದ್ದು ಅವರ ಬಳಿಕ ಚಾಂಪಿಯನ್ಸ್ ಟ್ರೋಫಿ ಆತಿಥ್ಯದ ವಿಚಾರದಲ್ಲಿ ಸುದೀರ್ಘ ಮಾತುಕತೆ ನಡೆಸಿದ್ದಾರೆ. ಈ ವೇಳೆ ಇಂಗ್ಲೆಂಡ್ ಕ್ರಿಕೆಟ್ ಬೋರ್ಡ್ ಪಿಸಿಬಿ ಜತೆ ನಿಲ್ಲುವುದಾಗಿ ಭರವಸೆ ನೀಡಿದೆ ಎಂದು ವರದಿಯಾಗಿದೆ. ರಿಚರ್ಡ್ ಥಾಂಪ್ಸನ್ ಜತೆ ಮಾತುಕತೆ ನಡೆಸಿರುವ ಫೋಟೊವನ್ನು ಪಿಸಿಬಿ ತನ್ನ ಅಧಿಕೃತ ಟ್ವಿಟರ್ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದೆ. ಕ್ರಿಕೆಟ್ ಜಗತ್ತಿನಲ್ಲಿ ಇಂಗ್ಲೆಂಡ್ ಕ್ರಿಕೆಟ್ ಬೋರ್ಡ್ ಕೂಡ ಬಿಸಿಸಿಐನಷ್ಟೇ ಪ್ರಾಬಲ್ಯ ಹೊಂದಿದೆ. ಇದೇ ಕಾರಣಕ್ಕೆ ಪಾಕ್ ಕ್ರಿಕೆಟ್ ಮಂಡಳಿ ಇಂಗ್ಲೆಂಡ್ ಕ್ರಿಕೆಟ್ ಮಂಡಳಿಯ ಸಹಾಯ ಕೇಳಿದೆ ಇಸಿಬಿ ಪಿಸಿಬಿ ಪರ ನಿಂತರೆ ಆಗ ಐಸಿಸಿಗೆ ಏಕ ಪಕ್ಷೀಯವಾಗಿ ಟೂರ್ನಿಯ ಆತಿಥ್ಯದ ವಿಚಾರದಲ್ಲಿ ಅಷ್ಟು ಸಲುಭವಾಗಿ ನಿರ್ಧಾರ ಕೈಗೊಳ್ಳಲು ಆಗುವುದಿಲ್ಲ.

ಅರ್ಹತಾ ಸುತ್ತು: ಬಂಥಿಯಾ ಷಾ, ಅಜಯ್ ಮಲಿಕ್‌ಗೆ ಜಯ

ಕಲಬುರಗಿ ಓಪನ್ ಟೆನಿಸ್ ಟೂರ್ನಿ ಆರಂಭ | ಆರಂಭಗೊಂಡ ಅರ್ಹತಾ ಸುತ್ತುಗಳು | ಆರಂಭದ ಹಂತದಲ್ಲೇ ಎಡವಿದ ಕನ್ನಡಿಗರು

ವಿಶ್ವವಾಣಿ ಸುದ್ದಿಮನೆ ಕಲಬುರಗಿ

ಸೂರ್ಯ ನಗರಿ ಕಲಬುರಗಿಯಲ್ಲಿ ಭಾನುವಾರದಿಂದ ಐಟಿಎಫ್-2024 ಪಂದ್ಯಾವಳಿಯ ಅರ್ಹತಾ ಸುತ್ತುಗಳು ಪ್ರಾರಂಭಗೊಂಡಿದ್ದು, ಬಂಥಿಯಾ ಷಾ ಅವರು ಧರ್ಮಿಲ್ ಷಾ ಮಣಿಸುವ ಮೂಲಕ ಮುನ್ನಡೆ ಸಾಧಿಸಿದ್ದರೆ, ಅಜಯ್ ಮಲಿಕ್ ಸಿಲಿಕಾನ್ ಸಿಟಿಯ ದೀಪಕ್ ಅನಂತರಾಮು ಸೋಲಿಸುವ ಮೂಲಕ ಜಯ ದಾಖಲಿಸಿದರು.

ನಗರದ ಚಂದ್ರಶೇಖರ ಪಾಟೀಲ ಕ್ರೀಡಾಂಕಣದಲ್ಲಿ ಕಲಬುರಗಿ ಓಪನ್ ಟೆನಿಸ್ ಟೂರ್ನಿಯ ಮೊದಲ ದಿನದಾಟದಲ್ಲಿ ಪುಣೆಯ ಪ್ರತಿಭೆ ಅಗ್ರ ಶ್ರೇಯಾಂಕದ ಸಿದ್ಧಾಂತ್ ಬಂಥಿಯಾ ಷಾ ಎದುರಾಳಿ ಧರ್ಮಿಲ್ ಷಾ ಅವರನ್ನು ಡಬಲ್ ಕ್ವಿಕ್ ಟೈಂನಲ್ಲಿ 6-0, 6-1 ಅಂತರದಲ್ಲಿ ಮಣಿಸಿ ಮುಂದಿನ ಸುತ್ತಿಗೆ ಮುನ್ನುಗ್ಗಿದರು.

ಪುರುಷರ ಮತ್ತೊಂದು ಟೂರ್ನಿಯಲ್ಲಿ ಅಜಯ್ ಮಲಿಕ್ ಬೆಂಗಳೂರಿನ ದೀಪಕ್ ಅನಂತರಾಮು ಅವರನ್ನು 6-4, 6-0 ಗೆಲುವು ಸಾಧಿಸಿದ್ದು, ಸೋಮವಾರ ನಡೆಯಲಿರುವ ಅಂತಿಮ ಅರ್ಹತಾ ಸುತ್ತಿನಲ್ಲಿ ಬಂಥಿಯಾ ಷಾ ಹಾಗೂ ಅಜಯ್ ಮಲಿಕ್ ಎದುರಾಗಲಿದ್ದಾರೆ.

ಸಿದ್ಧಾಂತ್ ಬಂಥಿಯಾ ಷಾ ಅಮೆರಿಕದಿಂದ ಮರಳಿದ ಬಳಿಕ ಸಿಂಗಲ್ಸ್ ವಿಭಾಗದಲ್ಲಿ ಹೊಸ ಛಾಪು ಮೂಡಿಸುತ್ತಿದ್ದಾರೆ. ಇದಕ್ಕೂ ಮೊದಲು ಬಂಥಿಯಾ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದ ಅಂತರ ಕಾಲೇಜು ಟೂರ್ನಿಯಲ್ಲಿ ಡಬಲ್ಸ್ ವಿಭಾಗದಲ್ಲಿ ಆಡಿದ್ದರು. ಅಕ್ಟೋಬರ್ ತಿಂಗಳಲ್ಲಿ ಪೋರ್ಚುಗಲ್‌ನಲ್ಲಿ ನಡೆದ ಡಬಲ್ಸ್ ವಿಭಾಗದಲ್ಲಿ ದಿವಿಜ್ ಶರಣ್ ಜೊತೆಗೂಡಿ ವಿಜಯ ದಾಖಲಿಸಿದ್ದರು. ಷಾ ಎದುರಾಳಿ ವಿರುದ್ಧ ಕ್ಯಾಂಟರ್‌ನಲ್ಲಿ ಆರಂಭಿಕ ಸೆಟ್ ತೆಗೆದುಕೊಂಡಿದ್ದರು. ಡಬಲ್ ಬಾಗಲ್ ಹೊರಹಾಕಿ, ಆರನೇ ಪಂದ್ಯದಲ್ಲಿ ಸರ್ವ್ ಮೂಲಕ ಸ್ಕೋರ್ ಮಾಡಿದ್ದು ಅಗ್ರ ಶ್ರೇಯಾಂಕ್ ಪಟ್ಟಕ್ಕೆ ಏರಿದ್ದರು. ಸಿದ್ಧಾಂತ್ ಬಂಥಿಯಾ ಷಾ ಸಿಂಗಲ್ಸ್ ವಿಭಾಗದಲ್ಲಿ ಹೆಚ್ಚು ಭಾಗವಹಿಸುತ್ತಿದ್ದು ಆರಂಭಿಕ ಪಂದ್ಯಾಟದಲ್ಲಿ ಎದುರಾಳಿ ಭಾರತದ ಡೆವೀಸ್ ಕಪ್ಪರ್ ಸಿದ್ಧಾರ್ಥ್ ವಿಶ್ವಕರ್ಮನ್ನು ಆರಂಭಿಕ ಪಂದ್ಯದಲ್ಲೇ ಸೋಲಿಸಿದ್ದರು.

ಐಟಿಎಫ್ ಕಲಬುರಗಿ ಓಪನ್ ಟೆನಿಸ್ ಅರ್ಹತಾ ಸುತ್ತಿನಲ್ಲಿ ದೀಪಕ್ ಅನಂತರಾಮು ಕಡೆಗೆ ಚೆಂಡು ಹಿಮ್ಮೆಟ್ಟಿಸಿದ ಅಜಯ್ ಮಲಿಕ್

ಐಟಿಎಫ್ ಕಲಬುರಗಿ ಓಪನ್ ಟೆನಿಸ್‌ನ ಆರಂಭಿಕ ಅರ್ಹತಾ ಸುತ್ತಿನಲ್ಲಿ ಧರ್ಮಿಲ್ ಷಾ ವಿರುದ್ಧ ಸಿದ್ಧಾಂತ್ ಬಂಥಿಯಾ ಷಾ ಪ್ರಯೋಗಿಸಿದ ಫೋರ್ ಹ್ಯಾಂಡ್ ಆರ್ಭಟ

ಫಲಿತಾಂಶಗಳು

- ಸಿದ್ಧಾಂತ್ ಬಂಥಿಯಾ ಷಾ ಮತ್ತು ಧರ್ಮಿಲ್ ಷಾ 6-0, 6-1; ಅಜಯ್ ಮಲಿಕ್ ಮತ್ತು ದೀಪಕ್ ಅನಂತರಾಮು 6-4, 6-0;
- ನಿತಿನ್ ಕುಮಾರ್ ಸಿನ್ಹಾ ಮತ್ತು ಶೌರ್ಯ ಮಾಣಿಕ್ 6-0, 6-2;
- ಯಶ್ ಚೌರಾಸಿಯಾ ಮತ್ತು ಪ್ರಸಾದ್ ಇಂಗಳೆ 6-3, 6-2;
- ಪ್ರಣವ್ ಕಾರ್ತಿಕ್ ಮತ್ತು ಯೋಗಿನ್ ಎಸ್ ಪ್ರಕಾಶ್ 6-4, 6-3;
- ಚಿನ್ಮಯ ದೇವ್ ಚೌಹಾಣ್ ಮತ್ತು ದೀಪ್ ಮುನಿಮ್ 7-5, 6-3;
- ಅಂತೋಣಿ ಸುಸಾಂತೊ (ಇಂಡೋನೇಷ್ಯಾ) ಮತ್ತು ಶಿವಂ ಖನ್ನಾ 6-4, 6-1 ಮತ್ತು ರೋಹನ್ ಮೆಹ್ರಾ ಮತ್ತು ಜಸೋನ್ ಡೇವಿಡ್ 6-2, 6-2;
- ಹಾ ಮಿನ್ಸ್ ಡಕ್ ವು (ವಿಯೆಟ್ನಾಂ) ಮತ್ತು ಅನುರಾಗ್ ಅಗರ್ವಾಲ್ 6-0, 6-1;
- ಮುನಿ ಅನಂತ್ ಮಣಿ ಮತ್ತು ರಾಜೇಶ್ವರ್ ರೆಡ್ಡಿ ಪಟೋಲ್ಲ 6-1, 6-0.
- ಮಾನ್ ಕೇಸರ್ವಾನಿ ಮತ್ತು ಸಜಲ್ ಕೇಸರ್ವಾನಿ 6-2, 6-4;
- ಕಬೀರ್ ಹನ್ಸ್ ಮತ್ತು ಓಜೆಸ್ ತೇಯ್ಯೊ ಜಯಪ್ರಕಾಶ್ 6-4, 2-6, 10-8;
- ಶಿವಾಂಕ್ ಭಟ್ನಾಗರ್ ಮತ್ತು ಸಂದೇಶ್ ದತ್ತಾತ್ರೇಯ್ ಕುರಾಲೆ 6-3, 6-1;
- ಪ್ರಿಯಾಂಶು ಚೌಧರಿ ಮತ್ತು ಕಾಹಿರ್ ವಾರಿಖ್ 6-1,6-3;
- ಉದಿತ್ ಕಾಂಬೋಜ್ ಮತ್ತು ಅನೂಪ್ ಬಂಗರ್ಗಿ 6-3, 6-1;
- ಧೀರಜ್ ಕೊಡಂಚ ಶ್ರೀನಿವಾಸನ್ ಮತ್ತು ಪ್ರಜ್ವಲ್ ತಿವಾರಿ 6-2,6-2.

ಅರ್ಹತಾ ಸುತ್ತಿನಲ್ಲಿ ಮುಗ್ಗರಿಸಿದ ಕನ್ನಡಿಗರು

ಕಲಬುರಗಿಯ ಚಂದ್ರಶೇಖರ್ ಪಾಟೀಲ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಐಟಿಎಫ್-2024 25,000 ಯುಎಸ್ ಡಾಲರ್ ಟೆನಿಸ್ ಟೂರ್ನಿಯಲ್ಲಿ ವೈಲ್ಡ್ ಕಾರ್ಡ್ ಪ್ರವೇಶ ಪಡೆದ ಕರ್ನಾಟಕದ ಆಟಗಾರರು ಆರಂಭಿಕ ಹಂತದಲ್ಲೇ ಎಡವಿದರು. ಮೈಸೂರು ಮೂಲದ ಯೋಗಿನ್ ಎಸ್.ಪ್ರಕಾಶ್ 4-6, 3-6 ಅಂತರದಲ್ಲಿ ಪ್ರಣವ್ ಕಾರ್ತಿಕ್ ವಿರುದ್ಧ ಸೋತರೆ, ಜಸೋನ್ ಡೇವಿಡ್ ಅವರು ರೋಹನ್ ಮೆಹ್ರಾ ವಿರುದ್ಧ 2-6, 2-6 ಅಂತರದಲ್ಲಿ ಮಣಿದರು.

ಮೊದಲ ಪಂದ್ಯಕ್ಕೆ ಶರ್ಮಾ ಇಲ್ಲ, ಶಮಿಗಿದೆ ಜಾಗ!

ಬಾರ್ಡರ್-ಗವಾಸ್ಕರ್ ಟ್ರೋಫಿಯ ಪಂದ್ಯ | ಮಗು ಪಡೆದ ಖುಷಿಗೆ ಆಡುತ್ತಿಲ್ಲ ಶರ್ಮಾ | ಶಮಿಗೆ ಸ್ಥಾನ

ಮುಂಬಯಿ: ನವೆಂಬರ್ 22ರಂದು ಪರ್ತ್‌ನಲ್ಲಿ ಆರಂಭವಾಗಲಿರುವ ಬಾರ್ಡರ್-ಗಾವಸ್ಕರ್ ಟ್ರೋಫಿ ಸರಣಿಯ ಮೊದಲ ಪಂದ್ಯಕ್ಕೆ ನಾಯಕ ರೋಹಿತ್ ಶರ್ಮ ಅಲಭ್ಯರಾಗಲಿದ್ದಾರೆ ಎಂದು ತಿಳಿದುಬಂದಿದೆ. 2ನೇ ಮಗುವಿಗೆ ತಂದೆಯಾದ ಕಾರಣ ರೋಹಿತ್ ಮೊದಲ ಪಂದ್ಯಕ್ಕೆ ಲಭ್ಯರಾಗಲಿದ್ದಾರೆ ಎಂದು ಹೇಳಲಾಗಿತ್ತು. ಆದರೆ, ಇದೀಗ ವರದಿಯಾದ ಪ್ರಕಾರ ರೋಹಿತ್ ಸರಣಿಯ ಆರಂಭಿಕ ಪಂದ್ಯದ ಅಲಭ್ಯತೆಯ ಬಗ್ಗೆ ಬಿಸಿಸಿಐ ಮತ್ತು ಆಯ್ಕೆಗಾರರಿಗೆ ತಿಳಿಸಿದ್ದಾರೆ ಎನ್ನಲಾಗಿದೆ.

ಶನಿವಾರದಂದು ರೋಹಿತ್ ತಮ್ಮ ಸಾಮಾಜಿಕ ಜಾಲತಾಣದಲಿ ಪೋಸ್ಟ್ ಹಾಕುವ ಮೂಲಕ ಎರಡನೇ ಮಗು ಜನಿಸಿರುವ ಖುಷಿಯ ವಿಚಾರವನ್ನು ಹಂಚಿಕೊಂಡಿದ್ದರು. ರೋಹಿತ್ ಭಾರತ ತಂಡದೊಂದಿಗೆ ಆಸೀಸ್‌ಗೆ ಪ್ರಯಾಣಿಸದಿದ್ದರೂ ಮುಂಬೈನಲ್ಲೇ ಇದ್ದುಕೊಂಡು ಅಭ್ಯಾಸ ನಡೆಸಿದ್ದರು. ಮಗು ಜನನದ ಬಳಿಕ ಅವರು ಆಸೀಸ್‌ಗೆ ಪ್ರಯಾಣಿಸಬಹುದು ಎಂದು ನಿರೀಕ್ಷಿಸಲಾಗಿತ್ತು. ಆದರೆ ಅವರು ದ್ವಿತೀಯ ಪಂದ್ಯದ ವೇಳೆ ತಂಡ ಸೇರಲಿದ್ದಾರೆ ಎನ್ನಲಾಗಿದೆ.

ಕೆ.ಎಲ್ ರಾಹುಲ್ ಅವರ ಹೆಬ್ಬೆರಳು ಮುರಿತಕ್ಕೊಳಗಾಗಿದೆ. ವೈದ್ಯಕೀಯ ತಂಡದಿಂದ ಚಿಕಿತ್ಸೆ ಪಡೆದ ನಂತರ ಸ್ಕ್ಯಾನಿಂಗ್ಗೆ ಒಳಗಾದರು. ಸ್ಕ್ಯಾನಿಂಗ್ನಲ್ಲಿ ಹೆಬ್ಬೆರಳು ಮುರಿದಿರುವುದು ಗೊತ್ತಾಗಿದೆ. ಕೆ.ಎಲ್. ರಾಹುಲ್ಗೆ ಶುಕ್ರವಾರ ಮೊಣಕೈಗೆ ಚೆಂಡು ಬಡಿದು ಅಭ್ಯಾಸ ಮುಂದುವರಿಸಲು ಸಾಧ್ಯವಾಗಿರಲಿಲ್ಲ.

ಅಭಿಮನ್ಯು ಈಶ್ವರನ್ ಆರಂಭಿಕರಾಗಿ ಯಶಸ್ವಿ ಜೈಸ್ವಾಲ್ ಜತೆಗೆ ಇನಿಂಗ್ಸ್ ಆರಂಭಿಸಿದ ಅನುಭವ ಹೊಂದಿಲ್ಲ. ಸರ್ಫರಾಜ್ ಖಾನ್, ಜುರೇಲ್ಗೂ ಆಸ್ಟ್ರೇಲಿಯಾ ಪಿಚ್‌ನಲ್ಲಿ ಆಡಿದ ಅನುಭವ ಇಲ್ಲ. ಒಟ್ಟಾರೆ ಭಾರತಕ್ಕೆ ಗಾಯದ್ದೇ ಚಿಂತೆಯಾಗಿದೆ. ರೋಹಿತ್ ಅಲಭ್ಯರಾದರೆ ತಂಡವನ್ನು ಜಸ್ಪ್ರೀತ್ ಬುಮ್ರಾ ಮುನ್ನಡೆಸಲಿದ್ದಾರೆ. ಅನುಭವಿ ಆಟಗಾರರ ಅಲಭ್ಯತೆಯಲ್ಲಿಯೂ ಬುಮ್ರಾ ಮೊದಲ ಪಂದ್ಯದಲ್ಲಿ ಗೆಲುವು ಕಂಡರೆ ಅವರು ಭಾರತದ ಮುಂದಿನ ನಾಯಕನಾಗುವುದರಲ್ಲಿ ಯಾವುದೇ ಅನುಮಾನ ಬೇಡ.

ರಾಹುಲ್-ಗಿಲ್ ಅನುಮಾನ

ಕೆ.ಎಲ್ ರಾಹುಲ್ ಹಾಗೂ ಶುಭಮಾನ್ ಗಿಲ್‌ಗೆ ಗಾಯದ ಸಮಸ್ಯೆ ಎದುರಾಗಿದೆ. ಉಭಯ ಆಟಗಾರರು ಭಾರತ ಎ ಎದುರಿನ ಅಭ್ಯಾಸ ಪಂದ್ಯವನ್ನಾಡುವ ವೇಳೆ ಗಾಯಗೊಂಡಿದ್ದರು. ಮೂಲಗಳ ಪ್ರಕಾರ ಇಬ್ಬರು ಆಟಗಾರರು ಮೊದಲ ಪಂದ್ಯಕ್ಕೆ ಅಲಭ್ಯರಾಗುವುದು ಖಚಿತ ಎನ್ನಲಾಗಿದೆ. ರೋಹಿತ್ ಕೂಡ ಅಲಭ್ಯರಾದರೆ ಭಾರತ ಮೊದಲ ಪಂದ್ಯಕ್ಕೆ ಮೂವರು ಅನುಭವಿ ಆಟಗಾರರನ್ನು ಕಳೆದುಕೊಳ್ಳಲಿದೆ.

ತಂಡದಲ್ಲಿ ಶಮಿ

ಭಾರತ ತಂಡದಲ್ಲಿ ಮೊಹಮ್ಮದ್ ಶಮಿಯನ್ನು ಸೇರಿಸಲು ಬಿಸಿಸಿಐ ಸಿದ್ಧವಾಗಿದೆ ಎಂದು ದೈನಿಕ್ ಭಾಸ್ಕರ್ ವರದಿ ಮಾಡಿದೆ. ಮೊದಲ ಪಂದ್ಯಕ್ಕೆ ಮುಂಚಿತವಾಗಿ ಶಮಿ ತಂಡವನ್ನು ಸೇರಿಕೊಳ್ಳಬಹುದು ಎಂದು ತಿಳಿದು ಬಂದಿದೆ. ಆದರೆ, ಪರ್ತ್‌ನಲ್ಲಿ ನಡೆದ ಪಂದ್ಯದ ನಂತರವೇ ಶಮಿ ಅವರನ್ನು ಆಡುವ ಬಳಗಕ್ಕೆ ಸೇರಿಸಲಾಗುವುದು ಎಂದು ವರದಿ ಹೇಳಿದೆ.

ಮೂವರು ಕನ್ನಡಿಗರಿಗೆ ಸ್ಥಾನ

ನವೆಂಬರ್ 30 ರಿಂದ ಯುಎಇನಲ್ಲಿ ಅಂಡರ್-19 ಪಂದ್ಯಾವಳಿ

ಬೆಂಗಳೂರು: ಇದೇ ನವೆಂಬರ್ 30ರಿಂದ ಯುಎಇಯಲ್ಲಿ ನಡೆಯಲಿರುವ ಎಸಿಸಿ ಪುರುಷರ ಅಂಡರ್-19 ಏಷ್ಯಾ ಕಪ್ ಕ್ರಿಕೆಟ್ ಪಂದ್ಯಾವಳಿಗಾಗಿ ಪ್ರಕಟಿಸಲಾದ ಭಾರತ ತಂಡದಲ್ಲಿ ಮೂವರು ಕನ್ನಡಿಗರು ಕಾಣಿಸಿಕೊಂಡಿದ್ದಾರೆ. ಇವರ ಜತೆಗೆ ಬಿಹಾರದ ರಣಜಿ ಆಟಗಾರ, 14 ವರ್ಷದ ವೈಭವ್ ಸೂರ್ಯವಂಶಿ ಕೂಡ ಅವಕಾಶ ಪಡೆದಿದ್ದಾರೆ.

15 ಸದಸ್ಯರ ಭಾರತ ತಂಡಕ್ಕೆ ಮೊಹಮ್ಮದ್ ಅಮಾನ್ ನಾಯಕರಾಗಿದ್ದಾರೆ. ಭಾರತ ನ. 30ರಂದು ತನ್ನ ಮೊದಲ ಪಂದ್ಯವನ್ನು ಸಾಂಪ್ರದಾಯಿಕ ಬದ್ಧ ಎದುರಾಳಿ ಪಾಕಿಸ್ತಾನ ವಿರುದ್ಧ ಆಡಲಿದೆ. ಡಿ. 2ರಂದು ಜಪಾನ್ ಮತ್ತು ಡಿ. 4ರಂದು ಯುಎಇ ವಿರುದ್ಧ ಕಣಕ್ಕಿಳಿಯಲಿದೆ. ತಂಡದಲ್ಲಿ ಸ್ಥಾನ ಪಡೆದ ರಾಜ್ಯದ ಆಟಗಾರರೆಂದರೆ ಹಾರ್ದಿಕ್ ರಾಜ್, ಕೆ.ಪಿ. ಕಾರ್ತಿಕೇಯ ಮತ್ತು ಸಮರ್ಥ್ ನಾಗರಾಜ್.

ಭಾರತ ತಂಡ: ಆಯುಷ್, ವೈಭವ್ ಸೂರ್ಯವಂಶಿ, ಸಿ.ಆಂಡ್ರೆ ಸಿದ್ಧಾರ್ಥ್, ಎಂ.ಡಿ.ಅಮನ್ (ನಾಯಕ), ಕಿರಣ್ ಚೋರಮಲೆ (ಉಪನಾಯಕ), ಪ್ರಣವ್ ಪಂತ್, ಹರ್ಬನಾಶ್ ಸಿಂಗ್ ಪಾಂಗಾಲಿಯಾ, ಅನುರಾಗ್ ಕೌಡೆ, ಹಾರ್ದಿಕ್ ರಾಜ್, ಎಂ.ಡಿ.ಎನನ್, ಕೆ.ಪಿ.ಕಾರ್ತಿಕೇಯ, ಸಮರ್ಥ್ ನಾಗರಾಜ, ಯುಧಾಜಿತ್ ಗುಹಾ, ಚೇತನ್ ಶರ್ಮಾ, ನಿಖಿಲ್ ಕುಮಾರ್. ಪ್ರಯಾಣಿಸದ ಮೀಸಲು: ಸಾಹಿಲ್ ಪರ್ಖ್, ನಮನ್ ಪುಷ್ಪಕ್, ಅನ್ಮೋಲ್ಜಿತ್ ಸಿಂಗ್, ಪ್ರಣವ್ ರಾಘವೇಂದ್ರ, ಡಿ. ದೀಪೇಶ್.

ಡಾಲಿ-ಧನ್ಯತಾ ನಿಶ್ಚಿತಾರ್ಥ

ನಟ ಡಾಲಿ ಧನಂಜಯ, ಧನ್ಯತಾ ಅವರೊಂದಿಗೆ ಹಸೆಮಣೆ ಏರಲಿದ್ದಾರೆ. ಫೆಬ್ರವರಿ 16ರಂದು ಅದ್ದೂರಿ ವಿವಾಹ ನೆರವೇರಲಿದೆ. ಅದಕ್ಕು ಮುನ್ನ ಡಾಲಿ ಹಾಗೂ ಧನ್ಯತಾ ನಿಶ್ಚಿತಾರ್ಥ ನೆರವೇರಿದೆ. ಅರಸೀಕೆರೆಯ ಕಾಳೇನಹಳ್ಳಿಯಲ್ಲಿರುವ ಡಾಲಿ ಧನಂಜಯ ಅವರ ಮನೆಯಲ್ಲಿ ಸರಳವಾಗಿ ನಿಶ್ಚಿತಾರ್ಥ ನೆರವೇರಿದ್ದು, ಡಾಲಿ ಹಾಗೂ ಧನ್ಯತಾ ಇಬ್ಬರು ತಮ್ಮ ಕುಟುಂಬದ ಹಿರಿಯ ಸಮ್ಮುಖದಲ್ಲಿ ಪರಸ್ಪರ ಉಂಗುರು ಬದಲಾಯಿಸಿಕೊಂಡರು. ಡಾಲಿ ಮತ್ತು ಧನ್ಯತಾ ಇಬ್ಬರು ಹಲವು ವರ್ಷಗಳಿಂದ ಪರಿಚಯ, ಈ ಪರಿಚಯ ಪ್ರೀತಿಗೆ ತಿರುಗಿ ಇದೀಗ ಹಸೆಮಣೆ ಏರುತ್ತಿದ್ದಾರೆ. ಚಿತ್ರದುರ್ಗ ಮೂಲದ ಧನ್ಯತಾ ವೃತ್ತಿಯಲ್ಲಿ ವೈದ್ಯರಾಗಿದ್ದು ಸ್ತ್ರೀ ರೋಗ ತಜ್ಞೆಯಾಗಿ ಕಾರ್ಯ ನಿರ್ವಹಿಸುತ್ತಿ

ದ್ದಾರೆ. ಅಪ್ಪಟ ಕನ್ನಡತಿಯಾಗಿರುವ ಧನ್ಯತಾ ವ್ಯಾಸಂಗ ಮಾಡಿದ್ದು ಮೈಸೂರಿನಲ್ಲಿ. ಅರಸೀಕೆರೆ ಮೂಲದ ನಟ ಧನಂಜಯ ಕೂಡ ಮೈಸೂರಿನಲ್ಲಿಯೆ ವ್ಯಾಸಂಗ ಮುಗಿಸಿದವರು. ಅಲ್ಲಿಯೇ ಇಬ್ಬರಿಗೂ ಗೆಳೆತನ ಬೆಳೆದಿದೆ. ಡಾಲಿ-ಧನ್ಯತಾ ಇಬ್ಬರ ವಿವಾಹ ಫೆಬ್ರವರಿ 16ರಂದು ಮೈಸೂರಿನ

ಎಕ್ಸಿಬಿಷನ್ ಗ್ರೌಂಡ್‌ನಲ್ಲಿ ಅದ್ದೂರಿಯಾಗಿ ನಡೆಯಲಿದೆ. ಅದೇ ದಿನ ಅದೆ ಗ್ರೌಂಡ್‌ನಲ್ಲಿ ಆರತಕ್ಷತೆ ಸಮಾರಂಭ ನಡೆಯಲಿದೆ. ಮೈಸೂರು ಧನಂಜಯ ಮತ್ತು ಧನ್ಯತಾ ಇಬ್ಬರಿಗೂ ಎಮೋಷನಲಿ ಕನೆಕ್ಟ್ ಆದ ಸ್ಥಳ ಹಾಗಾಗಿ ಅಲ್ಲಿಯೇ ಹಸೆಮಣೆ ಏರುವ ನಿರ್ಧಾರ ಮಾಡಿದ್ದಾರೆ.

ವಿಟಾಕೀಸ್

ಹಾಡಿನಲ್ಲಿ ಮನಗೆದ್ದ ಗಜರಾಮ

ನಟ ರಾಜವರ್ಧನ್, ಗಜರಾಮನ ಅವತಾರ ತಾಳಿದ್ದು ತೆರೆಯಲ್ಲಿ ಅಬ್ಬರಿಸಲು ಸಿದ್ಧವಾಗಿದ್ದಾರೆ. ಸದ್ಯ ಗಜರಾಮ ಹಾಡಿನಲ್ಲಿಯೇ ಮನಗೆಲ್ಲುತ್ತಿದೆ. ಈ ಹಿಂದೆ ಶಾಂತಮ್ಮನ.. ಜತೆಗೆ ಹಾಡಿ ಕುಣಿದಿದ್ದ ಗಜರಾಮ ಈಗ ಟೈಟಲ್ ಟ್ರ್ಯಾಕ್‌ನಲ್ಲಿಯೂ ಭರ್ಜರಿ ಸದ್ದು ಮಾಡುತ್ತಿದ್ದಾನೆ. ಎಂದೆಂದು ಉಳಿಯುವ ನಿನ್ನದೆ ಶಾಸನ ನೀನೆ ಬರೆದಿಡು ಗಜರಾಮ.. ಎಂಬ ಹಾಡು ಇದಾಗಿದ್ದು ಹೇಮಂತ್ ದನಿಯಲ್ಲಿ ಮಧುರವಾಗಿ ಮೂಡಿಬಂದಿದೆ. ಚೇತನ್ ಕುಮಾರ್ ಸಾಹಿತ್ಯದ ಈ ಹಾಡಿಗೆ ಮನೋಮೂರ್ತಿ ಸಂಗೀತ ಸಂಯೋಜಿಸಿದ್ದಾರೆ. ಗಜರಾಮ ಲವ್, ಸೆಂಟಿಮೆಂಟ್ ಜತೆಗೆ ಆ್ಯಕ್ಷನ್ ಕಥೆಯನ್ನು ಒಳಗೊಂಡಿದ್ದು, ಚಿತ್ರದಲ್ಲಿ ರಾಜ್‌ವರ್ಧನ್ ಕುಸ್ತಿಪಟುವಾಗಿ ಕಾಣಿಸಿಕೊಂಡಿದ್ದಾರೆ. ತಪಸ್ವಿನಿ ನಾಯಕಿಯಾಗಿ ಬಣ್ಣಹಚ್ಚಿದ್ದು, ರಾಗಿಣಿ ಹಾಡೊಂದರಲ್ಲಿ ಹೆಜ್ಜೆ ಹಾಕಿದ್ದಾರೆ. ಉಳಿದಂತೆ ಶರತ್ ಲೋಹಿತಾಶ್ವ, ಕಬೀರ್ ಸಿಂಗ್ ಮುಂತಾದ ವರು ತಾರಾಗಣದಲ್ಲಿದ್ದಾರೆ. ವಿ.ಎ.ಸುನೀಲ್ ಕುಮಾರ್ ನಿರ್ದೇಶನದಲ್ಲಿ ಸಿನಿಮಾ ಸಿದ್ಧವಾಗಿದ್ದು, ಲೈಫ್ ಲೈನ್ ಫಿಲಂಸ್ ಬ್ಯಾನರ್‌ನಲ್ಲಿ ವಿ.ನರಸಿಂಹಮೂರ್ತಿ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ. ಶೀಘ್ರದಲ್ಲಿಯೇ ಗಜರಾಮ ತೆರೆಗೆ ಬರಲಿದೆ.



ಪುಷ್ಪ 2 ಟ್ರೇಲರ್ ರಿಲೀಸ್

ಅಲ್ಲು ಅರ್ಜುನ್ ಅಭಿನಯದ ಪುಷ್ಪ 2 ಆರಂಭದಿಂದಲೂ ನಿರೀಕ್ಷೆ ಹೆಚ್ಚಿಸಿದೆ. ಈಗ ಟ್ರೇಲರ್ ರಿಲೀಸ್ ಆಗಿದ್ದು, ಆ ನಿರೀಕ್ಷೆಯನ್ನು ದುಪ್ಪಟ್ಟುಗೊಳಿಸಿದೆ. ಪುಷ್ಪರಾಜನ ಖದರ್ ನೋಡಿ ಅಲ್ಲು ಫ್ಯಾನ್ಸ್ ಬಹುಪರಾಕ್ ಎಂದಿದ್ದಾರೆ. ಪಾಟ್ನದಲ್ಲಿ ನಡೆದ ಅದ್ದೂರಿ ಸಮಾರಂಭದಲ್ಲಿ ಲಕ್ಷಾಂತರ ಅಭಿಮಾನಿಗಳ ಸಮ್ಮುಖದಲ್ಲಿ ಚಿತ್ರದ ಟ್ರೇಲರ್ ಬಿಡುಗಡೆ ಮಾಡಲಾಗಿದೆ. ಈ ಹೈವೋಲ್ಟೇಜ್ ಟ್ರೇಲರ್ ನೋಡಿ ಸಿನಿಪ್ರಿಯರು ಖುಷಿಯಾಗಿದ್ದಾರೆ. ಮೊದಲ ಭಾಗಕ್ಕಿಂತ ಇಲ್ಲಿ ಅದ್ಭುತ ಸಾಹಸ ದೃಶ್ಯಗಳಿದ್ದು, ಅಲ್ಲು ಆ್ಯಕ್ಷನ್‌ನಲ್ಲಿ ಭರ್ಜರಿಯಾಗಿ ಅಬ್ಬರಿಸಿದ್ದಾರೆ. ಮೊದಲ ಭಾಗಕ್ಕಿಂತ ಪುಷ್ಪರಾಜನ ಲುಕ್ ವಿಭಿನ್ನವಾಗಿದ್ದು ಅಲ್ಲು ಅರ್ಜುನ್ ಸ್ಟೈಲಿಶ್ ಆಗಿ ಮಿಂಚಿದ್ದಾರೆ. ಫಹಾದ್ ಫಾಸಿಲ್ ಪಾತ್ರವೂ ಇಲ್ಲಿ ಮುಖ್ಯವಾಗಿದ್ದು, ಫಹಾದ್, ಪುಷ್ಪನ ಜಿದ್ದಾಜಿದ್ದಿ ಇಲ್ಲಿಯೂ ಮುಂದುವರಿದಿದೆ. ಅದು ತೆರೆಯಲ್ಲಿ ಬಲು ರೋಚಕವಾಗಿ ಮೂಡಿಬಂದಿದೆ. ಆಕಾಶ ಮತ್ತು ಸಮುದ್ರದಲ್ಲಿಯೂ ಗುಂಡಿನ ಸದ್ದು ಮೊರೆಯುತ್ತದೆ. ಈ ಭಾಗದಲ್ಲಿ ಜಗಪತಿ ಬಾಬು ಕೂಡ ಚಿತ್ರತಂಡ ಸೇರಿದ್ದು ಅವರ ಪಾತ್ರದ ಬಗ್ಗೆ ಕುತೂಹಲ ಮೂಡಿದೆ. ರಶ್ಮಿಕಾ ಇಲ್ಲಿಯೂ ಶ್ರೀವಲ್ಲಿಯಾಗಿ ಕಾಣಿಸಿಕೊಂಡಿದ್ದು, ಡಾಲಿ ಧನಂಜಯ, ಜಾಲಿ ರೆಡ್ಡಿಯಾಗಿ ಮಿಂಚಿದ್ದಾರೆ.

ಪುಷ್ಪ 2 ಪ್ಯಾನ್ ಇಂಡಿಯಾ ಸಿನಿಮಾವಾಗಿದ್ದು, ತೆಲುಗು, ಕನ್ನಡ, ಹಿಂದಿ, ತಮಿಳು, ತೆಲುಗು, ಮಲೆಯಾಳಂ ಸೇರಿದಂತೆ ಹಲವು ಭಾಷೆಗಳಲ್ಲಿ ತೆರೆಗೆ ಬರಲಿದೆ. ಹೈಬಜೆಟ್‌ನ ಪುಷ್ಪ 2 ಚಿತ್ರವನ್ನು ಮೈತ್ರಿ ಮೂವಿ ಮೇಕರ್ಸ್ ಸಂಸ್ಥೆ ನಿರ್ಮಾಣ ಮಾಡಿದ್ದು, ಸುಕುಮಾರ್ ಕಥೆ ಬರೆದು ಈ ಚಿತ್ರವನ್ನು ನಿರ್ದೇಶನ ಮಾಡಿದ್ದಾರೆ. ಡಿಸೆಂಬರ್ 5ರಂದು ಪುಷ್ಪರಾಜ್ ವಿಶ್ವಾದ್ಯಂತ ಅಬ್ಬರಿಸಲಿದ್ದಾನೆ.

ಅಕ್ಟೋಬರ್ 2ಕ್ಕೆ ಕಾಂತಾರ 1 ರಿಲೀಸ್

ಕಾಂತಾರ ಕನ್ನಡ ಚಿತ್ರರಂಗದಲ್ಲಿ ಹೊಸ ದಾಖಲೆಯನ್ನೇ ಬರೆಯಿತು. ಈ ಚಿತ್ರ ತೆರೆಗೆ ಬಂದು ಭರ್ಜರಿ ಯಶಸ್ಸು ಪಡೆಯಿತು. ದೇಶ ವಿದೇಶಗಳಲ್ಲಿಯೂ ಸದ್ದು ಮಾಡಿ ರಾಷ್ಟ್ರೀಯ ಪ್ರಶಸ್ತಿಯನ್ನು ಪಡೆದುಕೊಂಡಿತು. ಕಾಂತಾರ ಯಶಸ್ಸಿನ ಬಳಿಕ ಕಾಂತಾರ ಚಾಪ್ಟರ್ 1 ಕೂಡ ಸೆಟ್ಟೇರಿದ್ದು, ಕಾಂತಾರ ಪ್ರೀಕ್ವೆಲ್ ಆಧರಿಸಿ ಸಿನಿಮಾ ಮೂಡಿಬರಲಿದೆ. ಈಗಾಗಲೇ ಚಿತ್ರದ ಚಿತ್ರೀಕರಣವೂ ಭರದಿಂದ ಸಾಗುತ್ತಿದೆ. ಕಾಂತಾರ ಚಾಪ್ಟರ್ 1 ಯಾವಾಗ ತೆರೆಗೆ ಬರಲಿದೆ ಎಂದು ಸಿನಿಪ್ರಿಯರು ಕಾತರದಿಂದ ಕಾಯುತ್ತಿದ್ದಾರೆ. ಈಗ ಕಾಂತಾರ ಚಾಪ್ಟರ್ 1 ಸಿನಿಮಾದ ಬಿಡುಗಡೆಯ ದಿನಾಂಕ ಘೋಷಣೆಯಾಗಿದೆ. 2025ರ ಅಕ್ಟೋಬರ್ 2ರ ಗಾಂಧಿ ಜಯಂತಿಯಂದು ಕಾಂತಾರ ಚಾಪ್ಟರ್ 1 ರಾಜ್ಯ ಮಾತ್ರವಲ್ಲದೆ ದೇಶ ವಿದೇಶಗಳಲ್ಲಿಯೂ ಬಿಡುಗಡೆಯಾಗಲಿದೆ. ಇದು ಪ್ಯಾನ್ ಇಂಡಿಯಾ ಸಿನಿಮಾವಾಗಿದ್ದು, ಕನ್ನಡ, ತೆಲುಗು, ತಮಿಳು, ಮಲೆಯಾಳಂ, ಹಿಂದಿ ಸೇರಿದಂತೆ

ಹಲವು ಭಾಷೆಗಳಲ್ಲಿ ಅದ್ದೂರಿಯಾಗಿ ತೆರೆ ಕಾಣಲಿದೆ. ಈ ಹಿಂದೆಯೇ ಬಿಡುಗಡೆಯಾಗಿದ್ದು ಫಸ್ಟ್ ಲುಕ್ ಪೋಸ್ಟರ್ ನೋಡಿ ಸಿನಿಪ್ರಿಯರು ಫಿದಾ ಆಗಿದ್ದರು.

ಇದು ಹೈ ಬಜೆಟ್ ಸಿನಿಮಾವಾಗಿದ್ದು ಹೊಂಬಾಳೆ ಫಿಲಂಸ್ ಈ ಸಿನಿಮಾವನ್ನು ನಿರ್ಮಾಣ ಮಾಡುತ್ತಿದೆ. ರಿಷಬ್ ಶೆಟ್ಟಿ ಕಥೆ ಬರೆದು ನಿರ್ದೇಶನ ಮಾಡುತ್ತಿದ್ದು, ನಾಯಕನಾಗಿಯೂ ನಟಿಸುತ್ತಿದ್ದಾರೆ. ಕಾಡು ಬೆಟ್ಟದ ಶಿವನ ವೃತ್ತಾಂತ ಚಾಪ್ಟರ್ 1ರಲ್ಲಿ ತೆರೆದುಕೊಳ್ಳಲಿದೆ. ಇದರ ಜತೆಗೆ ಐತಿಹಾಸಿಕ ಸ್ಟೋರಿಯೂ ಬೆರೆತಿದೆ. ಹಾಗಾಗಿಯೇ ಈ ಚಿತ್ರಕ್ಕಾಗಿ ಕುಂದಾಪುರದಲ್ಲಿ ಅದ್ದೂರಿ ಸೆಟ್ ಹಾಕಿದ್ದು, ಐತಿಹಾಸಿಕ ಕದಂಬ ಸಾಮ್ರಾಜ್ಯವನ್ನು ಚಿತ್ರತಂಡ ಮರುಸೃಷ್ಟಿಸಿ ಶೂಟಿಂಗ್ ನಡೆಸುತ್ತಿದೆ.

ಈ ಚಿತ್ರಕ್ಕಾಗಿ ನಟ ಮತ್ತು ನಿರ್ದೇಶಕ ರಿಷಬ್ ಶೆಟ್ಟಿ, ಸಾಕಷ್ಟು ತಯಾರಿ ಮಾಡಿಕೊಂಡಿದ್ದಾರೆ. ಕೇರಳದ ಪುರಾತನ ಸಮರ ಕಲೆಯ ಪ್ರಕಾರಗಳಲ್ಲಿ ಒಂದಾದ ಕಲರಿಪಯಟ್ಟು ತರಬೇತಿ ಪಡೆದಿದ್ದಾರೆ. ಅಲ್ಲದೆ ತಮ್ಮ ಪಾತ್ರಕ್ಕೆ ತಕ್ಕಂತೆ ಅಗತ್ಯ ತಯಾರಿ ಮಾಡಿಕೊಂಡಿದ್ದು ನಟಿಸುತ್ತಿದ್ದಾರೆ. ಕಾಂತಾರ ಚಾಪ್ಟರ್ 1 ರಲ್ಲಿ ಪರಭಾಷೆಯ ಹಲವು ದಿಗ್ಗಜ ಕಲಾವಿದರು ನಟಿಸಲಿದ್ದಾರೆ. ಇದರ ಜತೆಗೆ ಈ ಸಿನಿಮಾದಲ್ಲಿ ಇನ್ನೂ ಸಾಕಷ್ಟು ವಿಶೇಷತೆಗಳಿರಲಿದೆ.

ಸ್ಫೂರ್ತಿ ಚಿಲುಮೆ ಷಡಕ್ಷರಿ- 76

ಕ್ಷಣ ಹೊತ್ತು ಆಣಿಮುತ್ತು

ವಿಶ್ವವಾಣಿ
18.11.2024 ಸೋಮವಾರ
vishwavani.news



ಕನ್ನಡಿಗರ ಮನ ಗೆದ್ದ ಷಡಕ್ಷರಿ

ಕ್ಷಣ ಹೊತ್ತಲ್ಲಿ ಆಣಿ ಮುತ್ತುಗಳ ಮೂಲಕ ಹೃದಯ ಸಾಂತ್ವನ

ಇವರು ಓದಿದ್ದು ಎಂಜಿನಿಯರಿಂಗ್, ಬದುಕು ಕಂಡುಕೊಂಡಿದ್ದು ಹೊಟೇಲ್ ಉದ್ಯಮದಲ್ಲಿ. ಮನಸ್ಸಿಗೆ ಖುಷಿ ಕಂಡುಕೊಂಡಿದ್ದು ಮಕ್ಕಳಿಗಾಗಿ ವ್ಯಕ್ತಿತ್ವ ವಿಕಸನ ಶಿಬಿರಗಳನ್ನು ಏರ್ಪಡಿಸುವ ಮೂಲಕ. ಕಲಾ ಪೋಷಕರಾಗುವ ಮೂಲಕ ಸಾಹಿತ್ಯ,ಸಂಸ್ಕೃತಿ ಕ್ಷೇತ್ರಕ್ಕೆ ಹತ್ತಿರವಾದರು. ತಮ್ಮ ರಮಣಶ್ರೀ ಪ್ರತಿಷ್ಠಾನದ ಮೂಲಕ ಧಾರ್ಮಿಕ ಮುಖಂಡರ, ಶರಣರ ಚಿಂತನೆಗಳಿಗೆ ನಿಕಟರೆನಿಸಿದರು. ಶಿಕ್ಷಣ ಸಂಸ್ಥೆ ಮೂಲಕ ಮಕ್ಕಳಿಗೆ, ಪೋಷಕರಿಗೆ ಆಪ್ತರಾದರು. ತಮ್ಮ ಸ್ಫೂರ್ತಿದಾಯಕ 'ಕ್ಷಣ ಹೊತ್ತು ಆಣಿ ಮುತ್ತು' ಅಂಕಣ ಬರಹಗಳ ಮೂಲಕ ಕನ್ನಡ ನಾಡಿನ ಮನೆ ಮಾತಾದರು. ಕೃತಿ ರೂಪದಲ್ಲಿ 13 ಭಾಗಗಳಲ್ಲಿ ಹೊರ ಬಂದ ಈ ಅಂಕಣ ಬರೆಹಗಳ ಹೊತ್ತಗೆ ಇಂದು 4 ಲಕ್ಷಕ್ಕೂ ಹೆಚ್ಚು ಮಾರಾಟ ಕಂಡಿವೆ. ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಇಷ್ಟೊಂದು ಮಾರಾಟ ಕಂಡ ಕೃತಿಗಳಿಲ್ಲ. ಪ್ರಸಿದ್ಧ ಲೇಖಕರ ನಡುವೆ ಒಬ್ಬ ಉದ್ಯಮಿ ತಮ್ಮ ಸರಳ ನಿರೂಪಣೆಯ, ಎಲ್ಲರಿಗೂ ಹೌದೆನಿಸುವ, ತಮ್ಮ ಬದುಕಿಗೆ ಸಮೀಕರಿಸಿಕೊಳ್ಳಬಹುದಾದ ಕಿರು ಬರೆಹಗಳ ಮೂಲ ಎಳೆಯರಿಂದ ಹಿರಿಯರ ತನಕ ಎಲ್ಲರಿಗೂ ಪ್ರೇರಣೆ ನೀಡುವವರಾಗಿದ್ದು, ಕನ್ನಡದ 'ನಾಡೋಜ'ರಾಗಿದ್ದು ಕುತೂಹಲದ ಕಥನ. ಇದು ಎಸ್. ಷಡಕ್ಷರಿ ಅವರ ಸಂಕ್ಷಿಪ್ತ ಪರಿಚಯ.

ತಮ್ಮ ಓರಗೆಯವರ ನಡುವೆ 'ರಮಣಶ್ರೀ ಷಡಕ್ಷರಿ'ಯಾಗಿ, ಜನಸಾಮಾನ್ಯರ ಪಾಲಿಗೆ 'ಕ್ಷಣ ಹೊತ್ತು ಅಣಿಮುತ್ತು' ಕೃತಿಯ ಲೇಖಕರಾಗಿ ಪ್ರಸಿದ್ಧರಾದ ಎಸ್.ಷಡಕ್ಷರಿ ಅವರು ಜನಿಸಿದ್ದು ನವೆಂಬರ್ 11, 1949ರಂದು ಮೈಸೂರು ಜಿಲ್ಲೆಯ ನಂಜನಗೂಡಿನಲ್ಲಿ. ಇವರ ಸ್ವಂತ ಊರು ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ತಾಲೂಕಿನ ತುಳವನೂರು. ಷಡಕ್ಷರಿ ಅವರ ತಂದೆ ದಿ.ಶ್ರೀ ವಿ. ಸುಂದರಯ್ಯ, ದಿ.ಶ್ರೀಮತಿ ಎಸ್.ಪಾರ್ವತಮ್ಮ. ಚಿಕ್ಕಬಳ್ಳಾಪುರದ ಸರಕಾರಿ ಪ್ರೌಢಶಾಲೆಯಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವನ್ನು ಮುಗಿಸಿದ ಬಳಿಕ ನಂತರ ಪಿಯುಸಿ ಓದಿಗೆ ಬೆಂಗಳೂರಿಗೆ ಬಂದರು. ನಗರದ ರೇಣುಕಾಚಾರ್ಯ ಕಾಲೇಜಿನಲ್ಲಿ ಪಿಯುಸಿಯಲ್ಲಿ ಅತ್ಯುತ್ತಮ ಅಂಕಗಳನ್ನು ಪಡೆದು ತೇರ್ಗಡೆಯಾದರು. ಬಳಿಕ ಎಂಜಿನಿಯರಿಂಗ್ ಓದಬೇಕು ಎಂಬ ಅಭಿಲಾಷೆಯಿಂದ ಮೈಸೂರಿನ ಶ್ರೀ ಜಯಚಾಮರಾಜೇಂದ್ರ ಎಂಜಿನಿಯರಿಂಗ್ ಕಾಲೇಜಿಗೆ ಸೇರಿಕೊಂಡು ಬಿ.ಇ ಎಲೆಕ್ಟ್ರಿಕ್‌ನಲ್ಲಿ ಪದವಿ ಪಡೆದರು. ಈ ಪದವಿಯೊಂದಿಗೆ ನೌಕರಿಯ ಹಾದಿ ಹಿಡಿದಿದ್ದರೆ ಷಡಕ್ಷರಿಯವರ ಬದುಕು ಬೇರೆಯೇ ತಿರುವು ಪಡೆಯುತ್ತಿತ್ತೇನೋ ?

ಎಂಜಿನಿಯರಿಂಗ್ ಪದವಿ ಗಳಿಸಿದ ಷಡಕ್ಷರಿ ಅವರು ಆಸಕ್ತಿ ವಹಿಸಿದ್ದು ಹೋಟೆಲ್ ಉದ್ಯಮದತ್ತ. 1991 ರಲ್ಲಿ ಬೆಂಗಳೂರಿನಲ್ಲಿ ಪ್ರಪ್ರಥಮ ಬಾರಿಗೆ ಸರಕಾರದಿಂದ ಅಂಗೀಕೃತವಾದ ತ್ರಿ ಸ್ಟಾರ್ ಪ್ರಾರಂಭಿಸಿದರು. ಇದೀಗ ರಮಣ ಶ್ರೀ ಸಮೂಹಗಳು ಕರ್ನಾಟಕದಲ್ಲಿ ಎರಡು ತಾರಾ ಹೋಟೆಲ್‌ಗಳನ್ನು ಹೊಂದಿವೆ. ರಮಣಶ್ರೀ ಹೋಟೆಲ್ ಮತ್ತು ಸಮೂಹ ಉದ್ಯಮದ ಮುಖ್ಯಸ್ಥರಾಗಿರುವ ಷಡಕ್ಷರಿ ಅವರು ರಮಣಶ್ರೀ ಉದಯಶಾಲೆಯ ಮುಖ್ಯಸ್ಥರೂ ಆಗಿದ್ದಾರೆ. ವ್ಯಕ್ತಿತ್ವ ವಿಕಸನಕ್ಕೆ ಸಂಬಂಧಿಸಿದಂತೆ ಹಲವಾರು ಪುಸ್ತಕಗಳನ್ನು ರಚಿಸಿ, ಬೋಧನಾ ತರಬೇತಿಗಳನ್ನು ನಿರ್ವಹಿಸಿದ್ದಾರೆ. 'ಕ್ಷಣ ಹೊತ್ತು ಆಣಿ ಮುತ್ತು' ಅಂಕಣದ ಮೂಲಕ ಜನಮಾನಸಕ್ಕೆ ತಲುಪಿಸಿ, ಪುಟ್ಟನವಿರಾದ ನೀತಿ ಕತೆಗಳೊಂದಿಗೆ ಸಾಮಾಜಿಕ ಸ್ವಾಸ್ಥ್ಯಕ್ಕಾಗಿ ಶ್ರಮಿಸುತ್ತಿದ್ದಾರೆ. ಹಾಸ್ಯ ಬರೆಹಗಾರರಾಗಿಯೂ ಗುರುತಿಸಿಕೊಂಡಿದ್ದಾರೆ. ಅವರ 'ಕ್ಷಣ ಹೊತ್ತು ಆಣಿ ಮುತ್ತು' ಅಂಕಣ ಬರೆಹಗಳ 14ನೇ ಸಂಪುಟ ಹೊರ ಬರಲು ಸಿದ್ಧವಾಗಿದೆ.

ಹಲವು ಪ್ರಶಸ್ತಿಗೆ ಭಾಜನ

2010	ರಾಜ್ಯೋತ್ಸವ ಪ್ರಶಸ್ತಿ
2007	ಆರ್ಯಭಟ ಪ್ರಶಸ್ತಿ ಶ್ರೀ ವಿಜಯ ಪ್ರಶಸ್ತಿ ಅಳಸಿಂಗ ಪ್ರಶಸ್ತಿ ವಿಜಯ ವಿಠಲ ಪ್ರಶಸಿ
2018	ಆತಿಥ್ಯರತ್ನ ಮತ್ತು ಉದ್ಯಮರತ್ನ ಪ್ರಶಸ್ತಿ
2019	ಕನ್ನಡ ಸಾಹಿತ್ಯ ಪರಿಷತ್ತಿನ 'ಶ್ರೀಮತಿ ಲಕ್ಷ್ಮೀದೇವಿ ಮತ್ತು ಎಸ್.ರಾಮಚಂದ್ರ ಬಾಯರ್ ದತ್ತಿ ಪ್ರಶಸಿ
2022	ಹಂಪಿ ಕನ್ನಡ ವಿಶ್ವವಿದ್ಯಾಲಯದ ನಾಡೋಜ ಪ್ರಶಸ್ತಿ

ಗಣಪತಿ ವಿಗ್ರಹಗಳ ಸಂಗ್ರಹ: ಎಸ್.ಷಡಕ್ಷರಿ ಅವರ ಅಪರೂಪದ ಹವ್ಯಾಸವೆಂದರೆ ಗಣೇಶ ವಿಗ್ರಹಗಳ ಸಂಗ್ರಹ. ಇವರ ಸಂಗ್ರಹದಲ್ಲಿ 2500ಕ್ಕೂ ಹೆಚ್ಚು ಗಣಪತಿಯ ವಿಗ್ರಹಗಳು ಇವೆ. ಚೈನಾ, ವಿಯೆಟ್ನಾಂ, ಕಾಂಬೋಡಿಯಾ ಮುಂತಾದ ಹೊರದೇಶಗಳ ವಿಗ್ರಹಗಳೇ ಅಲ್ಲದೆ ಭಾರತದ ಎಲ್ಲ ರಾಜ್ಯಗಳ ಪ್ರಖ್ಯಾತ ಗಣಪತಿ ದೇವಾಲಯಗಳ ಮೂರ್ತಿಗಳು ಇವರ ಸಂಗ್ರಹದಲ್ಲಿದೆ.

ದೇವಾಲಯ ನಿರ್ಮಾಣ: ಷಡಕ್ಷರಿಯವರು ಕೋಲಾರ ಜಿಲ್ಲೆಯ ಸಮೀಪದ ಚೊಕ್ಕಹಳ್ಳಿಯಲ್ಲಿ ಸುಮಾರು ಐವತ್ಮೂರು ಅಡಿ ಎತ್ತರದ ಗಣಪತಿ ಮೂರ್ತಿಯನ್ನೂ, ಓಂಕಾರೇಶ್ವರ ದೇವಾಲಯವನ್ನೂ ನಿರ್ಮಿಸಿದ್ದಾರೆ. ಅಲ್ಲದೆ, ಚಿನ್ಮಯ ಮಿಷನ್‌ನಲ್ಲಿ 20 ವರ್ಷಗಳಿಂದ ಧರ್ಮದರ್ಶಿಗಳಾಗಿ ಕಾರ್ಯ ನಿರ್ವಹಿಸಿದ್ದಾರೆ.

ಷಡಕ್ಷರಿಯವರು ಹೆಸರಾಂತ ಭಾಷಣಕಾರರು, ಅವರ ಹಾಸ್ಯ ಮಿಶ್ರಿತ ಭಾಷಣಗಳು ಜನಪ್ರಿಯತೆ ಗಳಿಸಿದೆ. ವ್ಯಕ್ತಿತ್ವ ವಿಕಸನ ಕುರಿತು ಇವರು ನಡೆಸಿ ಕೊಡುವ ಕಾರ್ಯಾಗಾರಗಳು ನಾಡಿನ ಅನೇಕ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳ ಹೃದಯವನ್ನು ಮುಟ್ಟಿದೆ. ಸಹಸ್ರಾರು ಮಂದಿ ವಿದ್ಯಾರ್ಥಿಗಳು ಈ ವ್ಯಕ್ತಿತ್ವ ವಿಕಸನ ಶಿಬಿರಗಳಿಂದ ಪ್ರೇರೇಪಿತರಾಗಿ ತಮ್ಮ ಬದುಕಿನ ಗತಿಯನ್ನೇ ಉತ್ತಮಗಳಿಸಿಕೊಂಡ ಉದಾಹರಣೆಗಳು ಇವೆ.

ರಮಣಶ್ರೀ ಶರಣ ಪ್ರಶಸ್ತಿ ಇಂದು ಪ್ರದಾನ

ಷಡಕ್ಷರಿಯವರು ಸ್ಥಾಪಿಸಿದ ರಮಣಶ್ರೀ ಪ್ರತಿಷ್ಠಾನವು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಸಹಯೋಗದೊಂದಿಗೆ ಕಳೆದ 19 ವರ್ಷಗಳಿಂದ ಶರಣ ಸಾಹಿತ್ಯದ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿರುವ ಮಹನೀಯರುಗಳಿಗೆ ತಲಾ 50,000 ರು. 40,000 ರು. ಹಾಗೂ 20,000 ರು.ಗಳ ಗೌರವ ಧನವನ್ನು ಪ್ರಶಸ್ತಿ ಫಲಕದೊಂದಿಗೆ ನೀಡಿ ಗೌರವಿಸಲಾಗುತ್ತಿದೆ. ಇದುವರೆಗೂ ನೂರಕ್ಕೂ ಹೆಚ್ಚು ಮಂದಿ ಸ್ವೀಕರಿಸಿದ್ದಾರೆ. ನವೆಂಬರ್ 18ರಂದು ಅವರ 76ನೇ ಹುಟ್ಟುಹಬ್ಬದ ದಿನದಂದು 19ನೇಯ ರಮಣಶ್ರೀ ಶರಣ ಪ್ರಶಸ್ತಿ ನೀಡಲಾಗುತ್ತಿದೆ. ಇದೇ ವೇಳೆ ಷಡಕ್ಷರಿ ಅವರ 'ಕ್ಷಣ ಹೊತ್ತು ಆಣಿ ಮುತ್ತು' ಕೃತಿಯ 14ನೇ ಭಾಗ ಲೋಕಾರ್ಪಣೆಯಾಗಲಿದೆ.

ಇದು ಸಾವಿರದ ಪುಸ್ತಕ ಅಂದರೆ ಸಾವು+ಇರದ ಪುಸ್ತಕ = ಸಾವಿರದ ಪುಸ್ತಕ.
- ಡಾ.ಚನ್ನವೀರ ಕಣವಿ, ಧಾರವಾಡ



ಕ್ಷಣ ಹೊತ್ತು ಆಣಿ ಮುತ್ತು
ಓದಿದವರ ಮೆದುಳಿಗೆ ಗಮ್ಮತ್ತು
ದಿನವಿಡೀ ಉಲ್ಲಾಸವೀಯುವ ಶರಬತ್ತು
ಬದುಕಿಗೆ ಮೊಹಬತ್ತಿನ ಮತ್ತು
-ಕನ್ನಡದ ಪೂಜಾರಿ,
ಹಿರೇಮಗಳೂರು ಕಣ್ಣನ್

ಸ್ವಾಮಿ ಎಸ್. ಷಡಕ್ಷರಿ
ನಿಮ್ಮ ಹೆಸರಲ್ಲೇ 'SS'ಇದೇರಿ
ಅದಕ್ಕೇ ನೀವು ಹೀಗೆ ಅದೀರಿ
ಸದಾ ಧನಾತ್ಮಕ ಚಿಂತನೆ ಚಿಮ್ಮುವ ಜೀವನೋತ್ಸಾಹ ಆರೋಗ್ಯಪೂರ್ಣ ನಗೆ ನಿಮ್ಮ ಅಂಕಣವೂ ನಿಮ್ಮ ಹಾಗೆ. ಅಭಿನಂದನೆ ನಿಮಗೆ
-ಹೆಚ್. ಡುಂಡಿರಾಜ್

ಚಿಂತಾಮಣಿಯ ವಿಶ್ವವಿಖ್ಯಾತ ಕಡಲೇ ಬೀಜಗಳನ್ನು ಒಂದೊಂದಾಗಿ ಬಾಯಿಗೆ ಎಸೆದುಕೊಳ್ಳುತ್ತ, ನುರಿಸಿ, ಮೆಲ್ಲುವಾಗಿನ ಸವಿಯೇ, ಷಡಕ್ಷರಿಯವರ ಈ ಆಣಿಮುತ್ತುಗಳಂಥ ಸೊಲ್ಲುಗಳನ್ನು ಒಂದೊಂದಾಗಿ ಮನದಲ್ಲೇ ನುರಿಸಿ ಮೆಲ್ಲುವಾಗಲೂ.
-ಬಿ.ಆರ್. ಲಕ್ಷ್ಮಣ್ ರಾವ್

ಸ್ಫೂರ್ತಿ ಚಿಲುಮೆ ಷಡಕ್ಷರಿ- 76

ಕ್ಷಣ ಹೊತ್ತು ಆಣಿಮುತ್ತು

ವಿಶ್ವವಾಣಿ
18.11.2024 ಸೋಮವಾರ
vishwavani.news

ಕ್ಷಣಹೊತ್ತು ವಿಸ್ಮಯಕಾರಿ ಅಂಕಣಗಳ ಸಂಗಮ

'ಕ್ಷಣ ಹೊತ್ತು ಆಣಿ ಮುತ್ತು' ಪುಸ್ತಕದ ಮೊದಲ ಆವೃತ್ತಿಯನ್ನು ಓದಿದ ತಕ್ಷಣ, ಅದರಿಂದ ಅದೆಷ್ಟು ಪ್ರಭಾವಿತನಾದೆನೆಂದರೆ, ಆ ಪುಸ್ತಕದ ಮೊದಲ ಪುಟದಲ್ಲಿ ನಾನು ಹೀಗೆ ಬರೆದೆ: 'ನಾವು ಯೋಚಿಸುವ ಕ್ರಮವನ್ನೇ ಬದಲು ಮಾಡಿ, ಸಂತಸ ತುಂಬಬಲ್ಲ ಪುಸ್ತಕ ಇದು!'

ಶಶಿಧರ ಹಾಲಾಡಿ

ಇಂದಿಗೆ ಹದಿನೇಳು ವರ್ಷಗಳ ಹಿಂದಿನ ಮಾತು. ಇಸವಿ 2007. ನಾನಾಗ ಶಿವಮೊಗ್ಗದಲ್ಲಿದ್ದೆ; ಪುಸ್ತಕ ಪ್ರದರ್ಶನವೊಂದರಲ್ಲಿ, 'ಕ್ಷಣ ಹೊತ್ತು ಆಣಿ ಮುತ್ತು' ಎಂಬ ಆಕರ್ಷಕ ಮುಖಪುಟ ಹೊತ್ತ ಪುಸ್ತಕವನ್ನು ಕಂಡೆ; ಬರೆದವರ ಹೆಸರು ಎಸ್. ಷಡಕ್ಷರಿ. ಆ ದಿನಗಳಲ್ಲಿ ನನಗೆ ಎಸ್. ಷಡಕ್ಷರಿ ಎಂದರೆ ಯಾರು ಎಂದು ಗೊತ್ತಿರಲಿಲ್ಲ; ಆದರೆ, 'ಕ್ಷಣ ಹೊತ್ತು ಆಣಿ ಮುತ್ತು' ಹೆಸರು ಸ್ವಲ್ಪ ಪರಿಚಿತ ಎನಿಸಿತ್ತು; ಕಾರಣ, 'ವಿಜಯ ಕರ್ನಾಟಕ' ಪತ್ರಿಕೆಯಲ್ಲಿ ಬರುತ್ತಿದ್ದ ಅಂಕಣದ ಹೆಸರು ಅದು. 'ದಿನಪತ್ರಿಕೆಯಲ್ಲೇ ಈಗಾಗಲೇ ಓದಿದ ಅಂಕಣ, ಈಗ ಪುಸ್ತಕ ರೂಪದಲ್ಲಿ ಹೊರತಂದಿದ್ದಾರೆ, ನೋಡೋಣ ಹೇಗಿದೆ' ಎಂದು ಅರೆಮನಸ್ಸಿನಲ್ಲೇ ಆ ಪುಸ್ತಕವನ್ನು ಖರೀದಿಸಿದೆ.

ಒಂದೂವರೆ ಪುಟ ವ್ಯಾಪ್ತಿಯ 75 ಲೇಖನಗಳು ಆ ಮೊದಲ ಆವೃತ್ತಿಯಲ್ಲಿವೆ; ಒಂದೊಂದಾಗಿ ಪುಟ ತಿರುವಿ ಹಾಕುತ್ತಾ ಹೋದೆ; ಪುಸ್ತಕವನ್ನು ಕೆಳಗಿಡಲು ಆಗಲಿಲ್ಲ – ಆಸಕ್ತಿಯಿಂದ ಓದಿಸಿಕೊಂಡು ಹೋಯಿತು; ಎಂಥವರ ಮನದಲ್ಲೇ ಆಗಲಿ ಸ್ಫೂರ್ತಿ ತುಂಬುವ ಬರಹಗಳು ಅವು. ಪ್ರತಿ ದಿನ ಅಂಕಣ ರೂಪದಲ್ಲಿ ಓದಿದ್ದಕ್ಕೂ, ಸಮಗ್ರವಾಗಿ ಪುಸ್ತಕ ರೂಪದಲ್ಲಿ ಓದಿದ್ದಕ್ಕೂ ಸಾಕಷ್ಟು ವ್ಯತ್ಯಾಸ; ಒಂದು ಬರಹವನ್ನೋದಿ ಮುಂದಿನ ಬರಹಕ್ಕೆ ಹೋದಂತೆ, ಇನ್ನಷ್ಟು ಸ್ಫೂರ್ತಿ, ಇನ್ನಷ್ಟು ಉತ್ಸಾಹ ತುಂಬಿತು. ಈ ಅಂಕಣದಲ್ಲಿ ಬಂದ ಘಟನೆಗಳನ್ನು, ಅವುಗಳನ್ನು ಪ್ರಸ್ತುತ ಪಡಿಸಿದ ರೀತಿಯನ್ನು ನಮ್ಮ ಬದುಕಿನ ವಿವಿಧ ಹಂತಗಳಿಗೆ ಹೋಲಿಸಿಕೊಳ್ಳುತ್ತಾ, ಮನನ ಮಾಡುತ್ತಾ, ಇನ್ನಷ್ಟು ಸಾಧಿಸಲು ಏನು ಮಾಡಬಹುದು ಎಂದು ಯೋಚಿಸುತ್ತಾ, ಪುಟ ತಿರುವಿ ತಿರುವಿ, ಇಡೀ ಪುಸ್ತಕವನ್ನೋದಿ ಮುಗಿಸಿದೆ. ನನ್ನ ಬದುಕಿನ ಮೇಲೆ ಸಾಕಷ್ಟು ಸಕಾರಾತ್ಮಕ ಪರಿಣಾಮ ಬೀರಿದ ಪುಸ್ತಕ ಇದು.

'ಕ್ಷಣ ಹೊತ್ತು ಆಣಿ ಮುತ್ತು' ಪುಸ್ತಕದ ಮೊದಲ ಆವೃತ್ತಿಯನ್ನು ಓದಿದ ತಕ್ಷಣ, ಅದರಿಂದ ಅದೆಷ್ಟು ಪ್ರಭಾವಿತನಾದೆನೆಂದರೆ, ಆ ಪುಸ್ತಕದ ಮೊದಲ ಪುಟದಲ್ಲಿ ನಾನು ಹೀಗೆ ಬರೆದೆ : 'ನಾವು ಯೋಚಿಸುವ ಕ್ರಮವನ್ನೇ ಬದಲು ಮಾಡಿ, ಸಂತಸ ತುಂಬಬಲ್ಲ ಪುಸ್ತಕ ಇದು!' ಕೆಲವು ದಿನಗಳ ನಂತರ ಮತ್ತೊಮ್ಮೆ ಓದಿದೆ; ಮಗದೊಮ್ಮೆ ಓದಿದೆ. ವಿಶೇಷವೆಂದರೆ, ಈ ಅಂಕಣ ಬರಹಗಳ ಸಂಗ್ರಹವನ್ನು ಓದಲು ಹೆಚ್ಚು ಸಮಯ ಬೇಕಾಗಿಲ್ಲ, ಅಂದರೆ, ಇಡಿಯಾಗಿ ಒಮ್ಮೆಗೇ ಓದಬೇಕೆಂದಿಲ್ಲ, ಬಿಡಿ ಬಿಡಿಯಾಗಿಯೂ ಓದಬಹುದು. ಕೆಲಸ, ಕೆಲಸ ಎಂದು ಬಿಡುವಿಲ್ಲದ ಕೆಲಸವನ್ನು ಮೈಮೇಲೆ ಎಳೆದುಕೊಂಡವರು ಸಹ, ಒಂದೂವರೆ ಪುಟದ ಒಂದು ಲೇಖನವನ್ನು ಓದಿ, ತಮ್ಮ ಕೆಲಸದಲ್ಲಿ 'ಮುಳುಗಬಹುದು'; ಮತ್ತೊಮ್ಮೆ ಬಿಡುವಾದಾಗ, ಎರಡೇ ನಿಮಿಷದಲ್ಲಿ ಇನ್ನೊಂದು ಲೇಖನ ಓದಿ, ಮತ್ತೊಮ್ಮೆ ಕೆಲಸದಲ್ಲಿ 'ಮುಳುಗಿಹೋಗಬಹುದು'.

'ಮುಳುಗಿ ಹೋಗಬಹುದು' ಎಂದು ಇಲ್ಲಿ ನಾನು ತುಸು ತಮಾಷೆಯ ಧಾಟಿಯಲ್ಲಿ ಬರೆದೆ! ಏಕೆಂದರೆ, 'ಸ್ವಲ್ಪವೂ ಸಮಯವಿಲ್ಲ, ತುಂಬಾ ಕೆಲಸ, ಓದಲಿಕ್ಕೆ ಎಲ್ಲಿದೆ ಸಮಯ!' ಎಂದು ಹೇಳುವವರಿಗೆ ಈ ಪುಸ್ತಕದಲ್ಲಿ ಸೂಕ್ತ ಉತ್ತರವಿದೆ. 'ನಿಮಗೆ ಬಿಡಿ, ಪುರಸೊತ್ತು ಇದೆ, ಪುಸ್ತಕ ಓದುತ್ತೀರಿ, ನಮಗೆಲ್ಲಿದ ವ್ಯವಧಾನ; ನಮಗೆ ಕೆಲಸವೇ ಮುಖ್ಯ' ಎನ್ನುತ್ತಾ, ಓದುವ ಹವ್ಯಾಸವನ್ನೇ ಸಣ್ಣಗೆ ವ್ಯಂಗ್ಯಕ್ಕೆ ಗುರಿಮಾಡುವವರಿಗೂ, ಈ ಪುಸ್ತಕದಲ್ಲಿ ಪರಿಹಾರವಿದೆ. ಅತಿ ಎನಿಸುವಷ್ಟು ಬ್ಯುಸಿಯಾಗಿರುವವರೂ ಸಮಯವನ್ನು ಹೇಗೆ



ಹೊಂದಿಸಿಕೊಳ್ಳಬಹುದು ಮತ್ತು ಹೊಸ ಹೊಸ ಯೋಜನೆಗಳನ್ನು ಕೈಗೆತ್ತಿಕೊಳ್ಳಬಹುದು ಎಂಬುದನ್ನು ಈ ಪುಸ್ತಕದಲ್ಲಿರುವ ಪುಟ್ಟ ಪುಟ್ಟ ಕಥೆಗಳು ಹೇಳುತ್ತವೆ. ಕೆಲವೇ ನಿಮಿಷ ಬಿಡುವಿದ್ದಾಗಲೂ ಈ ಪುಸ್ತಕದ ಯಾವುದಾದರೂ ಒಂದು ಬರಹವನ್ನು ಓದಿ, ಮನಸ್ಸನ್ನು ಪ್ರಫುಲ್ಲಗೊಳಿಸಿಕೊಳ್ಳಬಹುದು. ಮೊದಲ ಸಂಪುಟದ ನಂತರ, ಇದೇ ಮಾಲಿಕೆಯಲ್ಲಿ ಹಲವು ಸಂಪುಟಗಳು ಹೊರಬಂದಿವೆ, ಎಸ್. ಷಡಕ್ಷರಿಯವರು ಉತ್ತಮ ಮತ್ತು ಯಶಸ್ವಿ ಲೇಖಕರು ಎಂದು ತೋರಿಸಿಕೊಟ್ಟಿವೆ.

ಇಲ್ಲಿನ ಸ್ಫೂರ್ತಿ ತುಂಬುವ ಕಥೆಗಳಲ್ಲಿ ವೈವಿಧ್ಯವಿದೆ; ವಿದೇಶದಲ್ಲಿ ನಡೆದ ಯಶಸ್ಸಿನ ಉದಾಹರಣೆಗಳನ್ನು ತಳಹದಿಯನ್ನಾಗಿ ಮಾಡಿಕೊಂಡ ಲೇಖನಗಳಿವೆ; ಜತೆಯಲ್ಲೇ, ನಮ್ಮ ದೇಶದ ಹಲವು ವ್ಯಕ್ತಿ ಮತ್ತು ಸಂಸ್ಥೆಗಳ ಯಶೋಗಾಥೆಗಳೂ ಇವೆ. ರಾಧಾಕೃಷ್ಣನ್, ಪಂಚಶೀಲ ನಿಯಮ ಅನುಸರಿಸಿ ಯಶಸ್ಸು ಗಳಿಸಿದ ಗುಜರಾತಿನ ದಂಪತಿ, ಜೋಗ ಜಲಪಾತ ಮೊದಲಾದ ಹಿನ್ನೆಲೆಯ ಸುಂದರ ಕಥೆಗಳೂ ಇಲ್ಲಿವೆ.

ಇಲ್ಲಿನ ಅಂಕಣಗಳ ಎದ್ದು ಕಾಣುವ ಗುಣವೆಂದರೆ ಸರಳ ವಾಕ್ಯಗಳು; ಜತೆಗೆ ಜನಸಾಮಾನ್ಯರೂ ಸುಲಭವಾಗಿ ಗ್ರಹಿಸಬಲ್ಲ ರೀತಿಯಲ್ಲಿ ಈ ಬರಹಗಳನ್ನು



ಪ್ರಸ್ತುತಪಡಿಸಲಾಗಿದೆ. ಸಕಾರಾತ್ಮಕವಾಗಿ ಯೋಚಿಸುವುದನ್ನು ಕಲಿಯಬೇಕೆನಿಸುವವರು 'ಕ್ಷಣ ಹೊತ್ತು ಆಣಿ ಮುತ್ತು' ಪುಸ್ತಕವನ್ನು ಖಂಡಿತವಾಗಿಯೂ ಓದಬಹುದು. ಕನ್ನಡ ಪುಸ್ತಕಗಳನ್ನು ಓದಲು ಮೊದಮೊದಲು ಅಭ್ಯಾಸ ಮಾಡಬಯಸುವವರು, 'ಯಾವ ಪುಸ್ತಕವನ್ನು ಮೊದಲು ಓದಬೇಕು?' ಎಂದು ಸಲಹೆ ಕೇಳಿದಾಗ, ನಾನು ಶಿಫಾರಸು ಮಾಡುವ ಪುಸ್ತಕಗಳಲ್ಲಿ ಇದೂ ಒಂದು.

'ಕ್ಷಣ ಹೊತ್ತು ಆಣಿ ಮುತ್ತು' ಪುಸ್ತಕದ ತುಂಬಾ ಹತ್ತಾರು ಯಶೋಗಾಥೆಗಳಿವೆ, ಸ್ವಪ್ರಯತ್ನದಿಂದ ಮೇಲೆ ಬಂದ ವ್ಯಕ್ತಿಗಳ ಉದಾಹರಣೆಗಳಿವೆ. 2007ರಲ್ಲಿ ಈ ಅಂಕಣ ಬರೆಯಲು ಆರಂಭಿಸಿದ ಎಸ್.ಷಡಕ್ಷರಿಯವರು ಸಹ, ಅಂತಹದೇ ಯಶೋಗಾಥೆಯ ಉದಾಹರಣೆಯಾಗಿ ರೂಪುಗೊಂಡಿದ್ದಾರೆ. ಏಕೆಂದರೆ, ಅವರು ಈ ಅಂಕಣ ಬರೆಯಲು ಆರಂಭಿಸಿದಾಗ, ತಮಗೆ ಬರವಣಿಗೆಯಲ್ಲಿ ಹೆಚ್ಚಿನ ಅನುಭವ ಇರಲಿಲ್ಲ ಎಂದು ಪುಸ್ತಕದಲ್ಲಿ ಅರಿಕೆ ಮಾಡಿಕೊಂಡಿದ್ದಾರೆ; ಈಗ ನೋಡಿದರೆ, ಅಂತಹ ನೂರಾರು ಅಂಕಣಗಳನ್ನು ಬರೆದಿದ್ದಾರೆ, ಹತ್ತಾರು ಸಂಪುಟಗಳಲ್ಲಿ ಅವುಗಳನ್ನು ಪ್ರಕಟಿಸಿದ್ದಾರೆ. ಮತ್ತೂ ವಿಶೇಷವೆಂದರೆ, ಕ್ಷಣ ಹೊತ್ತು ಆಣಿ ಮುತ್ತು ಪುಸ್ತಕಗಳು ದಾಖಲೆ ಸಂಖ್ಯೆಯಲ್ಲಿ ಮಾರಾಟವಾಗಿವೆ! ಸ್ಫೂರ್ತಿ ನೀಡುವ ಬರಹಗಳನ್ನು ಬರೆಯುತ್ತಾ, ಬರೆಯುತ್ತಾ, ಯಶಸ್ವಿ ಉದ್ಯಮಿಯೊಬ್ಬರು ಯಶಸ್ವಿ ಲೇಖಕರೂ ಆಗಿ ರೂಪುಗೊಂಡ ವಿಸ್ಮಯವನ್ನು ನಾವಿಲ್ಲಿ ಕಾಣಬಹುದು.

ಜೀವನಾನುಭವದ ಸಮ್ಮಿಲನ

ಎಸ್.ಎಲ್.ಭೈರಪ್ಪ



ಎಸ್. ಷಡಕ್ಷರಿಯವರ 'ಕ್ಷಣ ಹೊತ್ತು, ಅಣಿ ಮುತ್ತು' ಅಂಕಣವನ್ನು ಗಮನಿಸುತ್ತಿದ್ದಾಗ ಅದು ಕನ್ನಡ ಓದುಗರಿಗೆ ಅತ್ಯಗತ್ಯವಾಗಿ ಬೇಕಾದ ಬರವಣಿಗೆ ಎನ್ನಿಸುತ್ತಿತ್ತು. ಪುಸ್ತಕ ರೂಪದಲ್ಲಿ ಪ್ರಕಟವಾದ ಲೇಖನಗಳನ್ನು ಇಡಿಯಾಗಿ ಓದಿದಾಗ ಇವುಗಳಲ್ಲಿ ಉದ್ದಕ್ಕೂ ಮೂಡಿಬಂದಿರುವ ವಿಶೇಷ ಗುಣಗಳು ಸ್ಫುಟವಾದವು. ಮೇಲ್ನೋಟಕ್ಕೆ ಮಕ್ಕಳಿಗಾಗಿ ಬರೆದ ಹಿತವಚನಗಳಾಗಿ ಕಂಡರೂ ಇವುಗಳ ಪ್ರಯೋಜನವು ವಯಸ್ಕರಿಗೂ ಆಗುತ್ತದೆ. ನೀತಿಯನ್ನು ಶುಷ್ಕವಾದ ಬೋಧನೆಯ ರೂಪದಲ್ಲಿ ಹೇಳುವುದಕ್ಕಿಂತ ಸ್ವಾರಸ್ಯಕರವಾದ ಕಥಾ ರೂಪದಲ್ಲಿ ನಿರೂಪಿಸುವುದು ಹೆಚ್ಚು ಆಕರ್ಷಕವೂ, ಅರ್ಥಗರ್ಭಿತವೂ ಆಗುತ್ತದೆ. ಆದುದರಿಂದಲೇ ಉಪನಿಷತ್, ಋಷಿಗಳು, ಬುದ್ಧ ಆಧುನಿಕ ಕಾಲದ ರಾಮಕೃಷ್ಣ ಪರಮಹಂಸರುಗಳಲ್ಲದೆ ಏಸು, ಈಸೋಪ, ಜೆನ್ ಮೊದಲಾದವರೆಲ್ಲ ಕಥೆಯ ರೂಪದಲ್ಲೇ ನೀತಿ ಮತ್ತು ಅಧ್ಯಾತ್ಮದ ಬೋಧೆ ಮಾಡಿದರು. ಬೆಳೆಯುವ ಮಕ್ಕಳಿಗಂತೂ ಇದು ಹೇಳಿ ಮಾಡಿಸಿದ ಸ್ವರೂಪ. ಷಡಕ್ಷರಿಯವರು ಕಥೆಯನ್ನು ಬಳಸಿ ಸರಳವಾದ ವಿವರಣೆಯನ್ನೂ ಕೊಟ್ಟಿದ್ದಾರೆ.



ನೀತಿ ಎನ್ನುವುದು ಕೇವಲ ಒಂದು ಜೀವನ ಮೌಲ್ಯ, ಧೈರ್ಯ, ಸಾಹಸ, ನಿಶ್ಚಲ ಗುರಿ, ದೂರದೃಷ್ಟಿ ವೈಜ್ಞಾನಿಕ ಮನೋಭಾವ, ಕಲೆ ಮೊದಲಾಗಿ ಮಾನವನ ಪ್ರಗತಿಗೆ ಬೇಕಾದ ಸಾಧನಗಳೆಲ್ಲವೂ ಮೌಲ್ಯಗಳೇ. ಇವೆಲ್ಲವುಗಳ ಸರ್ವಾಂಗೀಣ ಅಭಿವೃದ್ಧಿಯಾದಾಗಲೇ ವ್ಯಕ್ತಿ ಮತ್ತು ರಾಷ್ಟ್ರ ಜೀವನವು ಅಭಿವೃದ್ಧಿ ಹೊಂದುತ್ತವೆ. ಈ ಸಂಕಲನದ ಲೇಖನಗಳು ಈ ವಿಶಾಲಾರ್ಥದ ಎಲ್ಲ ಮೌಲ್ಯಗಳನ್ನೂ ಗುರುತಿಸಿ ವಿವರಿಸುತ್ತವೆ. ಷಡಕ್ಷರಿಯವರು ಎಂಜಿನಿಯರ್ ಆಗಿದ್ದವರು. ಹೊಸ ಸಾಧ್ಯತೆಗಳನ್ನು ಹುಡುಕಿ ವಿಶೇಷ ರೀತಿಯ ಹೋಟೆಲ್ ಉದ್ಯಮವನ್ನು ಆರಂಭಿಸಿ ಹಲವು ಶಾಖೆಗಳಾಗಿ ವಿಸ್ತರಿಸಿದವರು. ಉದ್ಯಮದೊಂದಿಗೆ ಅಧ್ಯಾತ್ಮ ಮತ್ತು ಜೀವನ, ಮೌಲ್ಯಗಳ ಮನನವನ್ನು ಸಮ್ಮಿಳಿಸಿಕೊಂಡವರು. ಜೀವನಾನುಭವವಿಲ್ಲದೆ ಕೇವಲ ಗ್ರಂಥಾಲಯದ ಹುಳುವಿನಂತೆ ಚಿಂತನೆ ಮಾಡುವವರಿಗೆ ಮೌಲ್ಯಗಳ ವಾಸ್ತವ ಸ್ವರೂಪ ಮತ್ತು ಸಂಕೀರ್ಣತೆಗಳ ಅರ್ಥವಾಗುವುದು ಅಪರೂಪ. ಅನುಭವ ಸಮೃದ್ಧಿಯಿಂದ ಮೂಡಿದ ಈ ಲೇಖನಗಳ ಲಾಭವನ್ನು ಓದುಗರು ಪಡೆಯುತ್ತಾರೆಂಬ ನಂಬಿಕೆ ನನಗಿದೆ. ಅದರಲ್ಲೂ ಅಡ್ಡಹಾದಿಗೆ ಎಳೆಯುವ ಸಾಮಾಜಿಕ ಪ್ರಭಾವಗಳು ಹಾಗೂ ಮುದ್ರಣ ಮತ್ತು ದೃಶ್ಯ ಮಾಧ್ಯಮಗಳ ಕೆಟ್ಟ ಹಾವಳಿಯ ಈ ಕಾಲದಲ್ಲಿ ಎಲ್ಲ ವಯಸ್ಸಿನವರಿಗೆ ಇಂಥ ಪುಸ್ತಕಗಳನ್ನು ಕೊಡುವುದು, ಪರಿಚ ಯಿಸುವುದು ಮತ್ತು ಅವುಗಳ ರುಚಿ ಹತ್ತಿಸುವುದು ನಮ್ಮೆಲ್ಲರ ಕರ್ತವ್ಯ.

ಆಶಾವಾದದ ಅಮರಕೋಶ

ಡಾ. ಜೀ ವಿ. ಕುಲಕರ್ಣಿ, ಮುಂಬೈ



ಒಬ್ಬ ಪದವೀಧರ ಇಂಜಿನಿಯರ್ ತನ್ನ ಉದ್ಯಮ ಬಿಟ್ಟು ಹೊಟೆಲ್ ವ್ಯವಸಾಯದ ಕಡೆಗೆ ಒಲಿಯುತ್ತಾನೆ. ಯಶಸ್ಸನ್ನೂ ಧನವನ್ನೂ ಸಂಪಾದಿಸುತ್ತಾನೆ. ಜೊತೆಗೆ ಓದುವ ಹುಚ್ಚು ಬೇರೆ. ಶಾಲೆಯ ಎಳೆಯ ಮಕ್ಕಳನ್ನು ಕೂಡಿಸಿ ವ್ಯಕ್ತಿ ವಿಕಸನದ ಕಮ್ಮಟಗಳನ್ನು ನಡೆಸುತ್ತಾನೆ. ದೇಶವಿದೇಶದ ಕತೆ ಉಪಕತೆಗಳನ್ನು ಹೇಳುತ್ತ ಮಕ್ಕಳನ್ನು ರಂಜಿಸುತ್ತಾನೆ. ಇಂಥದೊಂದು ವ್ಯಕ್ತಿವಿಕಸನ ಶಿಬಿರಕ್ಕೆ ಕನ್ನಡ ದಿನಪತ್ರಿಕೆಯ ಸಂಪಾದಕರೊಬ್ಬರು ಅತಿಥಿಯಾಗಿ ಬಂದಿರುತ್ತಾರೆ. ಅವರು ಈ ಇಂಜಿನಿಯರ್‌ನ ಪ್ರತಿಭೆ ಹಾಗೂ ಪ್ರತಿಬದ್ಧತೆ ಕಂಡು ಪ್ರಭಾವಿತರಾಗುತ್ತಾರೆ. ಒಂದು ದಿನ ಫೋನ್ ಮಾಡುತ್ತಾರೆ. 'ನೀವು ನಮ್ಮ ಪತ್ರಿಕೆಗೆ ಒಂದು ಅಂಕಣವನ್ನು ಏಕೆ ಪ್ರಾರಂಭಿಸಬಾರದು' ಎನ್ನುತ್ತಾರೆ. ಆಗ ಉತ್ತರ ಬರುತ್ತದೆ, 'ಸರ್, ನೀವು ರಾಂಗ್ ನಂಬರ್‌ಗೆ ಫೋನ್ ಮಾಡುತ್ತಿರುವಿರಿ. ಯಾವುದೋ ಲೇಖಕನಿಗೆ ಹೇಳುವ ಬದಲು ಒಬ್ಬ ಹೊಟೆಲ್ ಉದ್ಯಮಿಗೆ ಅಂಕಣ ಲೇಖನ ಬರೆಯಲು ಕೇಳುತ್ತಿದ್ದೀರಿ. ನಾನು ಒಂದೆರಡು ಲೇಖನ ಬರೆದಿರಬಹುದು, ಮಕ್ಕಳಿಗಾಗಿ ವ್ಯಕ್ತಿವಿಕಸನ ಕಮ್ಮಟ ನಡೆಸಿರಬಹುದು.

ಆದರೆ ನಾನು ವೃತ್ತಿಯಿಂದ, ಪ್ರವೃತ್ತಿಯಿಂದ ಲೇಖಕನಲ್ಲ. ಪ್ರತಿದಿನ ಅಂಕಣ ಬರೆವ ಬಂಡವಾಳ, ಓದು, ಅನುಭವ ನನಗಿಲ್ಲ.' ಆಗ ಸಂಪಾದಕರು ನುಡಿಯುತ್ತಾರೆ, 'ನೀವು ವ್ಯಕ್ತಿವಿಕಸನ ಕಾರ್ಯಕ್ರಮಗಳಲ್ಲಿ ಬಳಸಿದ ಕತೆ ಉಪಕತೆಗಳು ರೋಚಕವಾಗಿವೆ. ಮುತ್ತಿನಂತಹ ಮಾತು ನುಡಿದಿದ್ದೀರಿ. ಅವನ್ನೇ ಬಳಸಿ ಅಂಕಣ ಬರೆಯಬಹುದಲ್ಲ.' ಉದ್ಯಮಿ ಅಂಕಣ ಬರೆವ ಸಾಹಸಕ್ಕಿಳಿಯುತ್ತಾರೆ. ಅವರ ಮಿತ್ರರೊಬ್ಬರು ಅಂಕಣಕ್ಕೆ ಹೆಸರೊಂದನ್ನು ಸೂಚಿಸುತ್ತಾರೆ. ಅವರು ಮಕ್ಕಳಿಗೆ ಹೇಳಿದ ನೀತಿಕತೆಗಳು, ಹಿರಿಯರ ಜೀವನದ ಘಟನೆಗಳು, ಸಣ್ಣವರ ಜೀವನದಲ್ಲಿಯ ದೊಡ್ಡ ಘಟನೆಗಳು, ದೊಡ್ಡವರ ಜೀವನದಲ್ಲಿಯ ಸಣ್ಣ ಘಟನೆಗಳು, ಮಹಾನ್ ಚೇತನಗಳು (ಭಗವಾನ್ ರಮಣ ಮಹರ್ಷಿ, ಸ್ವಾಮಿ ವಿವೇಕಾನಂದ, ಸ್ವಾಮಿ ಚಿನ್ಮಯಾನಂದ, ಸಿದ್ಧೇಶ್ವರಸ್ವಾಮಿಗಳು, ಸ್ವಾಮಿ ಬ್ರಹ್ಮಾನಂದರು, ದಾದಾ ವಾಸ್ವನಿಯವರು, ಹೆಡ್ವಿಗ್ ಲೂಯಿ ಮುಂತಾದವರು) ನುಡಿದ ಮಾತುಗಳು ಅವರ ಅಂಕಣದಲ್ಲಿ ಮಿಂಚುತ್ತವೆ. 140 ಲೇಖನಗಳು ಆದಾಗ ಅಸಂಖ್ಯ ಫೋನ್ ಕಾಲ್‌ಗಳು ಎಸ್‌ಎಂಎಸ್‌ಗಳು ಬರುತ್ತವೆ. 75 ಲೇಖನಗಳ ಮೊದಲ ಪುಸ್ತಕ –ಕ್ಷಣ ಹೊತ್ತು ಆಣಿ ಮುತ್ತು ಪ್ರಕಟವಾಗುತ್ತದೆ. ಖ್ಯಾತ ಕಾದಂಬರಿಕಾರರಾದ ಡಾ.ಎಸ್.ಎಲ್.ಭೈರಪ್ಪ ಮುನ್ನುಡಿ ಬರೆಯುತ್ತಾರೆ. ಸುತ್ತೂರು ಶ್ರೀಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳು, ಚಿನ್ಮಯ ಮಿಷನ್‌ನ ಸ್ವಾಮಿ ಬ್ರಹ್ಮಾನಂದರು ಆಶೀರ್ವಚನ ಬರೆಯುತ್ತಾರೆ. ಹಲವಾರು ಪ್ರತಿಷ್ಠಿತರು ಮೆಚ್ಚುಗೆಯ ಪತ್ರಗಳನ್ನು ಬರೆಯುತ್ತಾರೆ. ಗೋ.ರು.ಚೆನ್ನಬಸಪ್ಪ ಈ ಪುಸ್ತಕವನ್ನು 'ಆಶಾವಾದದ ಅಮರಕೋಶ' ಎಂದು ಕರೆದಿರುವುದು ಸೂಕ್ತವಾಗಿಯೇ ಇದೆ.

ಜೀವನ ಪ್ರೀತಿ ಬರಹದಲ್ಲಿ ಕಾಣುತ್ತದೆ!

ಸುತ್ತೂರು ಸ್ವಾಮೀಜಿ

ಶ್ರೀಯುತ ಎಸ್. ಷಡಕ್ಷರಿಯವರು ವೃತ್ತಿಯಲ್ಲಿ ವಾಣಿಜ್ಯೋದ್ಯಮಿಗಳು ಆದರೆ ಪ್ರವೃತ್ತಿಯಲ್ಲಿ ಅಪರೂಪದ ಚಿಂತಕರು, ಉತ್ತಮ ವಾಗ್ಮಿಗಳು ಹಾಗೂ ಲೇಖಕರು. ದೈನಂದಿನ ವ್ಯವಹಾರದ ಒತ್ತಡ ಮತ್ತು ಒಳಸುಳಿಗಳಲ್ಲಿ ತಮ್ಮನ್ನು ಕಳೆದುಕೊಳ್ಳಲಿಚ್ಛಿಸದೆ ವೃತ್ತಿ ಮತ್ತು ಪ್ರವೃತ್ತಿಗಳನ್ನು ಸದಾಚಾರದ ಬುನಾದಿಯ ಮೇಲೆ ನಿಲ್ಲಿಸಿ ಜೀವನ ಸಮನ್ವಯಗೊಳಿಸಿಕೊಂಡಿರುವವರು. ಜೀವನದಲ್ಲಿ ಸಾಕಷ್ಟು ಶ್ರೀಮಂತಿಕೆ ಇದ್ದರೂ ಅದರ ಬೆನ್ನು ಹತ್ತದೆ ಆಧ್ಯಾತ್ಮಿಕದ ಹಸಿವು ನೀಗಿಸಿಕೊಳ್ಳಲು ನಿರಂತರ ಸಾಧನ ಪಥದಲ್ಲಿ ಮುನ್ನಡೆಯುತ್ತಿರುವುದು, ವ್ಯಕ್ತಿತ್ವ ವಿಕಾಸಗೊಳ್ಳದೆ, ಉಳಿದ ಯಾವುವೂ ಮನುಕುಲದ ಒಳಿತಿಗೆ ಪೂರಕವಾಗಲಾರವು ಎನ್ನುವ ಬಲವಾದ ನಂಬಿಕೆ ಅವರದು. ಆದುದರಿಂದಲೇ ಅದಕ್ಕೆ ಪುಷ್ಟಿ ನೀಡುವ ಅನೇಕ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವುದು ತುಂಬಾ ಶ್ಲಾಘನೀಯ. ಅಂತಹ ಚಟುವಟಿಕೆಗಳಲ್ಲಿ ಒಂದು, ಅವರು ಪತ್ರಿಕೆಗೆ ನಿತ್ಯವೂ 'ಕ್ಷಣ ಹೊತ್ತು ಆಣಿ ಮುತ್ತು' ಎನ್ನುವ ಅಂಕಣದಲ್ಲಿ ಬರೆಯುತ್ತಿರುವುದು. ಸಾಹಿತ್ಯದ ವಿಶಿಷ್ಟ ಪ್ರಕಾರಗಳಲ್ಲಿ 'ಅಂಕಣ'ವೂ ಒಂದು ವಿಶಿಷ್ಟ ಪ್ರಕಾರ. ಕನ್ನಡ ಪತ್ರಿಕಾರಂಗದಲ್ಲಿ ಅದಕ್ಕೊಂದು ವಿಶೇಷವಾದ ಸ್ಥಾನವಿದೆ. ದೊಡ್ಡ ಪರಂಪರೆ ಇದೆ ಡಾ. ಡಿ.ವಿ.ಜಿ., ಜಿ.ಪಿ. ರಾಜರತ್ನಂ, ಬೆಟಗೇರಿ ಕೃಷ್ಣಶರ್ಮ, ತಿ.ತಾ. ಶರ್ಮ, ಹಾ.ಮಾ.ನಾ. ಮುಂತಾದ ನಾಡಿನ ಹಿರಿಯ ಸಾಹಿತಿಗಳ ಈ ಪ್ರಕಾರದ ಬರವಣಿಗೆ ಇಂದಿಗೂ ನಾಡವರ ನೆನಪಿನಲ್ಲಿ ಉಳಿದಿದ್ದು ಮತ್ತೆ ಮತ್ತೆ ಚಿಂತನೆಗೆ ಗುರಿಯಾಗುತ್ತಿವೆ. ಇದೊಂದು ಸಾಸಿವೆಯಲ್ಲಿ ಸಾಗರವನ್ನು ಹಿಡಿದಿಡುವ ಸಾಹಸದ ಪ್ರಯತ್ನ. ಕಿರಿದರಲ್ಲಿ ಹಿರಿದಾದ ಅರ್ಥವನ್ನು ಹೇಳಬಲ್ಲದು. ಭಾಷಾ ಪ್ರಭುತ್ವ, ಹೇಳುವ ವಿಷಯದ ಮೇಲಿನ ಹಿಡಿತ, ಅನೇಕ ಜ್ಞಾನಕ್ಷೇತ್ರಗಳ ತಲಸ್ಪರ್ಶಿ ತಿಳುವಳಿಕೆ, ಪುರಾಣದ ಪ್ರಸಂಗಗಳಿಂದ ಹಿಡಿದು ನಿತ್ಯ ಜೀವನದ ಆಗುಹೋಗುಗಳು– ಈ ಎಲ್ಲದಕ್ಕೂ ನಿರಂತರವಾಗಿ ತಮ್ಮನ್ನು ಒಡ್ಡಿಕೊಂಡು ಚಿಂತಿಸುವವರಿಗೆ ಮಾತ್ರ ಇದು ಸಾಧ್ಯವಾಗುವಂಥದು. ನಿಯಮಿತವಾಗಿ ಅವು ಪ್ರಕಟಗೊಳ್ಳಬೇಕಿರುವುದರಿಂದ ಕಾಲಬದ್ಧ ಬರವಣಿಗೆಯಲ್ಲಿ ಒಂದು ಶಿಸ್ತನ್ನು ರೂಢಿಸಿಕೊಂಡಾಗ ಮಾತ್ರ ಇದು ಸಾಧಿತವಾಗುತ್ತದೆ.

ಈ ಎಲ್ಲ ಅಂಶಗಳನ್ನೂ ಶ್ರೀ ಎಸ್. ಷಡಕ್ಷರಿಯವರ ಈ ಅಂಕಣ ಬರಹಗಳಲ್ಲಿ ಕಾಣಬಹುದಾಗಿದೆ. ಶ್ರೀಯುತರ ಬಹುಶ್ರುತ ಪಾಂಡಿತ್ಯ ಮತ್ತು ಅದನ್ನು ಬದುಕಿಗೆ ಮೇಲೈಸುವ ಜೀವನಪ್ರೀತಿ ಇವರ ಬರಹಗಳಲ್ಲಿ ಕಂಡುಬರುತ್ತದೆ. ಉದ್ದಂಥಗಳನ್ನು ಅಧ್ಯಯನ ಮಾಡಿ ಅರಗಿಸಿಕೊಳ್ಳಲಾರದ ಅನೇಕ ಒತ್ತಡಗಳಲ್ಲಿ ಬದುಕುತ್ತಿರುವ ಸಾಮಾಜಿಕರಿಗೆ ಇಲ್ಲಿನ ಒಂದೊಂದು ಅಂಕಣದ ಬರಹವೂ ಜೀವನದ ಅಂತರಂಗ ಮತ್ತು ಬಹಿರಂಗಗಳನ್ನು ಸಮರ್ಥವಾಗಿ ತೆರೆದಿಡುತ್ತವೆ. ಸರಳವಾದ ಭಾಷೆ, ಒಂದು ಸಾಮಾನ್ಯ ವಿಷಯ ಮತ್ತು ಘಟನೆಯನ್ನು ಹೇಳುತ್ತಲೇ ಓದುಗನನ್ನು ಬದುಕಿನ ಬಗ್ಗೆ ಇತ್ಯಾತ್ಮಕ ಚಿಂತನೆಗೆ ಹಚ್ಚುವ ಲೇಖಕರ ಸ್ವೋಪಜ್ಞತೆ ಮೆಚ್ಚುವಂಥದು. ಇದೀಗ ಅಂಕಣದ ಇದುವರೆಗಿನ ಬರಹಗಳನ್ನು ಕ್ರೋಢೀಕರಿಸಿ ಪುಸ್ತಕ ರೂಪದಲ್ಲಿ ಅವರು ಹೊರತರುತ್ತಿರುವುದು ಸ್ವಾಗತಾರ್ಹ. ಕನ್ನಡ ಸಾಹಿತ್ಯಕ್ಕೆ ಇದೊಂದು ಮೌಲಿಕ ಸೇರ್ಪಡೆ, ಶ್ರೀಯುತರಿಂದ ಇಂತಹ ಇನ್ನು ಹೆಚ್ಚಿನ ಕೃತಿಗಳು ಹೊರಬರಲೆಂದು ಹಾರೈಸುತ್ತೇವೆ.

(ಕ್ಷಣಹೊತ್ತು ಆಣಿಮುತ್ತು ಕೃತಿಯಲ್ಲಿ ಸುತ್ತೂರು ಮಠದ ಜಗದ್ಗುರು ಶ್ರೀ ಶಿವರಾತ್ರಿ ಮಹಾಸ್ವಾಮಿಗಳ ಮುನ್ನುಡಿ)

ಕೆಲವೇ ಕ್ಷಣಗಳಲ್ಲಿ ಓದಬಹುದಾದ ಇಡೀ ದಿನ ಯೋಚಿಸುವಂತೆ ಮಾಡುವ ಬರಹಗಳಿವೆ.
-ಎಂ.ಆರ್. ಶ್ರೀನಿವಾಸಮೂರ್ತಿ,
ಐ.ಎ.ಎಸ್

'ಕ್ಷಣ ಹೊತ್ತು ಅಣಿಮುತ್ತು' ಆಶಾವಾದದ ಒಂದು ಅಮರಕೋಶ !
– ಗೊ.ರು. ಚನ್ನಬಸಪ್ಪ
ಹಿರಿಯ ಸಾಹಿತಿ



ಲಕ್ಷಾಂತರ ಓದುಗರ ಮನಸ್ಸನ್ನು ಗೆಲ್ಲುವ ಬರಹಗಳು.
– ಅ.ರಾ. ಮಿತ್ರ,
ಬೆಂಗಳೂರು

ಜಿ.ಕೃಷ್ಣಪ್ಪ ಡಾ.ಎಸ್. ಷಡಕ್ಷರಿ, ಡಾ.ಸಿಎನ್ ಮಂಜುನಾಥ್ ಅವರಿಗೆ ನಾಡೋಜ ಪ್ರಶಸ್ತಿ ಪ್ರದಾನ

ನಿವೃತ್ತ ಐಎಎಸ್ ಅಧಿಕಾರಿ ಡಾ.ಸಿ.ಸೋಮಶೇಖರ್ ಅವರ ಜತೆ..

ರಮಣಶ್ರೀ ಕಂಫರ್ಟ್ಸ್ ಹೋಟೆಲ್‌ನ ದೃಶ್ಯ



ಇದನ್ನು ಓದಿದ ಬಳಿಕ ನೀವು ಮೊದಲಿನಂತಿರುವುದಿಲ್ಲ

ವಿಶ್ವೇಶ್ವರ ಭಟ್

ಪ್ರತಿದಿನವೂ ಅಂಕಣ ಬರೆಯುವುದು ಕಷ್ಟ. ವೃತ್ತಿನಿಷ್ಠ ಬರಹಗಾರರೂ ದೈನಂದಿನ ಅಂಕಣಕ್ಕೆ ಒಪ್ಪುವುದಿಲ್ಲ. ಷಡಕ್ಷರಿಯವರು ಮೂಲತಃ ಬರಹಗಾರರಲ್ಲ. ಅವರು ಹೋಟೆಲ್ ಉದ್ಯಮಿಗಳು, ಅವರ ವ್ಯವಹಾರಗಳಲ್ಲಿ ಪುರುಸೊತ್ತಿಲ್ಲದಷ್ಟು ಕೆಲಸಗಳಿವೆ. ಅದರ ಜತೆ ಅವರು ಬಹಳ ಬೇಡಿಕೆಯಲ್ಲಿರುವ ಭಾಷಣಕಾರರು, ಶಾಲೆ-ಕಾಲೇಜುಗಳಲ್ಲಿ ವ್ಯಕ್ತಿತ್ವ ವಿಕಸನ ಶಿಬಿರಗಳನ್ನು ಆಗಾಗ ನಡೆಸಿಕೊಡುತ್ತಾರೆ. ನಾನು ವಿಜಯಕರ್ನಾಟಕ ಸಂಪಾದಕನಾಗಿದ್ದಾಗ 2007ರಲ್ಲಿ ಕಾಲೇಜಿನಲ್ಲಿ ಷಡಕ್ಷರಿಯವರ ವ್ಯಕ್ತಿತ್ವ ವಿಕಸನ ಕಾರ್ಯಕ್ರಮವೊಂದರಲ್ಲಿ ಪಾಲ್ಗೊಂಡಿದ್ದೆ. ಅವರಿಂದ ಈ ರೀತಿಯ ಅಂಕಣ ಬರೆಯಿಸಬೇಕೆಂದು ಅನಿಸಿತು. 'ಕ್ಷಣ ಹೊತ್ತು ಅಣಿಮುತ್ತು' ಎಂಬ ಹೆಸರಿಗೆ ಅನ್ವರ್ಥವಾಗಿ ಅಂಕಣ ಹೊರಹೊಮ್ಮಿತು. ಎಲ್ಲ ವಯಸ್ಸಿನ ಓದುಗರಿಗೆ ಇಷ್ಟವಾಗುವ ಈ ಅಂಕಣ ಪತ್ರಿಕೆಯ ಬಹುಮೆಚ್ಚಿನ, ಬಹುತೇಕ ಎಲ್ಲ ಓದುಗರು ಕಾತರಿಸುವ ಬರಹವಾಯಿತು. ಮುಂದೆ ನಾನು ಕನ್ನಡಪ್ರಭ ಸಂಪಾದಕನಾಗಿದ್ದಾಗ, ವಿಶ್ವವಾಣಿ ಪತ್ರಿಕೆ ಆರಂಭಿಸಿದಾಗಲೂ ಅವರು ನಿರಂತರವಾಗಿ ಅಂಕಣ ಬರೆದರು.

ಷಡಕ್ಷರಿಯವರದು 'ಕ್ಷಣ ಹೊತ್ತು ಅಣಿಮುತ್ತು' ಅಂಕಣದಲ್ಲಿ ಕಾಣಿಸಿಕೊಳ್ಳುವ ಅನೇಕ ಪ್ರೇರಣಾದಾಯಕ ವ್ಯಕ್ತಿಗಳ ಸಂಗಮ. ಅವರು ಬೇಸರದಲ್ಲಿದ್ದಿದ್ದನ್ನು, ನಕಾರಾತ್ಮಕವಾಗಿ ಪ್ರತಿಕ್ರಿಯಿಸಿದ್ದನ್ನು ನಾನಂತೂ ಕಂಡಿಲ್ಲ. ಷಡಕ್ಷರಿಯವರ ಅಂಕಣದಿಂದ ಅನೇಕರಿಗೆ ಸ್ಫೂರ್ತಿ ಸಿಕ್ಕಿದೆ. ವ್ಯವಹಾರದಲ್ಲಿ ಸೋತು ಎಲ್ಲ ಮುಗಿದೇ ಹೋಯಿತು ಎಂದು ಕೈಹೊತ್ತು ಕುಳಿತವರು ಈ ಬರಹ ಓದಿ ಎದ್ದು ನಿಂತಿದ್ದಾರೆ. ಆತ್ಮಹತ್ಯೆಗೆ ಪ್ರಯತ್ನಿಸಿದವರು ಹೊಸ ಭರವಸೆ ಪಡೆದಿದ್ದಾರೆ. ಪರೀಕ್ಷೆಯಲ್ಲಿ ಫೇಲಾದವರು, ಜೀವನದಲ್ಲಿ ಅವಮಾನ, ಹಿಂಸೆ ಅನುಭವಿಸಿ ಕುಗ್ಗಿದವರು, ಪದೇ ಪದೆ ಸೋಲನ್ನುಂಡವರು, ಬದುಕಲು ಸಾಧ್ಯವೇ ಇಲ್ಲವೆಂದು ನಿರ್ಧರಿಸಿದ ಹತಭಾಗ್ಯರು... ಷಡಕ್ಷರಿಯವರ ಬರಹ ಓದಿ ಆಶಾಕಿರಣ ಕಂಡವರಂತೆ, ಪುನಃ ನೆಮ್ಮದಿಯ ಬದುಕಿನತ್ತ ಹೆಜ್ಜೆ ಹಾಕುತ್ತಿದ್ದಾರೆ. ಅವರ ಬರಹ ಇಂಥ ಅನೇಕರಿಗೆ ಸಂಜೀವಿನಿಯಾಗಿದೆ. 'ಕ್ಷಣ ಹೊತ್ತು ಅಣಿಮುತ್ತು' ಭಾಗ-1ರಿಂದ ಭಾಗ-4 ರವರೆಗಿನ ಪುಸ್ತಕಗಳು ನಾಲ್ಕು ಲಕ್ಷಕ್ಕೂ ಹೆಚ್ಚು ಪ್ರತಿಗಳ ಮಾರಾಟವಾಗಿ ಕನ್ನಡದ ಮಟ್ಟಿಗೆ ದಾಖಲೆ ಸ್ಥಾಪಿಸಿವೆ. ಇದನ್ನು ಓದಿದ ಬಳಿಕ ನೀವು ಮೊದಲಿಂತಿರುವುದಿಲ್ಲ. ನಿಮ್ಮಲ್ಲೊಂದಷ್ಟು ಬದಲಾವಣೆ ಹಾಗೂ ಸುಧಾರಣೆ ಆಗಿರುತ್ತದೆ

ಮಾರ್ಗದರ್ಶಿಗಳೋ, ವೇದಾಂತಗಳೋ, ಸ್ನೇಹಿತರೋ?

ನೀವೂ ಆ ಮೂರು ಪದಗಳನ್ನು ಕೇಳಿರಬಹುದು! ಸಾಮಾನ್ಯವಾಗಿ ಯಾರಾದರೂ ಆಪ್ತರ ಬಗೆಮರು ಕೇಳಿರಬಹುದು ಸಾಮಾನ್ಯವಾಗಿ ಬಳಸಲಾಗುತ್ತದೆ. ಫ್ರೆಂಡ್, ಫಿಲಾಸಫರ್ ಮತ್ತು ಗೈಡ್ ಇವೇ ಆ ಮೂರು ಪದಗಳು. ಕಾಲೇಜಿನ ಪ್ರೊಫೆಸರೊಬ್ಬರು ಸಭೆ-ಸಮಾರಂಭಗಳಲ್ಲಿ ಪರಿಚಯ ಭಾಷಣ ಮಾಡುವಾಗ ಯಾವಾಗಲೂ ಅತಿಥಿಗಳನ್ನು 'ಫ್ರೆಂಡ್-ಫಿಲಾಸಫರ್-ಗೈಡ್' (ಸ್ನೇಹಿತ-ವೇದಾಂತಿ-ಮಾರ್ಗದರ್ಶಿ) ಎಂಬ ಪದಗಳನ್ನು ಬಳಸಿಯೇ ಪರಿಚಯಿಸುತ್ತಿದ್ದರು. ಒಮ್ಮೆ ವಿದ್ಯಾರ್ಥಿಗಳು ಆ ಮೂರು ಪದಗಳ ಅರ್ಥ ಮತ್ತು ಅವುಗಳಿಗಿರುವ ವ್ಯತ್ಯಾಸವೇನೆಂದು ಪ್ರೊಫೆಸರವರನ್ನು ಕೇಳಿದಾಗ, ಅವರು ಕೊಟ್ಟ ವಿವರಣೆ ಮತ್ತು ಹೇಳಿದ ಕುತೂಹಲಕಾರಿ ಕತೆ ಹೀಗಿದೆ.

ಯುವಕನೊಬ್ಬ ಒಮ್ಮೆ ಆಕಸ್ಮಿಕವಾಗಿ ಏಳೆಂಟಡಿ ಆಳವಾದ ಬಾವಿಯೊಳಕ್ಕೆ ಬಿದ್ದುಬಿಟ್ಟ. ಆತ ಮೇಲಕ್ಕೇರಿ ಬರಲು ಏನೇನೋ ಪ್ರಯತ್ನ ಮಾಡಿದ. ಸಾಧ್ಯವಾಗಲಿಲ್ಲ. ಆಗ 'ಕಾಪಾಡಿ ಕಾಪಾಡಿ' ಎಂದು ಕಿರುಚಿಕೊಳ್ಳತೊಡಗಿದ. ಬಹಳ ಹೊತ್ತಾದ ನಂತರ ಒಬ್ಬಾತ ಬಂದು ಬಗ್ಗಿ ನೋಡಿ ಏನಾಯಿತೆಂದು ವಿಚಾರಿಸಿ 'ಬಾವಿ ಹೆಚ್ಚು ಆಳವಿಲ್ಲ. ಮೇಲಕ್ಕೆ ಜಿಗಿಯಲು ಪ್ರಯತ್ನಿಸು ಅಥವಾ ಬಾವಿಯ ಗೋಡೆಗಳನ್ನು ಹಿಡಿದುಕೊಂಡು ಮೇಲಕ್ಕೇರಲು ಪ್ರಯತ್ನಿಸು.' ಎಂದು ಏನೇನೋ ಸೂಚನೆಗಳನ್ನು ಕೊಟ್ಟ. ಯುವಕ ಅದೆಲ್ಲವನ್ನೂ ಪ್ರಯತ್ನಿಸಿ ಸೋತಿದ್ದೇನೆ. 'ನೀವೇ ನನ್ನನ್ನು ಮೇಲಕ್ಕೆತ್ತಿ' ಎಂದಾಗ ಆತ 'ನಾನೊಬ್ಬ ಗೈಡ್! (ಮಾರ್ಗದರ್ಶಿ) ಮಾರ್ಗಗಳನ್ನು ತೋರಿಸುತ್ತೇನೆಯೇ ಹೊರತು ನಾನೇನೂ ಮಾಡಲಾರೆ' ಎಂದು ಹೇಳಿ ಹೊರಟುಹೋದನಂತೆ.

ಯುವಕ ಮತ್ತೆ ಕಿರುಚಾಟವನ್ನು ಪ್ರಾರಂಭಿಸಿದ. ಮತ್ತೊಬ್ಬಾತ ಬಾವಿಯೊಳಕ್ಕೆ ಇಣುಕಿ ಯುವಕನ ಪರಿಸ್ಥಿತಿಯನ್ನು 'ನೋಡಿ ನಿನ್ನ ಗ್ರಹಚಾರ ಸರಿಯಿಲ್ಲ. ಯಾವುದೋ ಜನ್ಮದಲ್ಲಿ ಮಾಡಿದ ಪಾಪದ ಫಲವಿರಬೇಕು. ಚಿಂತಿಸಬೇಡ! ನೀನು ಮೇಲಕ್ಕೇರಿ ಬರಲಾಗದೆ ಅಲ್ಲೇ ಸತ್ತರೆ ನಿನ್ನ ಹಣೆಯಲ್ಲಿ

ಬರೆದಿದ್ದಂತೆ ಆಗುತ್ತದೆ. ಯಾರಿಗೆ ಗೊತ್ತು? ನಿನಗೆ ಸ್ವರ್ಗಲೋಕವೇ ಪ್ರಾಪ್ತಿಯಾಗಬಹುದು!' ಎಂದೆಲ್ಲ ಹೇಳಿದರು. ಯುವಕ 'ನನಗೆ ಸಹಾಯ ಮಾಡುವುದನ್ನು ಬಿಟ್ಟು ಇಷ್ಟೆಲ್ಲ ಹೇಳುವ ನೀವು ಯಾರು?' ಎಂದ. ಅವರು ನಾನೊಬ್ಬ ಫಿಲಾಸಫರ್! ಎಂದು ಹೇಳಿ ಹೊರಟುಹೋದರಂತೆ.

ಯುವಕ ಕಿರುಚಾಟವನ್ನು ಪುನರಾರಂಭಿಸಿದ. ಕೊನೆಗೆ ಮೂರನೆಯ ವ್ಯಕ್ತಿಯೊಬ್ಬ ಬಾವಿಯೊಳಕ್ಕೆ ಇಣುಕಿನೋಡಿದ. ತಕ್ಷಣ ಬಾವಿಯೊಳಕ್ಕೆ ಧುಮುಕಿಬಿಟ್ಟ. ಯುವಕನನ್ನು ಮೇಲಕ್ಕೆತ್ತಿ ತನ್ನ ಭುಜದ ಮೇಲೆ ನಿಲ್ಲಿಸಿಕೊಂಡ. ಈಗ ಯುವಕನಿಗೆ ಬಾವಿಯ ಕಟ್ಟೆ ಕೈಗೆಟುಕುತ್ತಿತ್ತು. ಆತ ಕಷ್ಟಪಟ್ಟು ಮೇಲಕ್ಕೇರಿ ಬಂದ. ಕೊಂಚ ಸುಧಾರಿಸಿಕೊಂಡು ನಂತರ ಎಚ್ಚರಿಕೆಯಿಂದ ಬಗ್ಗಿ ಬಾವಿಯೊಳಗಿದ್ದ ವ್ಯಕ್ತಿಯತ್ತ ಕೈಚಾಚಿ ಆತನನ್ನೂ ಮೇಲಕ್ಕೆತ್ತಿದ. ಆತನೂ ಸುರಕ್ಷಿತವಾಗಿ ಮೇಲಕ್ಕೆ ಬಂದ ನಂತರ ಗಮನಿಸಿ ನೋಡಿದರೆ ಆತ ಬೇರಾರೂ ಆಗಿರದೆ ಯುವಕನ ಹತ್ತಿರದ ಗೆಳೆಯನಾಗಿದ್ದ!

ಈ ಕತೆಯನ್ನು ಹೇಳಿದ ಪ್ರೊಫೆಸರ್ ಅವರು 'ಫ್ರೆಂಡ್-ಫಿಲಾಸಫರ್-ಗೈಡ್ ಎನ್ನುವ ಮಾತು ಬಳಕೆಯಲ್ಲಿದೆ. ಅಂದರೆ ಯಾರಾದರೂ ಕಷ್ಟಕ್ಕೆ ಸಿಕ್ಕಿಕೊಂಡಾಗ, ದೂರದಲ್ಲೇ ನಿಂತು ಪಾರಾಗುವ ಮಾರ್ಗಗಳ ಬಗ್ಗೆ ಹೇಳುವವರು ಕೇವಲ ಗೈಡ್ (ಮಾರ್ಗದರ್ಶಿ) ಆಗಿರಬಹುದು! ಗ್ರಹಚಾರ, ಹಣೆಯ ಬರಹ, ದೈವೇಚ್ಛೆ ಮೇಲಣ ಲೋಕಗಳ ಬಗ್ಗೆ ಮಾತನಾಡಿ ಹೋಗುವವರು ಫಿಲಾಸಫರ್ (ವೇದಾಂತಿ) ಇರಬಹುದು! ಆದರೆ ತಮಗಾಗುವ ಅಪಾಯವನ್ನೂ ಲೆಕ್ಕಿಸದೆ ಒಳಕ್ಕೆ ನುಗ್ಗಿ ಕಷ್ಟದಲ್ಲಿರುವವರನ್ನು ಪಾರು ಮಾಡಲು ಯತ್ನಿಸುವವರು ನಿಜವಾದ ಸ್ನೇಹಿತರು. ಅವರು ಕೇವಲ ಮಾರ್ಗದರ್ಶಿಗಳಲ್ಲ, ಅಥವಾ ಕೇವಲ ಒಣ ವೇದಾಂತಿಗಳೂ ಅಲ್ಲ. ಅವರು ನಿಜವಾದ ಸ್ನೇಹಿತರು' ಎಂದು ಮಾತು ಮುಗಿಸಿದರು.

ಈಗ ನಾವು ಯೋಚಿಸಬಹುದು! ನಾವು ಯಾರು? ಮಾರ್ಗದರ್ಶಿಗಳೋ? ವೇದಾಂತಿಗಳೋ? ಅಥವಾ ಸ್ನೇಹಿತರೋ?

ಷಡಕ್ಷರಿಯವರ ಕ್ಷಣಹೊತ್ತು ಆಣಿಮುತ್ತು ಭಾಗ- 13 ರಲ್ಲಿ ಪ್ರಕಟವಾದ ಅಂಕಣ ಬರಹ

ಲಕ್ಷ್ಮೀ ಒಲಿದ ನಂತರ ಸರಸ್ವತಿಯೂ ಒಲಿದು ಬಂದಳು

ಪ್ರತಾಪ್ ಸಿಂಹ, ಮಾಜಿ ಸಂಸದ



ವಿಜಯ ಕರ್ನಾಟಕ ಪತ್ರಿಕೆಯ ಸಂಪಾದಕರಾಗಿ ವಿಶ್ವೇಶ್ವರ ಭಟ್ಟರು ಜವಾಬ್ದಾರಿ ವಹಿಸಿಕೊಂಡ ನಂತರ ಪತ್ರಿಕೆಯ ವಿಶ್ವಾಸಾರ್ಹತೆ ಹಾಗೂ ಪುಟಗಳ ಸಂಖ್ಯೆ ತ್ವರಿತಗತಿಯಲ್ಲಿ ಹೆಚ್ಚು ಮಾಡಬೇಕಾದ ಸಂದಿಗ್ಧ ಪರಿಸ್ಥಿತಿ ಇತ್ತು. ಆ ಸಂದರ್ಭದಲ್ಲಿ ಹೊಸ ಹೊಸ ಅಂಕಣಕಾರರು ಹೊಸ ಹೊಸ ವಿಚಾರವನ್ನು ಪರಿಚಯಿಸುತ್ತಿದ್ದರು.

ದೆಹಲಿ ಮೂಲಕ ವೀರ್ ಸಾಂಘ್ವಿ, ಚಂದನ್ ಮಿಶ್ರಾ, ಪುಷ್ಪಾ ಗಿರಿಮಾಜಿ, ಕಾಂಚನ್ ಗುಪ್ತಾ, ಈ ರೀತಿಯ ಕನ್ನಡಕ್ಕೆ ಪರಿಚಯವಿಲ್ಲದ ಅಂಕಣಕಾರರ ಲೇಖನಗಳನ್ನು ಪ್ರಕಟಿಸಲು ಆರಂಭಿಸಿದರು. ಈ ಅಂಕಣಗಳು ಓದುಗರಲ್ಲಿ ಹೊಸ ಉತ್ಸಾಹ, ಆಸಕ್ತಿ ಹಾಗೂ ಕುತೂಹಲ ಹುಟ್ಟಿಸಿದವು. ಅಲ್ಲದೆ ಪತ್ರಿಕೆಗೆ ಒಂದು ವಿಭಿನ್ನ ಛಾಪು ಸಿಕ್ಕಿತ್ತು. ಚಿಂತನೆಗೆ ಹಚ್ಚುವ, ವಿಮರ್ಶೆಗೆ ಕಾರಣವಾಗುವ ಇಂತಹ ಲೇಖನಗಳು ಬಂದರೂ, ಜನರನ್ನು ಒಳಿತು ಕೆಡುಕುಗಳ ವಿಚಾರದಲ್ಲಿ ಜಾಗೃತಿ ಮೂಡಿಸುವ , ಪ್ರೇರೇಪಿಸುವ ಶಕ್ತಿಯ ಲೇಖನ ಒಂದರ ಕೊರತೆ ಎದ್ದು ಕಾಣುತ್ತಿತ್ತು.

ಅದನ್ನು ನೀಗಿಸಲೆಂದೇ ಬಂದವರು ಎಸ್. ಷಡಕ್ಷರಿ ಅವರು. ವಿಶ್ವೇಶ್ವರ ಭಟ್ಟರು, ಷಡಕ್ಷರಿ ಅವರಲ್ಲಿ ಒಬ್ಬ ಅದ್ಭುತ ಬರಹಗಾರರಿದ್ದಾರೆ. ಅವರಲ್ಲಿ ಜನರನ್ನು ಪ್ರೇರೇಪಿಸುವ ಶಕ್ತಿ ಎಂಬುದನ್ನು ಬೆಳಕಿಗೆ ತಂದರು. ಷಡಕ್ಷರಿ ಅವರ ಅಂಕಣ ಸೋಮವಾರದಿಂದ ಶುಕ್ರವಾದವರೆಗೂ ಐದು ದಿನಗಳ ಕಾಲ ಸತತವಾಗಿ ಪ್ರಕಟವಾಗುತ್ತಾ ಹೋಯಿತು. ಒಂದಕ್ಕಿಂತ ಒಂದು ಅದ್ಭುತ ಎನ್ನುವಂತ ನಿದರ್ಶನ, ನೀತಿ ಪಾಠ ಸಾರುವ ಕತೆಗಳ ಮೂಲಕ ಷಡಕ್ಷರಿ ಅವರು ಕೆಲವೇ ವಾರಗಳಲ್ಲಿ ಓದುಗರ ಗಮನ ಸೆಳೆದರು. ಒಬ್ಬ ವೃತ್ತಿಪರ ಅಂಕಣಕಾರನಿಗೂ ಒಂದು ಚೌಕಟ್ಟಿನೊಳಗೆ ಫಿಟ್ ಆಗುವಂತಹ ಒಂದು ಪದವೂ ಆ ಚೌಕಟ್ಟಿನ ಆಚೆಗೆ ಹೋಗದಂತೆ ಅಳೆದು ತೂಗಿ ಬರೆಯುವುದು ಕಷ್ಟವಾಗುತ್ತದೆ. ಆದರೆ ಷಡಕ್ಷರಿ ಅವರ ಅಂಕಣಗಳಲ್ಲಿ ಒಂದು ಪದವನ್ನೂ ಕತ್ತರಿಸುವಂತಹ ಅಗತ್ಯತೆ ಆ ಪುಟದ ವಿನ್ಯಾಸಕಾರನೂ ಆಗಿ ಕೆಲಸ ಮಾಡುತ್ತಿದ್ದ ನನಗೆ ಯಾವತ್ತಿಗೂ ಎದುರಾಗಲಿಲ್ಲ.

ಬಹುಶ: ವಿಜಯ ಕರ್ನಾಟಕದ 'ಕ್ಷಣ ಹೊತ್ತು-ಅಣಿ ಮುತ್ತು'ಅಂಕಣದ ಮೊದಲ ಓದುಗ ನಾನೇ ಆಗಿರುತ್ತಿದ್ದೆ. ನನ್ನ ಸಂಪಾದಕರಾಗಿದ್ದ ವಿಶ್ವೇಶ್ವರ ಭಟ್ಟರು ಎರಡನೇ ಓದುಗರಾಗಿದ್ದರು. ಸ್ವತ ಅಂಕಣಕಾರರಾಗಿದ್ದ ಭಟ್ಟರು ಹಾಗೂ ನನಗೂ ಅಚ್ಚುಮೆಚ್ಚಿನ ಅಂಕಣಕಾರ ಷಡಕ್ಷರಿ ಅವರಾಗಿದ್ದರು.

ತುಂಬಿದ ಕೊಡ ತುಳುಕುವುದಿಲ್ಲ ಎನ್ನುವ ನಾಣ್ಣುಡಿಗೆ ಷಡಕ್ಷರಿ ಅವರ ವಿಚಾರದಲ್ಲಿ ಹೇಳಬೇಕೆಂದರೆ ಅವರು ಆಸ್ತಿ-ಅಂತಸ್ತಿನಲ್ಲೂ, ನಡತೆ- ವ್ಯಕ್ತಿತ್ವದಲ್ಲೂ ತುಂಬಿದ ಕೊಡವಾಗಿದ್ದರು. ಬಹುಶ: ಅವರ ಇಂತಹ ಗುಣದಿಂದಲೇ ಅವರಿಗೆ ಲಕ್ಷ್ಮಿ ಒಲಿದ ನಂತರ ಎಲ್ಲರಿಗೂ ಅಹಂಕಾರ ಬಂದರೆ, ಇವರಿಗೆ ಅಹಂಕಾರದ ಬದಲು ಸರಸ್ವತಿ ಒಲಿದು ಬಂದಳು. ನಾನು ಒಬ್ಬ ಓದುಗ ಅಭಿಮಾನಿಯಾಗಿ ಷಡಕ್ಷರಿ ಅವರು ಶತಾಯುಷಿಗಳಾಗಿ ಬದುಕಲಿ, ನಮಗೆ ಹೀಗೆ ಮೇಲ್ಪಂಕ್ತಿ ಹಾಕಿ ಕೊಡುತ್ತಿರಲಿ ಎಂದು ತಾಯಿ ಚಾಮುಂಡೇಶ್ವರಿಯಲ್ಲಿ ಕಿರಿಯ ಸಹೋದರನಾಗಿ ಹಾರೈಸುತ್ತೇನೆ.

ಷಡಾಕ್ಷರಿ ಅಪರೂಪದ ತತ್ವಜ್ಞಾನಿ

-ಡಾ. ಸಿದ್ಧಲಿಂಗಯ್ಯ, ಪ್ರಸಿದ್ಧ ಕವಿಗಳು

ಪ್ರಸಿದ್ಧ ಉದ್ಯಮಿ ಷಡಕ್ಷರಿಯವರು ಸುಪ್ರಸಿದ್ಧ ಅಂಕಣಕಾರರು ಹೌದು. ಅವರ 'ಕ್ಷಣ ಹೊತ್ತು ಆಣಿ ಮುತ್ತು' ಅಂಕಣವನ್ನು ಓದಿ ಮೆಚ್ಚಿಕೊಳ್ಳದ ಕನ್ನಡಿಗರಿಲ್ಲ! ಅರಿವಿನ ಬೆಳಕನ್ನು ಚೆಲ್ಲುವ ಅವರ ಬರವಣಿಗೆಯಿಂದ ಅನೇಕರು ತಮ್ಮ ಜೀವನಕ್ರಮವನ್ನು ಬದಲಿಸಿಕೊಳ್ಳಲು, ಆ ಮೂಲಕ ಹೊಸ ಮನುಷ್ಯರಾಗಲು ಸಹಾಯ ಮಾಡಿದೆ. ಹಲವರ ಬದುಕಿಗೆ ಹೊಸ ಚೈತನ್ಯ ತುಂಬಿದೆ. ಅವರ ಬರವಣಿಗೆಯಲ್ಲಿರುವ ಆಪ್ತತೆ, ಮತ್ತು ಸರಳತೆ ಓದುಗರನ್ನು ಸೆರೆ ಹಿಡಿಯುತ್ತದೆ. ಅವರ ಅಂಕಣ ಬರಹಗಳ ಸಂಗ್ರಹ 'ಕ್ಷಣ ಹೊತ್ತು ಆಣಿ ಮುತ್ತು' ಹಲವು ಭಾಗಗಳಲ್ಲಿ ಪ್ರಕಟವಾಗಿ ಅನೇಕ ಮುದ್ರಣಗಳನ್ನು ಕಂಡಿದೆ. ಲಕ್ಷಾಂತರ ಪ್ರತಿಗಳು ಮಾರಾಟವಾಗಿ ಅವರ ಕೃತಿಗಳು ಕನ್ನಡ ಪುಸ್ತಕೋದ್ಯಮದಲ್ಲಿ ದಾಖಲೆಯನ್ನು ನಿರ್ಮಿಸಿದೆ. ಸಾಧಕರ ಸಾಧನೆಯ ಸಾರವನ್ನು ಸಂಗ್ರಹರೂಪದಲ್ಲಿ ಸ್ವಾರಸ್ಯಕರವಾಗಿ ಹೇಳುವ ಕಲೆ ಷಡಕ್ಷರಿಯವರಿಗೆ ಸಿದ್ಧಿಸಿದೆ. ಧೀಮಂತ ಚೇತನರ ಜೀವನದಲ್ಲಿ ನಡೆದ ಘಟನಾವಳಿಗಳನ್ನು ತಮ್ಮ ಬರವಣಿಗೆಯಲ್ಲಿರಿಸಿ, ಕನ್ನಡಿಗರಿಗೆ ಒಪ್ಪಿಸುತ್ತಿರುವ ಇವರಿಗೆ ನಾಡ ಜನತೆಯು ಋಣಿಯಾಗಿದೆ. ಷಡಕ್ಷರಿಯವರು ಅಪರೂಪದ ತತ್ವಜ್ಞಾನಿ, ಸಭಿಕರ ಮನಸ್ಸು ಮುದಗೊಳ್ಳುವಂತೆ ಮಾತನಾಡಬಲ್ಲ ಶ್ರೇಷ್ಠ ವಾಗ್ಮಿ. ಅವರ ಬರವಣಿಗೆ ಓದಿಸಿಕೊಂಡು ಹೋಗುವ ಶ್ರೇಷ್ಠ ಗುಣವನ್ನು ಹೊಂದಿದೆ. ಸದಾ ಹಸನ್ಮುಖಿಯಾಗಿ ಸಂತೋಷದಿಂದಿರುವ ಇವರು ತಮ್ಮ ಸುತ್ತಲಿನ ಪರಿಸರವನ್ನು ಸಂತೋಷಮಯ ಗೊಳಿಸಬಲ್ಲರು. ಶ್ರೀಮಂತಿಕೆ ಮತ್ತು ಹೃದಯ ಶ್ರೀಮಂತಿಕೆಯ ಸಂಗಮದಂತಿರುವ ಷಡಕ್ಷರಿ ಯವರು ನಾಡ ಜನತೆಗೆ ಒಬ್ಬ ಗುರುವಿನ ಸ್ಥಾನದಲ್ಲಿದ್ದಾರೆ. ನಾನು ಅಪಾರವಾಗಿ ಗೌರವಿಸುತ್ತಿದ್ದ ಶ್ರೀರಾಮಕೃಷ್ಣ ಹೆಗಡೆ ಅವರಿಗೆ ಷಡಕ್ಷರಿಯು ಅತ್ಯಾಪ್ತರಾಗಿದ್ದರು. ಇವರ ಬರವಣಿಗೆ ಹೀಗೆಯೇ ಮುಂದುವರಿದು ಕನ್ನಡ ಜನತೆಯನ್ನು ಬೆರಗುಗೊಳಿಸಲಿ, ಬೆಳಗಲೆಂದು ಹಾರೈಸುತ್ತೇನೆ.

(13ನೇ ಸಂಪುಟದಲ್ಲಿ ದಿವಂಗತ ಡಾ. ಸಿದ್ದಲಿಂಗಯ್ಯ ಶುಭ ಹಾರೈಕೆ)

ಕತೆ ಹೇಳುವೆ, ಆಣಿ ಮುತ್ತಿನಾ ಕತೆ ಹೇಳುವೆ!

ಕ್ಷಣ ಹೊತ್ತು ಆಣಿ ಮುತ್ತಿನ ಕತೆ ಹೇಳುವೆ. ಕೆಲವು ದಿನಗಳ ಹಿಂದೆ ವಿಜಯ ಕರ್ನಾಟಕದ ಪ್ರಧಾನ ಸಂಪಾದಕರಿಂದ ದೂರವಾಣಿ ಕರೆಬಂತು. ಒಂದು ಹೊಸ ಅಂಕಣಕ್ಕೆ ಲೇಖನಮಾಲೆ ಬರೆಯುವಂತೆ ತಿಳಿಸಿದರು. ನಾನು 'ರಾಂಗ್ ನಂಬರ್ ಸಾರ್! ಯಾರಿಗೋ ಮಾಡುವ ಕರೆಯನ್ನು ನನಗೆ ಮಾಡಿದ್ದೀರಿ' ಎಂದಾಗ, ಅವರು 'ನಾನು ನಿಮಗೇ ಫೋನ್ ಮಾಡಿದ್ದು ನೀವು ಬರೆಯಿರಿ' ಎಂದರು. ನಾನು 'ಹೋಟೇಲ್ ಉದ್ಯಮಿ! ಯಾವುದರ ಬಗ್ಗೆ ಬರೆಯಲಿ ಹೊಸ ರುಚಿ? ಕೊಠಡಿಗಳ ಶುಚಿತ್ವ? ಹೋಟೆಲ್ ಉದ್ಯಮದ ಸಂಕಷ್ಟಗಳ ಬಗ್ಗೆಯೋ?' ಎಂದಾಗ, ಅವರು 'ನಿಮ್ಮಿಷ್ಟ ಬಂದ ವಿಷಯದ ಬಗ್ಗೆ ಬರೆಯಿರಿ' ಎಂದರು. ನಾನು 'ಹಾಗಾದರೆ ಬದುಕಿನಲ್ಲಿ ಸಕಾರಾತ್ಮಕ ಮನೋಭಾವ ಬೆಳೆಸಿಕೊಳ್ಳುವುದು, ತೊಂದರೆ ತಾಪತ್ರಗಳನ್ನು ಎದುರಿಸಿ ನಿಲ್ಲುವುದು, ಕನಸುಗಳನ್ನು ನನಸಾಗಿಸಿಕೊಳ್ಳುವುದು, ಗುರಿ ನಿಶ್ಚಯ ಮತ್ತು ಸಾಧನೆ ಮುಂತಾದವುಗಳ ಬಗ್ಗೆ ಬರೆಯುತ್ತೇನೆ' ಎಂದಾಗ, ಅವರು ನಂಬಲಿಲ್ಲ. ನಿಜ ಹೇಳಬೇಕೆಂದರೆ ನನಗೂ ನಂಬಿಕೆಯಿರಲಿಲ್ಲ. ಏಕೆಂದರೆ ನನಗೆ ಯಾವಾಗಲೋ ಒಂದೆರಡು ಲೇಖನಗಳು ಬರೆದ ಅನುಭವವಿತ್ತೇ ಹೊರತು ಲೇಖನಮಾಲೆ ಬರೆಯುವಷ್ಟು ಅನುಭವವಿರಲಿಲ್ಲ. ಎರಡನೆಯದಾಗಿ ನನ್ನ ಕೈಬರಹ ಅಷ್ಟೇನೂ ಚೆನ್ನಾಗಿಲ್ಲ (ಹಣೆಬರಹ ಚೆನ್ನಾಗಿದೆ!) ಕಂಪ್ಯೂಟರ್ ಪರಿಜ್ಞಾನವಿಲ್ಲ (ಕಂಪ್ಯೂಟರ್ ವಿಂಡೋ ತೆಗೆದಾಗ ಮೌಸ್ ಏಕೆ ಓಡಿಹೋಗುವುದಿಲ್ಲ ಎಂಬುದು ಗೊತ್ತಿರಲಿಲ್ಲ). ಆದರೂ ಧೈರ್ಯವಾಗಿ ಕೆಲಸವನ್ನು ಕೈಗೆತ್ತಿಕೊಂಡೆ. ಹಿಂದೆ ಕೇಳಿದ್ದ ಉಪನ್ಯಾಸಗಳ ಮುಖ್ಯಾಂಶಗಳನ್ನು ಓದಿದ್ದ ಹಾಗು ಕೇಳಿದ್ದ ಘಟನೆಗಳನ್ನೂ ಪಾಲ್ಗೊಂಡಿದ್ದ ವ್ಯಕ್ತಿತ್ವ ವಿಕಸನ ತರಗತಿಗಳನ್ನು ಆಧಾರವಾಗಿಟ್ಟುಕೊಂಡು ಬರೆಯಲಾರಂಭಿಸಿದೆ.

ಲೇಖನಗಳ ಸಂಖ್ಯೆ ಇಂದು ನೂರಾನಲವತ್ತು ಮುಟ್ಟಿದೆ. ಬರೆಯಲು ಸಾಮಗ್ರಿಯಿಲ್ಲ, ಸಮಯವಿಲ್ಲ, ಸ್ಫೂರ್ತಿಯಿಲ್ಲ ಎಂಬ ಕಾರಣಗಳನ್ನು ಮುಂದಿಡದೆ ದೃಢಸಂಕಲ್ಪ ಮತ್ತು ಪ್ರೋತ್ಸಾಹವಿದ್ದರೆ ಏನು ಬೇಕಾದರೂ ಸಾಧಿಸಬಹುದೆಂಬುದಕ್ಕೆ ನನ್ನಂತಹವನೂ ನೂರು ಲೇಖನಗಳನ್ನು ಬರೆಯಲು ಸಾಧ್ಯವಾಯಿತೆಂಬುದು ಒಳ್ಳೆಯ ಉದಾಹರಣೆಯಲ್ಲವೇ?

ಈಗ ಮೊದಲನೆಯ ಎಪ್ಪತ್ತೈದು ಲೇಖನಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಲಾಗುತ್ತಿದೆ. ಈ ಪುಸ್ತಕಕ್ಕೆ ಸದಾಶಯಗಳನ್ನಿತ್ತು ಆಶೀರ್ವದಿಸಿದ ಪರಮ ಪೂಜ್ಯ ಶ್ರೀ ಶ್ರೀ ಶಿವರಾತ್ರೀ ದೇಶೀಕೇಂದ್ರ, ಮಹಾಸ್ವಾಮಿಗಳಿಗೆ ಮತ್ತು ಪರಮ ಪೂಜ್ಯ, ಸ್ವಾಮಿ ಬ್ರಹ್ಮಾನಂದಜಿಯವರಿಗೆ ಭಕ್ತಿಪೂರ್ವಕ ನಮಸ್ಕಾರಗಳು. ನನ್ನಂಥ ಕಿರಿಯ ಲೇಖಕನ ಮನವಿಯನ್ನು ಮನ್ನಿಸಿ ಮುನ್ನುಡಿಯನ್ನು ಬರೆದುಕೊಟ್ಟು ಪ್ರೋತ್ಸಾಹಿಸಿದ ನಾಡಿನ ಹೆಸರಾಂತ ಕಾದಂಬರಿಕಾರರು, ಹಿರಿಯರೂ ಆದ ಎಸ್.ಎಲ್. ಭೈರಪ್ಪನವರಿಗೆ ಅನಂತಾನಂತ ವಂದನೆಗಳು. ಹಾಗೆಯೇ ಸಂದೇಶಗಳನ್ನು ಅನಿಸಿಕೆಗಳನ್ನು ತಿಳಿಸಿದ ಸನ್ಮಾನ್ಯರಾದ ಗೊ.ರು. ಚನ್ನಬಸಪ್ಪ, ಬಿ.ಎಲ್. ಶಂಕರ್, ಎಂ. ಆರ್. ಶ್ರೀನಿವಾಸ ಮೂರ್ತಿ, ವಿ.ಪಿ. ಬಳಿಗಾರ್, ಡಾ. ಸಿ. ಸೋಮಶೇಖರ್ ಮತ್ತು ಅನೇಕ ಹಿರಿಯರುಗಳಿಗೆ ಅನಂತಾನಂತ ವಂದನೆಗಳು.

ಲೇಖನಗಳನ್ನು ಬರೆಯಲು ಪ್ರೇರೇಪಿಸಿದ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ಟರಿಗೆ ಧನ್ಯವಾದಗಳು. ಹಾಗೆಯೇ ವಿಜಯ ಕರ್ನಾಟಕ ಬಳಗದ ಕಟ್ಟೆಗುರುರಾಜ, ಪ್ರತಾಪ್ ಸಿಂಹ, ಪಿ. ತ್ಯಾಗರಾಜ ಮತ್ತು ಎ.ಆರ್. ಮಣಿಕಾಂತ, ಕೆ. ವೇಣುಗೋಪಾಲ್ ಮತ್ತು ನಾಗಲಿಂಗ ಅವರೆಲ್ಲರಿಗೂ ನಾನು ಅಭಾರಿ. ಅಂಕಣಕ್ಕೆ ನಾಮಕರಣ ಮಾಡಿದ ಗೆಳೆಯ ಪ್ರೊ. ಎಂ. ಕೃಷ್ಣಗೌಡರಿಗೆ ವಂದನೆಗಳು.

ಕೇವಲ ಎಸ್.ಎಂ.ಎಸ್ ಮಾತ್ರ ಋಎಂಬ ಅರಿಕೆಯೊಂದಿಗೆ ದೂರವಾಣಿ ಸಂಖ್ಯೆ ಪ್ರಕಟಿಸಿದ ಒಂದೇ ತಿಂಗಳಲ್ಲಿ ನಾಲ್ಕು ಸಾವಿರಕ್ಕೂ ಹೆಚ್ಚು ಎಸ್ ಎಮ್ಎಸ್‌ಗಳನ್ನು ಕಳುಹಿಸಿದ ಸಜ್ಜನರೆಲ್ಲರಿಗೂ ಕೃತಜ್ಞತೆಗಳು. (ಎಲ್ಲರಿಗೂ ಉತ್ತರಿಸಲು ಅಸಾಧ್ಯವಾದಾಗ ಸಂಖ್ಯೆಯ ಪ್ರಕಟಣೆ ನಿಲ್ಲಿಸಬೇಕಾಯಿತು.)

ಲೇಖನಗಳನ್ನು ಪ್ರಕಟಣೆಗೆ ಕಳುಹಿಸುವ ಮುಂಚೆ ಮನೆಯವರ ಮುಂದೆ ಓದಿ ಹೇಳುವ ಅಭ್ಯಾಸ. ನನ್ನ ಓದುವಿಕೆಯನ್ನು ಸಹಿಸಿಕೊಂಡ ನನ್ನ ಮಡದಿ ಮಣಿ, ಮಗ ವೀರೇಂದ್ರ, ಸೊಸೆ ರೂಪಾ, ಮೊಮ್ಮಗಳು ಧಿಯಾ, ಮಗಳು ಅರುಣ ಮತ್ತು ಅಳಿಯ ಸತೀಶ್ ರವರ ಪ್ರೀತಿ ಪ್ರೋತ್ಸಾಹಗಳಿಗೆ ನಾನು ಚಿರಋಣಿ. ಲೇಖನಗಳನ್ನು ಲ್ಯಾಪ್ಟಾಪ್ ಗಣಕಯಂತ್ರದಲ್ಲಿ ಸಿದ್ಧಪಡಿಸಲು ಸಹಕರಿಸಿದ ಸಹೋದ್ಯೋಗಿಗಳಾದ ಸುನೀತಾ ವೆಂಕಟೇಶ್, ಶ್ರೀಧರ ಡಮೂರ್ತಿ ಹಾಗು ಶಾರದಾ ಕಾಂಚನ್ ಅವರ ಉಪಕಾರವನ್ನು ನಾನು ಹೇಗೆ ಮರೆಯಲಿ.

ಲೇಖನಗಳಲ್ಲಿ ಮೂಡಿ ಬಂದ ಅನೇಕ ಕತೆಗಳಿಗೆ, ಘಟನೆಗಳಿಗೆ ಸ್ಫೂರ್ತಿ ಪೂಜ್ಯರುಗಳಾದ ಭಗವಾನ್ ರಮಣ ಮಹರ್ಷಿಗಳು, ಸ್ವಾಮಿ ವಿವೇಕಾನಂದರು, ಸ್ವಾಮಿ ಚಿನ್ಮಯಾನಂದರು, ಸಿದ್ಧೇಶ್ವರ ಸ್ವಾಮಿಗಳು, ಸ್ವಾಮಿ ಬ್ರಹ್ಮಾನಂದಜಿಯವರು, ದಾದಾ ವಾಸ್ವಾನಿ ಯವರು, ಹೆದ್ವಿಗ್ ಲೂಯಿಸ್ ಮುಂತಾದ ಅನೇಕಾನೇಕ 'ಎಷ್ಟೆಷ್ಟೋ ಮಹಾನುಭಾವರುಗಳು, ಎಲ್ಲರಿಗೂ ವಂದನೆಗಳು'. ತಾಳ್ಮೆಯಿಂದ ಓದಿ, ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಪ್ರೋತ್ಸಾಹಿಸಿದ ಓದುಗ ಬಂಧುಗಳು ನಿಮಗೆ ಕೋಟಿಕೋಟಿ ನಮಸ್ಕಾರಗಳು.

ಅತ್ಯಲ್ಪ ಕಾಲದಲ್ಲಿ ಪುಸ್ತಕವನ್ನು ಮುದ್ರಿಸಿಕೊಟ್ಟ ಲಕ್ಷ್ಮಿ ಮುದ್ರಣಾಲಯದ ಅಶೋಕ್ ಕುಮಾರ್ ಮತ್ತು ಕೃಷ್ಣಮೂರ್ತಿ ಅವರಿಗೆ ವಂದನೆಗಳು.

-ಎಸ್. ಷಡಕ್ಷರಿ
(ಮೊದಲ ಆವೃತ್ತಿಯಲ್ಲಿ ಷಡಕ್ಷರಿ ಅವರ ಅರಿಕೆ.)

76ನೇ ಹುಟ್ಟಹಬ್ಬದ ಶುಭಾಷಯಗಳು

ಕನ್ನಡದ ಖ್ಯಾತ ಅಂಕಣಕಾರರು, ಕ್ಷಣಹೊತ್ತು ಆಣಿ ಮುತ್ತು ಕೃತಿಯ ಕರ್ತ್ರ, ಹೋಟೆಲ್ ಉದ್ಯಮಿ, ಶಿಕ್ಷಣ ತಜ್ಞರು, ಸಮಾಜ ಸೇವಕರು, ಸದಾ ಹಸನ್ಮುಖಿ, ಹಾಸ್ಯಪ್ರಿಯರು, ಹಂಪಿ ವಿವಿಯ ನಾಡೋಜ ಪುರಸ್ಕೃತರು, ಆಕರ್ಷಕ ಹಾಗೂ ಸ್ಫೂರ್ತಿದಾಯಕ ವ್ಯಕತ್ವವುಳ್ಳ, ಸಹೃದಯಿ, ಎಸ್. ಕ್ಷಡಕ್ಷರಿಯವರಿಗೆ 76ನೇ ವರ್ಷದ ಹುಟ್ಟಹಬ್ಬದ ಹಾರ್ದಿಕ ಶುಭಾ ಹಾರೈಕೆಗಳು, ನಿಮ್ಮ ಸೇವೆ ನಿರಂತರ ಸಮಾಜ ಮುಖಿಯಾಗಿರಲಿ ಎಂದು ಹಾರೈಸುತ್ತೇವೆ.

ಶುಭಕೋರುವವರು
ಎಚ್. ಎಸ್.ಚಂದ್ರಮೌಳಿ
ಮತ್ತು ಕುಟುಂಬ

ಹಿರಿಯ ವಕೀಲರು,
ನಿಕಟಪೂರ್ವ ರಾಜ್ಯ ಸರಕಾರ ಅಭಿಯೋಜಕರು,
ಕರ್ನಾಟಕ ಉಚ್ಚನ್ಯಾಯಾಲಯ ಬೆಂಗಳೂರು.



ಇಂದು ರಮಣಶ್ರೀ ಶರಣ ಪ್ರಶಸ್ತಿ ಪ್ರದಾನ

ಕ್ಷಣ ಹೊತ್ತು ಆಣಿಮುತ್ತು - ಭಾಗ 14 ಲೋಕಾರ್ಪಣೆ

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಹಾಗೂ ರಮಣಶ್ರೀ ಪ್ರತಿಷ್ಠಾನದ 'ರಮಣಶ್ರೀ ಶರಣ ಪ್ರಶಸ್ತಿ ಪ್ರದಾನ'-2024 ಹಾಗೂ ಲೇಖಕ ಎಸ್. ಷಡಕ್ಷರಿ ಅವರ 'ಕ್ಷಣ ಹೊತ್ತು ಆಣಿಮುತ್ತು'-ಭಾಗ 14 ಲೋಕಾರ್ಪಣೆ ಕಾರ್ಯಕ್ರಮ ಇಂದು (ಸೋಮವಾರ) ಬೆಂಗಳೂರಿನ ರಮಣಶ್ರೀ ಹೋಟೆಲ್‌ನಲ್ಲಿ ನಡೆಯಲಿದೆ.

ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೇಂದ್ರದ ರಾಜ್ಯ ಸಚಿವ ವಿ. ಸೋಮಣ್ಣ, ಕಸಾಪ ಮಾಜಿ ಅಧ್ಯಕ್ಷ ಗೋ.ರು. ಚನ್ನಬಸಪ್ಪ, ಡಾ. ಮನು ಬಳಿಗಾರ, ಪ್ರತಿಷ್ಠಾನದ ಅಧ್ಯಕ್ಷ ಎಸ್.ಷಡಕ್ಷರಿ ಹಾಗೂ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸಿ. ಸೋಮಶೇಖರ ಅವರು ಭಾಗವಹಿಸಲಿದ್ದಾರೆ.

ರಮಣಶ್ರೀ ಶರಣ ಪ್ರಶಸ್ತಿ: 2024ನೇ ಸಾಲಿನ 'ರಮಣಶ್ರೀ ಶರಣ ಪ್ರಶಸ್ತಿ'ಗೆ ಧಾರವಾಡದ ಸಾಹಿತಿ ವೀರಣ್ಣ ರಾಜೂರ ಆಯ್ಕೆಯಾಗಿದ್ದಾರೆ. ಈ ಪ್ರಶಸ್ತಿಯು 50 ಸಾವಿರ ರೂ ನಗದು ಮತ್ತು ಫಲಕವನ್ನು ನೀಡಿ ಗೌರವಿಸಲಾಗುತ್ತದೆ.

ರಮಣಶ್ರೀ ಶರಣ ಹಿರಿಯ ಶ್ರೇಣಿ: ಶರಣ ಸಾಹಿತ್ಯ ಅಧ್ಯಯನ ಮತ್ತು ಸಂಶೋಧನೆಗೆ ಬೆಂಗಳೂರಿನ ಎಚ್.ಎಸ್.ಸಿದ್ದಗಂಗಪ್ಪ, ಅಕ್ಕಲ ಕೋಟೆಯ ಗುರುಲಿಂಗಪ್ಪ ಧಬಾಲೆ, ಆಧುನಿಕ ವಚನ ರಚನೆಗೆ ಮೈಸೂರಿನ ಸಿ.ಪಿ.ಸಿದ್ದಾಶ್ರಮ, ಹಾಸನದ ಸುಶೀಲಾ ಸೋಮಶೇಖರ್, ವಚನ ಸಂಗೀತಕ್ಕೆ ಬೆಂಗಳೂರಿನ ಎಂ.ಎಸ್.ಶೀಲಾ ಹಾಗೂ ಎಂ.ವಿ.ತ್ಯಾಗರಾಜ್ ಆಯ್ಕೆಯಾಗಿದ್ದಾರೆ. ಈ ಪ್ರಶಸ್ತಿಯು ತಲಾ 40 ಸಾವಿರ ರು. ನಗದು ಒಳಗೊಂಡಿದೆ.

2022 ರ ಸಾಲಿನ ರಮಣಶ್ರೀ ಶರಣ ಪ್ರಶಸ್ತಿ ಪ್ರದಾನದ ಫೈಲ್ ಫೋಟೋ

ಎಚ್.ಎಸ್ ಸಿದ್ಧಗಂಗಪ್ಪ

ಡಾ.ಅಂದಯ್ಯ ಅರವಟಗಿಮಠ

ಡಾ.ಸಂಗಮೇಶ ಉಪಾಸೆ

ಗುರುಲಿಂಗಪ್ಪ ಧಬಾಲೆ

ಡಾ.ಕಾತ್ಯಾಯಿನಿ ಕುಂಜಿಬೆಟ್ಟು



ಡಾ. ರಂಜನಿ ವಾಸುಕಿ

ಸಿ.ಪಿ.ಸಿದ್ದಾಶ್ರಮ

ಶ್ರೀಮತಿ ವಡವಾಟಿ ಶಾರದಾ ಭರತ್

ಓಂಪ್ರಕಾಶ್ ಎಚ್. ಎಲ್.

ಶ್ರೀಮತಿ ಸುಶೀಲಾ ಸೋಮಶೇಖರ್

ಎಂ.ವಿ.ತ್ಯಾಗರಾಜ್

ಶ್ರೀಮತಿ ಎಂ.ಎಸ್ ಶೀಲಾ

ರಮಣಶ್ರೀ ಶರಣ ಉತ್ತೇಜನ ಪ್ರಶಸ್ತಿ

ಶರಣ ಸಾಹಿತ್ಯ ಅಧ್ಯಯನ ಮತ್ತು ಸಂಶೋಧನೆಗೆ ಗದಗ ಜಿಲ್ಲೆಯ ಅಂದಯ್ಯ ಅರವಟಗಿಮಠ, ಆಧುನಿಕ ವಚನ ರಚನೆಗೆ ಉಡುಪಿ ಜಿಲ್ಲೆಯ ಕಾತ್ಯಾಯಿನಿ ಕುಂಜಿಬೆಟ್ಟು, ವಚನ ಸಂಗೀತಕ್ಕೆ ಬೆಂಗಳೂರಿನ ರಂಜನಿ ವಾಸುಕಿ ಹಾಗೂ ರಾಯಚೂರಿನ ವಡವಾಟಿ ಶಾರದಾ ಭರತ್ ಆಯ್ಕೆಯಾಗಿದ್ದಾರೆ. ಶರಣ ಸಂಸ್ಕೃತಿ ಪ್ರಸಾರ ಸೇವಾ ಸಂಸ್ಥೆಗೆ ಎಚ್.ಎಲ್. ಓಂಶಿವಪ್ರಕಾಶ್, 'ರಮಣಶ್ರೀ ಪ್ರೋತ್ಸಾಹ ಪುರಸ್ಕಾರ'ಕ್ಕೆ ಬೆಂಗಳೂರಿನ ಸಂಗಮೇಶ್ ಉಪಾಸೆ ಆಯ್ಕೆಯಾಗಿದ್ದಾರೆ. ಈ ಪ್ರಶಸ್ತಿಯು ತಲಾ 20 ಸಾವಿರ ರು. ನಗದು ಒಳಗೊಂಡಿದೆ.

ಕಾಯಕ್ರಮದ ವಿವರ

ಕಾರ್ಯಕ್ರಮ: ರಮಣಶ್ರೀ ಶರಣ ಪ್ರಶಸ್ತಿ ಪ್ರದಾನ'-2024 ಹಾಗೂ ಎಸ್. ಷಡಕ್ಷರಿ ಅವರ 'ಕ್ಷಣ ಹೊತ್ತು ಆಣಿಮುತ್ತು'-ಭಾಗ 14 ಲೋಕಾರ್ಪಣೆ.
ಸ್ಥಳ: ಹೋಟೆಲ್ ರಮಣಶ್ರೀ, ರಿಚ್‌ಮಂಡ್ ನಂ. 16, ರಾಜಾ ರಾಮಮೋಹನ ರಾಯ್ ರಸ್ತೆ, ರಿಚ್‌ಮಂಡ್ ಸರ್ಕಲ್, ಬೆಂಗಳೂರು.
ಸಮಯ: ಸೋಮವಾರ ಬೆಳಗ್ಗೆ 11.30ಕ್ಕೆ